ವಿಶ್ವವಾಣಿ

ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ಸಾಧನೆಯ ದಾರಿಯಲ್ಲಿ ಎಲಿವೇಟರ್‌ಗಳು ಇರುವುದಿಲ್ಲ. ಒಂದೊಂದೇ ಮೆಟ್ಟಿಲನ್ನು ಏರುತ್ತಾ ಹೋಗಬೇಕು. ಯಶಸ್ಸು ತಕ್ಷಣ ಸಿಗುವುದು ಲಾಟರಿ ಹೊಡೆದಾಗ ಮಾತ್ರ. ಸತತ ಪರಿಶ್ರಮ, ಹಠ, ನಿರಂತರ ಪ್ರಯತ್ನದಿಂದ ಯಶಸ್ಸನ್ನು ಬೆನ್ನಟ್ಟಬೇಕು. ಆಗ ಸಾಧನೆ ಮಾಡಲು ಸಾಧ್ಯ.

ವಕ್ರತುಂಡೋಕ್ತಿ

ರಿಟೈರ್ ಆದರೆ ಆಫೀಸಿಗೆ ಕೆಲಸಕ್ಕೆ ಹೋಗಬೇಕಿಲ್ಲ. ಆದರೆ ಈ ಮಾತು ಮನೆಯ ಕೆಲಸಕ್ಕೆ ಅನ್ವಯಿಸುವುದಿಲ್ಲ.

ಮಂಡ್ಯ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಗೊ.ರು.ಚನ್ನಬಸಪ್ಪ ಅವರನ್ನು ಮಂಡ್ಯದಲ್ಲಿ ಸನ್ಮಾನಿಸಲಾಯಿತು. ಸಚಿವ ಎನ್. ಚಲುವರಾಯಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಡಾ.ಮಹೇಶ್ ಜೋಶಿ, ಶಾಸಕ ನರೇಂದ್ರ ಸ್ವಾಮಿ, ರವಿಕುಮಾರ್ (ಗಣಿಗ) ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಇದ್ದರು.

ಕರ್ನಾಟಕ ಸರ್ಕಾರ

೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

೨೦, ೨೧ ಮತ್ತು ೨೨ನೇ ಡಿಸೆಂಬರ್, ೨೦೨೪

ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭ

ದಿನಾಂಕ: ೨೦.೧೨.೨೦೨೪, ಬೆಳಗ್ಗೆ: ೧೦.೩೦ ಗಂಟೆಗೆ,
ಸ್ಥಳ: ಸ್ಯಾಂಜೋ ಆಸ್ಪತ್ರೆ ಹಾಗೂ
ಹೋಟೆಲ್ ಅಮರಾವತಿ ಹಿಂಭಾಗ, ಮಂಡ್ಯ

ದಿವ್ಯ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ,
ಶ್ರೀ ಆದಿಚುಂಚನಗಿರಿ ಕ್ಷೇತ್ರ

ಉದ್ಘಾಟನೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಘನ ಉಪಸ್ಥಿತಿ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಸಮ್ಮೇಳನಾಧ್ಯಕ್ಷರು

ನಾಡೋಜ
ಡಾ. ಗೊ.ರು. ಚನ್ನಬಸಪ್ಪ

ಘನ ಉಪಸ್ಥಿತಿ

ಶ್ರೀ ಹೆಚ್.ಡಿ. ಕುಮಾರಸ್ವಾಮಿ
ಸನ್ಮಾನ್ಯ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರು, ಭಾರತ ಸರ್ಕಾರ

ಶ್ರೀ ಯು.ಟಿ. ಖಾದರ್ ಫರೀದ್
ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ

ಶ್ರೀ ಎನ್. ಚಲುವರಾಯಸ್ವಾಮಿ
ಮಾನ್ಯ ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅಧ್ಯಕ್ಷರು, ಸಮ್ಮೇಳನ ಸ್ವಾಗತ ಸಮಿತಿ

ಡಾ. ಚಂದ್ರಶೇಖರ ಕಂಬಾರ
ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು

ಡಾ. ದೊಡ್ಡರಂಗೇಗೌಡ
ನಿಕಟಪೂರ್ವ ಸಮ್ಮೇಳನಾಧ್ಯಕ್ಷರು

ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಗೌರವ ಕಾರ್ಯಾಧ್ಯಕ್ಷರು, ಸಮ್ಮೇಳನ ಸ್ವಾಗತ ಸಮಿತಿ

ಹಾಗೂ ವಿಧಾನಸಭೆಯ ಸನ್ಮಾನ್ಯ ಉಪಸಭಾಧ್ಯಕ್ಷರು, ಮಾನ್ಯ ಸಮಾಜ ಕಲ್ಯಾಣ ಸಚಿವರು ಹಾಗೂ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು, ವಿಧಾನಸಭೆಯ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ಮಾನ್ಯ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕರು, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರುಗಳು ಗೌರವ ಉಪಸ್ಥಿತರಾಗಿ ಮತ್ತು ವಿಧಾನಸಭಾ ಹಾಗೂ ವಿಧಾನ ಪರಿಷತ್‌ನ ಮಾನ್ಯ ಶಾಸಕರುಗಳು ಮತ್ತು ನಿಗಮ, ಮಂಡಳಿ, ಪ್ರಾಧಿಕಾರ, ಒಕ್ಕೂಟ ಹಾಗೂ ನಗರಸಭೆಯ ಮಾನ್ಯ ಅಧ್ಯಕ್ಷರುಗಳು ಮತ್ತು ಮಂಡ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಸಂಚಾಲಕರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಸಮಾರಂಭದ ಪ್ರಮುಖ ಆಕರ್ಷಣೆಗಳು

- ಧ್ವಜಾರೋಹಣ – ೨೦.೧೨.೨೦೨೪, ಬೆಳಗ್ಗೆ ೬.೦೦ ಗಂಟೆಗೆ
- ಸಮ್ಮೇಳನಾಧ್ಯಕ್ಷರ ಮೆರವಣಿಗೆ – ೨೦.೧೨.೨೦೨೪, ಬೆಳಗ್ಗೆ ೭.೦೦ ಗಂಟೆಗೆ. (ಮೆರವಣಿಗೆ ಮಾರ್ಗ – ಸರ್ ಎಂ. ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗದಿಂದ ಮೈಸೂರು–ಬೆಂಗಳೂರು ರಸ್ತೆ ಮಾರ್ಗವಾಗಿ ಸಮ್ಮೇಳನದ ವೇದಿಕೆಗೆ)
- ಸಮಾನಾಂತರ ವೇದಿಕೆ: ೧ ಮತ್ತು ವೇದಿಕೆ: ೨ – ಒಟ್ಟು ೨೦ ಗೋಷ್ಠಿಗಳಲ್ಲಿ ಚಿಂತನ ಮಂಥನ, ಸಂವಾದ ಕಾರ್ಯಕ್ರಮಗಳು
- ಪುಸ್ತಕಗಳ ಬಿಡುಗಡೆ, ಸ್ಮರಣ ಸಂಚಿಕೆ ಬಿಡುಗಡೆ, ವಿಶೇಷ ಅಂಚೆ ಲಕೋಟೆ ಬಿಡುಗಡೆ, ನುಡಿಜಾತ್ರೆ–ಸ್ವರಯಾತ್ರೆ–ಸಂಗೀತ ಕಾರ್ಯಕ್ರಮ

ಸರ್ವರಿಗೂ ಸ್ವಾಗತ

ಎನ್. ಚಲುವರಾಯಸ್ವಾಮಿ
ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅಧ್ಯಕ್ಷರು, ಸಮ್ಮೇಳನ ಸ್ವಾಗತ ಸಮಿತಿ

ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಗೌರವ ಕಾರ್ಯಾಧ್ಯಕ್ಷರು, ಸಮ್ಮೇಳನ ಸ್ವಾಗತ ಸಮಿತಿ

ಡಾ. ಕುಮಾರ, ಭಾ.ಆ.ಸೇ
ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ

ಶ್ರೀ ಎನ್. ಚಲುವರಾಯಸ್ವಾಮಿ, ಮಾನ್ಯ ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರಿಗೆ ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಮಂತ್ರಣ ನೀಡುತ್ತಿರುವ ಸಂದರ್ಭ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಸಮಾಚಾರ ಸಣ್ಣದಲ್ಲ

ಕೃಷಿಕ ಸಮಾಜಕ್ಕೆ ಅವಿರೋಧ ಆಯ್ಕೆ

ಯಲ್ಲಾಪುರ: ತಾಲೂಕು ಕೃಷಿಕ ಸಮಾಜದ ಮುಂದಿನ 5 ವರ್ಷಗಳ ಅವಧಿಗೆ 15 ಕಾರ್ಯಕಾರಿ ಸದಸ್ಯರ ಅವಿರೊಧ ಆಯ್ಕೆ ನಡೆಯಿತು. ಚುನಾವಣಾಧಿಕಾರಿಯಾಗಿ ಸಹಾಯಕ ಕೃಷಿ ನಿರ್ದೇಶಕನಾಗರಾಜ ನಾಯ್ಕ, ಕಾರ್ಯನಿರ್ವಹಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾಗಿ. ರಾಘವೇಂದ್ರ, ವೆಂಕಟ್ರಮಣ ಭಟ್ಟ ಕೋಣೆಮನೆ ಕಳಚೆ, ವೆಂಕಟ್ರಮಣ ನರಸಿಂಹ ಭಟ್ಟ ಕಾರೇಮನೆ ಆನಗೋಡ, ಪವನಕುಮಾರ ಭವಾನಿಶಂಕರ ಕೇಸರಕರ ಮಂಚಿಕೇರಿ, ಗಣಪತಿ ದತ್ತಾತ್ರೇಯ ಹೆಗಡೆ ಕಂಪ್ಲಿ, ಸದಾನಂದ ತಿಮ್ಮಪ್ಪ ಹೆಗಡೆ ತೋಟದಕಲ್ಲಳ್ಳಿ ಕುಂದರಗಿ, ಸಾಂಬಾ ನಾರಾಯಣ ಕೋಮಾರ ಬಾಗಿನಕಟ್ಟಾ, ರಾಮನಾಥ ಪರಮೇಶ್ವರ ಹೆಗಡೆ, ಹೆಬ್ಬಾರಕುಂಬ್ರಿ ಕಳಚೆ, ತಮ್ಮಣ್ಣ ಗಣಪತಿ ಭಟ್ಟ ಕವಡಿಕೇರಿ ಚಂದಗುಳಿ, ನಾಗೇಂದ್ರ ಸುಬ್ರಾಯ ಗಾಂವ್ಕರ ಹೊಸ್ಮನೆ ಬಿಸ್ಗೋಡ, ಗಣಪತಿ ರಾಮಕೃಷ್ಣ ಹೆಗಡೆ ಬೆದೆಹಕ್ಲು ಹಾಸಣಗಿ, ರಾಮಕೃಷ್ಣ ಹೆಗಡೆ ಕಾನಗೋಡ ಚವತ್ತಿ, ವೆಂಕಟ್ರಮಣ ನಾರಾಯಣ ಭಟ್ಟ ವಜ್ರಳ್ಳಿ, ಪರಮೇಶ್ವರ ವೆಂಕಟ್ರಮಣ ಕೊಂಬೆ ಮಾಗೋಡಕಾಲನಿ, ಸುನೀಲ್ ಮನೋಹರ ಫಾಯದೆ ಶಿರನಾಲ, ಮಹಾಬಲೇಶ್ವರ ಗಣಪತಿ ಅರೇಗುಳಿ ಲಾಲಗುಳಿ ಕನ್ನಡಗಲ್ ಅವಿರೋಧ ಆಯ್ಕೆಯಾಗಿದ್ದಾರೆ.

ಶಿಷ್ಯವೇತನ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಹಾವೇರಿ: ಪೋಸ್ಟಲ್ ಫೆಲೋಶಿಪ್ ಮಾಡುತ್ತಿರುವ ಹಾಗೂ ಯಾವುದೇ ಫೆಲೋಶಿಪ್ ಪಡೆಯದ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಮಾಸಿಕ ರೂ.25 ಸಾವಿರ ಶಿಷ್ಯವೇತನ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಆಯಾ ತಾಲೂಕು ಸಮಾಜ ಕಲ್ಯಾಣ ಇಲಾಖೆಯಿಂದ ಪಡೆದು, ಅಗತ್ಯ ದಾಖಲೆಗಳೊಂದಿಗೆ ಭರ್ತಿಮಾಡಿದ ಅರ್ಜಿಯನ್ನು ದಿನಾಂಕ ಡಿ.23,2024ರೊಳಗಾಗಿ ಆಯಾ ತಾಲೂಕು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಬೇಕು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕಚೇರಿ ಸಂಪರ್ಕಿಸಲು ಕೋರಲಾಗಿದೆ.

ಅಮರ ಶಿಲ್ಪಿ ಜಕಣಾಚಾರಿ ಜಯಂತಿ ಜನವರಿ 1ಕ್ಕೆ

ಹಾವೇರಿ: ಜಿಲ್ಲಾಡಳಿತದಿಂದ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಜಯಂತಿ ಕಾರ್ಯಕ್ರಮ ಅರ್ಥಪೂರ್ಣ ಆಚರಣೆಗೆ ಅಗತ್ಯ ಸಿದ್ಧತೆಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್. ಅವರು ಸೂಚನೆ ನೀಡಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಜಯಂತಿ ಆಚರಣೆ ಪೂರ್ವ ಸಿದ್ಧತೆ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಾಜದ ಮುಖಂಡರ ನಿರ್ಣಯದಂತೆ ಜನವರಿ 1 ರಂದು ಬೆಳಿಗ್ಗೆ 11 ಗಂಟೆಗೆ ಹಾವೇರಿ ನಗರದ ಗಾಂಧಿ ಭವನದಲ್ಲಿ ಅಚ್ಚುಕಟ್ಟಾಗಿ ಕಾರ್ಯಕ್ರಮ ಆಯೋಜನೆ ಮಾಡಬೇಕು ಎಂದು ತಿಳಿಸಿದರು. ಆಮಂತ್ರಣಪತ್ರಿಕೆ, ವೇದಿಕೆ, ಆಸನ, ಕುಡಿಯುವ ನೀರು, ಉಪಹಾರ, ಉಪನ್ಯಾಸಕರ ಆಯ್ಕೆ, ಶಿಲ್ಪಿಗೆ ಸನ್ಮಾನ ಕುರಿತು ಸಮಾಜದ ಮುಖಂಡರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಆರ್.ವಿ.ಚಿನ್ನಿಕಟ್ಟಿ ಅವರು ಕಾರ್ಯಕ್ರಮದ ರೂಪರೇಷೆಗಳ ಕುರಿತು ಮಾಹಿತಿ ನೀಡಿದರು. ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

ಹಾನಗಲ್ಲಿನಲ್ಲಿ ಜಿಲ್ಲಾ ಗೃಹರಕ್ಷಕ ದಳ ದಿನಾಚರಣೆಯನ್ನು ಹಾವೇರಿ ಜಿಲ್ಲಾ ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧಿಕ್ಷಕ ಎಲ್.ವಾಯ್. ಶಿರಕೋಳ ಉದ್ಘಾಟಿಸಿದರು.

ವಿದ್ಯಾರ್ಥಿಗಳಲ್ಲಿ ಅಹಂಕಾರ ಬೇಡ

ಶ್ರೀನಿಕೇತನ ಶಾಲೆಯ ಸಾಂಸ್ಕೃತಿಕೋತ್ಸವದಲ್ಲಿ ಸ್ವರ್ಣವಲ್ಲೀ ಶ್ರೀಗಳ ಆಶೀರ್ವಚನ

ಶ್ರೀನಿಕೇತನ ಶಾಲೆಯ ಸಾಂಸ್ಕೃತಿಕೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸ್ವರ್ಣವಲ್ಲೀ ಶ್ರೀಗಳು.

ಶಿರಸಿ: ವಿದ್ಯಾರ್ಥಿಗಳು ಗರ್ವ ಮತ್ತು ಅಹಂಕಾರಗಳನ್ನು ಹೊಂದಿರಬಾರದು ಇದರಿಂದ ಅವರ ಜ್ಞಾನದ ಬೆಳವಣಿಗೆಗೆ ತೊಡಕಾಗುತ್ತದೆ ಎಂದು ಸರ್ಣವಲ್ಲೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ನುಡಿದರು.

ಶ್ರೀ ರಾಜರಾಜೇಶ್ವರೀ ವಿದ್ಯಾ ಸಂಸ್ಥೆ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಶ್ರೀನಿಕೇತನ ಶಾಲೆಯ ಸಾಂಸ್ಕೃತಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಧಾರವಾಡದ ರಾಮಕೃಷ್ಣ ಆಶ್ರಮದ ಶ್ರೀವಿಜಯಾನಂದ ಸರಸ್ವತೀ ಮಹಾಸ್ವಾಮಿಗಳು ಮಾತನಾಡಿ, ವಿದ್ಯಾರ್ಥಿಗಳು ಧರ್ಮ, ಸಂಸ್ಕೃತಿ ಮತ್ತು ತ್ಯಾಗ ಮನೋಭಾವ ಉಳ್ಳವರಾಗಿರಬೇಕೆಂದು ತಿಳಿಸಿದರು.

ವಾಗ್ಮಿ ಡಾ. ಕೆ.ಪಿ.ಪುತ್ತೂರಾಯ ಮಾತನಾಡಿ, ಮಕ್ಕಳು ಹಾಗೂ ಪಾಲಕರು ಸಮಯಪ್ರಜ್ಞೆ, ಸಂದರ್ಭ ಪ್ರಜ್ಞೆ ಹಾಗೂ ಸಮಾಜ ಪ್ರಜ್ಞೆ ರೂಡಿಸಿಕೊಳ್ಳಬೇಕು ವಿದ್ಯಾರ್ಥಿಗಳು ಯಶಸ್ಸು ಸಾಧಿಸಲು ಉತ್ತಮ ಆರೋಗ್ಯ ಮತ್ತು ಆಹಾರ ಹಾಗೂ ಶಿಸ್ತು, ಸ್ವಚ್ಛತೆ ಗುರು ಹಿರಿಯರಲ್ಲಿ ಗೌರವ ಮುಂತಾದ ಪಾಲಿಸಬೇಕಾದ ಕೆಲವು ಸೂತ್ರಗಳನ್ನು ಸರಳ ಹಾಸ್ಯದ ಮೂಲಕ ಎಲ್ಲರ ಮನುಮುಟ್ಟುವಂತೆ ತಿಳಿಸಿದರು.

ವಿದ್ಯಾರ್ಥಿಗಳ ಪ್ರಾರ್ಥನೆ ಹಾಗೂ ಶಾಲಾ ಮುನ್ನುಡಿ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ವಿಶೇಷ ಸಾಧನೆ ಮಾಡಿದ ಮಕ್ಕಳು, ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು.

ಶಾಲೆಯ ಕಾರ್ಯದರ್ಶಿ ಪ್ರೊ. ಕೆ. ಎನ್. ಹೊಸಮನಿ ಸ್ವಾಗತಿಸಿದರು. ಶಾಲೆಯ ಅಧ್ಯಕ್ಷರಾದ ಮೇಜರ್. ರಘುನಂದನ ಹೆಗಡೆ ಅವರು ಅತಿಥಿಗಳ ಪರಿಚಯ ನೆರವೇರಿಸಿದರು. ಪ್ರಾಂಶುಪಾಲ ವಸಂತ ಭಟ್ಟ ಶಾಲೆಯ ವರದಿ ವಾಚನ ಮಾಡಿದರು. ವಸುಧಾ ಹೆಗಡೆ ಕ್ಲಬ್ ಚಟುವಟಿಕೆಗಳ ವರದಿ ವಾಚಿಸಿದರು. ಶ್ರೀಗಳು ಚಟುವಟಿಕೆಗಳ ಪುಸ್ತಕಗಳನ್ನು ಲೋಕಾರ್ಪಣೆಗೈದರು.

ಶ್ರೀರಾಜರಾಜೇಶ್ವರಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಶಿವರಾಮ ಭಟ್ಟ ವಂದನಾರ್ಪಣೆ ಮಾಡಿದರು. ಸ್ವರ್ಣವಲ್ಲೀ ಮಹಾಸಂಸ್ಥಾನದ ಅಧ್ಯಕ್ಷ ವಿ.ಎಂ. ಹೆಗಡೆ ಬೊಮ್ನಳ್ಳಿ, ರಾಜರಾಜೇಶ್ವರಿ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ. ಎಂ.ಜಿ.ಹೆಗಡೆ ಉಪಸ್ಥಿತರಿದ್ದರು.

ಅಶ್ವಿನಿ ಜಿ. ಹೆಗಡೆ ಹಾಗೂ ಶ್ರೀಲತಾ ಶಾನುಭಾಗ ಕಾರ್ಯಕ್ರಮವನ್ನು ನಿರೂಪಿಸಿದರು. ತದನಂತರದಲ್ಲಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಶಾಲೆಯ ಎಲ್ಲ ಶಿಕ್ಷಕರು ಶಿಕ್ಷಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಮತ್ತು ಪಾಲಕರು ಭಾಗವಹಿಸಿದ್ದರು.

ಡಿ.27ರಂದು ಬೆಳಗಾವಿಯಲ್ಲಿ ಕಾಂಗ್ರೆಸ್ ಬೃಹತ್ ಸಮಾವೇಶ

ದಾಂಡೇಲಿ: ರಾಷ್ಟ್ರಪಿತ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಭಾಗವಾಗಿ 1924ರಲ್ಲಿ ಬೆಳಗಾವಿಗೆ ಭೇಟಿ ನೀಡಿ ನೂರು ವರ್ಷ ಪೂರೈಸುತ್ತಿರುವ ಕಾರಣ ಶತಮಾನೋತ್ಸವದ ನೆನಪಲ್ಲಿ ಡಿ.27ರಂದು ಬೆಳಗಾವಿಯಲ್ಲಿ ಕಾಂಗ್ರೆಸ್ ಪಕ್ಷದ ಬೃಹತ್ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಹಾಗೂ ಶಾಸಕ ಆರ್. ವಿ. ದೇಶಪಾಂಡೆ ತಿಳಿಸಿದರು.



ದಾಂಡೇಲಿಯ ಕಾರ್ಮಿಕ ಭವನದಲ್ಲಿ ದಾಂಡೇಲಿ ಹಾಗೂ ಜೋಯಿಡಾ ಕಾಂಗ್ರೆಸ್ ಕಾರ್ಯಕರ್ತರ ಸಭೆ ನಡೆಸಿ ಈ ವಿಷಯ ತಿಳಿಸಿದರು. ಗಾಂಧೀಜಿಯವರು 1924ರಲ್ಲಿ ಬೆಳಗಾವಿಯ ತಿಲಕವಾಡಿಗೆ ಆಗಮಿಸಿ, ಹುದ್ದಿಯಲ್ಲಿ ವಾಸ್ತವ್ಯ ಮಾಡಿದ್ದರು. ಹುದ್ದಿಯಲ್ಲಿ ಈಗಲೂ ಕೂಡ ಗಾಂಧೀಜಿಯ ಸ್ಮಾರಕವಿದೆ. ಗಾಂಧೀಜಿಯವರ ಭೇಟಿಗೆ ನೂರು ವರ್ಷದ ನೆನಪಲ್ಲಿ ಇದೀಗ ಕಾಂಗ್ರೆಸ್ ಪಕ್ಷದ ಸಮಾವೇಶವನ್ನು ಆಯೋಜಿಸಿದ್ದು, ಡಿ. 26ರಂದು ಇಡೀ ದಿನ ರಾಷ್ಟ್ರೀಯ ಹಾಗೂ ರಾಜ್ಯ ಕಾಂಗ್ರೆಸ್‌ನ ಕಾರ್ಯಕ್ರಮಗಳು ಬೆಳಗಾವಿಯಲ್ಲಿ ನಡೆಯಲಿದೆ. 27ರಂದು ಬೃಹತ್ ಸಮಾವೇಶ ಆಯೋಜಿಸಲಾಗಿದೆ ಈ ಸಮಾವೇಶಕ್ಕೆ ಉತ್ತರಕನ್ನಡ ಜಿಲ್ಲೆಯ ಎಲ್ಲ ತಾಲೂಕುಗಳಿಂದಲೂ ಕೂಡ ಮುಖಂಡರು ಕಾರ್ಯಕರ್ತರು ಜನಪ್ರತಿನಿಧಿಗಳು ಸ್ವಯಂ ಪ್ರೇರಣೆಯಿಂದ ತಮ್ಮ ತಮ್ಮ ವಾಹನಗಳ ಮೂಲಕ ಭಾಗವಹಿಸಬೇಕು ಎಂದು ಕರೆ ನೀಡಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡ ಸಮ್ಮೇಳನದ ಸಂಘಟನೆಯಲ್ಲಿ ಮಾರ್ಗದರ್ಶನ ನೀಡುತ್ತಿದ್ದಾರೆ. ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಷ್ಟ್ರೀಯ ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ಎಲ್ಲ ರಾಜ್ಯಗಳ ಕಾಂಗ್ರೆಸ್ ಅಧ್ಯಕ್ಷರು, ಸಂಸದರು, ಶಾಸಕರು ಹಾಗೂ ನಮ್ಮ ರಾಜ್ಯದ ಎಲ್ಲ ಜನಪ್ರತಿನಿಧಿಗಳು, ಮುಖಂಡರು ಭಾಗವಹಿಸಲಿದ್ದಾರೆ. ಸುಮಾರು ಮೂರು ಲಕ್ಷಕ್ಕೂ ಅಧಿಕ ಜನರು ಭಾಗವಹಿಸಲಿದ್ದು ಸಮಾವೇಶವನ್ನು ಐತಿಹಾಸಿಕವಾಗಿ ದಾಖಲಿಸಬೇಕೆಂಬ ನಿಟ್ಟಿನಲ್ಲಿ ಸಂಘಟನೆಯನ್ನು ಮಾಡಲಾಗುತ್ತಿದೆ. ದಾಂಡೇಲಿ, ಹಳಿಯಾಳ ಜೋಯಿಡಾದಿಂದಲೂ, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ದಾಂಡೇಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಹಲವಾಯಿ, ಜೋಯಿಡಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾರುತಿ ಗಾವಡೆ, ನಗರಸಭಾ ಅಧ್ಯಕ್ಷ ಅಷ್ಪಾಕ್ ಶೇಖ್, ಉಪಾಧ್ಯಕ್ಷೆ ಶಿಲ್ಪಾ ಕೋಡೆ, ಸ್ಥಾಯಿ ಸಮಿತಿಯ ಅಧ್ಯಕ್ಷೆ ಸುಧಾ ಜಾದವ್, ನಗರಸಭೆಯ ಮಾಜಿ ಅಧ್ಯಕ್ಷರಾದ ಯಾಸ್ಮಿನ್ ಕಿತ್ತೂರ್, ಸರಸ್ವತಿ ರಜಪೂತ, ಮಾಜಿ ಉಪಾಧ್ಯಕ್ಷ ಸಂಜಯ್ ನಂದ್ಯಾಳಕರ ಕೆಪಿಸಿಸಿ ಸದಸ್ಯ ಸದಾನಂದ ದಬಗಾರ್ ಮೊದಲಾದವರು ಇದ್ದರು.

ಬೇಡಿಕೆ ಈಡೇರಿಕೆಗೆ ಪ್ರತಿಭಟನೆ

ಹಾವೇರಿ: ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಎಲ್ಲ ಕಾರ್ಮಿಕರಿಗೆ ಬೆಲೆ ಏರಿಕೆಗೆ ಅನುಗುಣವಾಗಿ ಕನಿಷ್ಠ ವೇತನ ರು. 31,000 ವೇತನವನ್ನು ಜಾರಿ ಮಾಡಬೇಕು ಎಂದು ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಸರಕಾರವನ್ನು ಆಗ್ರಹಿಸಿದರು.

ನಗರದ ಹೊರವಲಯದಲ್ಲಿರುವ ಜಿಲ್ಲಾಧಿಕಾರಿ ಕಛೇರಿ ಎದುರು ಬುಧವಾರ ಸಿಐಟಿಯು ನೇತೃತ್ವದಲ್ಲಿ ಗ್ರಾಮ ಪಂಚಾಯತಿ ನೌಕರರು, ಸ್ವಚ್ಛವಾಹಿನಿ ಸಿಬ್ಬಂದಿ ಹಾಗೂ ಹಮಾಲಿ ಕಾರ್ಮಿಕರು ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿ, ಹಮಾಲಿ ಕಾರ್ಮಿಕರು ಸೇರಿದಂತೆ ಅಸಂಘಟಿತ ವಲಯದಲ್ಲಿರುವ ಎಲ್ಲ ಕಾರ್ಮಿಕರಿಗೆ ಬದುಕಿರುವಾಗಲೇ ಸಹಾಯಕ್ಕೆ ಬರುವಂತೆ ಭವಿಷ್ಯನಿಧಿ, ಪಿಂಚಣಿ, ಆರೋಗ್ಯದ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಸರಕಾರ ಒದಗಿಸಬೇಕು ಎಂದು ಒತ್ತಾಯಿಸಿದರು.

ಪ್ರಧಾನ ಕಾರ್ಯರ್ಶಿ ಜಗದೀಶ ಕೋಟಿ ಮಾತನಾಡಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿಗಳಾದ ರಂಗಸ್ವಾಮಿ ಅವರು ಮನವಿ ಸ್ವೀಕರಿಸಿ ಮಾತನಾಡಿ, ತಮ್ಮ ವ್ಯಾಪ್ತಿಯ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು. ಉಳಿದ ಬೇಡಿಕೆಗಳನ್ನು ಸರಕಾರಕ್ಕೆ ಕಳಿಸಲಾಗುವುದು ಎಂದರು.

ಪ್ರತಿಭಟನೆಯ ನೇತೃತ್ವವನ್ನು ಜಿಲ್ಲಾ ಖಜಾಂಚಿ ಸುಭಾಸ್ ಸೊಟ್ಟೆಪ್ಪನವರ, ಮುಖಂಡರಾದ ಫಕ್ಕಿರೇಶ ಹಕ್ಕಿಮರೆಣ್ಣನವರ, ಆದಮ್, ಆಂಜನೇಯ, ಮಾಲತೇಶ, ಮಂಜುನಾಥ, ದಾಸಪ್ಪ, ನಾಗರಾಜ ಮಾಬುಲಿ ಬಡಿಗೇರ, ರುದ್ರಪ್ಪ ಹುಬ್ಬಳ್ಳಿ, ಎನ್.ಎನ್ ಮುಳಗುಂದ, ಬಸವರಾಜ ಬೂದಿಹಾಳ, ಬೀರಪ್ಪ ಡಿಳ್ಳೆಪ್ಪನರ, ದೀಪಾ ಕಂಬಳಿ, ಲಲಿತಾ ಹರಿಜನ್, ವರದಾ, ಹೇಮಾ, ರಚನಾ ಎಚ, ಲಕ್ಷ್ಮೀ ತಳವಾರ ವಹಿಸಿದ್ದರು. ಜಿಲ್ಲೆಯ ವಿವಿಧ ತಾಲೂಕು ಪ್ರತಿನಿಧಿಸಿ ಆಗಮಿಸಿದ್ದ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೇಂದ್ರದ ಯೋಜನೆಗಳ ಜನರಿಗೆ ತಿಳಿಸಬೇಕು

ಹಾವೇರಿ: ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಜಿಲ್ಲಾ ಘಟಕದ ವತಿಯಿಂದ ಸಂಘಟನಾ ಪರ್ವದ ಸಭೆ ಮಾಡಲಾಯಿತು.

ಬಿಜೆಪಿ ಜಿಲ್ಲಾಧ್ಯಕ್ಷರಾದ ಅರುಣಕುಮಾರ ಪೂಜಾರ ಮಾತನಾಡಿ ರಾಷ್ಟ್ರೀಯ ಅಧ್ಯಕ್ಷರಾದ ಜಗತ್ತ ಪ್ರಕಾಶ ನಡ್ಡಾರವರ ನಿರ್ದೇಶನದಂತೆ ಡಿ.25 ರಂದು ದಿ. ಅಟಲ್ ಬಿಹಾರಿ ವಾಜಪೇಯಿ ಅವರ ಸುಶಾಸನ ದಿನಾಚರಣೆ ಎಲ್ಲಾ ಬೂತ್ ಮಟ್ಟದಲ್ಲಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮತ್ತು ಪುಷ್ಪ ನಮನ ಮಾಡಬೇಕು ಮತ್ತಿ ಸಭೆಯನ್ನು ಆಯೋಜನೆ ಮಾಡಬೇಕು. ಅವರು ಪ್ರಧಾನ ಮಂತ್ರಿಯಲ್ಲಿ ಆಗಿರುವ ಯೋಜನೆಗಳುನ್ನು ಸಾರ್ವಜನಿಕರಿಗೆ ತಿಳಸಬೇಕು. ಬಾಬಾ ಜೋರಾವರ್ ಸಿಂಗ್ ಮತ್ತು ಬಾಬಾ ಫತೇ ಸಿಂಗ್ ಅವರ ಸ್ಮರಣಾರ್ಥವಾಗಿ ಡಿಸೆಂಬರ್ 26 ರಂದು ವೀರ್ ಬಾಲ್ ದಿವಸ್ ಎಲ್ಲಾ ಮಂಡಲಗಳಲ್ಲಿ ಆಚರಣೆ ಮಾಡಬೇಕು. ಎಲ್ಲಾ ಮಂಡಲಗಳಲ್ಲಿ ಬೂತ್ ಸಮಿತಿಯನ್ನು ಕಡ್ಡಾಯವಾಗಿ ಮಾಡಬೇಕೆಂದು ಹೇಳಿದರು.

ಜಿಲ್ಲಾ ಸಹ ಚುನಾವಣಾಧಿಕಾರಿಗಳಾದ ಎನ್.ಎಮ್. ಈಟೇರ ಮಾತನಾಡಿ ಬೂತ್ ಸಮಿತಿ ರಚನೆಯನ್ನು ಯಾವ ರೀತಿ ಮಾಡಬೇಕೆಂದು ವಿಸ್ತಾರವಾಗಿ ಹೇಳಿದರು. ಬೂತ್ ರಚನೆ ಮಾಡಿದಮೇಲೆ ಮಂಡಲ ಅಧ್ಯಕ್ಷರ ನೇಮಕ, ಮಂಡಲ ಅಧ್ಯಕ್ಷರ ನೇಮಕ ಆದಮೇಲೆ ಜಿಲ್ಲಾಧ್ಯಕ್ಷರ ನೇಮಕ, ಜಿಲ್ಲಾಧ್ಯಕ್ಷರ ನೇಮಕ ಆದಮೇಲೆ ರಾಜ್ಯಾಧ್ಯಕ್ಷರ ನೇಮಕ, ರಾಜ್ಯಧ್ಯಕ್ಷರ ಆದಮೇಲೆ ರಾಷ್ಟ್ರೀಯ ಅಧ್ಯಕ್ಷರ ನೇಮಕ ಆಗುತ್ತದೆ ಎಂದು ಹೇಳದರು.

ಮಾಜಿ ವಿಧಾನ ಪರಿಷತ್ ಸದಸ್ಯರಾದ ಅರುಣ ಶಾಹಪೂರ ರವರು ಮಾತನಾಡಿ ಬೂತ್ ಸಮಿತಿಯ ರಚನೆಯ ಸಂದರ್ಭದಲ್ಲಿ ಮಂಡಲ ಮತ್ತು ಶಕ್ತಿ ಕೇಂದ್ರ ಸಂಘಟನಾ ಪರ್ವ ಸಹಯೋಗಿಗಳು ಗಮನಿಸಬೇಕಾದ ಅಂಶಗಳ ಸ್ಥವಿಸ್ತಾರವಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ವಿರುಪಾಕ್ಷಪ್ಪ ಬಳ್ಳಾರಿ, ಹಾವೇರಿ ವಿಧಾನಸಭಾ ಕ್ಷೇತ್ರ ಮುಖಂಡರಾದ ಗವಿಸಿದ್ದಪ್ಪ ದ್ಯಾಮಣ್ಣನವರ, ರಾಜ್ಯ ಪ್ರಕೋಷ್ಠಗಳ ಸಹ ಸಂಯೋಜಕರಾದ ಭೋಜರಾಜ ಕರೋದಿ, ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ಶೋಭಾ ನಿಸ್ಸಿಮಗೌಡರ, ರಾಜ್ಯ ಓಬಿಸಿ ಮೋರ್ಚಾ ಕಾರ್ಯದರ್ಶಿ ಸುಭಾಷ ಚವ್ಹಾಣ, ಜಿಲ್ಲಾ ಸಹ ಚುನಾವಣಾಧಿಕಾರಿಗಳಾದ ಮಂಜುನಾಥ ಬ್ಯಾಹಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನಂಜುಂಡೇಶ ಕಳ್ಳೇರ, ಮಂಜುನಾಥ ಗಾಣ ಗೇರ, ಡಾ. ಸಂತೋಷ ಆಲದಕಟ್ಟಿ, ವೆಂಕಟೇಶ ನಾರಾಯಣ ಮತ್ತು ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ಮೋರ್ಚಾ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಮಂಡಲ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಮಂಡಲ ಸಹಯೋಗಿಗಳು, ಮಹಾಶಕ್ತಿಕೇಂದ್ರ ಅಧ್ಯಕ್ಷರು ಉಪಸ್ಥಿತರಿದ್ದರು.

ಸಮುದಾಯದ ಸಂಘಟನೆ ನಮ್ಮೆಲ್ಲರ ಹೆಗಲ ಮೇಲಿದೆ:ಪ್ರಸನ್ನಾನಂದ ಸ್ವಾಮೀಜಿ

ಸವಣೂರ: ಫೆ. 8-9ರಂದು ರಾಜನಹಳ್ಳಿ ಶ್ರೀಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ನಡೆಯಲಿರುವ ಮಹರ್ಷಿ ವಾಲ್ಮೀಕಿ ಜಾತ್ರೆಗೆ ಆಹ್ವಾನಿಸಲು ಆಗಮಿಸಿದ್ದ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರನ್ನು ಪಟ್ಟಣದ ಐ.ಬಿ ಮುಂಭಾಗದಲ್ಲಿ ಗೌರವ ಪೂರ್ವಕವಾಗಿ ಸ್ವಾಗತಿಸಿ ಜಾತ್ರಾ ಕರಪತ್ರವನ್ನು ಬಿಡುಗಡೆ ಮಾಡಿದರು.

ಈ ವೇಳೆ ಜಗದ್ಗುರು ಶ್ರೀವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ನಮ್ಮ ಸಮುದಾಯ ಒಂದು ಕಡೆ ಸೇರಿಕೊಳ್ಳುವುದು ವಿರಳ, ಹಾಗಾಗಿ, ಈ ರಾಜ್ಯದ ಸಮಸ್ತ ಬೇಡ, ವಾಲ್ಮೀಕಿ, ನಾಯಕ ಸಮುದಾಯದವರು ರಾಜ್ಯಮಟ್ಟದಲ್ಲಿ ವರ್ಷಕ್ಕೆ ಒಮ್ಮೆಯಾದರೂ, ಒಂದು ಕಡೆ ಸೇರಿಕೊಂಡು ಸಂಘಟನೆಯಾಗಲಿ, ಆ ಮುಖೇನವಾದರೂ ಸಮುದಾಯದಲ್ಲಿ ಒಂದು ಜಾಗೃತಿ ಬರಲಿ. ಈಗಾಗಲೇ ಅನೇಕ ಸಮುದಾಯದ ಮಠ ಮಾನ್ಯಗಳು ಇಂತಹ ಜಾಗೃತಿ ಕಾರ್ಯಕ್ರಮಗಳನ್ನು ಮಾಡಿ ಅವರವರ ಸಮುದಾಯಗಳನ್ನು ಸಂಘಟಿಸುತ್ತಿದ್ದಾರೆ. ಅಲ್ಲದೇ ಸಂವಿದಾನದ ಹಕ್ಕುಗಳನ್ನು ಪಡೆಯುತ್ತಿದ್ದಾರೆ.

ಆದ್ದರಿಂದ ತಾವೆಲ್ಲರೂ ಕೂಡ ಇಂತಹ ಸಂಘಟನೆಯ ಕಾರ್ಯಕ್ಕೆ ಮುಂದಾಗಬೇಕು. ಶ್ರೀಮಠದಲ್ಲಿ ಕಳೆದ ಆರು ವರ್ಷಗಳಿಂದ ಆದಿಕವಿ ಮಹರ್ಷಿ ವಾಲ್ಮೀಕಿಯವರ ಜಾತ್ರೆ ಸಮುದಾಯದ ಜಾಗೃತಿಗಾಗಿ ಪ್ರಾರಂಭವಾಗಿದೆ. ಶ್ರೀಮಠದ 27ನೇ ವಾರ್ಷಿಕೋತ್ಸವ, ಲಿಂ ಜಗದ್ಗುರು ಶ್ರೀ ಪುಣ್ಯಾನಂದಪುರಿ ಮಹಾ ಸ್ವಾಮೀಜಿಯವರ 18 ವರ್ಷದ ಪುಣ್ಯಾರಾಧನೆ, ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾ ಸ್ವಾಮೀಜಿಯವರ 17 ವರ್ಷದ ಪಟ್ಟಾಧಿಕಾರ ಮಹೋತ್ಸವದ ಪ್ರಯುಕ್ತ ಜರುಗಲಿರುವ ಜಾತ್ರೆಗೆ ತನು, ಮನ, ಧನ ಸಹಾಯದಿಂದ ಸಹಸ್ರ ಸಂಖ್ಯೆಯಲ್ಲಿ ಆಗಮಿಸಲು ಭಕ್ತರನ್ನು ಆಹ್ವಾನಿಸಿದರು.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಶ್ರೀಧರ ದೊಡ್ಡಮನಿ, ಪ್ರಮುಖರಾದ ನಾಗಪ್ಪ ತಿಪ್ಪಕ್ಕನವರ, ಸುರೇಶ ತಳವಾರ, ಮಹಾಂತೇಶ ಬಸವನಾಯ್ಕರ, ಪ್ರಕಾಶ ಡೊಂಬರ ಮತ್ತೂರ, ಫಕ್ಕೀರಪ್ಪ ವಾಲ್ಮೀಕಿ, ಪ್ರಕಾಶ ಬಾರ್ಕಿ, ಯಲ್ಲಪ್ಪ ದೇವಗಿರಿ, ಗಿರೀಶ ತಳವಾರ, ಯಲ್ಲಪ್ಪ ಕನಕಣ್ಣನವರ, ನಿಂಗಪ್ಪ ಗುಡ್ಡಪ್ಪನವರ, ಬಸವರಾಜ ದೇವಗೇರಿ, ಅಶೋಕ ಮನ್ನಂಗಿ, ಭೀಮಣ್ಣ ಬಾರ್ಕಿ, ಉಮೇಶ ದೊಡ್ಡಮನಿ, ಮಾದೇವಪ್ಪ ದೋಣಿ, ಹನುಮಂತ ಹಳ್ಳಿ ಇದ್ದರು.

ಕೇಡಾಯ್ತು ನಾಯಿ ಹಿಡಿಯುವವರ ಪಾಡು

ನಾಯಿ ಹಿಡಿಯಲು ಬಂದ ಮಧುರೈ ತಂಡ | ಬಿಲ್ ಪಾವತಿಗೆ ವಿಳಂಬ

ಲಕ್ಷ್ಮೇಶ್ವರ: ಪಟ್ಟಣದಲ್ಲಿ ನಡೆಯುತ್ತಿರುವ ನಾಯಿ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಪುರಸಭೆಯಿಂದ ನಾಯಿ ಹಿಡಿಯಲು ರಾಜಕುಮಾರ ಡಾಗ್ ಕ್ಯಾಚಿಂಗ್ ಮಧುರೈ ಇವರಿಗೆ ಸೂಚಿಸಲಾಗಿತ್ತು ಎನ್ನಲಾಗಿದೆ.

ಸುಮಾರು 4 ದಿನಗಳಿಂದ ಒಟ್ಟು 9 ಜನರ ತಂಡ ಹಾಗೂ ಪುರಸಭೆಯ ಪೌರ ಕಾರ್ಮಿಕರು ಸೇರಿ ಪಟ್ಟಣದಲ್ಲಿ 338 ನಾಯಿಗಳನ್ನು ಹಿಡಿದಿದ್ದು, ಆದರೆ ಬಿಲ್ ನೀಡಲು ಪುರಸಭೆಯವರು ವಿಳಂಬ ಧೋರಣೆ ಮಾಡುತ್ತಿದ್ದಾರೆ ಎಂದು ದಿಢೀರ್ ಮುತ್ತಿಗೆ ಹಾಕಿ ತಮ್ಮ ಅಳಲನ್ನು ತೋಡಿಕೊಂಡಿರುವ ಘಟನೆ ನಡೆದಿದೆ.

ಈ ಸಂದರ್ಭದಲ್ಲಿ ರಾಜಕುಮಾರ ಡಾಗ್ ಕ್ಯಾಚಿಂಗ್ ಮಧುರೈ ತಂಡದ ಮುಖ್ಯಸ್ಥ ರಾಜಕುಮಾರ್ ಮಾತನಾಡಿ, ನಮಗೆ ನಾಯಿ ಹಿಡಿಯಲು ಫೋನ್ ಮೂಲಕ ಕರೆ ಮಾಡಿ ಬರಲು ಹೇಳಿದರು ಆ ಕಾರಣದಿಂದ ತಮಿಳುನಾಡಿನಿಂದ ಸುಮಾರು 9 ಜನರು ಬಂದಿದ್ದೇವೆ ಅಲ್ಲದೆ ಪ್ರತಿ ನಾಯಿಗೆ 400 ರೂಪಾಯಿ ನೀಡುತ್ತೇವೆ ಎಂದು ಹೇಳಿದ್ದಾರೆ ಒಟ್ಟು 338 ನಾಯಿಗಳನ್ನು ಹಿಡಿದಿದ್ದೇವೆ ಆದರೆ ನಮಗೆ ಬಿಲ್ ಕೊಡಲು ವಿಳಂಬ ಮಾಡುತ್ತಿದ್ದಾರೆ ಇಂದು ನಾಳೆ ಕೊಡುತ್ತೇವೆ ಎನ್ನುತ್ತಾ ಹೇಳಿ ಅಲೆದಾಡಿಸುತ್ತಿದ್ದಾರೆ ಇದೆ ರೀತಿ ಬಿಲ್ ನೀಡಲು ವಿಳಂಬ ಮಾಡಿದರೆ ಇಲ್ಲಿಯೇ ಸಾಯುತ್ತೇವೆ ಎಂದು ಎಚ್ಚರಿಸಿದ್ದಾರೆ.

ನಾಯಿ ಹಿಡಿದಿರುವ ಬಿಲ್ ನೀಡಲು ಪುರಸಭೆಯವರು ವಿಳಂಬ ಮಾಡುತ್ತಿದ್ದಾರೆ ಪುರಸಭೆಯಲ್ಲಿ ಕುಳಿತಿರುವ ರಾಜಕುಮಾರ ಡಾಗ್ ಕ್ಯಾಚಿಂಗ್ ಮಧುರೈ ಸದಸ್ಯರು.

ಅದು ಅಲ್ಲದೆ ನಾಯಿ ಹಿಡಿಯುವ ಕುರಿತು ಪುರಸಭೆ ಅಧ್ಯಕ್ಷರಿಗೆ ಹಾಗೂ ಸದಸ್ಯರ ಗಮನಕ್ಕೆ ತರದೇ ಇದ್ದು ಅಲ್ಲದೆ ಪಶು ವೈದ್ಯಾಧಿಕಾರಿಗಳಿಗೆ ಸಹ ತಿಳಿಸಿಲ್ಲ ಒಂದು ವೇಳೆ ನಾಯಿಯನ್ನು ಹಿಡಿಯುವಾಗ ಏನಾದರೂ ಹೆಚ್ಚು ಕಡಿಮೆ ಆದರೆ ಅವುಗಳಿಗೆ ಚಿಕಿತ್ಸೆ ನೀಡಲು ಪಶು ವೈದ್ಯರ ಗಮನಕ್ಕೆ ತಿಳಿಸಬೇಕಾಗಿತ್ತು ಎಂದು ಪ್ರಾಣಿ ದಯಾ ಸಂಘ ಸದಸ್ಯರು ಆರೋಪಿಸಿದ್ದಾರೆ.

ಮೂರು ದಿನಗಳ ಕಾಲ ನಾಯಿ ಹಿಡಿಯುವ ಕಾರ್ಯಾಚರಣೆ ನಡೆದಿದ್ದು, ಮೊದಲ ದಿನ ನಾಯಿ ಹಿಡಿಯಲು ಬಂದಾಗ ಸಾರ್ವಜನಿಕರು ನಾಯಿ ಹಿಡಿಯುವ ಕುರಿತು ನನ್ನ ಗಮನಕ್ಕೆ ತಂದಾಗ ನಮಗೆ ತಿಳಿದಿದೆ ಅಲ್ಲಿಯವರೆಗೂ ಪುರಸಭೆಯ ಮುಖ್ಯಾಧಿಕಾರಿಗಳು ಮಾಹಿತಿ ನೀಡಿಲ್ಲ. ನಂತರ ನಾವಾಗಿಯೇ ಕೇಳಿದಾಗ ಹೇಳಿದ್ದಾರೆ ಎಂದು ಪುರಸಭೆ ಅಧ್ಯಕ್ಷೆ ಯಲ್ಲವ್ವ ದುರಗಣ್ಣವರ ಹೇಳಿದ್ದಾರೆ.

ಧ್ವನಿ ವರ್ಧಕದ ಮೂಲಕ ಹಾಗೂ ವಾಟ್ಸಪ್ ಗ್ರೂಪ್ ಗಳ ಪುರಸಭೆ ಅಧ್ಯಕ್ಷೆ, ಉಪಾಧ್ಯಕ್ಷ ಹಾಗೂ ಸದಸ್ಯರಿಗೆ ಮೂಲಕ ನಾಯಿ ಹಿಡಿಯುವ ಕಾರ್ಯಾಚರಣೆ ಮಾಹಿತಿ ನೀಡಿದ್ದೇವೆ ಎಂದು ಪುರಸಭೆ ಮುಖ್ಯಾಧಿಕಾರಿ ಮಹೇಶ ಹಡಪದ ರಿಳಿಸಿದ್ದಾರೆ.

P & S C.No. 8 / 2024
IN THE COURT OF PRINCIPAL DISTRICT & SESSIONS DHARWAD, AT:DHARWAD
PETITIONER : Sri. Malleshi S/o Kallappa Kanchanalli, Age: 48 Yrs, Occ: Agriculture, R/o Belligatti, Tq & Dist: Dharwad.
V/S
RESPONDENT: Nil
CITATION UNDER ORDER-V RULE-20 (1)(A) R/W SECTION-151 OF CPC
Whereas, the above petitioner, has filed petition for issuance of Probate, Under Section- 276 of Indian Succession Act from the competent authority to issue Probate to release the amount which is in S.B. Account and Fixed Deposited amount in KCC Bank Ltd, HO Dharwad, held in the name of deceased Smt. Neelavva D/o Kallappa Kanchanalli.
If anybody is having any objections regarding to issue probate the said S.B Account and Fixed deposited amount and issue Probate in favour of the petitioner is directed to appear before this court on **03/02/2025 at 10.00 AM**. without fail with through Counsel or in person. Failing which the case will be heard in accordance with law.
Given under my hand and seal of this court on 13/12/2024.
By order of the court
SHERISTEDAR
Pril.Civil Judge & JMFC, Dharwad.
V.K.INDI, Advocate for Petitioner.

CHANGE OF NAME
I, Irappa Jalikatti Army No:15332464W Rank: Hav, have changed my Son's name from **ARUN TO ARUN IRAPPA JALIKATTI** Vide affidavit sworn before notary Venkatesh S. Naik at Dharwad on 18/12/2024.

CHANGE OF DOB
I, **SHIDLINGAVVA JALIKATTI** Mother of Army No:15332464W Rank: Hav, Name: Irappa Jalikatti have changed the date of birth from **01-07-1953 TO 01-01-1955** Vide affidavit sworn before notary Venkatesh S. Naik at Dharwad on 19/12/2024.

CHANGE OF NAME
I, **SHIDLINGAVVA** Mother of Army No:15332464W Rank: Hav, Name: Irappa Jalikatti have changed my name from **SHIDLINGAVVA TO SHIDLINGAVVA JALIKATTI** Vide affidavit sworn before notary Venkatesh S. Naik at Dharwad on 18/12/2024.

CHANGE OF NAME
I, Irappa Jalikatti Army No:15332464W Rank: Hav, have changed my Daughter's name from **AMRUTA JALIKATTI TO AMRUTA IRAPPA JALIKATTI** Vide affidavit sworn before notary Venkatesh S. Naik at Dharwad on 18/12/2024.

CHANGE OF NAME
I, **MALLAVVA I J** wife of Army No:15332464W Rank: Hav, Name: Irappa Jalikatti have changed my name from **MALLAVVA I J TO MALLAVVA IRAPPA JALIKATTI** Vide affidavit sworn before notary Venkatesh S. Naik at Dharwad on 18/12/2024.

CHANGE OF DOB
I, **SHANKAREPPA JALIKATTI** Father of Army No:15332464W Rank: Hav, Name: Irappa Jalikatti have changed the date of birth from **01-07-1948 TO 01-01-1941** Vide affidavit sworn before notary Venkatesh S. Naik at Dharwad on 19/12/2024.

ಗ್ರಾಹಕರ ಸಂವಾದ ಸಭೆ

ಕಾರವಾರ: ಹೊನ್ನಾವರ ಉಪ-ವಿಭಾಗ ವ್ಯಾಪ್ತಿಯಲ್ಲಿ ಡಿ.21 ರಂದು ಬೆಳಗ್ಗೆ 11ಕ್ಕೆ ವಿದ್ಯುತ್ ಅದಾಲತ್ ಹಾಗೂ ಮಧ್ಯಾಹ್ನ 3.30ಕ್ಕೆ ಗ್ರಾಹಕರ ಸಂವಾದ ಸಭೆಯನ್ನು ಹೊನ್ನಾವರ ಉಪ- ವಿಭಾಗ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಹೊನ್ನಾವರ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

CHANGE OF NAME
I, **SHANKAREPPA** Father of Army No:15332464W Rank: Hav, Name: Irappa Jalikatti have changed my name from **SHANKAREPPA TO SHANKAREPPA JALIKATTI** Vide affidavit sworn before notary Venkatesh S. Naik at Dharwad on 18/12/2024.

ಸತ್ತ, ಅರೆ ಸತ್ತ ನಾಯಿಗಳ ತಂದೆಸೆದ ದುರುಳರು

ಯಲ್ಲಾಪುರ: ತಾಲೂಕಿನ ಶಿರಸಿ ರಸ್ತೆಯ ತೂಕದಬೈಲ್ ಬಳಿ ರಾಜ್ಯ ಹೆದ್ದಾರಿಯಲ್ಲಿ ರಾಶಿ ರಾಶಿ ಶ್ವಾನಗಳ ಶವ ಕೊಳೆತ ಸ್ಥಿತಿಯಲ್ಲಿ ಬಿದ್ದಿದ್ದು,ವಾಹನ ಸವಾರರು ಮೂಗುಮುಚ್ಚಿಕೊಂಡು ಓಡಾಡುವಂತಾಗಿ ರೋಗ ರುಜಿನ ಹರಡುವ ಭೀತಿ ಉಂಟಾಗಿತ್ತು.

ಬೇರೆಡೆಯಿಂದ ಯಾರೋ ನಾಯಿಗಳನ್ನು ಟ್ರಕ್ ನಲ್ಲಿ ತಂದು ಇಲ್ಲಿ ಬಿಟ್ಟಿರುವ ಶಂಕೆವ್ಯಕ್ತವಾಗಿದೆ. ಘಟನೆಯ ಕುರಿತು ಗ್ರಾಮಸ್ಥರು ಗ್ರಾಮಪಂಚಾಯತಗೆ ತಿಳಿಸಿದ್ದರಿಂದ ಮಾಹಿತಿಯನ್ನು ಪಡೆದ ಕಂಪ್ಲಿ ಗ್ರಾ ಪಂ ಅಭಿವೃದ್ಧಿ ಅಧಿಕಾರಿ ರವಿ ಪಟಗಾರ್ ಗುರುವಾರ ಜೆಸಿಬಿ ಮೂಲಕ ಹೊಂಡ ತೆಗೆದು ನಾಯಿಗಳನ್ನು ಸಮಾಧಿ ಮಾಡಲಾಗಿದೆ. ಎಲ್ಲಿಂದ ತಂದು ಇಲ್ಲಿ ಹಾಕಿದ್ದಾರೆ ಎಂದು ತಿಳಿದು ಬಂದಿಲ್ಲಎಂದು ತಿಳಿಸಿದ್ದಾರೆ.

ಬೀದಿ ನಾಯಿಗಳಿಗೆ ವಿಷವಿಟ್ಟು ಸಾಯಿಸಿರುವ ಶಂಕೆ ವ್ಯಕ್ತವಾಗಿದ್ದು ನೂರಾರು ನಾಯಿಗಳನ್ನು ಟ್ರಕ್‌ನಲ್ಲಿ ತಂದು ಇಲ್ಲಿ ಬಿಟ್ಟು ಹೋಗಿದ್ದು ಅವುಗಳಲ್ಲಿ ಅರೆಬರೆ ಜೀವವಿದ್ದ ನಾಯಿಗಳು ಇದ್ದು,ಸತ್ತ ನಾಯಿಗಳನ್ನು ಸಹ ಎರಡು ಕಡೆ ಗುಂಪಾಗಿ ಹಾಕಲಾಗಿತ್ತುಇಷ್ಟು ದೊಡ್ಡ ಮಟ್ಟದಲ್ಲಿ ನಲವತ್ತಕ್ಕೂ ಹೆಚ್ಚು ನಾಯಿಗಳ ಕಳೆಬರ ರಸ್ತೆ ಪಕ್ಕದಲ್ಲಿ ಬಿದ್ದಿರುವುದು ಹಲವು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.ಈ ಹಿನ್ನೆಲೆಯಲ್ಲಿ ಈ ಬಗ್ಗೆ ತನಿಖೆ ಆಗಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ

ತಾಲೂಕಿನ ತೂಕದಬೈಲ್ ಬಳಿ ಜೆಸಿಬಿ ಮೂಲಕ ಹೊಂಡ ತೆಗೆಯಿಸಿ ನಾಯಿಗಳನ್ನು ಸಮಾಧಿ ಮಾಡಲು ಸಿದ್ಧತೆ ನಡೆಸಿರುವದು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ನನ್ನಿಂದ ದುಪ್ಪಟ್ಟು ಸಾಲ ವಸೂಲಿ

ಇ.ಡಿ ಹಾಗೂ ಬ್ಯಾಂಕ್‌ಗಳು ನನ್ನ ಸಾಲಕ್ಕಿಂತಲೂ ಎರಡು ಪಟ್ಟು ಆಸ್ತಿ ಜಪ್ತಿ ಮಾಡಿವೆ. ಆದರೂ ನಾನಿನ್ನೂ ಆರ್ಥಿಕ ಅಪರಾಧಿಯಾಗಿದ್ದೇನೆ. ನ್ಯಾಯ ಪಡೆಯಲು ನನಗೆ ಯಾವುದೇ ಧೈರ್ಯವಿಲ್ಲ ಎಂದು ಉದ್ಯಮಿ ವಿಜಯ್ ಮಲ್ಯ ಹೇಳಿದ್ದಾರೆ.

ಸಂಸತ್ ಆವರಣದಲ್ಲಿ ಇಂಡಿಯಾ-ಎನ್‌ಡಿಎ ಪ್ರತಿಭಟನೆ ವೇಳೆ ನೂಕಾಟ-ತಳ್ಳಾಟ | ಬಿಜೆಪಿ ಸಂಸದರಾದ ಪ್ರತಾಪ್ ಚಂದ್ರ ಸಾರಂಗಿ, ಮುಖೇಶ್ ರಜಪೂತ್‌ಗೆ ಗಾಯ | ಖರ್ಗೆ ಮೊಣಕಾಲಿಗೂ ಏಟು, ರಾಹುಲ್ ಗಾಂಧಿ ವಿರುದ್ಧ ಹತ್ಯೆ ಯತ್ನ ಸೇರಿ 2 ಪ್ರಕರಣ ದಾಖಲು

ಇಲ್ಲೂ ಅಲ್ಲೂ ಕೋಲಾಹಲ

ಹೆಬ್ಬಾಳ್ಕರ್ ನಿಂದನೆ ಸಿ.ಟಿ.ರವಿ ಬಂಧನ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಆಕ್ಷೇಪಾರ್ಹ ಪದ ಬಳಕೆ ಮಾಡಿದ್ದಾರೆ ಎನ್ನಲಾದ ಆರೋಪ ಸಂಬಂಧ ಶುಕ್ರವಾರ ಸುವರ್ಣಸೌಧ ಅಕ್ಷರಶಃ ರಣರಂಗ ವಾಗಿ ಮಾರ್ಪಟ್ಟಿತ್ತು. ನಂತರ ನಡೆದ ಬೆಳವಣಿಗೆಯಲ್ಲಿ ಪರಿಷತ್ ಸದಸ್ಯ ಸಿ.ಟಿ.ರವಿ ಮೇಲೆ ಸಚಿವೆಯ ಆಪ್ತರು ಹಲ್ಲೆಯ ಯತ್ನ ನಡೆಸಿದ್ದಾರೆ. ಇದಾಗಿ ಕಲಾಪ ಮುಗಿಯುವ ವೇಳೆ ರವಿ ಅವರನ್ನು ಸುವರ್ಣ ಸೌಧದ ಆವರಣದಿಂದಲೇ ಬಂಧಿಸಿ ನಂತರ ಖಾನಾಪುರ ಠಾಣೆಯಲ್ಲಿ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಂಡರು.

ವಿಧಾನ ಪರಿಷತ್ತಿನಲ್ಲಿ ನಡೆದಿದ್ದೇನು?: ಗುರುವಾರ ಪರಿಷತ್ತಿನ ಶೂನ್ಯವೇಳೆಯ ಬಳಿಕ, ಅಂಬೇಡ್ಕರ್ ವಿರುದ್ಧ ಕೇಂದ್ರ ಸಚಿವ ಅಮಿತ್ ಶಾ ಅವಮಾನಕರ ಹೇಳಿಕೆ ನೀಡಿದ್ದಾರೆ ಎಂದು ದೂರಿದ ಕಾಂಗ್ರೆಸ್‌ನ ಎಲ್ಲ ಸದಸ್ಯರು ಅಂಬೇಡ್ಕರ್ ಭಾವಚಿತ್ರ ಹಿಡಿದು ಚರ್ಚೆಗೆ ಪಟ್ಟು ಹಿಡಿದರು. ಪ್ರತಿಯಾಗಿ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಿ.ಟಿ.ರವಿ ಸೇರಿದಂತೆ ಬಿಜೆಪಿ ಸದಸ್ಯರು ಕೂಡ ಅಂಬೇಡ್ಕರ್ ಭಾವಚಿತ್ರ ಹಿಡಿದುಕೊಂಡು 'ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್' ಎಂದು ಘೋಷಣೆ ಕೂಗಿದರು. ಸದನದಲ್ಲಿ ಕೋಲಾಹಲ ಉಂಟಾದಾಗ ಕಲಾಪವನ್ನು ಸಭಾಪತಿ ಬಸವರಾಜ ಹೊರಟ್ಟಿ ಮುಂದೂಡಿದರು. ಕಲಾಪ ಮುಂದೂಡಿದರೂ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ಸದನದ ಒಳಗೆ ಪರಸ್ಪರ ಆರೋಪ- ಪ್ರತ್ಯಾರೋಪ ಮುಂದು ವರಿಸಿದರು. ಈ ವೇಳೆ, ತಮ್ಮನ್ನು ಟೀಕೆ ಮಾಡಿದ್ದಾರೆ ಎಂದು ಸಿಟ್ಟಾದ ಸಿ.ಟಿ.ರವಿ, ಅವಾಚ್ಯ ಪದ ಬಳಸಿದರು ಎಂದು ಕಾಂಗ್ರೆಸ್ ಸದಸ್ಯರು ದೂರಿದರು.

ಮಾತಿನ ಚಕಮಕಿ ನಡೆಯುವಾಗ 'ನನ್ನ ವಿರುದ್ಧ ರವಿ ಅಸಾಂವಿಧಾನಿಕ ಪದ ಬಳಸಿದ್ದಾರೆ' ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಗಂಭೀರ ಆರೋಪ ಮಾಡಿದರು. ಅಲ್ಲದೆ, ಸದನದಿಂದ ಹೊರಗೆ ಹೋಗಿ ಸಭಾಪತಿಗೆ ದೂರು ನೀಡಿದರು. ಆ ಬೆನ್ನಲ್ಲೇ, ಸಿ.ಟಿ.ರವಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭಾಪತಿಗೆ ಕಾಂಗ್ರೆಸ್ ಸದಸ್ಯರು ಮನವಿ ಮಾಡಿದರು. ಲಕ್ಷ್ಮೀ ಹೆಬ್ಬಾಳ್ಕರ್ ಅವರು ದೂರು ಸ್ವೀಕರಿಸಿದ ಸಭಾಪತಿ, ಆಡಿಯೊ ವಿಡಿಯೊ ಪರಿಶೀಲನೆಗೆ ಸೂಚನೆ ನೀಡಿ, ಕಲಾಪವನ್ನು ಅನಿರ್ದಿಷ್ಟ ಕಾಲ ಮುಂದೂಡಲಾಯಿತು

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಅವಾಚ್ಯ ಪದ ಬಳಕೆ ಮಾಡಿದ್ದಾರೆ ಎಂಬ ಆರೋಪದಡಿ ಸುವರ್ಣಸೌಧದಲ್ಲಿ ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ಪೊಲೀಸರು ಬಂಧಿಸಿದರು.

ದೂರು ದಾಖಲು, ಬಂಧನ

ಹೆಬ್ಬಾಳ್ಕರ್ ದೂರು ನೀಡಿದ್ದರಿಂದ ಬಿಎನ್‌ಎಸ್ 173ರಲ್ಲಿ ಜಾಮೀನು ರಹಿತ ಪ್ರಕರಣ ದಾಖಲಾಗಿದ್ದು, ಸಿ.ಟಿ.ರವಿ ಅವರನ್ನು ಹಿರೇಬಾಗೇವಾಡಿ ಪೊಲೀಸರು, ಬಲವಂತಾಗಿಯೇ ಎತ್ತಿಕೊಂಡು ಬಂದು ವಾಹನದಲ್ಲಿ ಕೂರಿಸಿಕೊಂಡು ಠಾಣೆಗೆ ಕರೆದೊಯ್ದರು. ನಂತರ ಭದ್ರತೆ ದೃಷ್ಟಿಯಿಂದ ಖಾನಾಪುರ ಠಾಣೆಗೆ ಕರೆದೊಯ್ಯಲಾಯಿತು.

ಹಲ್ಲೆಗೆ ಯತ್ನ

ವಿಧಾನಸೌಧದಿಂದ ಹೊರಗೆ ಪ್ರವೇಶ ದ್ವಾರದ ಕಾರಿಡಾರ್‌ನಲ್ಲಿ ಹೋಗುತ್ತಿದ್ದ ರವಿ ಅವರ ಮೇಲೆ ಕೆಲವರು ನುಗ್ಗಿ ಹಲ್ಲೆಗೆ ಯತ್ನಿಸಿದರು. ಈ ವೇಳೆ ಮಾರ್ಷಲ್‌ಗಳು ಅವರನ್ನು ರಕ್ಷಿಸಿದರು.

ಸಚಿವೆ ಹೆಬ್ಬಾಳ್ಕರ್ ಅವರಿಗೆ ಅವಾಚ್ಯ ಪದ ಬಳಕೆ ಮಾಡಿರುವ ಬಗ್ಗೆ ಸಿ.ಟಿ.ರವಿಯವರ ವಿರುದ್ಧ ಸಭಾಪತಿಯವರಿಗೆ ಹಾಗೂ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದು, ಪೊಲೀಸರು ಈ ಕ್ರಿಮಿನಲ್ ಅಪರಾಧ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ. ಇಂತಹ ಪದಬಳಕೆ ಒಂದು ರೀತಿಯ ಲೈಂಗಿಕ ದೌರ್ಜನ್ಯವಾಗಿದೆ. ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ನಾನು ಸದನದಲ್ಲಿ ಯಾವುದೇ ಅಸಾಂವಿಧಾನಿಕ ಪದ ಬಳಕೆ ಮಾಡಿಲ್ಲ. ಕಾಂಗ್ರೆಸ್‌ನವರು ವಿಷಯಾಂತರ ಮಾಡುತ್ತಿದ್ದು, ಸದನದಲ್ಲಿ ಮಾತನಾಡಿದ ಯಾವುದೇ ಸಾಕ್ಷ್ಯಗಳು ಇದ್ದರೆ ಪರಿಶೀಲನೆ ಮಾಡಬಹುದು. ನಮ್ಮನ್ನು ಹೆದರಿಸುವ ತಂತ್ರ ಮಾಡಿದರೆ ಇದಕ್ಕೆ ಬಗ್ಗುವವರು ನಾವಲ್ಲ.
- ಸಿ.ಟಿ.ರವಿ, ಪರಿಷತ್ ಸದಸ್ಯ

ಸಚಿವೆ ಕಣ್ಣೀರು

ಸಿ.ಟಿ.ರವಿ ಅವರು ನನ್ನ ವಿರುದ್ಧ ಅವಾಚ್ಯ ಶಬ್ದ ಬಳಕೆ ಮಾಡಿ, ನಿಂದನೆ ಮಾಡಿದ್ದಾರೆ. ನನ್ನ ಮನೆಯಲ್ಲಿ ಹೆಣ್ಣು ಮಕ್ಕಳು ಇದ್ದಾರೆ. ಒಬ್ಬ ಸಚಿವೆಯಾಗಿರುವ ನನಗೆ ಅವರು ಬಳಸಿರುವ ಪದ ಸರಿಯಲ್ಲ. ನನ್ನ ಮನಸ್ಸಿಗೆ ನೋವಾಗಿದೆ, ಸಿ.ಟಿ ರವಿ ಅವರಿಗೆ ಅಕ್ಕ-ತಂಗಿಯರು ಇಲ್ವಾ? ಎಂದು ಪತ್ರಕರ್ತರ ಎದುರು ಕಣ್ಣೀರು ಹಾಕಿದರು.

ಅಂಬೇಡ್ಕರ್ ನಿಂದನೆ ಸಂಸತ್ ರಣಾಂಗಣ

ದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಅಂಬೇಡ್ಕರ್ ಕುರಿತ ಹೇಳಿಕೆ ವಿಚಾರವಾಗಿ ಸಂಸತ್ ಆವರಣದಲ್ಲಿ ಇಂಡಿಯಾ ಬಣದ ಸಂಸದರು ಹಾಗೂ ಎನ್‌ಡಿಎ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಗದ್ದಲ ಉಂಟಾಗಿದೆ. ಸಂಸದರಾದ ಪ್ರತಾಪ್ ಚಂದ್ರ ಸಾರಂಗಿ ಹಾಗೂ ಮುಖೇಶ್ ರಜಪೂತ್ ಅವರು ಗಾಯಗೊಂಡಿದ್ದಾರೆ. ಅವರಿಬ್ಬರನ್ನೂ ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಗಾಯಾಳು ಸಾರಂಗಿ ಅವರು 'ರಾಹುಲ್ ಗಾಂಧಿ ತಳ್ಳಿದ್ದರಿಂದ ಗಾಯವಾಗಿದೆ' ಎಂದು ಆರೋಪ ಮಾಡಿದ್ದಾರೆ. ಇದನ್ನು ಅಲ್ಲಗಳೆದಿರುವ ರಾಹುಲ್ ಗಾಂಧಿ, 'ಪಾರ್ಲಿಮೆಂಟ್‌ಗೆ ಹೋಗಲು ನನ್ನನ್ನು ತಡೆದು, ತೊಂದರೆ ಕೊಟ್ಟಿದ್ದು ಅವರೇ' ಎಂದು ಪ್ರತ್ಯಾರೋಪ ಮಾಡಿದ್ದಾರೆ.

- ಅಮಿತ್ ಶಾ ವಿರುದ್ಧ ಮಲ್ಲಿಕಾರ್ಜುನ್ ಖರ್ಗೆ ಹಕ್ಕುಚ್ಯುತಿ ನೋಟಿಸ್
- ತನಿಖೆ ನಡೆಸುವಂತೆ ಸ್ಪೀಕರ್ ಓಂ ಬಿರ್ಲಾಗೆ ಕಾಂಗ್ರೆಸ್ ಸಂಸದರ ಪತ್ರ
- ರಾಜ್ಯಸಭೆಯಲ್ಲಿ ಶಾ ಹೇಳಿಕೆ ಬಗ್ಗೆ ಚರ್ಚೆಗೆ ಪಟ್ಟು, ಕಲಾಪ ಮುಂದೂಡಿಕೆ

ಆಗಿದ್ದೇನು?: ಅಂಬೇಡ್ಕರ್ ಹೇಳಿಕೆ ಸಂಬಂಧ ಸಚಿವ ಅಮಿತ್ ಶಾ ರಾಜೀನಾಮೆಗೆ ಆಗ್ರಹಿಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸೇರಿದಂತೆ ಇಂಡಿಯಾ ಬಣದ ಸಂಸದರು ನೀಲಿ ಬಣ್ಣದ ಬಟ್ಟೆ ಧರಿಸಿ ಗುರುವಾರ ಸಂಸತ್ ಆವರಣದಲ್ಲಿ ಪ್ರತಿಭಟನೆ ನಡೆಸಿದರು. → 4

ದೇಶವ್ಯಾಪಿ ಧರಣಿ: ಕಾಂಗ್ರೆಸ್

ಸಂಸತ್ ಭವನದ ಮಕರ ದ್ವಾರದ ಬಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ನೂಕಿ, ರಾಹುಲ್ ಗಾಂಧಿ ಮೇಲೆ ದೈಹಿಕವಾಗಿ ಹಲ್ಲೆ ನಡೆಸುವ ಮೂಲಕ ಬಿಜೆಪಿ ನಾಯಕರು ಸಂಸತ್‌ನ ಘನತೆಯನ್ನು ಮಣ್ಣುಪಾಲು ಮಾಡಿದ್ದಾರೆ. ಅಂಬೇಡ್ಕರ್ ಕುರಿತು ಆಡಿರುವ ಮಾತುಗಳಿಗೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಈ ನಿಟ್ಟಿನಲ್ಲಿ ದೇಶಾದ್ಯಂತ ಪಕ್ಷವು ಬೀದಿಗಿಳಿದು ಹೋರಾಟ ನಡೆಸಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ತಿಳಿಸಿದ್ದಾರೆ.

ಸಂಸತ್ ಆವರಣದಲ್ಲಿ ಇಂಡಿಯಾ ಮೈತ್ರಿಕೂಟದ ಸಂಸದರು ಪ್ರತಿಭಟನೆ ಮಾಡಿದರು.



ತಳ್ಳಾಟದಲ್ಲಿ ಗಾಯಗೊಂಡಿರುವ ಸಂಸದ ಪ್ರತಾಪ್ ಚಂದ್ರ ಸಾರಂಗಿ.

ಅವರೇ ನನ್ನನ್ನು ತಳ್ಳಿದರು

ಸಂಸತ್ ಭವನಕ್ಕೆ ಪ್ರವೇಶಿಸದಂತೆ ಬಿಜೆಪಿ ಸಂಸದರು ತಮ್ಮನ್ನು ಹಾಗೂ ವಿರೋಧ ಪಕ್ಷಗಳ ಸಂಸದರನ್ನು ತಡೆದರು, ತಳ್ಳಿದರು ಎಂದು ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಇದು ಸಂಸತ್‌ನ ಪ್ರವೇಶ ದ್ವಾರ. ಒಳಗೆ ಹೋಗುವ ಹಕ್ಕು ನಮಗೆ ಇದೆ. ಒಳಗೆ ಹೋಗದಂತೆ ಬಿಜೆಪಿ ಸಂಸದರನ್ನು ನಮ್ಮನ್ನು ತಡೆದರು ಎಂದು ಹೇಳಿದ್ದಾರೆ.

ನನ್ನ ಮೇಲೂ ಹಲ್ಲೆ: ಖರ್ಗೆ

ಸಂಸತ್ ಭವನದ ಮಕರ ದ್ವಾರದ ಬಳಿ ಬಿಜೆಪಿಯ ಸಂಸದರನ್ನು ನನ್ನನ್ನು ತಳ್ಳಿದ್ದಾರೆ. ನಿಯಂತ್ರಣ ತಪ್ಪಿ ನಾನು ಬಿದ್ದೆ. ಇದರಿಂದ ಈಗಾಗಲೇ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ನನ್ನ ಮೊಣಕಾಲುಗಳಿಗೆ ಗಾಯವಾಯಿತು. ಕಾಂಗ್ರೆಸ್ ಸಂಸದರು ಕುರ್ಚಿ ತಂದು ನನ್ನನ್ನು ಕೂರಿಸಿದರು ಎಂದು ಸ್ಪೀಕರ್ ಓಂ ಬಿರ್ಲಾ ಅವರಿಗೆ ಖರ್ಗೆ ಪತ್ರ ಬರೆದಿದ್ದಾರೆ.

ದೂರು, ಪ್ರತಿದೂರು

ಎನ್‌ಡಿಎ ಹಾಗೂ ಇಂಡಿಯಾ ಮೈತ್ರಿಕೂಟದ ಸಂಸದರ ನಡುವೆ ನಡೆದ ಗಲಾಟೆ ಸಂಬಂಧ ದೂರು ನೀಡಲು ಎನ್‌ಡಿಎ ಬಣದ ಅನುರಾಗ್ ಠಾಕೂರ್, ಬಾನ್ಸುರಿ ಸ್ವರಾಜ್ ಅವರು ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸ್ ಠಾಣೆಗೆ ತೆರಳಿ ದೂರು ಸಲ್ಲಿಸಿದ್ದಾರೆ. ಸಂಸತ್ತ್‌ನಲ್ಲಿ ನಡೆದ ಘಟನೆಯನ್ನು 'ಬಿಜೆಪಿಯ ಗೂಂಡಾಗಿರಿ' ಎಂದು ಕರೆದಿರುವ ಕಾಂಗ್ರೆಸ್ ಕೂಡ ಸಂಸತ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ.

ಪುಟ ತೆರೆದಂತೆ...

ಶಿಕಾಗೋ ಚಳಿಗಾಲ ಬಂತೆಂದರೆ ತಯಾರಿ ಒಂದೆರಡಲ್ಲ!
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಉಪ್ಪಿನ ಸಾಗಣೆ ತಡೆಯಲು ತಂತ್ರ-ಕುತಂತ್ರ!
ಶಶಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ಮಾತಂದ್ರೆ ಮಾತು



ಉತ್ತರ ಕರ್ನಾಟಕದ ಬಸ್ಸುಗಳು ಗಡ, ಗಡ ಅಲ್ಲಾಡುತ್ತಾ ಓಡಾಡುತ್ತವೆ. ಹಳೇ ಬಸ್ಸುಗಳನ್ನು ಕೊಡುತ್ತಾರೆ, ಬಣ್ಣವೂ ಕಿತ್ತು ಹೋಗಿರುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಬಳಕೆಯಾದ ಹಳೇ ಬಸ್ಸುಗಳನ್ನು ಉತ್ತರ ಕರ್ನಾಟಕಕ್ಕೆ ಕಳಿಸುತ್ತಾರೆ. ಹೊಸ ಬಸ್ಸುಗಳನ್ನು ಕೊಡುವುದಿಲ್ಲ.

ಬಸನಗೌಡ ಪಾಟೀಲ ಯತ್ನಾಳ
ಶಾಸಕ

ಫನ್‌ತರಂಗ
- ರಘುಪತಿ ಶೃಂಗೇರಿ -

ಬೆಸ್ಕಾಂ ಅಧಿಕಾರಿಗಳಿಗೆ ಲೋಕಾಯುಕ್ತ ಶಾಕ್ ಕಚೇರಿ ಮೇಲೆ ದಾಳಿ, ಪರಿಶೀಲನೆ
ಸುದ್ದಿ



ಕರೋನಾ ಅಕ್ರಮ ಪ್ರಸ್ತಾಪಿಸಿದ ಕಾಂಗ್ರೆಸಿಗರು: ಸದನದಲ್ಲಿ ಗದ್ದಲ

ಬಾಣಂತಿಯರ ಸಾವು: ನ್ಯಾಯಾಂಗ ತನಿಖೆ

ಸುವರ್ಣಸೌಧ ಬೆಳಗಾವಿ: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ಬಾಣಂತಿಯರ ಸಾವಿನ ನೈತಿಕ ಹೊಣೆ ಹೊತ್ತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಸದಸ್ಯರು ಆಗ್ರಹಿಸಿದರು.

ಇನ್ನೊಂದೆಡೆ ಈ ದುರಂತಕ್ಕೆ ಬೇಸರ ವ್ಯಕ್ತಪಡಿಸಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ನ್ಯಾಯಾಂಗ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಹಾಗೂ ಫಾರ್ಮಾ ಕಂಪನಿಯಿಂದಲೂ ಕುಟುಂಬಕ್ಕೆ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ಬಾಣಂತಿಯರ ಮರಣೋತ್ತರ ಪರೀಕ್ಷೆ ನಡೆಸದಿರುವುದು, ಸರಕಾರದ ಪರವಾಗಿ ಆಸ್ಪತ್ರೆಗೆ ಭೇಟಿ ನೀಡದಿರುವುದು, ಕೇವಲ ಐದು ಲಕ್ಷ ಪರಿಹಾರ ನೀಡಿರುವುದನ್ನು ಖಂಡಿಸಿ ಬಿಜೆಪಿಗರು ಸರಕಾರದ ವಿರುದ್ಧ ತಿರುಗಿಬಿದ್ದರು. ಈ ವೇಳೆ ಬಿಜೆಪಿ ಶಾಸಕರ ವಿರುದ್ಧ ಕರೋನಾ ಹಗರಣ ಪ್ರಸ್ತಾಪಿಸಿದ್ದರಿಂದ, ಬಿಜೆಪಿ ಶಾಸಕರು ಸರಕಾರದ ವಿರುದ್ಧ ವಾಗ್ದಾಳಿ ನಡೆಸಿ ಸಭಾತ್ಯಾಗ ನಡೆಸಿದರು.

ಬಾಣಂತಿಯರ ಸಾವಿನ ಪ್ರಕರಣವನ್ನು ನ್ಯಾಯಾಂಗ ತನಿಖೆ ನಡೆಸಲಾಗುವುದು. ಯಾರೇ ತಪ್ಪಿತಸ್ಥರಿದ್ದರೂ ಅವರನ್ನು ಸುಮ್ಮನೇ ಬಿಡುವುದಿಲ್ಲ. ಒಂದು ವೇಳೆ ನಾನು ತಪ್ಪಿತಸ್ಥನೆಂದು ತಿಳಿದುಬಂದರೆ, ಮುಲಾಜಿಲ್ಲದೇ, ಕ್ರಮ ಕೈಗೊಳ್ಳಿ. ಅದಕ್ಕೆ ನಾನು ಸಿದ್ಧ.
- ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಧನಕರ್ ವಿರುದ್ಧ ಅವಿಶ್ವಾಸ ನಿರ್ಣಯ ತಿರಸ್ಕೃತ

ದೆಹಲಿ: ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ವಿರುದ್ಧ ಅವಿಶ್ವಾಸ ನಿಲುವಳಿ ಮಂಡಿಸಲು ಪ್ರತಿಪಕ್ಷಗಳು ಸಲ್ಲಿಸಿರುವ ನೋಟಿಸ್ ಅನ್ನು ರಾಜ್ಯಸಭೆಯ ಉಪ ಸಭಾಪತಿ ಹರಿವಂಶ್ ಅವರು ಗುರುವಾರ ತಿರಸ್ಕರಿಸಿದ್ದಾರೆ.

ಸಲಿಂಗಿ ಯುವತಿಯರ ಸಹಜೀವನಕ್ಕೆ ಅಸ್ತು

ಅಮರಾವತಿ: ಪ್ರಕರಣದ ವಿಚಾರಣೆಯೊಂದರಲ್ಲಿ ಸಲಿಂಗ ಯುವತಿಯರ ಸಹಜೀವನದ ಹಕ್ಕನ್ನು ಎತ್ತಿ ಹಿಡಿದಿರುವ ಆಂಧ್ರ ಪ್ರದೇಶ ಹೈಕೋರ್ಟ್, ತಮ್ಮ ಸಂಗಾತಿಯ ಆಯ್ಕೆಯ ಸ್ವಾತಂತ್ರ್ಯವನ್ನು ದೃಢೀಕರಿಸಿದೆ.

ಭಾರತ-ಅಮೆರಿಕ ಅಧಿಕಾರಿಗಳ ಮಾತುಕತೆ

ವಾಷಿಂಗ್ಟನ್: ಮಾನವ ಸಹಿತ ಬಾಹ್ಯಾಕಾಶಯಾನ, ಬಾಹ್ಯಾಕಾಶ ಜಂಟಿ ಪರಿಶೋಧನೆ, ಬೆಳೆಯುತ್ತಿರುವ ಬಾಹ್ಯಾಕಾಶ ಆರ್ಥಿಕತೆಯಲ್ಲಿ ಸಹಭಾಗಿತ್ವದ ಕುರಿತು ಭಾರತ ಮತ್ತು ಅಮೆರಿಕದ ಅಧಿಕಾರಿಗಳು ಮಾತುಕತೆ ನಡೆಸಿದ್ದಾರೆ ಎಂದು ಶ್ವೇತಭವನ ಹೇಳಿದೆ.

ಸಕ್ಕರೆ ನಾಡಿನಲ್ಲಿ ಸಾಹಿತ್ಯ ಜಾತ್ರೆ

ಮಧುರ ಮಂಡ್ಯದಲ್ಲಿ ಇಂದು ಸಾಹಿತ್ಯ ಸಮ್ಮೇಳನ ಆರಂಭ

ಸಕ್ಕರೆ ನಾಡಿಗೆ ಅಕ್ಕರೆಯ ಸ್ವಾಗತ

ಮಂಡ್ಯ: 'ಮಧುರ ಮಂಡ್ಯ' ಎಂದೇ ಇಲ್ಲಿನ ಜನ ಪ್ರೀತಿಯಿಂದ ಕರೆಯುವ ಸಕ್ಕರೆ ನಾಡು ಮಂಡ್ಯದಲ್ಲಿ ಅಖಿಲ ಭಾರತ 87ನೇ ಕನ್ನಡ ಸಾಹಿತ್ಯ ಸಮ್ಮೇಳನ ಇಂದು ಆರಂಭವಾಗಲಿದೆ. ಅಪ್ಪಟ ದೇಸಿ ಕನ್ನಡ ಮಾತಾಡುವ ಈ ನೆಲದ ಜನ ನಾಡಿನಾದ್ಯಂತದ ಕನ್ನಡಿಗರನ್ನು ಪ್ರೀತಿಯಿಂದ ಸ್ವಾಗತಿಸಲು ಸಜ್ಜಾಗಿದ್ದಾರೆ. ಇಂದಿನಿಂದ ಮೂರು ದಿನ (ಡಿ.20, 21, 22) ಮಂಡ್ಯದ ಸ್ಯಾಂಜೋ ಆಸ್ಪತ್ರೆಯ ಹಿಂಭಾಗದ ವಿಶಾಲ ಜಮೀನಿನಲ್ಲಿ ನುಡಿ ಸಡಗರ ಮೇಳೈಸಲಿದೆ. ಕನ್ನಡ ತಾಯಿ ಭುವನೇಶ್ವರಿ ನುಡಿಜಾತ್ರೆಯ ಅರಶಿನ-ಕುಂಕುಮದಿಂದ ಮತ್ತಷ್ಟು ಸಿಂಗಾರಗೊಳ್ಳಲಿದ್ದಾಳೆ.

ಮಂಡ್ಯದ ಕನ್ನಡ ಯಾವುದೇ ರೀತಿಯಿಂದಲೂ ಅನ್ಯ ಭಾಷೆಗಳಿಂದ ಮಿಶ್ರಣಗೊಳ್ಳದ ಅಪ್ಪಟ ನೆಲದ ಘಮಲಿನ ಭಾಷೆ. ಇಲ್ಲಿನ ಜನತೆಯ ಸೊಗಸಾದ ಉಚ್ಚಾರಣೆ, ಇನ್ನೊಬ್ಬರನ್ನು ಕರೆಯುವ ರೀತಿ, ಇಲ್ಲಿನ ಆತಿಥ್ಯ ಎಲ್ಲವೂ ಒಂದು ಕೈ ಮಿಗಿಲು. ಕನ್ನಡ ಸಾಹಿತ್ಯದಲ್ಲಿ ಪ್ರಾತಃಸ್ಮರಣೀಯರಾದ ಅನೇಕ ಹಿರಿಯ, ಜನಪ್ರಿಯ ಸಾಹಿತಿಗಳು ಈ ನೆಲದಲ್ಲಿ ಆಗಿಹೋಗಿದ್ದಾರೆ. ಬಿ.ಎಂ.ಶ್ರೀಕಂಠಯ್ಯ, ಪು.ತಿ. ನರಸಿಂಹಾಚಾರ್, ಎ.ಎನ್.ಮೂರ್ತಿರಾವ್, ಕೆ.ಎಸ್.ನರಸಿಂಹಸ್ವಾಮಿ, ಎಚ್.ಎಲ್.ನಾಗೇಗೌಡ, ಬೆಸಗರಹಳ್ಳಿ ರಾಮಣ್ಣ ಮುಂತಾದವರು ಕನ್ನಡದ ಮಣ್ಣಿಗೆ ಸಾಹಿತ್ಯದ ಸೊಗಡನ್ನು ಕೂಡಿಸಿದ ಮಹನೀಯರು. ಇಂಥವರು ಹುಟ್ಟಿ ಬೆಳಗಿದ ನೆಲದಲ್ಲಿ ನುಡಿಯ ರಥವನ್ನು ಮುನ್ನಡೆಸುತ್ತಿರುವವರು ಸಮ್ಮೇಳನಾಧ್ಯಕ್ಷರಾದ ನಾಡೋಜ ಗೊ.ರು.ಚನ್ನಬಸಪ್ಪ ಅವರು.

ಸಮ್ಮೇಳನಾಧ್ಯಕ್ಷತೆಯ ಗೊಂದಲ: ಗೊ.ರು. ಚನ್ನಬಸಪ್ಪ ಅವರ ಆಯ್ಕೆಗೂ ಮುನ್ನ ಈ ಸಲದ ಸಮ್ಮೇಳನಾಧ್ಯಕ್ಷರ ಆಯ್ಕೆಯ ಬಗ್ಗೆಯೇ ಹಲವು ಗೊಂದಲಗಳಿದ್ದವು. ಸಾಹಿತ್ಯೇತರ ವಲಯದ ಮಹನೀಯರನ್ನು ಅಧ್ಯಕ್ಷತೆಗೆ ಪರಿಗಣಿಸಬೇಕು ಎಂಬ ಬೇಡಿಕೆಯಿದೆ ಎಂದು ಪರಿಷತ್ ಅಧ್ಯಕ್ಷರೇ ಹೇಳಿದರು. ಇದರ ಪರ-ವಿರೋಧ ವಾದಗಳು ನಡೆದವು. ಸಾಹಿತ್ಯ ಸಮ್ಮೇಳನಕ್ಕೆ ಸಾಹಿತಿಗಳನ್ನೇ ಅಧ್ಯಕ್ಷರನ್ನಾಗಿ ಪರಿಗಣಿಸಬೇಕು ಎಂದು ಸಾಹಿತಿಗಳ ವಲಯದಿಂದ ಬಲವಾದ ನಿಲುವು ಮಂಡಿತವಾಯಿತು. ಹೀಗಾಗಿ ಸಾಹಿತಿಗಳೇ ಅಧ್ಯಕ್ಷರಾಗುವುದು ಖಚಿತವಾಯಿತು. ಇದುವರೆಗಿನ ಮಹಿಳಾ ಪ್ರಾತಿನಿಧ್ಯ ಅತಿ ಕಡಿಮೆ ಇದ್ದುದರಿಂದ, ಈ ಬಾರಿ ಸ್ತ್ರೀಯರು ಅಧ್ಯಕ್ಷರಾಗಲಿ ಎಂಬ ಹಕ್ಕೊತ್ತಾಯವೂ ಕೇಳಿಬಂತು. ಕಡೆಗೂ ಜಾನಪದ ತಜ್ಞ, ಸಂಶೋಧಕ, ಆಡಳಿತಗಾರ, ಕನ್ನಡಕ್ಕಾಗಿ ಹಲವು ಕೆಲಸಗಳನ್ನು ಮಾಡಿದ ಚನ್ನಬಸಪ್ಪ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿ ಭಿನ್ನ ಧ್ವನಿಗಳೆಲ್ಲ ಕ್ಷೀಣವಾದವು. → 4



ಸಮಾಚಾರ ಸಣ್ಣದಲ್ಲ

ಟ್ಯಾಂಕರ್ ಹರಿದು ಮಗು ಸಾವು

ಗದಗ: ನಗರದ ಒಕ್ಕಲಗೇರಿ ಓಣಿಯ ರಾಚೋಟೇಶ್ವರ ದೇವಸ್ಥಾನದ ಬಳಿ ನೀರಿನ ಟ್ಯಾಂಕರ್ ಹರಿದು 2ವರ್ಷದ ಮಗು ಸಾವನ್ನಪ್ಪಿದ ಹೃದಯ ವಿದ್ರಾವಕ ಘಟನೆ ಗುರುವಾರ ನಡೆದಿದೆ. ಈ ದಾರುಣ ಘಟನೆಯ ದೃಶ್ಯ ಸ್ಥಳದಲ್ಲಿನ ಸಿಸಿಟಿವಿಯಲ್ಲಿ ದೃಶ್ಯ ಸೆರೆಯಾಗಿದೆ. ಹೀದಾ ಸೊರಟೂರು ಎಂಬ ಹೆಣ್ಣು ಮಗು ಮೃತಪಟ್ಟ ದುರ್ದೈವಿ. ತಾಯಿ ಮಗುವನ್ನು ಕರೆದುಕೊಂಡು ಸ್ಕೂಟಿ ಮೇಲೆ ಹೋಗುತ್ತಿರುವಾಗ ಎದುರಿಗೆ ಬಂದ ಟ್ಯಾಂಕರ್ ಹರಿದು ಮಗು ಸಾವನ್ನಪ್ಪಿದೆ. ಸ್ಥಳಕ್ಕೆ ಆಗಮಿಸಿದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಗದಗ ಸಂಚಾರಿ ಪೊಲೀಸರ ಭೇಟಿ ನೀಡಿದ್ದರು.

ದಲಿತರಿಗೆ ದಂಡ; ದೇಗುಲಕ್ಕೆ ಬೀಗ

ಚಿಕ್ಕಮಗಳೂರು: ದೇವಸ್ಥಾನದ ಆವರಣದೊಳಗೆ ಹೋದ ದಲಿತರಿಗೆ ದಂಡ ವಿಧಿಸಿ ದೇವಸ್ಥಾನಕ್ಕೆ ಬೀಗ ಹಾಕಿರುವ ಘಟನೆ ಕಡೂರು ತಾಲೂಕು ಬೀರೂರು ಸಮೀಪದ ಬಿ. ಕೋಡಿಹಳ್ಳಿಯಲ್ಲಿ ನಡೆದಿದೆ. ಗ್ರಾಮದ ಮಂಜಪ್ಪ ಹಾಗೂ ಮದನ್ ಎಂಬುವರು ಆಂಜನೇಯ ಸ್ವಾಮಿ ದೇವಸ್ಥಾನದ ಆವರಣ ಪ್ರವೇಶಿದ್ದರು. ಈ ಹಿನ್ನೆಲೆಯಲ್ಲಿ ಗ್ರಾಮದ ಸವರ್ಣಿಯರು ಇಬ್ಬರಿಗೂ ದಂಡ ವಿಧಿಸಿ, ದೇವಸ್ಥಾನ ಪೂಜೆ ನಡೆಸಬೇಕಾದರೆ ಎರಡೂವರೆ ಲಕ್ಷ ರು. ನೀಡಬೇಕು, ಗರ್ಭಗುಡಿ ಮತ್ತು ಶುದ್ಧೀಕರಣಕ್ಕೆ ಹಣ ನೀಡುವಂತೆ ಎಂದು ತಾಕೀತು ಮಾಡಿದ್ದಾರೆ ಎಂದು ಆರೋಪಿಸಿ ಮಂಜಪ್ಪ ತಹಸೀಲ್ದಾರ್‌ಗೆ ದೂರು ನೀಡಿದ್ದಾರೆ.

ಬಿಜೆಪಿ ಗುಂಪುಗಾರಿಕೆಗೆ ಶೀಘ್ರ ತೆರೆ: ಈಶ್ವರಪ್ಪ

ಬಾಗಲಕೋಟೆ: ಬಿಜೆಪಿಯಲ್ಲಿನ ಗುಂಪುಗಾರಿಕೆ ಮುಂದಿನ ದಿನಗಳಲ್ಲಿ ಸರಿಹೋಗುತ್ತದೆ. ತಪಸ್ಸು ಮಾಡಿ ಬಿಜೆಪಿಯನ್ನು

ಕಟ್ಟಿದವರಿಗೆ ಬೆಲೆ ಇದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯಲ್ಲಿ ಗುಂಪುಗಾರಿಕೆ ನಡೆಯುವುದಿಲ್ಲ. ಅಲ್ಲಿ ಗುಂಪುಗಾರಿಕೆಯನ್ನು ವರಿಷ್ಠರು ಸರಿಯಾಗಿ ಚಿವುಟಿ ಹಾಕುತ್ತಾರೆ ಎಂದು ಸ್ಪಷ್ಟಪಡಿಸಿದರು.

ಬಿಎಸ್‌ವೈ ಗುಂಪುಗಾರಿಕೆ ನಿಲ್ಲಿಸಲಿ: ಬಿಎಸ್‌ವೈ ಹೆಸರಲ್ಲಿ ನಡೆಯುವ ಗುಂಪುಗಾರಿಕೆಗೆ ಪ್ರತಿಕ್ರಿಯಿಸಿದ ಅವರು, ಅದು ಶಕ್ತಿ ಪ್ರದರ್ಶನ ಅಲ್ಲ. ಯಾಕೆ ಪ್ರತಿ ವರ್ಷವೂ ಬಿಎಸ್‌ವೈ ಜನ್ಮದಿನವನ್ನು ಆಚರಿಸಿಕೊಳ್ಳಲ್ವಾ? ಆವಾಗ ಯಾಕೆ ಸಮಾವೇಶ ಮಾಡಲಿಲ್ಲ? ಗುಂಪುಗಾರಿಕೆ ನಡೆಯುವಾಗ ಬಿಎಸ್‌ವೈ ನಿಲ್ಲಿಸುವ ಕೆಲಸ ಮಾಡಬೇಕು. ರೇಣುಕಾಚಾರ್ಯ ಬಣದ ಗುಂಪು ಸಮಾವೇಶ ಮಾಡುತ್ತಿರುವುದಕ್ಕೆ ಬಿಎಸ್‌ವೈ ಒಪ್ಪಿಗೆ ಇದೆ ಇಲ್ವೋ ಗೊತ್ತಿಲ್ಲ. ಗುಂಪುಗಾರಿಕೆ ಆಗುವುದಕ್ಕೆ ಬಿಎಸ್‌ವೈ ಒಪ್ಪಿಗೆ ಕೊಡುತ್ತಾರೆ ಎಂದು ನನಗೆ ಅನಿಸುವುದಿಲ್ಲ ಈಶ್ವರಪ್ಪ ಮಾರ್ಮಿಕವಾಗಿ ನುಡಿದರು.

ಪಹಣಿಗಳಲ್ಲಿ ವಕ್ಫ್ ಹೆಸರು ತೆಗೆಯಿರಿ: ವರ್ಕ್ ಆಸ್ತಿ ವಿಚಾರಕ್ಕೆ ಸಂಬಂಧ ಸಿಎಂ, ಸಚಿವ ಜಮೀರ್ ಅಹ್ಮದ್ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಇದು ಹಿಂದು ಸಮಾಜದ ಕಣ್ಣಿಗೆ ಮಣ್ಣುಹಾಕುವ ಉತ್ತರ. ಮಠ, ಜಮೀನುಗಳು, ದೇವಸ್ಥಾನಗಳ ಪಹಣಿಯಲ್ಲಿರುವ ವಕ್ಫ್ ಹೆಸರನ್ನು ತೆಗಿತೀವಿ ಅಂತ ಎಲ್ಲಿಯೂ ಹೇಳಿಲ್ಲ. ಮಠ, ದೇವಸ್ಥಾನ, ಜಮೀನುಗಳಲ್ಲಿನ ಪಹಣಿಗಳಲ್ಲಿನ ವಕ್ಫ್ ಹೆಸರನ್ನು ಕಿತ್ತೆಸೆಯಬೇಕು. ಸಿಎಂ ಸಿದ್ದರಾಮಯ್ಯ, ಸಚಿವ ಜಮೀರ್ ಅಹ್ಮದ್ ಅವರ ಉತ್ತರ ನಮಗೆ ಯಾರಿಗೂ ತೃಪ್ತಿ ತಂದಿಲ್ಲ. ಹಾಗಾಗಿ ವಕ್ಫ್ ವಿಚಾರದಲ್ಲಿನ ಹೋರಾಟ ಮತ್ತೆ ಮುಂದುವರಿಯುತ್ತದೆ ಎಂದರು.

ಶಾ ಹೇಳಿಕೆ ತಪ್ಪಲ್ಲ

ಡಾ. ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿವಾದಾತ್ಮಕ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಡಾ. ಅಂಬೇಡ್ಕರ್ ಜೀವಂತವಾಗಿದ್ದಾಗ ಕಾಂಗ್ರೆಸ್ ಪೂರ್ಣ ಪ್ರಮಾಣದಲ್ಲಿ ಅಪಮಾನ ಮಾಡಿತು. ಅಂಬೇಡ್ಕರ್ ಚುನಾವಣೆಗೆ ನಿಂತಾಗ ಕಾಂಗ್ರೆಸ್‌ನವರೇ ಅವರನ್ನು ಸೋಲಿಸಿದರು. ಅಂಬೇಡ್ಕರ್ ಸಾವನ್ನಪ್ಪಿದಾಗ ದೆಹಲಿಯಲ್ಲಿ ಜಾಗವನ್ನು ಕೊಡಲಿಲ್ಲ. ಕೇಂದ್ರ ಮಂತ್ರಿ ಮಂಡಲದಲ್ಲಿದ್ದಾಗ ಅಂಬೇಡ್ಕರ್ ರಾಜೀನಾಮೆ ಕೊಟ್ಟರೇ, ನೆಹರೂ ಅವರು ಕೊಟ್ಟರೇ ಕೊಡಲಿ ಅಂತ ಹೇಳಿ ಸುಮ್ಮನಾದರು. ಅಮಿತ್ ಶಾ ಮಾತಿನ ಅರ್ಥ ಏನಂದ್ರೆ ಬಾಯಿಂದ ಮಾತ್ರ ಡಾ. ಅಂಬೇಡ್ಕರ್, ಅಂಬೇಡ್ಕರ್ ಅಂತಿದ್ದೀರಿ ಹೃದಯದಿಂದ ಅಂಬೇಡ್ಕರ್ ಅಂತಿಲ್ಲ ಅನ್ನೋ ಅರ್ಥದಲ್ಲಿ ಹೇಳಿದ್ದಾರೆ ಎಂದರು.

ಸ್ನೇಹಮಯಿ ಹಿಂದೆ ಕಾಣದ ಕೈಗಳ ಕೈವಾಡ: ಲಕ್ಷ್ಮಣ್ ಆರೋಪ

ಮೈಸೂರು: ಮುಡಾ ವಿಚಾರ ಮುಂದಿಟ್ಟುಕೊಂಡು ಹೋರಾಟ ಮಾಡುತ್ತಿರುವ ಸ್ನೇಹಮಯಿ ಕೃಷ್ಣ ಅವರಿಗೆ ಯಾರು ಫಂಡಿಂಗ್ ಮಾಡುತ್ತಿದ್ದಾರೆ ಎಂಬುದು ಗೊತ್ತಿದೆ ಎಂದು ಕೆಪಿಸಿಸಿ ವಕ್ತಾರ

ಲಕ್ಷ್ಮಣ್ ಹೇಳಿದರು.

ಸಿಎಂ ಪತ್ನಿ ಅವರ ಪರವಾಗಿ ಇಬ್ಬರು ವ್ಯಕ್ತಿಗಳು ಆಮಿಷ ಒಡ್ಡಲು ಬಂದಿದ್ದರು ಎಂದು ಆರೋಪಿಸಿ ಕೃಷ್ಣ ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ. ಆದರೆ ಇದರ ಹಿಂದೆ ಯಾರಿದ್ದಾರೆ ಎಂಬುದು ಗೊತ್ತಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸ್ನೇಹಮಯಿ ಕೃಷ್ಣ ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಒಂದು ಹಸಿಸುಳ್ಳಿನ ಪತ್ರ ಕೊಟ್ಟಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಯಾವುದೇ ಕಾರಣಕ್ಕೂ ಅಂತಹ ಮಟ್ಟಕ್ಕೆ ಇಳಿಯುವವರಲ್ಲ. ಆಮಿಷಕ್ಕೆ ಒಳಗಾಗದಿದ್ದರೆ ಸ್ನೇಹಮಯಿ ಕೃಷ್ಣ ಪುತ್ರ ಏಕೆ ಹರ್ಷ ಮತ್ತು ಶ್ರೀನಿಧಿ ಜೊತೆ ಹೋದರು? ಅವರು ಕೊಟ್ಟಿರುವುದು ಬೆಳಿಗ್ಗೆ 10.30ರ ವಿಡಿಯೊ ಮಾತ್ರ. ಅಂದಿನ ಇಡೀ ದಿನದ ವಿಡಿಯೊ ಕೊಡಬೇಕು. ನಮ್ಮ ಬಳಿಯೂ ಕೆಲ ವಿಡಿಯೊಗಳಿವೆ. ಅವನ್ನು ನಾವು ಪೊಲೀಸರಿಗೆ ಕೊಡುತ್ತೇವೆ ಎಂದು ಲಕ್ಷ್ಮಣ್ ಸ್ಪಷ್ಟಪಡಿಸಿದರು.

ಕೃಷ್ಣ ಈ ಸಿನಿಮಾದಲ್ಲಿ ಕೇವಲ ಪೋಷಕ ನಟ..!

ನೀವು ಯಾರ ಬಳಿಯೂ ಯಾರ ಆಮಿಷಕ್ಕೆ ಒಳಗಾಗಿಲ್ವಾ? ನಿಮ್ಮ ಕೋರ್ಟ್ ಹೋರಾಟಕ್ಕೆ ಹಣ ಎಲ್ಲಿಂದ ಬರುತ್ತೆ? ಬೆಂಗಳೂರಿನಲ್ಲಿ ನಿಮಗೆ ದೊಡ್ಡ ಹೋಟೆಲ್‌ನಲ್ಲಿ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಿದವರು ಯಾರು? ನೀವು ಯಾವಾಗ ದೆಹಲಿಗೆ ಹೋಗಿದ್ದು ಎಂಬುದೂ ಗೊತ್ತು. ಕೃಷ್ಣ ಈ ಸಿನಿಮಾದಲ್ಲಿ ಕೇವಲ ಸೈಡ್ ಆಕ್ಟರ್ ಅಷ್ಟೇ. ಡೈರೆಕ್ಟರ್, ನಿರ್ಮಾಪಕರೇ ಬೇರೆ ಇದ್ದಾರೆ ಎಂದು ಲಕ್ಷ್ಮಣ್ ಆರೋಪಿಸಿದರು.

ಅಮಿತ್ ಶಾ ದುರಹಂಕಾರದ ಪರಮಾವಧಿ

ಡಾ.ಅಂಬೇಡ್ಕರ್ ಕುರಿತು ಕೇಂದ್ರ ಸಚಿವ ಅಮಿತ್ ಶಾ ಅವಹೇಳನಕಾರಿ ಹೇಳಿಕೆ ವಿರುದ್ಧ ಕಿಡಿಕಾರಿದ ಲಕ್ಷ್ಮಣ್, ಶಾ, ನರೇಂದ್ರ ಮೋದಿಯವರ ದುರಹಂಕಾರದ ಪರಮಾವಧಿ ಇದು. ನೀವು ಕೊಟ್ಟ ಹೇಳಿಕೆ ಚಾನೆಲ್‌ನಲ್ಲೇ ಪ್ರಚಾರವಾಗಿರುವುದು, ಬೇರೆ ಖಾಸಗಿ ಚಾನೆಲ್ ಪ್ರಸಾರ ಮಾಡಿಲ್ಲ. ಅಂಬೇಡ್ಕರ್ ಯಾವುದೇ ಒಂದು ಜಾತಿಗೆ ಸೇರಿಲ್ಲ. ಅಂಬೇಡ್ಕರ್ ಸಂವಿಧಾನ ಇಲ್ಲ ಅಂದಿದ್ದರೆ ಅಮಿತ್ ಶಾ ಗುಜರಿ ವ್ಯಾಪಾರ ಮಾಡುತ್ತಿದ್ದರು. ಮೋದಿ ಎಲ್ಲೋ ಟೀ ಮಾಡಿಕೊಂಡಿರುತ್ತಿದ್ದರು ಎಂಬ ಸಿಎಂ ಸಿದ್ದರಾಮಯ್ಯ ಅವರ ಹೇಳಿಕೆ ಅಕ್ಷರಶಃ ಸತ್ಯ. ಇದೆಲ್ಲ ಬಿಜೆಪಿ ಅವರ ಮನಸ್ಥಿತಿ ತೋರಿಸುತ್ತದೆ. 400 ಸ್ಥಾನ ಬಂದರೆ ಇಡೀ ಸಂವಿಧಾನವನ್ನೇ ಬದಲಾವಣೆ ಮಾಡುತ್ತೇವೆ ಎನ್ನುತ್ತಾರೆ ಎಂದು ಹರಿಹಾಯ್ದರು.

ಮೈಸೂರು ಅರಮನೆ ಮಂಡಳಿ

ಕಾರ್ಯನಿರ್ವಾಹಕ ಅಧಿಕಾರಿರವರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು

ದೂರವಾಣಿ ಸಂ:0821-2421051 ಇಮೇಲ್: ddmysorepalace@gmail.com

ಸಂಖ್ಯೆ: ಕಾನಿಅ/ಅಮಂ/ಉನಿ/ಸಕಾಇಂ/ಸಇಂ/ಟೆಂಡರ್ ಸಂಖ್ಯೆ:13/2024–25 ದಿನಾಂಕ: 16.12.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಒಟ್ಟು ಅಂದಾಜು ಮೊತ್ತ ರೂ.18.50 ಲಕ್ಷಗಳ ಅರಮನೆ ವಿದ್ಯುತ್ ಉಪ–ವಿಭಾಗಕ್ಕೆ ಸಂಬಂಧಿಸಿದ ಒಟ್ಟು 04 ಸಂಖ್ಯೆ ಅಭಿವೃದ್ಧಿ/ದುರಸ್ಥಿ/ಖರೀದಿ ಕಾಮಗಾರಿಗಳಿಗೆ ಸಂಬಂಧಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ / ನೋಂದಾಯಿತ ಏಜೆನ್ಸಿ / ತಯಾರಕರುಗಳಿಂದ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 30–12–2024 ಸಂಜೆ 4:00 ಗಂಟೆಯವರೆಗೆ.** (2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ **ದಿನಾಂಕ:31–12–2024 ಸಂಜೆ 4:00 ಗಂಟೆಯವರೆಗೆ.** (3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ **ದಿನಾಂಕ: 01–01–2025 ಸಂಜೆ 4.00 ಗಂಟೆಯವರೆಗೆ.** (4) ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 01–01–2025 ಸಂಜೆ 4.30 ಗಂಟೆಗೆ.** (5) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ ರೂ. 5.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ.3.50 ಲಕ್ಷಗಳು. ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನೂ ನೀಡದೆ ಸ್ವೀಕರಿಸುವ / ತಿರಸ್ಕರಿಸುವ ಹಕ್ಕು ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಇಷ್ಟಲ್ಲದೆ ಇನ್ನುಳಿದ ಯಾವುದಾದರೂ ಮಾಹಿತಿಗಳನ್ನು ಗುತ್ತಿಗೆದಾರರು ಬಯಸಿದ್ದಲ್ಲಿ ಅವುಗಳನ್ನು ಈ ಕಛೇರಿಯ ಕೆಲಸದ ಎಲ್ಲಾ ದಿನಗಳಂದು ಮತ್ತು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/–ಉಪ ನಿರ್ದೇಶಕರು,
ಮೈಸೂರು ಅರಮನೆ ಮಂಡಳಿ, ಮೈಸೂರು

DIPR/MYS/KAVITA/977/2024-25

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ನಾಗಮಂಗಲ ಉಪ ವಿಭಾಗ, ನಾಗಮಂಗಲ
T.B.Extension, Nagamangala Pin code: 571 432
Gmail ID: acfnagamangala@gmail.com
ಸಂ:ಸಸಂ:ಎನ್.ಎಂ.ಜಿ/ಟೆಂಡರ್/2024–25 ದಿ:16.12.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿಲಕೋಟೆ)

ಈ ಮೂಲಕ ಸಾರ್ವಜನಿಕರಿಗೆ ಮತ್ತು 2024–25ನೇ ಸಾಲಿನಲ್ಲಿ ನೊಂದಾವಣೆಯಾಗಿರುವ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ 2024–25ನೇ ಸಾಲಿನಲ್ಲಿ ಈ ವಿಭಾಗದ ವಲಯಗಳಲ್ಲಿ ಮುಂಗಡ ಕಾಮಗಾರಿ ಮತ್ತು 8*12 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ವೆಬ್ ಸೈಟ್ http://kppp.karnataka.gov.in ರಲ್ಲಿ ಈ ಕೆಳಗಿನ ಅನುಸೂಚಿಯಲ್ಲಿರುವ ಕಾಮಗಾರಿಗಳಿಗೆ ಇ–ಟೆಂಡರ್ ಅನ್ನು ಕರೆಯಲಾಗಿದೆ. ಹಾಗೆಯೇ ಟೆಂಡರ್‌ಗಳಲ್ಲಿ ಭಾಗವಹಿಸುವ ಮುನ್ನ ಇದೇ ಪ್ರಕಟಣೆಯಲ್ಲಿರುವ ಷರತ್ತುಗಳು ಅನ್ವಯವಾಗುತ್ತವೆ. ಟೆಂಡರ್ ವೇಳಾಪಟ್ಟಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ನಾಗಮಂಗಲ ಉಪ ವಿಭಾಗ, ನಾಗಮಂಗಲ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/508/2024–25

ಉಸ್ತುವಾರಿ ಸಚಿವರ ಬದಲಾವಣೆ ಮಾಡಿ

ಮುಖ್ಯಮಂತ್ರಿಗೆ ಪತ್ರ ಬರೆದ ಚನ್ನಗಿರಿ ಕಾಂಗ್ರೆಸ್ ಶಾಸಕ

ದಾವಣಗೆರೆ: ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರನ್ನು ಬದಲಾಯಿಸುವಂತೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗೆ ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಪತ್ರ ಬರೆದಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಬಿಜೆಪಿ ಜೊತೆ ನಿರಂತರವಾಗಿ ಹೊಂದಾಣಿಕೆ ರಾಜಕಾರಣ ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ ನಿಷ್ಠಾವಂತ ಕಾರ್ಯಕರ್ತರು, ಮುಖಂಡರಿಗೆ ಮುಜುಗರವಾಗುತ್ತಿದೆ ಎಂದು ಅವರು ದೂರಿದ್ದಾರೆ.

ಲೋಕೋಪಯೋಗಿ ಇಲಾಖೆ ಎಫ್ ಡಿಎ ವರ್ಗಾವಣೆಗೆ ಮುಖ್ಯಮಂತ್ರಿ ಕಡೆಯಿಂದ ಆದೇಶ ಮಾಡಿಸಿದ್ದರೂ ಜಿಲ್ಲಾ ಉಸ್ತುವಾರಿ ಸಚಿವರು ಅದನ್ನು ತಡೆಹಿಡಿದಿದ್ದಾರೆ ಎಂದು ಶಾಸಕ ಬಸವರಾಜ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಿಜೆಪಿಯವರಿಗೆ ಸಚಿವರ ಬೆಂಬಲ: ಬಿಜೆಪಿ ಬೆಂಬಲಿತ ನೌಕರರ ಸಂಘದ ಜಿಲ್ಲಾಧ್ಯಕ್ಷ ಕಾಂಗ್ರೆಸ್ ಶಾಸಕರ ಬಗ್ಗೆ ಅಗೌರವದಿಂದ ಮಾತನಾಡುತ್ತಿದ್ದು , ಜಿಲ್ಲಾ ಉಸ್ತುವಾರಿ ಸಚಿವರು ಪರೋಕ್ಷವಾಗಿ ಬೆಂಬಲ ನೀಡಿದ್ದಾರೆ. ದಾವಣಗೆರೆ ಜಿಲ್ಲಾ ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಚನ್ನಗಿರಿ ತಾಲೂಕಿನ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸದೆ, ಬಿಜೆಪಿ ಮಾಜಿ ಶಾಸಕರ ಬೆಂಬಲಿಗನಿಗೆ ಗೆಲುವಿಗೆ ಪರೋಕ್ಷವಾಗಿ ಕಾರಣರಾಗಿದ್ದಾರೆಂದು ಪತ್ರದಲ್ಲಿ ಅವರು ಆರೋಪಿಸಿದ್ದಾರೆ.

ರಾಜ್ಯ ಅಪೆಕ್ಸ್ ಬ್ಯಾಂಕ್‌ಗೆ ಜಿಲ್ಲೆಯಿಂದ ಬ್ಯಾಂಕ್ ನಿರ್ದೇಶಕರಾಗಲು ಕಾಂಗ್ರೆಸ್ ಶಾಸಕರೊಬ್ಬರ ಪುತ್ರನಿಗೆ ಅವಕಾಶವಿದ್ದರೂ ಉಸ್ತುವಾರಿ ಸಚಿವರು ಬಿಜೆಪಿಯವರನ್ನು ಬೆಂಬಲಿಸಿದ್ದಾರೆ. ಮುಂದಿನ ತಾಲೂಕು, ಜಿಪಂ ಚುನಾವಣೆಗಳಲ್ಲಿ ಹೊಂದಾಣಿಕೆ ರಾಜಕಾರಣದಿಂದ ಪಕ್ಷಕ್ಕೆ ಮುಜುಗರ ಆಗಬಹುದು. ಹೀಗಾಗಿ ದಾವಣಗೆರೆ ಜಿಲ್ಲಾ ಉಸ್ತುವಾರಿಯನ್ನು ಬದಲಾಯಿಸಿ.

– ಶಿವಗಂಗಾ ಬಸವರಾಜ್ ಶಾಸಕ

ಕಾರವಾರ: ಬಾವಿಗೆ ಬಿದ್ದು ವಿದ್ಯಾರ್ಥಿ ಸಾವು

ಕಾರವಾರ: ಶಾಲಾ ಪ್ರವಾಸಕ್ಕೆ ಬಂದಿದ್ದ ವಿದ್ಯಾರ್ಥಿಯೊಬ್ಬ ಮೂತ್ರವಿಸರ್ಜನೆಗೆ ತೆರಳಿ ತೆರೆದಬಾವಿಗೆ ಬಿದ್ದು ಮೃತಪಟ್ಟ ಘಟನೆ ಭಟ್ಕಳದಲ್ಲಿ ನಡೆದಿದೆ.

ಕೊಪ್ಪಳ ಜಿಲ್ಲೆಯ ಯಲಬುರ್ಗ ತಾಲೂಕಿನ ಗಾಣದಾಳದ ಸರ್ಕಾರಿ ಪ್ರಾಥಮಿಕ ಶಾಲೆಯ 8ನೇ ತರಗತಿ ವಿದ್ಯಾರ್ಥಿ ನಿರುಪಾದಿ ದುರ್ಗಪ್ಪ ಹರಿಜನ (14) ಮೃತ ದುರ್ದೈವಿ.

ಗಾಣದಾಳ ಶಾಲೆಯ 100 ವಿದ್ಯಾರ್ಥಿಗಳು ಜೋಗ್‌ಫಾಲ್ ಕೊಲ್ಲೂರು ಮತ್ತಿತರ ಕಡೆ ಪ್ರವಾಸಕ್ಕೆಂದು ಎರಡು ಬಸ್ಸಿನಲ್ಲಿ ಆಗಮಿಸಿದ್ದರು. ಇವರೊಂದಿಗೆ 13 ಶಿಕ್ಷಕರು ಸಹ ಇದ್ದರು. ಬುಧವಾರ ರಾತ್ರಿ ಗಾಣದಾಳದಿಂದ ಹೊರಟಿದ್ದ ವಿದ್ಯಾರ್ಥಿಗಳು ಗುರುವಾರ ಬೆಳಗ್ಗೆ ಜೋಗ ಜಲಪಾತ ವೀಕ್ಷಿಸಿದ್ದರು. ಅಲ್ಲಿಂದ ಕೊಲ್ಲೂರಿಗೆ ತೆರಳಲು ಅರಬೈಲ್ ಘಟ್ಟದ ಮೂಲಕ ಹೊನ್ನಾವರ ಮಾರ್ಗವಾಗಿ ತೆರಳುತ್ತಿದ್ದರು. ಮಾರ್ಗಮಧ್ಯೆ ಭಟ್ಕಳದಲ್ಲಿ ಮಾತ್ರೆ ಖರೀದಿಗಾಗಿ ವಾಹನ ನಿಲ್ಲಿಸಲಾಗಿತ್ತು. ಈ ಸಂದರ್ಭ ಕೆಲವು ಬಾಲಕರು ಮೂತ್ರ ವಿಸರ್ಜನೆಗೆಂದು ಔಷಧಿ ಅಂಗಡಿಯ ಹಿಂದಿನ ಖಾಲಿಜಾಗಕ್ಕೆ ತೆರಳಿದ್ದರು. ಈ ಸಂದರ್ಭದಲ್ಲಿ ಕತ್ತಲಾಗಿದ್ದರಿಂದ ತಡೆಗೋಡೆ ಇಲ್ಲದ ತೆರೆದಬಾವಿಗೆ ಬಾಲಕ ಬಿದ್ದಿದ್ದಾನೆ. ಕೂಡಲೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿ ಬಾಲಕನನ್ನು ಬಾವಿಯಿಂದ ಮೇಲಕ್ಕೆತ್ತಿದ್ದಾರೆ. ಅಸ್ವಸ್ಥಗೊಂಡ ಬಾಲಕನನ್ನು ಸರಕಾರಿ ಆಸ್ಪತ್ರೆಗೆ ಸಾಗಿಸಿ ತುರ್ತು ಚಿಕಿತ್ಸೆ ನೀಡಲು ಪ್ರಯತ್ನಿಸಿದರೂ ಸ್ಪಂದಿಸದೆ ಮೃತಪಟ್ಟಿದ್ದಾನೆ. ಭಟ್ಕಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಕ್ಕರೆ ನಾಡಿಗೆ ಅಕ್ಕರೆಯ ಸ್ವಾಗತ

← ಮೊದಲಪುಟದಿಂದ

ಮೂರನೇ ಸಮ್ಮೇಳನ: ಮಂಡ್ಯಕ್ಕೆ ಮೂರನೇ ಬಾರಿ ಸಮ್ಮೇಳನದ ಆತಿಥ್ಯ ದೊರೆಯುತ್ತಿರುವ ಹೊತ್ತಿನಲ್ಲಿ ಇಲ್ಲಿನ ಈ ಹಿಂದಿನ ಸಮ್ಮೇಳನಗಳ ನೆನಪೂ ಆಗುವುದು ಸಹಜ. 1974ರಲ್ಲಿ 48ನೇ ಸಮ್ಮೇಳನ ಮಂಡ್ಯದಲ್ಲಿ ನಡೆದಾಗ ಜಯದೇವಿತಾಯಿ ಲಿಗಾಡೆ ಅಧ್ಯಕ್ಷರಾಗಿದ್ದರು.

ಅವರು ಸಾಹಿತ್ಯ ಸಮ್ಮೇಳನದ ಮೊದಲ ಮಹಿಳಾ ಅಧ್ಯಕ್ಷೆಯಾದವರು ಎಂಬುದು ಮಂಡ್ಯದ ಇನ್ನೊಂದು ಹೆಮ್ಮೆ. 1994ರಲ್ಲಿ 63ನೇ ಸಮ್ಮೇಳನದ ಅಧ್ಯಕ್ಷರಾಗಿದ್ದ ಕಾದಂಬರಿಕಾರ ಚದುರಂಗ, ಕನ್ನಡದ ಎಲ್ಲ ಸಂಸ್ಥೆಗಳ ಸಮಗ್ರೀಕರಣಕ್ಕೆ ಕರೆ ನೀಡಿದ್ದರು. ಈ ಸಮ್ಮೇಳನ ನಡೆದಾಗ ಗೊರುಚ ಅವರೇ ಪರಿಷತ್ತಿನ ಅಧ್ಯಕ್ಷರಾಗಿದ್ದರು ಎಂಬುದು ಇನ್ನೊಂದು ವಿಶೇಷ. ಅಂದಿನ ಪರಿಷತ್ ಅಧ್ಯಕ್ಷರಿಗೆ ಇಂದು ಸಮ್ಮೇಳನಾಧ್ಯಕ್ಷತೆಯ ಮಕುಟ.

ಬಾಡೂಟದ ಪ್ರಶ್ನೆ: ಈ ಬಾರಿ ಸಮ್ಮೇಳನಕ್ಕೆ ಮುಂಚಿತವಾಗಿ ಸಾಕಷ್ಟು ವಿವಾದ ಎಬ್ಬಿಸಿದ ವಿಚಾರವೆಂದರೆ ಬಾಡೂಟದ್ದು. ಮಂಡ್ಯದ ನೆಲ ಬಾಡೂಟಕ್ಕೆ ಪ್ರಸಿದ್ಧ. ಹೊಲದಲ್ಲಿ ದುಡಿಯುವ ಪರಿಶ್ರಮಿಗಳೇ ಬಹುಸಂಖ್ಯಾತರಾಗಿರುವ ಮಂಡ್ಯದಲ್ಲಿ ಬಾಡೂಟ ಇಲ್ಲಿನ ಸಿಗ್ನೇಚರ್ ಖಾದ್ಯವೂ ಹೌದು. ಸಮೀಪದ ಬನ್ನೂರು ಕುರಿಗಳು ಬಾಡೂಟ ಪ್ರಿಯರ ನಾಲಿಗೆಯಲ್ಲಿ ನೀರೂರಿಸುವವು. ಹೀಗಾಗಿ ಇಲ್ಲಿ ಬಾಡೂಟಕ್ಕೆ ಆದ್ಯತೆ ನೀಡಬೇಕು ಎಂದು ಹಲವು ಸಂಘ ಸಂಸ್ಥೆಗಳು, ಪ್ರಗತಿಪರರು, ಆಹಾರಪ್ರಿಯರು, ಸ್ಥಳೀಯರು ಒತ್ತಾಯಿಸಿದ್ದರು. ಆದರೆ ಸಮ್ಮೇಳನ ಸ್ವಾಗತ ಸಮಿತಿಯಿಂದ ಸಸ್ಯಾಹಾರವೇ ಅಂತಿಮವಾಯಿತು. ಘೋಷಿತ ಮೂರು ದಿನಗಳ ಮೆನುವಿನಲ್ಲೂ ಮಾಂಸಾಹಾರ ಖಾದ್ಯಗಳಿಲ್ಲ. ಸಚಿವ ಚಲುವರಾಯಸ್ವಾಮಿ ಅವರು ಮಾಂಸಾಹಾರದ ಬೇಡಿಕೆ ಮಂಡಿಸಿದವರನ್ನು ನಯವಾಗಿ ಮನವೊಲಿಸಿದರು. ಆದರೆ ಹಲವು ಬಾಡೂಟ ಪ್ರಿಯರು ಸುಮ್ಮನೆ ಕುಳಿತಿಲ್ಲ, 'ಮನೆಗೊಂದು ಕೋಳಿ, ಊರಿಗೊಂದು ಕುರಿ' ಎಂಬ ಅಭಿಯಾನ ಆರಂಭಿಸಿದ್ದಾರೆ. ಆದರೆ ಸಮ್ಮೇಳನದಲ್ಲಿ ಚರ್ಚೆಯಾಗಬೇಕಾದುದು ಸಾಹಿತ್ಯವೇ ಹೊರತು ಸಸ್ಯಾಹಾರ–ಮಾಂಸಾಹಾರದ ವಿಷಯವಲ್ಲ ಎಂದು ಸಮ್ಮೇಳನಾಧ್ಯಕ್ಷರು ತಣ್ಣಗೆ ಹೇಳಿದ್ದಾರೆ. ಅವರ ಮಾತಿಗೆ ಮನ್ನಣೆ ಕೊಟ್ಟು ಸುಮ್ಮನಾಗುತ್ತಾರೆಯೇ ಅಥವಾ ವಿವಾದದ ಕಾವು ಊಟದ ಕಂಟರ್‌ಗೂ ತಟ್ಟಲಿದೆಯೋ ಕಾದು ನೋಡಬೇಕು.

ಅಧ್ಯಕ್ಷರ ಮಾತುಗಳು: ಸಮ್ಮೇಳನಾಧ್ಯಕ್ಷರು ಭಾಷಣದಲ್ಲಿ ಏನನ್ನು ಪ್ರಸ್ತಾವಿಸಲಿದ್ದಾರೆ ಎಂಬ ಕುತೂಹಲ ಎಲ್ಲರಿಗೂ ಇದೆ. ಅನ್ಯಭಾಷಿಕರ ದೊಡ್ಡ ಪ್ರಮಾಣದ ವಲಸೆಯಿಂದ ನಾಡಿನ ಭಾಷೆ ಸಂಸ್ಕೃತಿಗೆ ಆಗುತ್ತಿರುವ ದುಷ್ಪರಿಣಾಮ, ಶಿಕ್ಷಣ ಮಾಧ್ಯಮವಾಗಿ ಕನ್ನಡ, ಗಡಿ ವಿವಾದ, ಜಲ ವಿವಾದ, ರಾಜ್ಯ ಮತ್ತು ಕೇಂದ್ರದ ಸಂಬಂಧ, ರಾಜ್ಯದಲ್ಲಿ ನಡೆಯಬೇಕಾಗಿರುವ ಅಭಿವೃದ್ಧಿ ಕಾರ್ಯಗಳು, ಪ್ರಾದೇಶಿಕ ತಾರತಮ್ಯ, ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕನ್ನಡಕ್ಕೆ ಆದ್ಯತೆ, ಕನ್ನಡಿಗರ ಉದ್ಯೋಗಕ್ಕೆ ಆದ್ಯತೆ- ಇವುಗಳನ್ನೆಲ್ಲ ಪ್ರಸ್ತಾವಿಸಿ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರವನ್ನು ಒತ್ತಾಯಿಸುವುದಾಗಿ ಗೊರುಚ ಹೇಳಿದ್ದಾರೆ. ಅವರ ಹಕ್ಕೊತ್ತಾಯಗಳು ನಾಡಿನ ಬೇಡಿಕೆಗಳೂ ಆಗಿವೆ. ಈ ಹಿಂದಿನ ಸಮ್ಮೇಳನಗಳ ಅನೇಕ ನಿರ್ಣಯಗಳೂ ಇತ್ಯರ್ಥಕ್ಕಾಗಿ ಕಾಯುತ್ತಿವೆ.

ಸಾಹಿತ್ಯದಲ್ಲಿ ರಾಜಕೀಯ: ರಾಜಕಾರಣಿಗಳಿಲ್ಲದೆ ಸಾಹಿತ್ಯ ಸಮ್ಮೇಳನವನ್ನು ಊಹಿಸುವುದು ಕಷ್ಟದ ಮಾತು. ನಾಡಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಈ ಬಾರಿ ಮಂಡ್ಯದ ಮತ್ತು ಆಸುಪಾಸಿನ ರಾಮನಗರ, ಕನಕಪುರ ಮುಂತಾದ ಜಿಲ್ಲೆಗಳು ಪಕ್ಷ ರಾಜಕೀಯದ ಉತ್ತುಂಗವನ್ನು ಹಾಗೂ ಗರಿಷ್ಠ ಸಂಘರ್ಷವನ್ನು ಕಂಡಿವೆ. ಇಲ್ಲಿಂದ ಆರಿಸಿ ಬಂದಿರುವವರು ಕೇಂದ್ರ ಸಚಿವರೂ ಆಗಿದ್ದು, ಅವರ ಉಪಸ್ಥಿತಿಯೂ ಇರಲಿದೆ. ಪಕ್ಷ, ರಾಜಕೀಯ ಏನೇ ಇದ್ದರೂ ನಾಡು–ನುಡಿಯ ವಿಚಾರದಲ್ಲಿ ಎಲ್ಲರೂ ಒಂದಾಗಿ ಒಂದೇ ಧ್ವನಿಯಲ್ಲಿ ಮಾತನಾಡಲಿ ಎಂದು ನಾವು ಹಾರೈಸಬೇಕಿದೆ.

ಗರಿಷ್ಠ ಅನುದಾನ: ಪ್ರತಿ ಸಲದ ಸಮ್ಮೇಳನಕ್ಕೆ ಮುನ್ನವೂ ಕೆಲವು ವಿಘ್ನವಿಡ್ಡೂರಗಳು ಎದುರಾಗುವುದು ಇತ್ತೀಚೆಗೆ ಸಾಮಾನ್ಯವಾಗಿಬಿಟ್ಟಿದೆ. ಕಳೆದ ಬಾರಿಯ ಸಮ್ಮೇಳನ ಹಾವೇರಿಯಲ್ಲಿ ನಡೆದಿತ್ತು. ದೊಡ್ಡರಂಗೇಗೌಡರು ಅಧ್ಯಕ್ಷರಾಗಿದ್ದರು. ಆದರೆ ಈ ಸಮ್ಮೇಳನ ನಾಡಿನ ಬರಪರಿಸ್ಥಿತಿ, ಚುನಾವಣೆಗಳು ಎಂದೆಲ್ಲ ಪದೇ ಪದೆ ಮುಂದೆ ಹೋಗುತ್ತಲೇ ಇತ್ತು. ಈ ಸಲ ಸಾಕಷ್ಟು ಮಳೆಯಾಗಿ ಈ ಸಮಸ್ಯೆಯೇನೂ ಉಂಟಾಗಿಲ್ಲ. ಅನುದಾನದ ಕುರಿತು ಪ್ರಶ್ನೆಗಳು ಎದ್ದಿವೆ. ಕಳೆದ ಸಲ ಹಾವೇರಿಯಲ್ಲಿ ನಡೆದ ಸಮ್ಮೇಳನಕ್ಕೆ ಗರಿಷ್ಠ ಅನುದಾನ ಅಂದರೆ 20 ಕೋಟಿ ರು. ನೀಡಲಾಗಿತ್ತು. ಈ ಅನುದಾನದ ಮೊತ್ತವನ್ನೂ ಮೀರಿ ಹೆಚ್ಚುವರಿ 5 ಕೋಟಿ ರು. ಖರ್ಚಾಗಿತ್ತು. ಈ ಬಾರಿ ಸರಕಾರವೇ 25 ಕೋಟಿ ರು. ಸಮ್ಮೇಳನಕ್ಕೆ ಒದಗಿಸಿದೆ. ಹಣದುಬ್ಬರದ ಈ ದಿನಗಳಲ್ಲಿ ಇದು ಸಾಕೇ ಎಂಬ ಪ್ರಶ್ನೆಯೂ ಎದ್ದಿದೆ.

ವಿಶಿಷ್ಟ ಗೋಷ್ಠಿಗಳು: ಇಷ್ಟೊಂದು ವೆಚ್ಚ ಮಾಡಿ ನಡೆಸುವ ಸಮ್ಮೇಳನದಲ್ಲಿ ಗೋಷ್ಠಿಗಳು, ವಿಚಾರ ಮಂಡನೆಗಳು, ಸಂವಾದಗಳು ಅರ್ಥಪೂರ್ಣವಾಗಿ ನಡೆಯಬೇಕು ಹಾಗೂ ನಾಡಿಗೆ ಹೊಸ ಬೆಳಕು ತೋರಿಸುವಂತಿರಬೇಕು. ಈ ನಿಟ್ಟಿನಲ್ಲಿ ಗೋಷ್ಠಿಗಳ ಆಯೋಜನೆಯಲ್ಲಿ ಪರಿಷತ್ತು ಸಾಕಷ್ಟು ಕಸರತ್ತು ನಡೆಸಿದೆ. ಹಳೆ ಬೇರು ಹಾಗೂ ಹೊಸಚಿಗುರನ್ನು ಒಂದುಗೂಡಿಸಲು ಯತ್ನಿಸಿದೆ. ಈ ಬಾರಿ ಕೆಲವು ವಿಶಿಷ್ಟ ಗೋಷ್ಠಿಗಳನ್ನು ಆಯೋಜಿಸಲಾಗಿದೆ. 'ಸಾಹಿತ್ಯದಲ್ಲಿ ರಾಜಕೀಯ, ರಾಜಕೀಯದಲ್ಲಿ ಸಾಹಿತ್ಯ' ಎಂಬುದು ಅಂಥದೊಂದು ಗೋಷ್ಠಿ. ಈ ಗೋಷ್ಠಿಯಲ್ಲಿ, ಸಾಹಿತ್ಯವನ್ನೂ ಚೆನ್ನಾಗಿ ಓದಿಕೊಂಡ ರಾಜಕಾರಣಿಗಳಿದ್ದು, ಕುತೂಹಲ ಎಲ್ಲರಲ್ಲೂ ಇದೆ. ಹಾಗೆಯೇ ದೃಷ್ಟಿವಿಕಲ ಚೇತನರಿಗಾಗಿ ಏರ್ಪಡಿಸಲಾದ ಕವಿಗೋಷ್ಠಿಯೂ ಗಮನ ಸೆಳೆದಿದೆ. ಅಂಧರು ಈ ಲೋಕವನ್ನು ನೋಡುವ ಬಗೆ ಮತ್ತು ಅದನ್ನು ಬರೆದು ನಮಗೆ ಹೇಗೆ ಕಾಣಿಸ ಬಹುದು ಎಂಬ ಕುತೂಹಲ ಸಹಜ. ಇದೇ ಮೊದಲ ಬಾರಿಗೆ ಕನ್ನಡದ ಸೋದರ ಭಾಷೆಗಳ ಕವಿಗೋಷ್ಠಿಯನ್ನೂ ಕರೆಯಲಾಗಿದೆ. ತುಳು, ಕೊಂಕಣಿ, ಹವ್ಯಕ ಕನ್ನಡ, ಕೊರಗ, ಬ್ಯಾರಿ, ಲಂಬಾಣಿ, ಕುಂದಗನ್ನಡ ಮುಂತಾದ ಭಾಷೆಗಳಲ್ಲಿ ಕವಿಗಳು ತಮ್ಮ ಕವಿತೆ ಓದಲಿದ್ದಾರೆ. ಇನ್ನುಳಿದಂತೆ ಮಹಿಳಾ ವಿಶಿಷ್ಟತೆ, ಕೃಷಿಕರ ಸಮಸ್ಯೆ ಗಳು, ಕೃಷ್ಣಾ–ಕಾವೇರಿ ನೀರಾವರಿ, ಮಂಡ್ಯ ನೆಲದ ವಿಚಾರಗಳು, ಚಳವಳಿಗಳು, ಮಕ್ಕಳ ಸಾಹಿತ್ಯ, ರಂಗಭೂಮಿ–ಚಲನಚಿತ್ರ–ಕಿರುತೆರೆ, ಪುಸ್ತಕೋದ್ಯಮ, ದಲಿತ ಸಾಹಿತ್ಯ, ಪ್ರಕೃತಿ ವಿಕೋಪ ಎಲ್ಲವೂ ಸ್ಥಾನ ಪಡೆದಿವೆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಬೆಂಗಳೂರು ವಿಭಾಗ, 2ನೇ ಮಹಡಿ,
ಲೋಕೋಪಯೋಗಿ ಇಲಾಖೆ ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ ಸಂಖ್ಯೆ: 080–22133370
Email ID: eepwdbngdn@yahoo.com E-Portal : https://kppp.karnataka.gov.in/#/portal/portal-home

ಟೆಂಡರ್ ಪ್ರಕಟಣೆ ಸಂಖ್ಯೆ: 26/2024–25 ದಿನಾಂಕ: 19.12.2024

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ದತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ಹೊಸಕೋಟೆ ಉಪವಿಭಾಗಕ್ಕೆ ಸಂಬಂಧಿಸಿದಂತೆ 01 ಸಂಖ್ಯೆಯ (ರೂ. 200.00 ಲಕ್ಷಗಳ) ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್‌ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೊರ್‌ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿಃ 26.12.2024 ಸಂಜೆ 4.00 ಗಂಟೆ ಯವರೆಗೆ.
2. ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 27.12.2024 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/3868/Zen/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವೈದ್ಯಕೀಯ ಅಧೀಕ್ಷಕರ ಕಛೇರಿ ಎಂಸಿ ಬಡಾವಣೆ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ,
ಬೃಬೆಂಮಪಾ, 7ನೇ ಅಡ್ಡರಸ್ತೆ, ದಾಸರಹಳ್ಳಿ ವೃತ್ತ, 5ನೇ ಮುಖ್ಯ ರಸ್ತೆ,
ಗೋವಿಂದರಾಜನಗರ, ಬೆಂಗಳೂರು – 560040

ಸಂ. ಬೃಬೆಂಮಪಾ/2024–25/ಎಸ್‌ಇ1178 ದಿನಾಂಕ : 19–12–2024

ಟೆಂಡರ್ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೆಳಕಂಡ ಕಾಮಗಾರಿಗಾಗಿ ಅರ್ಹ ಬಿಡ್ಡುದಾರರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

(1) ವಾರ್ಡ್ ಸಂ.105 ಎಂಸಿ ಬಡಾವಣೆ, ಗೋವಿಂದರಾಜನಗರದ (ಅಗ್ರಹಾರ ದಾಸರಹಳ್ಳಿ ಜನರಲ್ ಆಸ್ಪತ್ರೆ) ಎಂಸಿ ಬಡಾವಣೆ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಪ್ಯಾರಾಮೆಡಿಕಲ್ ಮತ್ತು ಇತರ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವುದಕ್ಕಾಗಿ ಪ್ರಸ್ತಾವನೆಗಾಗಿ ಕೋರಿಕೆ (2) ವೆಬ್‌ಸೈಟ್ **http://kppp.karnataka.gov.in** ನಿಂದ ದಾಖಲೆಯನ್ನು ಡೌನ್‌ಲೋಡ್ ಮಾಡಲು ಪ್ರಾರಂಭಿಕ ದಿನಾಂಕ : **19–12–2024** ರಿಂದ **(3)** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ವಿಚಾರಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **26–12–2024 ರಂದು ಸಂಜೆ 5:00 ಗಂಟೆಯವರೆಗೆ (4)** ಬಿಡ್–ಪೂರ್ವ ಸಭೆಯ ದಿನಾಂಕ ಮತ್ತು ಸಮಯ : **26–12–2024 ರಂದು ಬೆಳಿಗ್ಗೆ 11:00 ಗಂಟೆಗೆ.** ಸ್ಥಳ : ವೈದ್ಯಕೀಯ ಅಧೀಕ್ಷಕರ ಕಛೇರಿ, ಎಂಸಿ ಬಡಾವಣೆ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ (ಅಗ್ರಹಾರ ದಾಸರಹಳ್ಳಿ ಜನರಲ್ ಆಸ್ಪತ್ರೆ), 7ನೇ ಅಡ್ಡರಸ್ತೆ, 5ನೇ ಮುಖ್ಯ ರಸ್ತೆ, ಎಂ ಸಿ ಬಡಾವಣೆ, ಗೋವಿಂದರಾಜನಗರ ವಾರ್ಡ್, ಪಿನ್‌ಕೋಡ್ – 560040 **(5)** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **18–01–2025 ರಂದು ಸಂಜೆ 5:00 ಗಂಟೆಯವರೆಗೆ (6)** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **20–01–2025 ರಂದು ಬೆಳಿಗ್ಗೆ 11:30 ಗಂಟೆ (7)** ಟೆಂಡರ್ ತೆರೆಯುವ ಸ್ಥಳ : ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ **(8)** ಸಂಪರ್ಕಕ್ಕಾಗಿ ವಿಳಾಸ : ವೈದ್ಯಕೀಯ ಅಧೀಕ್ಷಕರ ಕಛೇರಿ, ಎಂಸಿ ಬಡಾವಣೆ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ (ಅಗ್ರಹಾರ ದಾಸರಹಳ್ಳಿ ಜನರಲ್ ಆಸ್ಪತ್ರೆ), 7ನೇ ಅಡ್ಡರಸ್ತೆ, 5ನೇ ಮುಖ್ಯ ರಸ್ತೆ, ಎಂ ಸಿ ಬಡಾವಣೆ, ಗೋವಿಂದರಾಜನಗರ ವಾರ್ಡ್, ಪಿನ್‌ಕೋಡ್ – 560040. ಇ–ಮೇಲ್: mclayoutbbmp@gmail.com

ಸಹಿ/– ವೈದ್ಯಕೀಯ ಅಧೀಕ್ಷಕರು (ಎಡಿಜಿಹೆಚ್), ಬೃಬೆಂಮಪಾ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ತುಮಕೂರು ವಿಭಾಗ, ತುಮಕೂರು
ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: ಬಿ2/ಬಿಯುಡಿ/ಸೇಲ್ಸ್/ಸಿಆರ್–05/2024–25 ದಿನಾಂಕ: 18–12–2024

ಮರು ಇ–ಹರಾಜು ಪ್ರಕಟಣೆ
(ಎಂಎಸ್‌ಟಿಸಿ ಪೋರ್ಟಲ್ ಮುಖಾಂತರ)

2024–25ನೇ ಸಾಲಿನಲ್ಲಿ ತುಮಕೂರು ಪ್ರಾದೇಶಿಕ ಅರಣ್ಯ ವಿಭಾಗದ ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ಕೊಡಿಗೇನಹಳ್ಳಿ ಹೋಬಳಿ, ಶ್ರಾವಂಡನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ದಾಸರಹಳ್ಳಿ ಗ್ರಾಮದ ಸ.ನಂ. 1,2,3 &4ರ (97–03 ಎಕರೆ/ಗುಂಟೆ) ಪ್ರದೇಶದ ಬ್ಲಾಕ್ 1 ಮತ್ತು 2ರ ಒಟ್ಟು 5475 ನಿಂತ ನೀಲಗಿರಿ ಮರಗಳನ್ನು ಇ–ಹರಾಜು ಮೂಲಕ ತೆರವುಗೊಳಿಸುವ ಕಾಮಗಾರಿಯನ್ನು ಮೆ॥ ಎಂ.ಎಸ್.ಟಿ.ಸಿ., ಬೆಂಗಳೂರು, ಸಂಸ್ಥೆಯ ಮುಖಾಂತರ ಇ–ಹರಾಜನ್ನು ದಿನಾಂಕ: 04–12–2024 ರಂದು ನಡೆಸಲಾಗಿದ್ದು, ಸದರಿ ಹರಾಜಿನಲ್ಲಿ ಯಶಸ್ವಿ ಬಿಡ್ಡುದಾರರು ಇ–ಟೆಂಡರ್ ಕಂ ಆಕ್ಷನ್ ನೋಟಿಫಿಕೇಷನ್‌ನಲ್ಲಿರುವ ಷರತ್ತುಗಳನ್ವಯ ಬಿಡ್ ಮಾಡಿರುವ ಮೊತ್ತವನ್ನು ಪಾವತಿಸದೆ ಇರುವುದರಿಂದ, ಸದರಿ ಹರಾಜನ್ನು ರದ್ದುಪಡಿಸಿದ್ದು, ಸದರಿ ಹರಾಜನ್ನು **ದಿನಾಂಕ: 03–01–2025** ರಂದು ಮರು ಇ–ಟೆಂಡರ್ ಕಂ ಆಕ್ಷನ್ ನಡೆಸಲು ಉದ್ದೇಶಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ದಿವಸಗಳಲ್ಲಿ ಅಥವಾ **www.mstcecommerce.com** ನಲ್ಲಿ ಪಡೆಯಬಹುದಾಗಿರುತ್ತದೆ.

Sl. No.	SPECIES	Standing Trees	Approx. Timber (in M3)	Approx. Poles (in No's)	Approx. Firewood (in ton)
1	Nilagiri 5475 standing Trees	5475 Nos.	112.838	5051	98.195

Sale Schedule Date: 03-01-2025
Time: 11.00 to 15.00 (11 AM to 03 PM)

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ತುಮಕೂರು ವಿಭಾಗ, ತುಮಕೂರು

DIPR/TUM/RO-125/24-25/Oysters

ಲೋಕೋಪಯೋಗಿ ಇಲಾಖೆ, ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂಖ್ಯೆ:ಕಾಇಂ/ಲೋಇವಿ/ಮಧು/ಕಿಇಂ–2/ಟೆಂಡರ್/2024–25/1017 ದಿನಾಂಕ: 18–12–2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–24/2024–25
(ಕೆಪಿಪಿಪಿ ಪೋರ್ಟಲ್ ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಹಾಗೂ ಕೆಳಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137–283336.

ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು **ರೂ. 78.85 ಲಕ್ಷಗಳವರೆಗೆ**

ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ :	26–12–2024 ಸಂಜೆ 4.00 ಗಂಟೆಯವರೆಗೆ
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	27–12–2024 ರ ಸಂಜೆ 4.15 ಗಂಟೆಯ ನಂತರ
ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	30–12–2024 ರ ಸಂಜೆ 4.15 ಗಂಟೆಯ ನಂತರ
ವಿಚಾರಣೆ : ಸ್ಪಷ್ಟಿಕರಣಕ್ಕೆ ಕೊನೆಯ ದಿನಾಂಕ:	23–12–2024 ಸಂಜೆ 4.00 ಗಂಟೆಗೆ ವರೆಗೆ

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ವಿಭಾಗ
ಮಧುಗಿರಿ

DIPR/TUM/RO-124/24-25/Oysters

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧಿಕ್ಷಕ ಅಭಿಯಂತರರು(ವಿ), ಟೆಂಡರಿಂಗ್ & ಪ್ರೊಕ್ಯುರ್‌ಮೆಂಟ್
ನವನಗರ ಪಿ.ಬಿ.ರಸ್ತೆ, ಹುಬ್ಬಳ್ಳಿ–25 Phone:08362322966, Fax: 0836-2324307
.ID: seetp.hescom@gmail.com / seetp@hescom.co.in
Corporate Identity Number (CIN): U31401KA2002SGC030437

ಸಂಖ್ಯೆ: ಹುವಿಸಕಂನಿ/ಅಇಂ(ಟಿ&ಪಿ)/ಇಇ–(ಟಿ&ಪಿ)/ಎಇಇ–1/2024–25 Cys-6674 ದಿನಾಂಕ: 19–12–2024

ಟೆಂಡರ್ ಅಧಿಸೂಚನೆ

ಅಧೀಕ್ಷಕ ಅಭಿಯಂತರರು (ವಿ), (ಟೆಂಡರಿಂಗ್ & ಪ್ರೊಕ್ಯೂರಮೆಂಟ್), ಹುವಿಸಕಂನಿ, ಹುಬ್ಬಳ್ಳಿ, ಇವರು ಹೊರ ಗುತ್ತಿಗೆ ಆಧಾರದ ಮೇರೆಗೆ ಡಾಟಾ ಎಂಟ್ರಿ ಆಪರೆಟರ್ ಸೇವೆಯನ್ನು ಪಡೆಯಲು ಇ. ಪ್ರೊಕ್ಯೂರಮೆಂಟ್ ಕಟ್ಟೆಯಡಿ, ದ್ವಿ–ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ.

ಕ್ರ.ಸಂ	ವಿವರಗಳು	ವಿಚಾರಣೆ ಸಮಖ್ಯೆ
1	ನಿಗಮ ಕಛೇರಿಯಲ್ಲಿ ಹೊರ ಗುತ್ತಿಗೆ ಆಧಾರದ ಮೇರೆಗೆ 41 ಸಂಖ್ಯೆ ಡಾಟಾ ಎಂಟ್ರಿ ಆಪರೆಟರ್ ಸೇವೆಯನ್ನು ನೀಡುವುದು.	HESCOM/2024-25/SE0330

ಹೆಚ್ಚಿನ ಮಾಹಿತಿಗಾಗಿ kppp.karnataka.gov.in ವೆಬ್‌ಸೈಟ್ ನ್ನು ದಿನಾಂಕ: 19.12.2024 ಅಥವಾ ನಂತರದಲ್ಲಿ ಸಂಪರ್ಕಿಸಬಹುದು.

ಸಹಿ/– ಅಧೀಕ್ಷಕ ಅಭಿಯಂತರರು (ವಿ),
ಟೆಂಡರ್ & ಪ್ರೊಕ್ಯೂರಮೆಂಟ್,
ಹುವಿಸಕಂನಿ, ನವನಗರ ಹುಬ್ಬಳ್ಳಿ.

ವಾ.ಸಾ.ಇ/ಧಾರವಾಡ/757/ದೇಶಪಾಂಡೆಪಬ್ಲಿಸಿಟಿ/2024–25

ಸಂಸತ್ ರಣಾಂಗಣ

← ಮೊದಲಪುಟದಿಂದ

ಇನ್ನೊಂದೆಡೆ, ಅಂಬೇಡ್ಕರ್ ಅವರನ್ನು ಅವಮಾನಿಸಿರುವ ಪ್ರತಿಪಕ್ಷ ಕಾಂಗ್ರೆಸ್ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿ ಘೋಷಣೆಗಳನ್ನು ಕೂಗುತ್ತ, ಫಲಕಗಳನ್ನು ಹಿಡಿದು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಸಂಸದರು ಸಂಸತ್ತಿನ ಆವರಣದೊಳಗೆ ಪ್ರತಿಭಟಿಸಿದರು.

ಇಂಡಿಯಾ ಬಣದ ಸದಸ್ಯರು ಮೊದಲಿಗೆ ಸಂಸತ್ತಿನ ಆವರಣದಲ್ಲಿರುವ ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಯ ಬಳಿ 'ಜೈ ಭೀಮ್ ಮತ್ತು ಅಮಿತ್ ಶಾ ಮಾಫಿ ಮಾಂಗೋ' ಎಂಬ ಪೋಸ್ಟರ್‌ಗಳು ಹಾಗೂ ಅಂಬೇಡ್ಕರ್ ಅವರ ಭಾವಚಿತ್ರವನ್ನು ಹಿಡಿದು ಪ್ರತಿಭಟನೆ ನಡೆಸಿದರು.

ಆರೋಗ್ಯ ವಿಚಾರಿಸಿದ ಪ್ರಧಾನಿ: ಗಾಯಗೊಂಡಿರುವ ಸಂಸದ ಪ್ರತಾಪ್ ಚಂದ್ರ ಸಾರಂಗಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಕರೆ ಮಾಡಿ ಆರೋಗ್ಯ ವಿಚಾರಿಸಿದ್ದಾರೆ. ಕೇಂದ್ರ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಪ್ರಲ್ಹಾದ್ ಜೋಶಿ ಆರ್‌ಎಂಎಲ್ ಆಸ್ಪತ್ರೆಯಲ್ಲಿ ಭೇಟಿ ನೀಡಿ ಬಿಜೆಪಿ ಸಂಸದರಾದ ಪ್ರತಾಪ್ ಚಂದ್ರ ಸಾರಂಗಿ ಮತ್ತು ಮುಖೇಶ್ ರಜಪೂತ್ ಅವರ ಆರೋಗ್ಯ ವಿಚಾರಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಡಾ.ರಾಜ್ ಪುಸ್ತಕ ಇಂದು ಲೋಕಾರ್ಪಣೆ

ಮಂಡ್ಯ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ ದಿನವಾದ ಶುಕ್ರವಾರ ಕನ್ನಡದ ಮೇರುನಟ ಡಾ.ರಾಜಕುಮಾರ್ ಅವರ ಕುರಿತ ಕೃತಿಯನ್ನು ಬೆಳಿಗ್ಗೆ 09 ಗಂಟೆಗೆ ಸಮ್ಮೇಳನದ ಬ್ಲಾಕ್ ನಂ. 2ರ ಸಂಖ್ಯೆಯ 1ನೇ ಪುಸ್ತಕ ಮಳಿಗೆಯಲ್ಲಿ ಲೋಕಾರ್ಪಣೆ ಮಾಡಿ ಮಾರಾಟ ಮಾಡಲಾಗುವುದು ಎಂದು ಕೃತಿಯ ಲೇಖಕ ಡಾ.ಡಿ.ಗುರುಮೂರ್ತಿ ಹಾರೋಹಳ್ಳಿ ತಿಳಿಸಿದರು.ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1997ರಿಂದ 2003ರವರೆಗೆ 7 ವರ್ಷಗಳ ಕಾಲ ಡಾ.ರಾಜಕುಮಾರ್ ಅವರ ಜೀವನದ ಅಧ್ಯಯನ ಮಾಡಿ ಡಾ.ರಾಜ್‌ಕುಮಾರ್ ದಿ ಗ್ರೇಟ್ ಕೃತಿಯನ್ನು ರಚಿಸಲಾಗಿದ್ದು, ಈ ಕೃತಿಗೆ ರಾಜ್ ಕುಮಾರ್‌ರ ಆಪ್ತ ದೊರೆಸ್ವಾಮಿ ಅವರ ಬೆನ್ನುಡಿಯಿದೆ ಎಂದರು. ಲೋಕಾರ್ಪಣೆಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಡ್ಯ ಜಿಲ್ಲಾ ಕಸಾಪ ಸಂಚಾಲಕಿ ಡಾ.ಮೀರಾ ಶಿವಲಿಂಗಯ್ಯ ವಹಿಸಲಿದ್ದು, ಜಿಲ್ಲಾಧಿಕಾರಿ ಡಾ.ಕುಮಾರ್ ಕೃತಿಯನ್ನು ಬಿಡುಗಡೆ ಮಾಡುವರು, ಪಾಂಡವಪುರದ ಪುಸ್ತಕಮನೆಯ ಮಾಲೀಕ ಎಂ.ಅಂಕೇಗೌಡ, ಡಾ.ಎಸ್.ಸಿ.ಶಂಕರೇಗೌಡ ಉಪಸ್ಥಿತರಿರುವರು ಎಂದು ಗುರುಮೂರ್ತಿ ವಿವರಿಸಿದರು.

ಶಾಲಾ-ಕಾಲೇಜುಗಳಿಗೆ 2 ದಿನ ರಜೆ

ಮಂಡ್ಯ: ಶುಕ್ರವಾರದಿಂದ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಎರಡು ದಿನಗಳ ಕಾಲ ಮಂಡ್ಯ ಜಿಲ್ಲೆಯ ಶಾಲೆಗಳು ಹಾಗೂ ಪಿಯು ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಡಿ.20 ರಿಂದ ಡಿ.22ರವರೆಗೆ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಹೀಗಾಗಿ ಡಿ.20 ಹಾಗೂ 21 ರಂದು ಜಿಲ್ಲೆಯ ಎಲ್ಲ ಶಾಲೆ ಹಾಗೂ ಪಿಯು ಕಾಲೇಜುಗಳಿಗೆ ಜಿಲ್ಲಾಧಿಕಾರಿ ಡಾ. ಕುಮಾರ್ ರಜೆ ಘೋಷಿಸಿದ್ದಾರೆ.

ಶಬ್ದಕೋಶ ಕರ್ತೃ ಕಿಟೆಲ್ ವಂಶಸ್ಥರು ಭಾಗಿ

ಮಂಡ್ಯ : ಸಮ್ಮೇಳನಕ್ಕೆ ಇದೇ ಮೊದಲ ಬಾರಿಗೆ 18 ದೇಶಗಳ ಸುಮಾರು 200ಕ್ಕೂ ಹೆಚ್ಚು ವಿದೇಶಿ ಮೂಲದ ಕನ್ನಡಿಗರು ಭಾಗವಹಿಸುತ್ತಿರುವುದು ವಿಶೇಷ. ಅಮೆರಿಕ, ಯುರೋಪ್, ಗಲ್ಫ್, ಏಷ್ಯಾ ಪೆಸಿಫಿಕ್, ಆಸ್ಟ್ರೇಲಿಯಾ, ಉಕ್ರೇನ್, ರಷ್ಯಾ ಸೇರಿದಂತೆ ನಾನಾ ದೇಶಗಳ ವಿದೇಶಿ ಕನ್ನಡಿಗರು ಆಗಮಿಸುತ್ತಿದ್ದಾರೆ. ಪುತಿನ ಅವರ ಪುತ್ರಿ ಅಲಮೇಲು, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಕರಲ್ಲೊಬ್ಬರಾದ ಕರ್ಪೂರ ಶ್ರೀನಿವಾಸ ರಾವ್ ಅವರ ಮೊಮ್ಮಗಳು ನಿರ್ಮಲಾ ಕರ್ಪೂರ, ಕನ್ನಡದ ಮೊಟ್ಟ ಮೊದಲ ಶಬ್ದಕೋಶದ ಕರ್ತೃ ಫರ್ಡಿನಾಂಡ್ ಕಿಟೆಲ್ ಅವರ ವಂಶಸ್ಥರು ಬರುತ್ತಿರುವುದು ವಿಶೇಷ. ಈ ವೇಳೆ ವಿದೇಶಿ ನೆಲದಲ್ಲಿ ಕನ್ನಡಕ್ಕಾಗಿ ಶ್ರಮಿಸಿದ 21 ವಿದೇಶಿ ಕನ್ನಡಿಗರನ್ನು ಸನ್ಮಾನಿಸಲಾಗುತ್ತಿದೆ.

ಬೆಂಗಳೂರು-ಮೈಸೂರು ಮಾರ್ಗ ಬದಲಾವಣೆ

ಮಂಡ್ಯ: ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳು ಆಗಮಿಸುವ ಹಿನ್ನೆಲೆಯಲ್ಲಿ ಬೆಂಗಳೂರು-ಮೈಸೂರು ಎಕ್ಸ್ ಪ್ರೆಸ್ ಹೆದ್ದಾರಿಯ ಸಂಚಾರಿ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ. ಶುಕ್ರವಾರ ಬೆಳಗ್ಗೆ 5 ಗಂಟೆಯಿಂದ 23ರ ಬೆಳಗ್ಗೆ 6 ಗಂಟೆಯವರೆಗೆ ಈ ಮಾರ್ಗ ಬದಲಾವಣೆ ವ್ಯವಸ್ಥೆ ಆಚರಣೆಯಲ್ಲಿರುತ್ತದೆ. ಬೆಂಗಳೂರು, ರಾಮನಗರ, ತುಮಕೂರು, ಮದ್ದೂರು, ಮಳವಳ್ಳಿಯಿಂದ ಎಕ್ಸ್ ಪ್ರೆಸ್ ಹೆದ್ದಾರಿಯಲ್ಲಿ ಬರುವವರಿಗೆ ಹೊಸಬೂದನೂರು ಬಳಿ ನಿರ್ಗಮನಕ್ಕಾಗಿ ಸರ್ವಿಸ್ ರಸ್ತೆ, ಸಮ್ಮೇಳನದ ಮುಖ್ಯದ್ವಾರದ ಮೂಲಕ ಬ್ಯಾಂಕರ್ಸ್ ಕಾಲೋನಿ ರಸ್ತೆ ಮೂಲಕ ಸಮ್ಮೇಳನ ಸ್ಥಳ ತಲುಪಬಹುದು. ಮೈಸೂರು, ಶ್ರೀರಂಗಪಟ್ಟಣ, ಪಾಂಡವಪುರದಿಂದ ಎಕ್ಸ್ ಪ್ರೆಸ್ ಹೆದ್ದಾರಿಯಲ್ಲಿ ಬರುವವರಿಗೆ ಶಶಿಕಿರಣ ಕನ್ವೆನ್ಷನ್ ಹಾಲ್ ಎದುರು ನಿರ್ಗಮನದ ದಾರಿ ನಿಗದಿಯಾಗಿದೆ.

ವಿಶೇಷ ಕವಿಗೋಷ್ಠಿ

ಮಂಡ್ಯ: ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮೊದಲ ಬಾರಿಗೆ ದೃಷ್ಟಿಚೇತನರ ವಿಶೇಷ ಕವಿಗೋಷ್ಠಿ ಆಯೋಜಿಸಿರುವುದು ವಿಶೇಷವಾಗಿದೆ. ವಿಶೇಷಚೇತನರು ಹಾಗೂ ದೃಷ್ಟಿಚೇತನ ಕವಿಗಳಿಗೆ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಅವಕಾಶ ಸಿಗುತ್ತಿರಲಿಲ್ಲ. ತಮ್ಮ ಪ್ರತಿಭೆಗೆ ತಕ್ಕ ವೇದಿಕೆ ಇಲ್ಲ ಎಂಬ ಕೊರಗನ್ನು ಈ ಬಾರಿ ನಿವಾರಿಸಲಾಗಿದೆ. ದೃಷ್ಟಿಚೇತನ ವಿಶೇಷ ಕವಿಗೋಷ್ಠಿಯಿಂದ ಸಮ್ಮೇಳನಕ್ಕೆ ವಿಶೇಷತೆ ಹೆಚ್ಚಿದೆ. ಪ್ರಧಾನ ವೇದಿಕೆಯಲ್ಲಿಯೇ ಗೋಷ್ಠಿ ನಡೆಯಲಿದೆ. ಸಮ್ಮೇಳನದ ಉದ್ಘಾಟನೆಯಾಗುತ್ತಿದ್ದಂತೆ ಮಧ್ಯಾಹ್ನ 2ರಿಂದ 3.30ರವರೆಗೆ ಮೊದಲ ಗೋಷ್ಠಿ ನಡೆಯಲಿದ್ದು, ನಂತರ 3.30ರಿಂದ 4.30ರ ಎರಡನೇ ಗೋಷ್ಠಿಯಲ್ಲಿ ಮೊದಲ ಕವಿಗೋಷ್ಠಿಯೇ ದೃಷ್ಟಿಚೇತನರ ವಿಶೇಷ ಕವಿಗೋಷ್ಠಿಯಾಗಿದೆ.

ಅಕ್ಷರ ಜಾತ್ರೆಗೆ ಸಕ್ಕರೆ ನಾಡಿನ ಅಂಗಳ ಸಜ್ಜು | ಮಂಡ್ಯದ ಮಣ್ಣಿನಲ್ಲಿ ಕನ್ನಡ ಕಲರವ | 3200 ಪೊಲೀಸರಿಂದ ಬಿಗಿ ಬಂದೋಬಸ್ತ್

87ನೇ ನುಡಿ ಜಾತ್ರೆಗೆ ಕ್ಷಣಗಣನೆ

ಜಿ.ಎಂ.ಬಾಲಕೃಷ್ಣ ಮಂಡ್ಯ

ಎಂಬತ್ತೇಳನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಮಂಡ್ಯ ನಗರದ ಸ್ಯಾಂಜೋ ಆಸ್ಪತ್ರೆ

ಹಿಂಭಾಗದಲ್ಲಿ ಪ್ರಧಾನ ವೇದಿಕೆ ಹಾಗೂ ಎರಡು ಸಮನಾಂತರ ವೇದಿಕೆ ಸಿದ್ಧಗೊಂಡಿದ್ದು, ಸಾಹಿತ್ಯ ಪ್ರೇಮಿಗಳಿಗೆ ಯಾವುದೇ ರೀತಿ ತೊಂದರೆ ಆಗದಂತೆ ಸಕಲ ಸಜ್ಜುಗೊಂಡಿದೆ.

ಮೆರವಣಿಗೆ ವಿಶೇಷ ರಥ: ಇಂದಿನಿಂದ ಮೂರು ದಿನಗಳ ಕಾಲ ನಡೆಯಲಿದ್ದು, ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರಿಗಾಗಿ 4 ಲಕ್ಷ ರೂ. ವೆಚ್ಚದಲ್ಲಿ ವಿಶೇಷ ರಥವೊಂದು ನಿರ್ಮಾಣವಾಗುತ್ತಿದೆ. ಮೆರವಣಿಗೆಗೆ 2 ಆನೆಗಳನ್ನು ಕರೆ ತರುವುದಕ್ಕೆ ಸಮಿತಿ ಸದಸ್ಯರು ಚಿಂತನೆ ನಡೆಸಿದ್ದಾರೆ. ಮಂಡ್ಯ ವಿಶ್ವವಿದ್ಯಾಲಯದಿಂದ ಆರಂಭವಾಗಲಿರುವ ಮೆರವಣಿಗೆಯಲ್ಲಿ 300 ಮಹಿಳೆಯರು ಪೂರ್ಣಕುಂಭ ಹೊತ್ತು ಸಮ್ಮೇಳನಾಧ್ಯಕ್ಷರನ್ನು ವಿಶೇಷ ರಥದಲ್ಲಿ ಮುನ್ನಡೆಸಲಿದ್ದಾರೆ. ಜಾನಪದ ಕಲಾತಂಡಗಳ ಸುಮಾರು ನಾಲ್ಕು ಸಾವಿರ ಕಲಾವಿದರು ಪಾಲ್ಗೊಳ್ಳಲಿದ್ದಾರೆ.

ಮೆರವಣಿಗೆಯಲ್ಲಿ 87 ಆಟೋಗಳು ಭಾಗವಹಿಸುತ್ತಿದ್ದು, ಅವುಗಳಲ್ಲಿ ಇದುವರೆಗಿನ ಸಮ್ಮೇಳನಗಳ ಸರ್ವಾಧ್ಯಕ್ಷರ ಭಾವಚಿತ್ರಗಳು, 8 ಆಟೋಗಳಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರಗಳು ರಾರಾಜಿಸಲಿವೆ.

ಆರು ಸ್ತಬ್ಧಚಿತ್ರಗಳು: ಜಿಲ್ಲೆಯ ವೈಶಿಷ್ಟ ಮತ್ತು ಹಿರಿಮೆಯನ್ನು ಪ್ರತಿಬಿಂಬಿಸುವ ಆರು ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ. ಆಲೆಮನೆ, ಕೆಆರ್‌ಎಸ್ ಅಣೆಕಟ್ಟೆ, ಸಕ್ಕರೆ ಕಾರ್ಖಾನೆ, ಕೃಷಿ ಚಟುವಟಿಕೆಯನ್ನು ಬಿಂಬಿಸುವ ಕಲಾಕೃತಿಗಳು ಪಾಲ್ಗೊಳ್ಳಲಿವೆ.

ಸಮ್ಮೇಳನದ ಕಿಟ್: ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿದ್ದು, ಆಹಾರದ ಗುಣಮಟ್ಟ ಪರೀಕ್ಷೆ ಮಾಡಿ ವರದಿ ಪಡೆಯಲಾಗಿದೆ. ನೀರನ್ನು ಸಹ ಪರೀಕ್ಷಿಸಲಾಗಿದ್ದು, ಸ್ವಚ್ಛತೆಗೆ 250 ಸಿಬ್ಬಂದಿಯನ್ನು ನೇಮಿಸಲಾಗಿದೆ. 150ಕ್ಕೂ ಹೆಚ್ಚು ವಿವಿಧ ಸ್ಥಳಗಳಲ್ಲಿ ಶೌಚಾಲಯ ನಿರ್ಮಿಸಲಾಗಿದೆ. 6 ಸಾವಿರ ನೋಂದಾಯಿತ ಪ್ರತಿನಿಧಿಗಳಿಗೆ ಅರ್ಧ ಕೆ.ಜಿ.ಬೆಲ್ಲ, ಅರ್ಧ ಕೆಜಿ ಸಕ್ಕರೆ, ಬ್ರೆಶ್, ಪೇಸ್ಟ್, ಸೋಪು,ಬೆಡ್‌ಶಿಟ್ ಒಳಗೊಂಡ ಲೇದರ್ ಬ್ಯಾಗ್ ನಲ್ಲಿ ವಸತಿ ಮತ್ತು ಸಮ್ಮೇಳನದ ಕಿಟ್ ನೀಡಲಾಗುತ್ತಿದೆ.

ಊಟಕ್ಕೆ 100 ಕೌಂಟರ್: ಸುಮಾರು 70 ರಿಂದ 80 ಎಕರೆ ಪ್ರದೇಶದಲ್ಲಿ ಪ್ರಧಾನ ವೇದಿಕೆ, ಎರಡು ಸಮಾನಾಂತರ ವೇದಿಕೆ, 60 ಎಕರೆ ವಿಶಾಲ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. 55 ವಸ್ತು ಪ್ರದರ್ಶನ ಮಳಿಗೆಗಳು, 350 ವಾಣಿಜ್ಯ ಮಳಿಗೆ, 450 ಪುಸ್ತಕ ಮಳಿಗೆಗಳು ಕೂಡ ತಲೆಎತ್ತಿವೆ. ಊಟಕ್ಕೆ 100 ಕೌಂಟರ್, ನೋಂದಾಯಿತ ಪ್ರತಿನಿಧಿಗಳಿಗೆ 40 ಕೌಂಟರ್‌ಗಳನ್ನು ತೆರೆಯಲಾಗಿದ್ದು ಎಲ್ಲರಿಗೂ ಒಂದೇ ಊಟದ ಮೆನು ಇರಲಿದೆ.

ಉಚಿತ ಬಸ್ ವ್ಯವಸ್ಥೆ : ಸಮ್ಮೇಳನಕ್ಕೆ ಆಗಮಿಸುವ 7 ತಾಲೂಕು ಕೇಂದ್ರಗಳಿಂದ 15 ಉಚಿತ ಬಸ್ ಗಳ ವ್ಯವಸ್ಥೆ ಮಾಡಲಾಗಿದೆ. ಇದರ ಜೊತೆಗೆ ಮಂಡ್ಯ ನಗರದಿಂದ ಕೂಡ ಬಸ್‌ಗಳು ಸಮ್ಮೇಳನದ ಸ್ಥಳಕ್ಕೆ ಉಚಿತವಾಗಿ ಕರೆತರಲಿವೆ. ಮೂರು ಕಡೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಪಾರ್ಕಿಂಗ್ ಸ್ಥಳದಿಂದ ಕೂಡ ಉಚಿತ ಸಾರಿಗೆ ವಾಹನದ ವ್ಯವಸ್ಥೆ ಮಾಡಲಾಗಿದೆ. ಮೈಸೂರು ಬೆಂಗಳೂರಿನಿಂದ 30 ನಿಮಿಷಕ್ಕೆ ಒಂದು ವಿಶೇಷ ಬಸ್ ಸಂಚರಿಸಲಿದೆ.

ಡಿ.20ರ ಶುಕ್ರವಾರ ಬೆಳಗ್ಗೆ 6ಕ್ಕೆ ಧ್ವಜಾರೋಹಣ ನೆರವೇರಲಿದೆ. 7 ಗಂಟೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಆರಂಭವಾಗಲಿದೆ. ಮೆರವಣಿಗೆಯಲ್ಲಿ 50ಕ್ಕೂ ಹೆಚ್ಚು ಜಾನಪದ ಕಲಾತಂಡಗಳು ಒಳಗೊಂಡಂತೆ ಪೂರ್ಣಕುಂಭ ಹೊತ್ತ 300 ಮಹಿಳೆಯರು ಪಾಲ್ಗೊಳ್ಳಲಿದ್ದಾರೆ. ಮೆರವಣಿಗೆಗೆ ಮೈಸೂರು ಅರಮನೆ ರಾಜವಂಶಸ್ಥೆ ಪ್ರಮೋದಾದೇವಿ ಅವರು ಚಾಲನೆ ನೀಡಲಿದ್ದಾರೆ.

ಮೂರು ವೇದಿಕೆ: ಮೂರು ವೇದಿಕೆಗಳನ್ನು ನಿರ್ಮಿಸಲಾಗುತ್ತಿದೆ. ಪ್ರಧಾನ ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷರ ಜೊತೆಗಿನ ಸಂವಾದವೂ ಸೇರಿದಂತೆ 11 ಗೋಷ್ಠಿಗಳು, 2 ಸಮಾನಾಂತರ ವೇದಿಕೆಗಳಲ್ಲಿ 20 ಗೋಷ್ಠಿಗಳು ಆಯೋಜನೆಗೊಂಡಿವೆ. ಮೂರು ದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಮ್ಮೇಳನದಲ್ಲಿ ಸಿಗಲಿದೆಯೇ ಬಾಡೂಟ? ಸಸ್ಪೆನ್ಸ್..!

ಆತಿಥ್ಯಕ್ಕೆ ಹೆಸರಾಗಿರುವ ಸಕ್ಕರೆ ನಾಡು ಮಂಡ್ಯದಲ್ಲಿ ಸಮ್ಮೇಳನ ನಡೆಯುವ ಮೂರು ದಿನ ಭರ್ಜರಿ ಭೂರಿ ಭೋಜನ ಸಿದ್ಧವಾಗುತ್ತಿದೆ. ಮೊದಲ ಎರಡು ದಿನದ ಊಟದ ಮೆನು ಸಿಕ್ಕಿದ್ದು, ಕಡೆಯ ದಿನದ ಮೆನು ಇನ್ನು ನಿಗೂಢವಾಗಿಯೇ ಉಳಿದಿದೆ. ಆದರೆ ಕಡೆಯ ದಿನ ಬಾಡೂಟ ಸಿಗಬಹುದೆಂಬ ನಿರೀಕ್ಷೆಯಲ್ಲಿ ಮಾಂಸಾಹಾರಕ್ಕಾಗಿ ಹೋರಾಟ ಮಾಡಿದ್ದವರು ಇದ್ದಾರೆ.

ಮೊದಲೆರಡು ದಿನದ ಮೆನು: ಮೊದಲ ದಿನ ಬೆಳಿಗ್ಗೆ 10ರಿಂದ 15 ಸಾವಿರ ಮಂದಿಗೆ ಇಡ್ಲಿ, ವಡೆ, ಚಟ್ನಿ, ಸಾಂಬಾರು, ಮೈಸೂರು ಪಾಕ್ ಇದೆ. ಮಧ್ಯಾಹ್ನ ಚಪಾತಿ, ಅನ್ನ ಸಾಂಬಾರ್, ಕಾಯಿ ಹೋಳಿಗೆ, ತುಪ್ಪ, ಪಲ್ಯ ಏರ್ಪಾಡಾಗುತ್ತಿದೆ. ರಾತ್ರಿಗೆ ಪೂರಿ, ಸಾಗು, ಮೈಸೂರು ಪಾಕ್, ಬಾತ್, ಮೊಸರು ಬಜ್ಜಿ ಅನ್ನ ಸಾಂಬಾರು ಇದ್ದು, ಇನ್ನು ಮಾರನೇ ದಿನಕ್ಕೂ ಚಿತ್ರಾನ್ನ ವಡೆ, ಸಿಹಿ ಪೊಂಗಲ್ ಇದ್ದು, ಮತ್ತೆ ಮಧ್ಯಾಹ್ನ ಚಪಾತಿ, ಅಥವಾ ಮುದ್ದೆ, ಸ್ವೀಟ್, ಪಲ್ಯ, ಅನ್ನಾ ಸಾಂಬಾರ್ ಇದ್ದು, ಕೊನೆಯ ದಿನದ ಮೆನುವನ್ನು ತಿಳಿಸಲಾಗಿಲ್ಲ.

ಕಲಾವಿದರಿಗೆ ಫಿಫ್ಟಿ-ಫಿಫ್ಟಿ ಆದ್ಯತೆ

ಜಿಲ್ಲೆ ಹಾಗೂ ಗಡಿ ಜಿಲ್ಲೆಗಳಿಗೆ ಶೇ.50, ಇತರೆ ಜಿಲ್ಲೆಯ ಕಲಾವಿದರಿಗೆ ಶೇ.50ರಷ್ಟು ಪ್ರಾಧಾನ್ಯತೆ ನೀಡಲಾಗಿದೆ. ಮುಖ್ಯ ವೇದಿಕೆ ಮತ್ತು ಸಮಾನಾಂತರ ವೇದಿಕೆಗಳಲ್ಲಿ ರಾಜ್ಯ ಮಟ್ಟದ ಕಲಾವಿದರು ಕಾರ್ಯಕ್ರಮ ನಡೆಸಿಕೊಳ್ಳಲಿದ್ದಾರೆ. ಇದರಲ್ಲಿ ಮಂಡ್ಯ ಮೂಲದವರು ಕೂಡ ಇರಬಹುದು. ಬಹುಮುಖ್ಯವಾಗಿ ಮಂಡ್ಯ ಜಿಲ್ಲೆಯ ಕಲಾವಿದರಿಗೆಂದೇ ಕಲಾಮಂದಿರ ಮತ್ತು ಅಂಬೇಡ್ಕರ್ ಭವನದಲ್ಲಿ ಮೂರು ದಿನ ನಿರಂತರ ಕಾರ್ಯಕ್ರಮ ಆಯೋಜಿಸಲಾಗಿದೆ.

ಅಕ್ಷರ ಜಾತ್ರೆಗೂ ಮೈಸೂರು ದಸರಾ ರೀತಿ ಲೈಟಿಂಗ್ಸ್..!

ಒಟ್ಟು ಐದು ದಿನಗಳ ಕಾಲ ವಿದ್ಯುತ್ ದೀಪಾಲಂಕಾರದಿಂದ ಸಕ್ಕರೆ ನಗರಿ ಕಂಗೊಳಿಸುತ್ತಿದೆ. ಅಂದರೆ ಸೋಮವಾರದವರೆಗೂ ಬೆಳಗಲಿದೆ. ನಗರ ಮತ್ತು ಸುತ್ತಮುತ್ತಲ ಗ್ರಾಮಾಂತರದ 20 ಕಿಲೋ ಮೀಟರ್ ದೂರದವರೆಗೆ ದೀಪಾಲಂಕಾರ ಕಂಗೊಳಿಸಲಿದ್ದು, ಮಂಡ್ಯ ನಗರದ ರಸ್ತೆಗಳಾದ ವಿ.ವಿ.ರಸ್ತೆ, ಆರ್.ಪಿ.ರಸ್ತೆ, ಬನ್ನೂರು ರಸ್ತೆ, ಡಿಸಿ ಕಚೇರಿ ರಸ್ತೆ, ಮೈಷುಗರ್ ವೃತ್ತ, ಎಸ್.ಡಿ.ಜಯರಾಂ ವೃತ್ತ, ಮಹಾವೀರ ವೃತ್ತ, ಜಯಚಾಮರಾಜೇಂದ್ರ ಒಡೆಯರ್ ವೃತ್ತ, ಕಲ್ಲಹಳ್ಳಿ, ಕಿರಂಗೂರು ವೃತ್ತ ವಿದ್ಯುತ್ ದೀಪಲಂಕಾರದಿಂದ ಮಿಂಚುತ್ತಿದೆ. ಸಂಜೆ 6ಗಂಟೆಯಿಂದ 10ಗಂಟೆಯವರೆಗೆ ದೀಪಲಂಕಾರ ವ್ಯವಸ್ಥೆ ಮಾಡಲಾಗಿದೆ. ಈ ಹಿಂದೆ ಎರಡು ಸಮ್ಮೇಳನ ಮಂಡ್ಯದಲ್ಲಿ ನಡೆದಾಗ ಲೈಟಿಂಗ್ಸ್ ವ್ಯವಸ್ಥೆ ಇರಲಿಲ್ಲ. ಮಂಡ್ಯ ಜನರ ಲೈಟಿಂಗ್ಸ್ ನೋಡಲು ದಸರಾ ವೇಳೆಯಲ್ಲಿ ಪಕ್ಕದ ಮೈಸೂರಿಗೆ ತೆರಳುತ್ತಾರೆ. ಇದೀಗ ಮಂಡ್ಯದಲ್ಲೇ ಲೈಟಿಂಗ್ಸ್ ಅಳವಡಿಸುತ್ತಿರುವುದು ಮತ್ತೊಂದು ವಿಶೇಷ.



ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ, ಅಂಬೇಡ್ಕರ್ ಭವನ, ಸಮಾನಾಂತರ ವೇದಿಕೆ ಮತ್ತು ಪ್ರಧಾನ ವೇದಿಕೆಗಳಲ್ಲಿ ಸ್ಥಳೀಯ ಕಲಾವಿದರ ಕಾರ್ಯಕ್ರಮ, ಪ್ರಧಾನ ವೇದಿಕೆಯಲ್ಲಿ ಸ್ವರ ಯಾತ್ರೆ ಹೆಸರಿನಲ್ಲಿ ಕಾರ್ಯಕ್ರಮ ಜರುಗಲಿವೆ. ಡಿ.20ರ ಮೊದಲ ದಿನ ಸಾಧುಕೋಕಿಲ ಮತ್ತು ರಾಜೇಶ್ ಕೃಷ್ಣನ್ ತಂಡದವರಿಂದ ಸಂಗೀತ ಸಂಜೆ. ಡಿ.21ರಂದು ಅರ್ಜುನ್ ಜನ್ಯ ತಂಡದಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಡಿ.22ರಂದು ಸಾಂಸ್ಕೃತಿಕ ಕಾರ್ಯಕ್ರಮ, ಪೊಲೀಸ್ ಬ್ಯಾಂಡ್ ಇರಲಿದೆ.

170 ಮಂದಿಗೆ ಸನ್ಮಾನ : ನಾಡುನುಡಿಗೆ ಸೇವೆ ಸಲ್ಲಿಸಿದ 170 ಮಂದಿ ಸಾಧಕರನ್ನು ಸನ್ಮಾನಿಸಲಾಗುತ್ತಿದೆ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಾರ್ಥ 87 ಪುಸ್ತಕಗಳ ಬಿಡುಗಡೆ ಜತೆಗೆ 'ಬೆಲ್ಲದಾರತಿ' ಹೆಸರಿನ 'ಸ್ಮರಣ ಸಂಚಿಕೆ' ಕೂಡ ಬಿಡುಗಡೆ ಮಾಡಲಾಗುತ್ತದೆ.

3200 ಪೊಲೀಸ್ ಪಡೆ: 6 ಎಎಸ್ ಪಿ, 21 ಡಿವೈಎಸ್ ಪಿ, 63 ಸಿಪಿಐ, 170 ಪಿಎಸ್ ಐ, 262 ಎಎಸ್ ಐ, 1500 ಪೇದೆಗಳು, 1000 ಹೋಂ ಗಾರ್ಡ್, 165 ಮಹಿಳಾ ಕಾನ್ ಸ್ಟೇಬಲ್ ಒಳಗೊಂಡಂತೆ 14 ಜಿಲ್ಲೆಗಳಿಂದ 3200ಕ್ಕೂ ಅಧಿಕ ಪೊಲೀಸ್ ಸಿಬ್ಬಂದಿ ಆಗಮಿಸಲಿದ್ದಾರೆ. ಬೆಳಗ್ಗೆ, ಮಧ್ಯಾಹ್ನ, ರಾತ್ರಿ ಪಾಳಿಯಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸಲಿದ್ದಾರೆ. ಸಂಚಾರ ನಿರ್ವಹಣೆ, ಪಾರ್ಕಿಂಗ್, ಊಟದ ಕೌಂಟರ್, ವೇದಿಕೆ ಹೀಗೆ ಎಲ್ಲಾ ಕಡೆ ಪೊಲೀಸರನ್ನು ನಿಯೋಜಿಸಲಾಗುತ್ತಿದೆ. ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದ್ದು ಹಗಲು/ರಾತ್ರಿ ಪೊಲೀಸ್ ಸಿಬ್ಬಂದಿ ಕರ್ತವ್ಯ ನಿರತರಾಗಿರಲಿದ್ದಾರೆ. ಸಿಸಿಟಿವಿ ನಿಗಾ ವ್ಯವಸ್ಥೆ ಮಾಡಲಾಗಿದೆ. ಅಪರಾಧ ಹಾಗೂ ಕಳ್ಳತನ ತಡೆಯಲು ಅಪರಾಧಿ ಪತ್ತೆ ದಳ ಹಾಗೂ ಮಫ್ತಿಯಲ್ಲಿ ಪೊಲೀಸರು ಗಸ್ತು ತಿರುಗಲಿದ್ದಾರೆ.

ಪೊಲೀಸ್ ಔಟ್ ಪೋಸ್ಟ್, ಮಹಿಳಾ ಸಹಾಯವಾಣಿ ಕೇಂದ್ರಗಳನ್ನು ಸಹ ತೆರೆಯಲಾಗುತ್ತಿದೆ.ಪ್ರತಿ ಅರ್ಧ ಗಂಟೆಗೆ ಒಂದರಂತೆ ವಿಶೇಷ ಸಾಹಿತ್ಯ ಸಾರಿಗೆ ಬಸ್ ಗಳು ಸಂಚರಿಸಲಿವೆ. ನೋಂದಣಿ ಕೇಂದ್ರದ ಸಮೀಪ ಆರೋಗ್ಯ ಕೇಂದ್ರ ತೆರೆಯಲಾಗುತ್ತಿದ್ದು ದಿನದ 24 ಗಂಟೆ ಕಾರ್ಯ ನಿರ್ವಹಿಸಲಿದೆ.

1000ಕ್ಕೂ ಹೆಚ್ಚು ಮಳಿಗೆಗಳು, 450 ವಾಣಿಜ್ಯ ಮಳಿಗೆಗಳು ತೆರೆಯಲಾಗುತ್ತಿದೆ. ಸಾರ್ವಜನಿಕ ವಾಹನ ನಿಲುಗಡೆಗೆ ಪ್ರತ್ಯೇಕ 20 ಎಕರೆ ಪ್ರದೇಶವಿದ್ದು, ಪ್ರತ್ಯೇಕ ಶೌಚಾಲಯವ ವ್ಯವಸ್ಥೆ ಮಾಡಲಾಗಿದೆ. ಮುಖ್ಯ ವೇದಿಕೆ ಬಳಿ ನೋಂದಣಿ ಕೌಂಟರ್ ಸಹ ತೆರೆಯಲಾಗಿದೆ.

ಸಮ್ಮೇಳನದ ವೇದಿಕೆ: ಸಮ್ಮೇಳನಕ್ಕೆ 600 ಅಡಿ ಉದ್ದ, 300 ಅಡಿ ಅಗಲ ವಿಸ್ತೀರ್ಣದ ವೇದಿಕೆ ಸಿದ್ಧವಾಗಿದ್ದು, ಸುಮಾರು 40,000 ಜನ ಕೂರಲು ವ್ಯವಸ್ಥೆ ಮಾಡಲಾಗಿದೆ. ಹಾಗೆ ಸಮಾನಾಂತರ ವೇದಿಕೆಯಲ್ಲಿ 11000 ಚ.ಅಡಿ ಪೆಂಡಾಲ್ ನಿರ್ಮಿಸಲಾಗುತ್ತಿದೆ.

ವಿಶೇಷ ಬಸ್

ಸಮ್ಮೇಳನದ 3 ದಿನ 7 ತಾಲೂಕು ಕೇಂದ್ರಗಳಿಂದ ಸಮ್ಮೇಳನ ನಡೆಯುವ ಸ್ಥಳಕ್ಕೆ 15 ವಿಶೇಷ ವಾಹನಗಳನ್ನು ಒಳಗೊಂಡಂತೆ 105 ವಿಶೇಷ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಮೈಸೂರು ಮತ್ತು ಬೆಂಗಳೂರಿನಿಂದ ಪ್ರತಿ 30 ನಿಮಿಷಕ್ಕೆ ಒಂದರಂತೆ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗಿದೆ. ಪೊಲೀಸ್ ಬಂದೋಬಸ್ತ್‌ನ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಊಟ, ತಿಂಡಿ, ವಸತಿ ಸೌಕರ್ಯ ಕಲ್ಪಿಸಬೇಕು. ಗಣ್ಯರ ಭದ್ರತೆಯಲ್ಲಿ ಲೋಪವಾಗದಂತೆ ನಿಗಾ ವಹಿಸಲಿದೆ. ಅಡುಗೆ ಮಾಡುವ ಸ್ಥಳ, ಪಾರ್ಕಿಂಗ್ ಸ್ಥಳಗಳಲ್ಲಿ ಅಗ್ನಿಶಾಮಕ ವಾಹನ ನಿಯೋಜಿಸಿದೆ.

ಸಮ್ಮೇಳನದಲ್ಲಿ ಪೊಲೀಸ್ ಬ್ಯಾಂಡ್ ಮೆರಗು

ಇನ್ನು ಸಮ್ಮೇಳನದಲ್ಲಿ ಇದೇ ಮೊದಲ ಬಾರಿಗೆ ಪೊಲೀಸ್ ಬ್ಯಾಂಡ್ ಮೇಳೈಸಲಿದ್ದು, ಮೈಸೂರು ದಸರಾದಲ್ಲಿ ಪೊಲೀಸ್ ಬ್ಯಾಂಡ್ ನೋಡಲು ಜನ ಕಾಯುತ್ತಿರುತ್ತಾರೆ. ಸಚಿವ ಚಲುವರಾಯ ಸ್ವಾಮಿ, ಮನವಿ ಮೇರೆಗೆ ಸಿಎಂ, ಗೃಹ ಸಚಿವರು ಇಂತಹ ಸದಾವಕಾಶ ಮಂಡ್ಯ ಜಿಲ್ಲೆಗೆ ಕಲ್ಪಿಸಿಕೊಟ್ಟಿದ್ದಾರೆ. ಕನ್ನಡ ಪ್ರೇಮಿಗಳಿಗೆ ಹಾಗೂ ಸಾಹಿತ್ಯಾಸಕ್ತರಿಗೆ ನುಡಿಹಬ್ಬದ ಸವಿಯ ಜೊತೆಗೆ ಕರುನಾಡು ಮತ್ತು ಹೊರನಾಡಿನ ಕಲೆ, ಕಲಾಪ್ರಕಾರಗಳನ್ನು ಪ್ರದರ್ಶಿಸಲು ಸಾಂಸ್ಕೃತಿಕ ಸಮಿತಿ ವೇದಿಕೆ ಸಿದ್ದಪಡಿಸಿದೆ. ನಾನಾ ಬಗೆಯ ಕಲೆ, ಪ್ರಕಾರಗಳನ್ನು ನಾಡಿನ ಜನತೆ ಎದುರು ಪ್ರದರ್ಶಿಸಲು ರಾಜ್ಯ ಹೊರರಾಜ್ಯಗಳಿಂದ ಕಲಾವಿದರು, ಕಲಾತಂಡಗಳು ಮಂಡ್ಯಕ್ಕೆ ಆಗಮಿಸಲಿವೆ.

ಕಲಾವಿದರಿಗೆ ಹೆಚ್ಚುವರಿ ಗೌರವಧನ

ಗೌರವಧನದಲ್ಲಿ ತಾರತಮ್ಯಕ್ಕೆ ಆಸ್ಪದ ನೀಡದೇ ಎಲ್ಲಾ ಕಲಾವಿದರನ್ನು ಸಮಾನ ರೀತಿಯಲ್ಲಿ ಗೌರವಿಸಲಾಗುತ್ತಿದೆ. ಸ್ಥಳೀಯ ಕಲಾ ತಂಡಗಳ ಗೌರವಧನ ಪರಿಷ್ಕರಣೆ ಮಾಡಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚುವರಿ ಗೌರವಧನ ಕಲಾವಿದರಿಗೆ ನೀಡಲಾಗುತ್ತಿದೆ. ಕಲಾವಿದರು ನೀಡುವ ಕಲೆ ಪ್ರದರ್ಶನ ಮತ್ತು ಅವರ ಬರುವ ಸ್ಥಳದ ದೂರದ ಮೇಲೆ ನಿರ್ಧರಿಸಲಾಗುತ್ತಿದೆ.

ಬಾಡೂಟ ಹೋರಾಟಗಾರರೊಂದಿಗೆ ಸಭೆ

ಇತ್ತೀಚೆಗೆ ಸಚಿವ ಎನ್.ಚಲುವರಾಯಸ್ವಾಮಿ ಬಾಡೂಟ ಹೋರಾಟಗಾರ ರೊಂದಿಗೆ ಸಭೆ ಸಹ ನಡೆಸಿ, ನಿಮ್ಮ ಒತ್ತಾಯ ಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದರು. ಜತೆಗೆ ಕಳೆದ ವರ್ಷ ಮಾಜಿ ಸಚಿವ ಅಂಬರೀಷ್ ಪುತ್ರ ಅಭಿಷೇಕ್ ಅವರ ಬೀಗರೂಟದ ವೇಳೆ ನಡೆದ ಗೊಂದಲ- ಗೋಜು ಸಭೆಯಲ್ಲಿ ಬಾಡೂಟ ಪ್ರಿಯರ ಗಮನಕ್ಕೆ ತಂದಿದ್ದಾರೆ. ಒಂದು ವೇಳೆ ವ್ಯವಸ್ಥೆಯಲ್ಲಿ ಸ್ವಲ್ಪ ಲೋಪವಾದರೂ ದೊಡ್ಡ ಸಮಸ್ಯೆ ಎದುರಾಗುತ್ತದೆ. ಜೊತೆಗೆ ಜಿಲ್ಲೆಗೆ ಹಾಗೂ ಸಮ್ಮೇಳನಕ್ಕೆ ಕೆಟ್ಟ ಹೆಸರು ಬರಲಿದೆ ಎಂಬ ಆತಂಕ ಸಹ ಇದೆ. ಇದಕ್ಕೆ ಹೋರಾಟಗಾರರು ಪಂಕ್ತಿ ಊಟ ಇರಲ್ಲ. ಸಾಲಿನಲ್ಲಿ ಊಟ ಪಡೆಯಬೇಕಿರುತ್ತದೆ. ಹಾಗಾಗಿ ಕಡೆ ದಿನ ಚಿಕನ್ ಊಟ ಮತ್ತು ಒಂದು ಬೇಯಿಸಿದ ಮೊಟ್ಟೆ ಕೊಡಿ.ಈ ರೀತಿ ಕೊಟ್ಟರೆ ಯಾವ ಸಮಸ್ಯೆ ಆಗಲ್ಲ ಎಂಬ ಬೇಡಿಕೆ ಇಟ್ಟಿದ್ದಾರೆ. ಸಚಿವರು ಈ ಬಗ್ಗೆ ಚಿಂತನೆ ನಡೆಸುವುದಾಗಿ ಹೇಳಿದ್ದಾರೆ.

ಸಮ್ಮೇಳನಾಧ್ಯಕ್ಷ ಗೊ.ರು.ಚ.ಗೆ ಪೂರ್ಣಕುಂಭದ ಸ್ವಾಗತ

ಮಂಡ್ಯ: ಸಮ್ಮೇಳನದ ಸರ್ವಾಧ್ಯಕ್ಷ ಹಾಗೂ ಹಿರಿಯ ಸಾಹಿತಿ ಗೊ.ರು.ಚನ್ನಬಸಪ್ಪ ಅವರಿಗೆ ಮಂಡ್ಯದಲ್ಲಿ ಗುರುವಾರ ಆತ್ಮೀಯ ಸ್ವಾಗತ ಕೋರಲಾಯಿತು.

ಮಂಡ್ಯದ ಸಾಂಜೋ ಆಸ್ಪತ್ರೆ ಬಳಿ ಸಮ್ಮೇಳನಾಧ್ಯಕ್ಷ ಗೊ.ರು ಚನ್ನಬಸಪ್ಪ ಅವರನ್ನು ಪೂರ್ಣಕುಂಭ ಸ್ವಾಗತದೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಶಿ ಹಾಗೂ ಇತರ ಗಣ್ಯರು ಆತ್ಮೀಯವಾಗಿ ಬರಮಾಡಿಕೊಂಡರು. ಸ್ವಾಗತದ ವೇಳೆ ಜಾನಪದ ಕಲಾತಂಡಗಳು, ಗಾರುಡಿ ಗೊಂಬೆಗಳ ಕಲಾವಿದರು ಪಾಲ್ಗೊಂಡಿದ್ದರು. ಶಾಸಕರಾದ ನರೇಂದ್ರ ಸ್ವಾಮಿ, ರವಿಕುಮಾರ್(ಗಣಿಗ), ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮಂಡ್ಯ ಜಿಲ್ಲಾಧಿಕಾರಿ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ತನ್ವೀರ್ ಆಸೀಫ್ ಮತ್ತಿತರರು ಇದ್ದರು.



ಕಸಾಪ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರಿಗೆ ಗುರುವಾರ ಮಂಡ್ಯ ಸಚಿವ ಚಲುವರಾಯಸ್ವಾಮಿ ನೇತೃತ್ವದಲ್ಲಿ ಸ್ವಾಗತ ಕೋರಲಾಯಿತು.

ಮಕ್ಕಳಿಂದ ಪುಷ್ಪಗುಚ್ಛ

ಸಮ್ಮೇಳನಾಧ್ಯಕ್ಷರು ಮಂಡ್ಯ ನಗರ ಪ್ರವೇಶಿಸುತ್ತಿದ್ದಂತೆ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಸಮ್ಮೇಳನಾಧ್ಯಕ್ಷರಿಗೆ ಪುಷ್ಪಗುಚ್ಛ ನೀಡಿ ಸ್ವಾಗತ ಕೋರಿದರು. ನಂತರ ಗೊ.ರು.ಚ. ಅವರನ್ನು ಜಿಲ್ಲಾಧಿಕಾರಿ ನಿವಾಸಕ್ಕೆ ಕರೆದೊಯ್ದು ಅತಿಥಿ ಸತ್ಕಾರ ನೀಡಲಾಯಿತು.

ಪ್ರತಿ ಕಂಬದಲ್ಲೂ ಕವಿ, ಸಾಹಿತಿಗಳ ಚಿತ್ರಣ

ಮಂಡ್ಯ: ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಕ್ಕರೆಯ ನಾಡು ಸಿದ್ಧವಾಗಿದ್ದು, ಕನ್ನಡದ ಕಂಪು ಸಾರಲಿದೆ.

ಕಂಬಗಳಿಗೆ ನಾಡಿನ ಗಣ್ಯರ ಭಾವಚಿತ್ರ ಹಾಕುವ ಮೂಲಕ ಮಂಡ್ಯದ ಜನತೆ ಕನ್ನಡಪ್ರೇಮ ಮೆರೆದಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕುವೆಂಪು, ಶಿವರಾಮ ಕಾರಂತ, ದ.ರಾ. ಬೇಂದ್ರೆ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ವಿ.ಕೃ ಗೋಕಾಕ್, ಯು.ಆರ್ ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ ಅವರ ಭಾವಚಿತ್ರಗಳ ಜತೆಗೆ ಅವರ ಕವಿತೆಗಳ ಸಾಲುಗಳನ್ನು ಸಹ ಬರೆಯಲಾಗಿದೆ.

ರಾಷ್ಟ್ರಕವಿಗಳಾದ ಗೋವಿಂದ ಪೈ, ಜಿ.ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ಕನ್ನಡದ ಕಟ್ಟಾಳು ಪಾಟೀಲ ಪುಟ್ಟಪ್ಪ, ಮಂಕುತಿಮ್ಮನ ಕಗ್ಗದ ಡಿ.ವಿ.ಜಿ., ಆಲೂರು ವೆಂಕಟರಾಯರ ಭಾವಚಿತ್ರಗಳು ಗಮನ ಸೆಳೆಯುತ್ತಿವೆ. ಜೊತೆಗೆ ಹಾವೇರಿ ಜಿಲ್ಲೆಯ ಮಹನೀಯರಾದ ಸರ್ವಜ್ಞ, ಕನಕದಾಸ, ಶಿಶುನಾಳ ಶರೀಫ ಅಂಬಿಗರ ಚೌಡಯ್ಯರ, ಹೊಸಮನಿ ಸಿದ್ದಪ್ಪ ಮತ್ತು ಚಂಪಾ ಭಾವಚಿತ್ರಗಳು ನಾಡಿನ ಪ್ರೇಮ ಹೆಚ್ಚಿಸುತ್ತಿವೆ.

ಮಧುಮಗಳಂತೆ ಸಿಂಗಾರಗೊಂಡ ಮಂಡ್ಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಶುಕ್ರವಾರದಿಂದ ಆರಂಭಗೊಳ್ಳಲಿದ್ದು, ಇದಕ್ಕಾಗಿ ಮಂಡ್ಯ ನಗರ ಅಲಂಕಾರದಿಂದ ಕಂಗೊಳಿಸುತ್ತಿದೆ. ನಗರದ ಸರಕಾರಿ ಕಚೇರಿಗಳ ಗೋಡೆಗಳ ಮೇಲೆ ವಿವಿಧ ಕಲಾಕೃತಿಗಳು, ನಾಡಿನ ಹೆಸರಾಂತ ಸಾಹಿತಿಗಳು, ಗಣ್ಯರ ಚಿತ್ರಗಳನ್ನು ಗೋಡೆಯ ಮೇಲೆ ಬಿಡಿಸಲಾಗಿದೆ.

ದೀಪಾಲಂಕಾರಕ್ಕೆ ಚಾಲನೆ

ಮಂಡ್ಯ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಮಂಡ್ಯದಲ್ಲಿನ ವಿದ್ಯುತ್ ದೀಪಾಲಂಕಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಹಾಗೂ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಚಲುವರಾಯಸ್ವಾಮಿ ಅವರು ನಗರದ ಸಂಜಯ ವೃತ್ತದಲ್ಲಿ ಚಾಲನೆ ನೀಡಿದರು.

ಶಾಸಕರಾದ ನರೇಂದ್ರಸ್ವಾಮಿ, ರಮೇಶ್‌ಬಾಬು ಬಂಡಿಸಿದ್ದೇಗೌಡ, ರವಿಕುಮಾರ್ ಗಣಿಗ, ಜಿಲ್ಲಾಧಿಕಾರಿ ಡಾ. ಕುಮಾರ್, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ನಹೀಮ್, ಚಿದಂಬರಂ, ಮೈಶುಗರ್ ಕಂಪನಿ ಅಧ್ಯಕ್ಷ ಸಿ.ಡಿ.ಗಂಗಾಧರ್ ಸೇರಿದಂತೆ ಹಲವು ಗಣ್ಯರು ಇದ್ದರು.

ದಸರಾದ ವಿಶೇಷ ದೀಪಾಲಂಕಾರದ ಮಾದರಿಯಲ್ಲಿ ಚೆಸ್ಕಾಂ ವತಿಯಿಂದ ನಗರದ ರಸ್ತೆಗಳಿಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು ಸಮ್ಮೇಳನ ನಡೆಯುವ ಮೂರು ದಿನವೂ ದೀಪಾಲಂಕಾರ ಇರಲಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ. ವಿಶ್ವೇಶ್ವರಯ್ಯನವರ ಕಲಾಕೃತಿ, ಜ್ಞಾನಪೀಠ ಪುರಸ್ಕೃತರ ಭಾವಚಿತ್ರಗಳು ದೀಪಾಲಂಕಾರದ ಪ್ರಮುಖ ಆಕರ್ಷಣೆಯಾಗಿವೆ.



ಆಕರ್ಷಕ ದೀಪಗಳಿಂದ ಜಗಮಗಿಸುತ್ತಿರುವ ಸಮ್ಮೇಳನದ ಮುಖ್ಯ ದ್ವಾರ.

ಜನರ ಮನ ಸೆಳೆಯುತ್ತಿರುವ ದೀಪಾಲಂಕೃತ ಸರ್ ಎಂ.ವಿಶ್ವೇಶ್ವರಯ್ಯನವರ ಬೃಹತ್ ಚಿತ್ರ.

ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಕರ್ನಾಟಕದ ನಕ್ಷೆ ಮತ್ತು ಜ್ಞಾನಪೀಠ ಪುರಸ್ಕೃತ ಸಾಹಿತಿಗಳ ಚಿತ್ರಗಳು.

ವಿಶ್ವವಾಣಿ

ಸಂಪಾದಕೀಯ

ಸುನಾದವಿರಲಿ, ಉನ್ಮಾದವೇಕೆ?

ಒಂದಾದ ಮೇಲೆ ಒಂದರಂತೆ ಎರಡು ಅನಪೇಕ್ಷಿತ ಘಟನೆಗಳಿಗೆ ಸಾಕ್ಷಿಯಾಗಬೇಕಾಗಿ ಬಂದಿದೆ ನಮ್ಮಂಥ ಶ್ರೀಸಾಮಾನ್ಯರು. ಅವು, ಪ್ರಜಾಪ್ರಭುತ್ವದ ದೇಗುಲವೆಂದೇ ಕರೆಯಲ್ಪಡುವ ಎರಡು ಪ್ರಜಾಪ್ರತಿನಿಧಿ ಸಭೆಗಳಲ್ಲಿ ಘಟಿಸಿರುವಂಥವು ಎಂಬ ಅಂಶ ನಿಜಕ್ಕೂ ಆತಂಕಕಾರಿ. ಅಂಬೇಡ್ಕರ್ ವಿಷಯವಾಗಿ ಸಂಸತ್ತಿನಲ್ಲಿ ಶುರುವಾದ ಹುಯಿಲು, ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವಿನ ಗದ್ದಲ-ಗಲಾಟೆಯಾಗಿ ಬೆಳೆದು, ಬಿಜೆಪಿ ಸಂಸದರು ಮತ್ತು ಪ್ರತಿಭಟನಾನಿರತ ವಿಪಕ್ಷಗಳ ಸದಸ್ಯರು ಸಂಸತ್ತಿನ ಮಕರದ್ವಾರದ ಸಮ್ಮುಖದಲ್ಲಿ ಮುಖಾಮುಖಿಯಾದಾಗ, ಬಿಜೆಪಿ ಸಂಸದ ಪ್ರತಾಪ್‌ಚಂದ್ರ ಸಾರಂಗಿ ಅವರು ಕಾರಣಾಂತರಗಳಿಂದ ಕೆಳಗೆ ಬಿದ್ದು ತಲೆಗೆ ಗಾಯ ಮಾಡಿಕೊಳ್ಳುವುದರೊಂದಿಗೆ ಪರ್ಯವಸಾನಗೊಂಡಿದೆ. ಇದು ಉಭಯ ಪಾಳಯಗಳಿಂದ ಮತ್ತಷ್ಟು ಆರೋಪ-ಪ್ರತ್ಯಾರೋಪಗಳು ಹೊಮ್ಮುವುದಕ್ಕೂ ಕಾರಣವಾಗಿದೆ. ಇನ್ನು, ಬೆಳಗಾವಿಯಲ್ಲಿ ನಡೆಯುತ್ತಿರುವ ಕರ್ನಾಟಕ ವಿಧಾನಸಭೆಯ ಚಳಿಗಾಲದ ಅಧಿವೇಶನವೂ ಇಂಥದೊಂದು ಕೋಲಾಹಲಕ್ಕೆ ಸಾಕ್ಷಿಯಾಗಿದೆ. ಅಂಬೇಡ್ಕರ್ ಕುರಿತು ಕೇಂದ್ರ ಗೃಹಸಚಿವ ಅಮಿತ್ ಶಾ ಆಡಿದರೆನ್ನಲಾದ ಅವಹೇಳನಕಾರಿ ಮಾತುಗಳನ್ನು ಖಂಡಿಸಿ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸುತ್ತಿದ್ದಾಗ ಬಿಜೆಪಿ ಸದಸ್ಯ ಸಿ.ಟಿ. ರವಿ ಅವರು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಉದ್ದೇಶಿಸಿ ಅಶ್ಲೀಲ ಪದವನ್ನು ಬಳಸಿದರು ಎನ್ನಲಾಗಿದೆ. ಈ ಬೆಳವಣಿಗೆಯು ಪರಿಸ್ಥಿತಿ ಮತ್ತಷ್ಟು ಹದಗೆಡಲು ಕಾರಣವಾಗಿದೆ ಮತ್ತು ಕಾಂಗ್ರೆಸ್‌ನ ಕೆಲ ಕಾರ್ಯಕರ್ತರು ರವಿಯವರನ್ನು ಮುತ್ತಿಗೆ ಹಾಕಲು ಯತ್ನಿಸಿದ ದೃಶ್ಯಾವಳಿಯೂ ಬಿತ್ತರವಾಗಿದೆ. ಇಲ್ಲಿ ಉಲ್ಲೇಖಿಸಿರುವ ಎರಡೂ ಪ್ರಸಂಗಗಳಲ್ಲಿ ತಪ್ಪು ಆಗಿದ್ದು ಹೇಗೆ ಮತ್ತು ಯಾರಿಂದ ಎನ್ನುವುದು ಕೂಲಂಕಷ ತನಿಖೆಯಿಂದ ಗೊತ್ತಾಗಲಿದೆ. ಆದರೆ, ಪ್ರಜಾಪ್ರಭುತ್ವದ ದೇಗುಲಗಳಲ್ಲಿ ಇಂಥ ಬೆಳವಣಿಗೆಯಾಗದಂತೆ ನೋಡಿಕೊಳ್ಳುವುದು ತಮ್ಮ ಹೆಗಲ ಮೇಲಿನ ಹೊಣೆಯ ನೊಗ ಎಂಬುದನ್ನು ಜನಪ್ರತಿನಿಧಿಗಳು ಇನ್ನಾದರೂ ಅರ್ಥಮಾಡಿಕೊಳ್ಳಲಿ. ರಾಜಕೀಯ ಕ್ಷೇತ್ರ ಎಂದ ಮೇಲೆ ಆರೋಪ-ಪ್ರತ್ಯಾರೋಪಗಳು, ಟೀಕೆ-ಟಿಪ್ಪಣಿಗಳು ಇರುವಂಥದ್ದೇ; ಆದರೆ ಅವು ಆರೋಗ್ಯಕರವಾಗಿರಬೇಕು. ಅದನ್ನು ಬಿಟ್ಟು ಸಂಯಮದ ಬೇಲಿಯನ್ನು ಯಾರೂ ದಾಟುವಂತಾಗಬಾರದು ಅಥವಾ ಕೈಕೈ ಮಿಲಾಯಿಸುವ ಮಟ್ಟಕ್ಕೆ ಹೋಗುವಂತಾಗಬಾರದು.

ಸೊಂಪಾದಕೀಯ

ಅಮಿತ್ ಅಂಬೇಡ್ಕರ್ ಶಾ!

ಬಿಜೆಪಿ ಮತ್ತು ಅಂಬೇಡ್ಕರ್ ಅನ್ನೋ ಹೆಸರಿನ ಮಧ್ಯದ ಸಂಬಂಧ ಅಷ್ಟಕ್ಕಷ್ಟೇ ಅನ್ನೋದು ಎಲ್ಲರಿಗೂ ಗೊತ್ತಿರೋ ವಿಚಾರ. ಇದು ಈಗ ಲೋಕಸಭೆಯಲ್ಲಿ ಮತ್ತೊಮ್ಮೆ ಸಾಬೀತಾಗಿದೆ. ಗೃಹಮಂತ್ರಿ ಮತ್ತು ಬಿಜೆಪಿ ನಾಯಕ ಅಮಿತ್ ಶಾ ಅವರಿಗೆ ಪಾಪ ಎಲ್ಲರೂ ಅಂಬೇಡ್ಕರ್‌ರ ಹೆಸರನ್ನು ಸ್ಮರಿಸೋದು ಬೇಸರ ತಂದಿದೆಯಂತೆ. 'ಮಾತು ಮಾತಿಗೆ ಅಂಬೇಡ್ಕರ್ ಜಪ ಮಾಡೋದು ಯಾಕೆ? ಅದರ ಬದಲು ದೇವರ ನಾಮಜಪ ಮಾಡಿದ್ರೆ ಸ್ವರ್ಗನಾದ್ರೂ ಸಿಗುತ್ತೆ' ಅಂತ ನಾಲಿಗೆ ಹರಿಬಿಟ್ಟು ಈಗ ಎಲ್ಲರ ಬಾಯಿಗೆ ಆಹಾರ ಆಗಿದ್ದಾರೆ ಅಮಿತ್ ಶಾ. ಈ ವಿಷಯ ಈಗ ಕೇವಲ ವಿಪಕ್ಷಗಳ ಪಾಲಿನ ಅಸ್ತ್ರ ಆಗಿರೋದಲ್ಲದೆ, ಸೋಷಿಯಲ್ ಮೀಡಿಯಾಗಳಲ್ಲಿ ಕೂಡಾ ವಿರೋಧಕ್ಕೆ ಕಾರಣ ಆಗಿದೆ. ಜನ ಅಂಬೇಡ್ಕರ್‌ರ ಹೆಸರನ್ನು ನೂರಾರು ಬಾರಿ ಮೆನ್ಶನ್ ಮಾಡಿ ಅಮಿತ್ ಶಾ ಅವರನ್ನು ಟ್ಯಾಗ್ ಮಾಡಿ ತಮ್ಮ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. 'ಸಂವಿಧಾನ ವಿರೋಧಿ' ಅಂತಲೇ ಪಟ್ಟ ಕಟ್ಟಿಕೊಂಡಿರೋ ಬಿಜೆಪಿ ಪಟ್ಟಕ್ಕೆ ಏರಿದ ಮೇಲೆ ಅದನ್ನು ಹಲವು ಬಾರಿ ತೋರಿಸಿಕೊಂಡಿದೆ. ಅಮಿತ್ ಶಾ ಕೂಡಾ ಅಂಬೇಡ್ಕರ್ ಅವರ ವಿಷಯಕ್ಕೆ ಬಾಯಿ ಹಾಕಿ, ಈಗ ಸೋಷಿಯಲ್ ಮೀಡಿಯಾ ಟ್ಯಾಗ್‌ಗಳನ್ನು ನೋಡಿ, 'ಅಂಬೇಡ್ಕರ್ ಬಗ್ಗೆ ಮಾತಾಡಲ್ಲ, ಬಿಟ್ಟುಬಿಡ್ರೋ' ಅಂತ ಬೇಡ್ಕೊಳ್ಳೋ ಪರಿಸ್ಥಿತಿಗೆ ಬಂದಿದ್ದಾರೆ. ಆಗಾಗ ಸಂವಿಧಾನ ಬದಲಾಯಿಸೋ ಮಾತಾಡೋ ಅಮಿತ್ ಶಾ ಅವರಿಗೆ ಅಂಬೇಡ್ಕರ್ ಬಗೆಗಿನ ತಮ್ಮ ಅಸಮಾಧಾನವನ್ನು ತೋರಿಸಿಕೊಳ್ಳುವ ವಿಧಾನ ಗೊತ್ತಿಲ್ಲದೆ ಎಡವಟ್ಟು ಮಾಡಿಕೊಂಡಿದ್ದಾರೆ. ಆದರೆ 'ಹೂವಿನ ಜತೆ ನಾರೂ ಸ್ವರ್ಗಕ್ಕೆ ಹೋಯ್ತು' ಅನ್ನೋ ಹಾಗೆ ಅಂಬೇಡ್ಕರ್ ಹೆಸರಿನ ಜತೆ ತಮ್ಮ ಹೆಸರೂ ಫೇಮಸ್ ಆಗ್ತಿದೆ ಅಂತ ಅವರು ಒಳಗೊಳಗೇ ಖುಷಿಪಟ್ಟಿದ್ರೂ ಆಶ್ಚರ್ಯವಿಲ್ಲ. ಆದರೆ, ಈ ಎಲ್ಲ ವಿವಾದವನ್ನು ಗಮನಿಸುತ್ತಿರೋ ಯೋಗಿ ಆದಿತ್ಯನಾಥ್ ಅವರು, ''ಅಮಿತ್ ಶಾ ಅವರೇ, ಜನ ದೇವರ ಜಪ ಬಿಟ್ಟು ಅಂಬೇಡ್ಕರ್ ಜಪ ಮಾಡ್ತಾರೆ ಅಂತ ಯಾಕೆ ಬೇಸರ ಮಾಡಿಕೊಳ್ತೀರಿ? ನಾಳೆಯಿಂದ ಅಂಬೇಡ್ಕರ್ ಹೆಸರನ್ನ 'ದೇವರು' ಅಂತ ಬದಲಾಯಿಸ್ತೀನಿ ಬಿಡಿ'' ಅಂತ ಹೇಳಿಕೆ ಕೊಟ್ಟಿರೋ ಬಗ್ಗೆ ಮಾತ್ರ ಮಾಹಿತಿ ಇಲ್ಲ.

ಸಂಪಾದಕರ ಸದ್ಯಶೋಧನೆ

ಜಪಾನ್ ಎಂಬ ಭಿನ್ನ ಪ್ರಪಂಚ

ಪ್ರತಿ ದೇಶವೂ ಒಂದಿಲ್ಲೊಂದು ಕಾರಣಗಳಿಗೆ ಗಮನ ಸೆಳೆಯುತ್ತದೆ. ಆ ದೇಶಗಳು ತಮ್ಮ ವೈಶಿಷ್ಟ್ಯಗಳಿಂದ ಪ್ರಸಿದ್ಧಿಯನ್ನು ಪಡೆಯುವುದು ಸಹಜ. ಬಹುಶಃ ಜಪಾನ್ ಅತ್ಯಂತ ವಿಲಕ್ಷಣ ದೇಶಗಳಲ್ಲಿ ಒಂದಾಗಿದೆ. ಇದನ್ನು ವಿಶ್ವದೆಲ್ಲೆಡೆ 'ಸೂರ್ಯ ಉದಯಿಸುವ ನಾಡು' (ಲ್ಯಾಂಡ್ ಆಫ್ ದಿ ರೈಸಿಂಗ್ ಸನ್) ಎಂದು ಕರೆಯುತ್ತಾರೆ. ಹಾಗೆಯೇ ಇದನ್ನು 'ಹಾಡುವ ಶೌಚಾಲಯಗಳ ನಾಡು' (Land of singing toilets), 'ನೀಲಿ ಟ್ರಾಫಿಕ್‌ಲೈಟ್‌ನ ದೇಶ' ಅಥವಾ 'ವೆಂಡಿಂಗ್ ಮಷೀನುಗಳ ದೇಶ' ಎಂದೂ ಕರೆಯುವುದುಂಟು. ಜಪಾನ್ ಒಂದು ಅನನ್ಯ ದೇಶ ಎಂಬುದರಲ್ಲಿ ಎರಡು ಮಾತಿಲ್ಲ. ಕಾರಣ ಅದು ಪ್ರಪಂಚದ ಇತರ ದೇಶಗಳಿಗಿಂತ ಭಿನ್ನವಾಗಿದೆ. ಜಪಾನಿನ ರೈತರು ಚೌಕಾಕಾರದ ಕಲ್ಲಂಗಡಿಗಳನ್ನು ಬೆಳೆಯುತ್ತಾರೆ, ನಿಜವಾದ ಆಹಾರಕ್ಕಿಂತ ನಕಲಿ (Fake) ಆಹಾರಗಳೇ ಬಾಯಲ್ಲಿ ನೀರೂರಿಸುತ್ತವೆ, ಜಪಾನಿನಲ್ಲಿ ನಿಜವಾದ ಆಹಾರಗಳಿಗಿಂತ ಅಂಥ ನಕಲಿ ಆಹಾರಗಳೇ ಹೆಚ್ಚು ದುಬಾರಿ, ಸಣ್ಣ ಉಪಕಾರಕ್ಕೂ ನಡು ಬಗ್ಗಿಸಿ ಕೃತಜ್ಞತೆಯನ್ನು ಸೂಚಿಸುತ್ತಾರೆ, ಜನರು ಕಟ್ಟಡದ ಒಳಗೆ ಹೋಗುವ ಮೊದಲು ತಮ್ಮ ಛತ್ರಿಯನ್ನು ಪ್ರತ್ಯೇಕ ಪಾರ್ಕಿಂಗ್ ರಾಕ್‌ನಲ್ಲಿ ನಿಲ್ಲಿಸಿ ಲಾಕ್ ಮಾಡುತ್ತಾರೆ, ಸಿದ್ಧ ಆಹಾರವನ್ನು ಕ್ಯಾನ್‌ನಲ್ಲಿ ನೀಡುವ ದೇಶವ್ಯಾಪಿ ರೆಸ್ಟೋರೆಂಟ್‌ಗಳ ಸರಪಣಿಯಿದೆ, ಯಾರೂ ಧನ್ಯವಾದಗಳನ್ನು ಕೃತಕವಾಗಿ ಹೇಳುವುದಿಲ್ಲ, ಗಲೀಜಾಗಿರುವ ಟಾಯ್ಲೆಟ್‌ಗಳನ್ನು ನೋಡಲು ಸಾಧ್ಯವಿಲ್ಲ, ರೈಲು ಹತ್ತು ನಿಮಿಷ ತಡವಾಗಿ ಆಗಮಿಸಿದರೆ ಮರುದಿನ ಮುಖಪುಟ ಸುದ್ದಿಯಾಗುತ್ತದೆ ಮತ್ತು ರೈಲ್ವೆ ಕಂಪನಿ ಕ್ಷಮೆಯಾಚಿಸುತ್ತದೆ, ಇಲಿಗಳಿಗಾಗಿಯೇ ಒಂದು ದ್ವೀಪವನ್ನು ಮೀಸಲಿಡಲಾಗಿದೆ, ನೀವು ಹಾಡುವ ಹಾಡು ನಿಮಗೊಂದೇ ಕೇಳಬೇಕು ಅಂದರೆ ಸೈಲೆಂಟ್ ಕರೋಕೆ ಉಪಕರಣವನ್ನು ಬಳಸಿ ಹಾಡಬಹುದು, ಪುರಿಕುರ ಎಂದು ಕರೆಯುವ ಫೋಟೋ ಬೂತ್‌ನಲ್ಲಿ ನಮಗೆ ಬೇಕಾದ ಫೋಟೋಗಳನ್ನು ಎಡಿಟ್ ಮಾಡಿಕೊಳ್ಳಬಹುದು ಮತ್ತು ನಮ್ಮ ಫೋಟೋವನ್ನು ಕಮೋಡಿಗೆ ಅಂಟಿಸಿಕೊಳ್ಳಬಹುದು, ವೆಂಡಿಂಗ್ ಮಷೀನುಗಳಿಂದ ನೀರು, ಪೆಪ್ಸಿ, ಸಾಫ್ಟ್ ಡ್ರಿಂಕ್ಸ್ ಮಾತ್ರವಲ್ಲ, ಮೀನು, ಏಡಿಗಳಿಂದ ಹಿಡಿದು ನಿಕ್ಕರುಗಳನ್ನೂ ಪಡೆಯಬಹುದು, ಆಹಾರಗಳನ್ನು ಸೇವಿಸುವಾಗ ಮುಖ, ಮೀಸೆಗೆ ಅಂಟಿಕೊಳ್ಳುವ ಆಹಾರ ಪದಾರ್ಥಗಳು ಕಾಣದಂತೆ ಫೇಸ್ ನ್ಯಾಪ್ಕಿನ್ ಬಳಸುತ್ತಾರೆ, ಜಪಾನಿನಲ್ಲಿ ತಯಾರಿಸಿದ ಸಾಮಾನುಗಳ ಮೇಲೆ ಬೇಕಾಬಿಟ್ಟಿ 'ಮೇಡ್ ಇನ್ ಜಪಾನ್' ಎಂದು ಬರೆಯುವಂತಿಲ್ಲ, ಅದಕ್ಕೂ ಅನುಮತಿ ಬೇಕು. ಏಕೆಂದರೆ 'ಮೇಡ್ ಇನ್ ಜಪಾನ್' ಎಂಬುದೇ ಒಂದು ಬ್ರ್ಯಾಂಡ್, ನಿದ್ದೆ ಬಂದರೆ ಆಫೀಸಿನಲ್ಲಿಯೇ ಗಂಟೆಗಟ್ಟಲೆ ಮಲಗಬಹುದು ಮತ್ತು ಹೀಗೆ ಮಲಗುವವರನ್ನು ಅತ್ಯಂತ ವಿಧೇಯ ಮತ್ತು ಕಷ್ಟಪಟ್ಟು ಕೆಲಸ ಮಾಡುವ ಸಿಬ್ಬಂದಿ ಎಂದು ಪರಿಗಣಿಸಲಾಗುತ್ತದೆ, ಜಪಾನಿನಲ್ಲಿ ಐವತ್ತು ಮಹಡಿಗಳಿರುವ ಗಗನಚುಂಬಿ ಕಟ್ಟಡಗಳಿದ್ದರೂ ನಾಲ್ಕನೇ ಮಹಡಿ ಮಾತ್ರ ಇರುವುದಿಲ್ಲ, ಕಾರಣ ನಾಲ್ಕನೇ ಸಂಖ್ಯೆ ಅಪಶಕುನ ಎಂದು ಪರಿಗಣಿಸಿರುವುದು, ಇದೇ ಕಾರಣಕ್ಕೆ ನಾಲ್ವರು ಒಟ್ಟುಗೂಡಿ ಯಾವುದೇ ಒಳ್ಳೆಯ ಕೆಲಸಕ್ಕೆ ಹೋಗುವುದಿಲ್ಲ, ಕುದುರೆ ಮಾಂಸ, ಬೆಳ್ಳುಳ್ಳಿ, ನುಗ್ಗೆಕಾಯಿ, ಇದ್ದಿಲು, ಪಾಪಾಸುಕಳ್ಳಿ, ಜೀರಿಗೆ, ಕೊತ್ತಂಬರಿ, ಶುಂಠಿ ಮುಂತಾದ ಚಿತ್ರ ವಿಚಿತ್ರವಾದ ಸ್ವಾದ ಅಥವಾ ಫ್ಲೇವರ್ ಇರುವ ಐಸ್ ಕ್ರೀಮ್‌ಗಳು ಸಿಗುತ್ತವೆ, ಹೋಟೆಲಿನಲ್ಲಿ ರೊಬೋಟುಗಳೇ ವೇಟರುಗಳಂತೆ ಕೆಲಸ ಮಾಡುತ್ತವೆ, ಕಾಫಿಯನ್ನು ನೀವಿರುವ ಟೇಬಲ್‌ಗೆ ತಂದಿಡುತ್ತವೆ ಮತ್ತು ನಿಮ್ಮ ಲಗೇಜುಗಳನ್ನು ರೂಮಿಗೆ ತಲುಪಿಸುತ್ತವೆ, ಒಬ್ಬರೇ ಕುಳಿತು ಆಹಾರ ಸೇವಿಸಲು, ಕಾಫಿ ಕುಡಿಯಲು ಬೋರಾದರೆ ದೊಡ್ಡ ಟೆಡ್ಡಿ ಬೇರ್ ಜತೆ ಕುಳಿತು ಆಹಾರ ಸೇವಿಸಬಹುದು, ಸುರಿದು ಊಟ ಮಾಡುವುದು ಉತ್ತಮ ವರ್ತನೆಯಲ್ಲ ಎಂದು ನೀವು ಭಾವಿಸಿದರೆ ತಪ್ಪು, ಜಪಾನಿನಲ್ಲಿ ಅಡುಗೆಭಟ್ಟನಿಗೆ ಗೌರವ ಸೂಚಿಸಬೇಕು ಅಂತೆನಿಸಿದರೆ ನೂಡಲ್ ಸೇವಿಸುವಾಗ ಸುರ್ರ್ ಎಂದು ಸದ್ದು ಮಾಡಬೇಕು... ಇಂಥ ಯಾವುದೇ ಅಂಶಗಳನ್ನೂ ಬೇರೆ ದೇಶಗಳಲ್ಲಿ ನೋಡಲು ಸಾಧ್ಯವೇ ಇಲ್ಲ. ಇವೆಲ್ಲ ಅಪ್ಪಟ 'ಮೇಡ್ ಇನ್ ಜಪಾನ್'. ಸಂಕ್ಷಿಪ್ತವಾಗಿ ಹೇಳುವುದಾದರೆ, ಜಪಾನ್ ಉಳಿದೆಲ್ಲ ದೇಶಗಳಿಗಿಂತ ಸಂಪೂರ್ಣ ಭಿನ್ನ ಮತ್ತು ಈ ವಿಷಯದಲ್ಲಿ ಜಪಾನೇ ಒಂದು ಪ್ರಪಂಚ.

ಶಿಕಾಗೋ ಚಳಿಗಾಲ ಬಂತೆಂದರೆ ತಯಾರಿ ಒಂದೆರಡಲ್ಲ!

ಶಿಶಿರಕಾಲ

ಶಿಶಿರ್ ಹೆಗಡೆ
shishirh@gmail.com

ವಿವೇಕಾನಂದರು ಶಿಕಾಗೋದಲ್ಲಿದ್ದಾಗ ಚಳಿಗಾಲದಲ್ಲಿಯೂ ಐಸ್‌ಕ್ರೀಮ್ ತಿನ್ನುತ್ತಿದ್ದರಂತೆ ಎಂದು ಓದಿದ ನೆನಪು. ಅನಂತರದಲ್ಲಿ ಇದೇ ಉದಾಹರಣೆಯನ್ನು ಅವರ ಹಠಜೀವನದ ಬಗ್ಗೆ ಹೇಳುವಾಗ ಕೂಡ ಬಳಸಿಕೊಂಡದ್ದನ್ನು ಕಂಡಿದ್ದೇನೆ. ವಿವೇಕಾನಂದರು ಬಂದ ಹೊಸತರಲ್ಲಿ ಅವರನ್ನು ಸತ್ಕರಿಸಲು ಅಮೆರಿಕನ್ನರು ರೆಸ್ಟೋರೆಂಟ್‌ಗೆ ಕರೆದರೆ ಅವರಿಗೆ ಬಿಗುಮಾನ ಮತ್ತು ಹಿಂಜರಿಕೆ. ಅವರಿಗೆ ಐಸ್‌ಕ್ರೀಮ್ ಇಷ್ಟವಾಗಿದ್ದರಿಂದ ಐಸ್‌ಕ್ರೀಮ್-ಪಾರ್ಲರ್‌ಗಳಲ್ಲಿ ಅವರ ಜತೆಗಿನ ಮೀಟಿಂಗುಗಳು ನಡೆಯುತ್ತಿದ್ದವಂತೆ. ಹೀಗಾಗಿ ವಿವೇಕಾನಂದರ ಶಿಕಾಗೋ ಚಳಿಯ ಅನುಭವದ ಜತೆ ಐಸ್‌ಕ್ರೀಮ್ ಕೂಡ ತಳಕುಹಾಕಿಕೊಂಡಿದೆ. ಏನೇ ಇರಲಿ, ಶಿಕಾಗೋದ ಚಳಿಗಾಲದಲ್ಲಿ ಐಸ್‌ಕ್ರೀಮ್ ತಿನ್ನುವುದು ಇವತ್ತಿಗೂ ನಡೆದುಕೊಂಡು ಬಂದಿರುವ ಬಹುಜನರ ರೂಢಿ. ಬಿರುಬೇಸಗೆಯಲ್ಲಷ್ಟೇ ಅಲ್ಲ, -30 ಡಿಗ್ರಿ ಸೆಲ್ಸಿಯಸ್‌ನಲ್ಲಿಯೂ ಐಸ್‌ಕ್ರೀಮ್ ತಿಂದು ಸುಖಿಸಬಹುದು. ಆದರೆ ತಿನ್ನುವಾಗ ಬೆಚ್ಚಗಿನ ಮನೆ/ಹೋಟೆಲ್‌ನೊಳಕ್ಕೆ ಕೂತಿರಬೇಕು.

ಅಮೆರಿಕದ ಉತ್ತರದಲ್ಲಿರುವ ರಾಜ್ಯಗಳಲ್ಲಿ ಚಳಿಗಾಲವೆಂದರೆ ರಣಭೀಕರ. ಹಿಮಪಾತ, ಜತೆಗೆ ಸಹಿಸಲಸಾಧ್ಯವಾದ ಚಳಿ, ಐಸ್ ಮಳೆ. ಬೇಸಗೆಯಲ್ಲಿ ಸೆಕೆ. ಹಾಗಾಗಿ ಇಲ್ಲಿನ ಬಿಲ್ಡಿಂಗ್, ಬ್ರಿಡ್ಜ್, ರಸ್ತೆಯಿಂದ ಹಿಡಿದು ಕಾರಿನ ಟೈರ್‌ವರೆಗೆ ಎಲ್ಲವೂ ಈ ಹವಾಮಾನ ವೈಪರೀತ್ಯಕ್ಕೆ ತಕ್ಕಂತೆಯೇ ವಿನ್ಯಾಸಗೊಂಡಿರುತ್ತವೆ. ಆದರೆ ಜನರು, ಸರಕಾರ, ಗಿಡಮರಗಳು ಹಾಗಲ್ಲ; ಸದಾಕಾಲ ಮುಂದಿನ ಕಾಲಕ್ಕೆ ತಯಾರಾಗುತ್ತಿರಬೇಕು. ಅದರಲ್ಲಿಯೂ ಚಳಿಗಾಲದ ನಿರ್ವಹಣೆ ದೊಡ್ಡದು. ಹಿಮ ಬೀಳುವ ರಾಜ್ಯಗಳ ಸರಕಾರಗಳು ಚಳಿಗಾಲದ ನಿರ್ವಹಣೆಗೆಂದೇ ಒಂದಿಷ್ಟು ವಾರ್ಷಿಕ ಬಜೆಟ್ಟನ್ನು ಪ್ರತ್ಯೇಕವಾಗಿ ತೆಗೆದಿಟ್ಟಿರುತ್ತವೆ.

ಹಿಮ ಬೀಳುವ ಜಾಗದಲ್ಲಿ ಅವಶ್ಯವಾಗಿ ದಾಸ್ತಾನು ಮಾಡಿಟ್ಟುಕೊಳ್ಳಬೇಕಾದ ವಸ್ತುಗಳಲ್ಲಿ ಮೊದಲನೆಯದು ಉಪ್ಪು. ಉಪ್ಪಿಗೊಂದು ವಿಶೇಷ ಗುಣವಿದೆ. ಉಪ್ಪನ್ನು ಹಿಮದ ಅಥವಾ ಐಸ್‌ನ ಮೇಲೆ ಹಾಕಿದರೆ ಅದು ಘನೀಕೃತ ನೀರನ್ನು ಕರಗಿಸುತ್ತದೆ. ಈ ಪ್ರಕ್ರಿಯೆಯನ್ನು freezing point depression ಎನ್ನುತ್ತಾರೆ. ಐಸ್ ಮೇಲೆ ಉಪ್ಪನ್ನು ಹಾಕಿದಾಗ ಅದು ಮೇಲ್ಪದರವನ್ನು ಕರಗಿಸಿ ನಂತರ ಹಾಗೆ ಕರಗಿದ ಮೇಲ್ಪದರದ ನೀರು ಕೆಳಸ್ತರದ ಐಸ್ ಅನ್ನು ಕರಗಿಸುತ್ತ ಹೋಗುತ್ತದೆ. ಸಾಮಾನ್ಯವಾಗಿ ಹಿಮ ಬೀಳುವ ಪ್ರದೇಶಗಳಲ್ಲಿ ರಸ್ತೆಗಳು ಹೆಪ್ಪುಗಟ್ಟಿರುತ್ತವೆ. ಐಸ್ ಕರಗಿಸಲು ಉಪ್ಪು ಬೇಕು. ಈ ಕಾರಣದಿಂದ ಟನ್‌ಗಟ್ಟಲೆ ಶೇಖರಿಸಿಟ್ಟುಕೊಂಡಿರಬೇಕು. ರಸ್ತೆಯ ಮೇಲೆ ಬಿದ್ದ ಹಿಮವನ್ನು ಪಕ್ಕಕ್ಕೆ ಸರಿಸಲು, ಮೇಲಿಂದ ಉಪ್ಪು ಸಿಂಪಡಿಸಲು ವಿಶೇಷ ವಾಹನಗಳ ತಯಾರಿಯೂ ಆಗಿರಬೇಕು. ರಸ್ತೆಯೊಂದೇ ಅಲ್ಲ- ನಾವು ಓಡಾಡುವ ಎಲ್ಲ ಕಾಲುದಾರಿಗಳಲ್ಲೂ ಹಿಮಪಾತವಾದಾಗಲೆಲ್ಲ ಉಪ್ಪು ಬೀರಿಕೊಳ್ಳಬೇಕು. ಇನ್ನು ಕೆಲವೊಮ್ಮೆ ಹಿಮ ಬಿದ್ದ ನಂತರ ಮಳೆಬಂದರೆ ಅಥವಾ ಐಸ್ ಮಳೆಯಾದರೆ (ಆಲಿಕಲ್ಲು ಅಲ್ಲ- ಐಸ್ ಮಳೆಯೆಂದರೆ ತುಂತುರು ಐಸ್ ಬೀಳುವುದು), ಕೆಲವೇ ನಿಮಿಷದಲ್ಲಿ ಹತ್ತಿಪ್ಪತ್ತು ಡಿಗ್ರಿ ಉಷ್ಣಾಂಶ ಇಳಿದುಬಿಡುತ್ತದೆ. ಆಗ ನೆಲದ ಮೇಲೆಲ್ಲ ತೀರಾ ತೆಳ್ಳನೆಯ ಐಸ್ ಕಟ್ಟಿಬಿಡುತ್ತದೆ. ಆಗ ನೆಲ ನೋಡಲು ಸಹಜವಾಗಿ ಕಂಡರೂ, ಅದರ ಮೇಲೆ ಕಾಲಿಟ್ಟರೆ ಬಿದ್ದು ಸೊಂಟ ಮುರಿದುಕೊಳ್ಳಬೇಕಾಗುತ್ತದೆ.

ವಾಹನಗಳಿಗೆ ಹಿಮಕ್ಕೆ ಒಗ್ಗಿಕೊಳ್ಳುವ ಟೈರ್ ಹಾಕಿಕೊಳ್ಳಬೇಕು. ಹಿಮ ಸ್ಥಿತಿಗೆಂದೇ ತಯಾರಿಸಿದ ದೊಡ್ಡ ಗ್ರೂವ್ ಇರುವ ಚಕ್ರಗಳನ್ನು ಹಾಕಿಕೊಂಡರೆ ವಾಹನ ಐಸ್‌ನಿಂದ ಜಾರುವುದನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿಕೊಳ್ಳಬಹುದು. ಚಳಿಗಾಲದಲ್ಲಿ ವೈಪರ್‌ಗೆ ಸಿಂಪಡಿಸಲು ನೀರು ಬಳಸುವಂತಿಲ್ಲ, ತೀವ್ರ ಕಡಿಮೆ freezing point ಇರುವ ವಿಶೇಷ ದ್ರಾವಣವನ್ನೇ ಬಳಸಬೇಕು. ಇಲ್ಲದಿದ್ದರೆ ವಾಹನದಲ್ಲಿರುವ ನೀರೇ ಐಸ್ ಆಗಿ ಹಿಗ್ಗಿದಾಗ ಪೈಪ್‌ಗಳು ಒಡೆದುಬಿಡುತ್ತವೆ. ಇನ್ನು ಮನೆಯ ನೀರಿನ ಪೈಪ್‌ಗಳು ವಿಶೇಷದ್ದೇ ಆಗಿರಬೇಕು. ಎಲ್ಲ ಮನೆಯಲ್ಲೂ ನಿತ್ಯಬಳಕೆಗೆ ಬಿಸಿನೀರೇ ಬೇಕು. ನಲ್ಲಿಯಿಂದ ಬರುವ ನೀರು ಮುಟ್ಟಲಾಗದಷ್ಟು ತಂಪು. ಉಷ್ಣಾಂಶ ತೀರಾ ಕೆಳಕ್ಕಿಳಿದರೆ ನೀರು ಸರಬರಾಜು ಮಾಡುವ ಪೈಪ್ ಹೆಪ್ಪುಗಟ್ಟಿಬಿಡುತ್ತದೆ. ಅಂಥ ಸಂದರ್ಭದಲ್ಲಿ ಮನೆಯ ನಲ್ಲಿಗಳನ್ನು ಸಣ್ಣಗೆ ನೀರು ಹರಿಯುತ್ತಿರುವಂತೆ ಬಿಟ್ಟೇ ಇಡಬೇಕಾಗುತ್ತದೆ.

ಇನ್ನು ಮನೆಯಲ್ಲಿ ಸದಾ ಹೀಟರ್- ಬಿಸಿಗಾಳಿಯ ವ್ಯವಸ್ಥೆ ಓಡುತ್ತಲೇ ಇರಬೇಕು. ಮನೆಯಲ್ಲಿ ಜನರಿರಲಿ ಇಲ್ಲದಿರಲಿ ಹೀಟರ್ ಉರಿಯುತ್ತಲೇ ಇರಬೇಕು. ಅದೇನಾದರೂ ಕೆಟ್ಟು ನಿಂತರೆ ಕೆಲವೇ ಗಂಟೆಗಳಲ್ಲಿ ಅಲ್ಲಿರಲು ಅಸಾಧ್ಯ ಚಳಿಯಾಗುತ್ತದೆ. ಅಷ್ಟೇ ಅಲ್ಲ, ಹಾಗೆಯೇ ಬಿಟ್ಟರೆ ಮನೆಯೊಳಗಿನ ಎಲ್ಲಾ ದ್ರವಗಳೂ ಹೆಪ್ಪುಗಟ್ಟಿಬಿಡುತ್ತವೆ. ವಸ್ತುಗಳು ಹಾಳಾಗಿಬಿಡುತ್ತವೆ. ಕಿಟಕಿ ಬಾಗಿಲಿಗೆ ಚಿಕ್ಕ ಸಂದಿಯೂ ಇರುವಂತಿಲ್ಲ. ಹೊರ ಹೋಗಬೇಕೆಂದರೆ 2-3 ಪದರದ ಬಟ್ಟೆ ಧರಿಸಿ ಹೋಗದಿದ್ದಲ್ಲಿ ಕೈಕಾಲು ಮರಗಟ್ಟಿಹೋಗುತ್ತವೆ. ಹೀಗೆ ಸಾವಿರದೆಂಟು ವ್ಯವಸ್ಥೆಯಾದರಷ್ಟೇ ಜೀವಂತವಿರಲು ಸಾಧ್ಯ. ಈ ಇಡೀ ವ್ಯವಸ್ಥೆಯ ಪ್ರತಿಯೊಂದು ಭಾಗವೂ ಕೆಲಸಮಾಡಬೇಕು. ಒಂದೇ ಕೆಟ್ಟರೂ ಕಥೆ ಪಡ್ಚ. ಎಲ್ಲದಕ್ಕೂ ನಿರಂತರ ವಿದ್ಯುತ್ ಸರಬರಾಜಾಗುತ್ತಿರಬೇಕು. ಒಂದು ಗಂಟೆ ಕರೆಂಟ್ ಹೋಯಿತು ಎಂದರೂ ಮನೆಯೊಳಗೆ 10-15 ಡಿಗ್ರಿ ಉಷ್ಣಾಂಶ ಇಳಿದುಬಿಡುತ್ತದೆ. ಚಳಿಗಾಲವೆಂದರೆ ನಿರಂತರ ಐಸಿಯುನಲ್ಲಿಟ್ಟಂತೆ. ಇದು ತೀವ್ರ ಚಳಿಪ್ರದೇಶದ ಬದುಕು.

ಆದರೆ ಪ್ರಾಣಿಗಳಿಗೆ ಈ ಎಲ್ಲ ಐಷಾರಾಮಗಳಿಲ್ಲ. ಅವುಗಳದು ಅನನ್ಯ ಜೀವನಕ್ರಮ. ಕೆಲವು ಪ್ರಾಣಿ-ಪಕ್ಷಿಗಳು ಚಳಿಗಾಲ ಶುರುವಾಗುತ್ತಿದ್ದಂತೆ ಇಲ್ಲಿಂದ ಜಾಗ ಖಾಲಿಮಾಡುತ್ತವೆ. ಉಷ್ಣ ಪ್ರದೇಶಕ್ಕೆ ವಲಸೆ ಹೋಗುತ್ತವೆ. ಇನ್ನು ಕೆಲವು ಅಲ್ಲಿಯೇ ಇದ್ದು ದೇಹವನ್ನು ಋತುಮಾನಕ್ಕೆ ತಕ್ಕಂತೆ ಬದಲಿಸಿಕೊಂಡು ಬದುಕುತ್ತವೆ.

ಅಮೆರಿಕದ ಉತ್ತರ ರಾಜ್ಯಗಳ ಕಾಡುಗಳಲ್ಲಿ ಕರಡಿಗಳು ಸಾಮಾನ್ಯ. ಈ ಕರಡಿಗಳ ಚಳಿಗಾಲದ ಬದುಕು ತೀರಾ ವಿಚಿತ್ರ. ಇನ್ನೇನು ಚಳಿಗಾಲ ಶುರುವಾಗಬೇಕು, ಈ ಕರಡಿಗಳು ಹಗಲು ರಾತ್ರಿ ಲೆಕ್ಕವಿಲ್ಲದಷ್ಟು ತಿನ್ನುತ್ತವೆ. ಈ ಮೂಲಕ ತೂಕವನ್ನು ಮತ್ತು ದೇಹದ ಕೊಬ್ಬನ್ನು ಹೆಚ್ಚಿಸಿಕೊಳ್ಳುತ್ತವೆ. ಇದನ್ನು Hyperphagia ಎನ್ನಲಾಗುತ್ತದೆ. ಇದು ಕರಡಿ ಚಳಿಗಾಲಕ್ಕೆ ಮಾಡಿಕೊಳ್ಳುವ ತಯಾರಿ. ಕೆಲವೊಮ್ಮೆ ಆಹಾರ ಕಾಡಿನಲ್ಲಿ ಸಿಗದಿದ್ದರೆ ಊರಿಗೂ ಲಗ್ಗೆಯಿಡುವುದೂ ಇದೆ. ಈ ಸಮಯದಲ್ಲಿ ಕರಡಿಗಳು ತೀರಾ ಆಕ್ರಮಣಕಾರಿ. ಕಾಡಿನ ಅಂಚಿನಲ್ಲಿರುವ ಮನೆಗಳ ಕಿಟಕಿ ಒಡೆದು ಒಳ ನುಗ್ಗುವುದು, ಕಸದ ಬುಟ್ಟಿಗಳನ್ನು ಚೆಲ್ಲಾಪಿಲ್ಲಿ ಮಾಡುವುದು ಇವೆಲ್ಲ ಸಾಮಾನ್ಯ. ಹೀಗೆ ಕೊಬ್ಬಿದ ನಂತರ, ಚಳಿಗಾಲ ಶುರುವಾಗುತ್ತಿದ್ದಂತೆ ಈ ಕರಡಿಗಳು ಗುಹೆ ಸೇರಿಕೊಳ್ಳುತ್ತವೆ. ತಿಂಗಳಾನುಗಟ್ಟಲೆ, ಚಳಿಗಾಲ ಮುಗಿಯುವಲ್ಲಿಯವರೆಗೆ ಅಲ್ಲಿಯೇ ಊಟ ನೀರಿಲ್ಲದೇ ನಿದ್ರಿಸುತ್ತವೆ. ಈ ಸಮಯದಲ್ಲಿ ಕರಡಿಯ ದೇಹದ ಉಷ್ಣಾಂಶ ತೀವ್ರ ಇಳಿದುಬಿಡುತ್ತದೆ. ಉಸಿರಾಟ, ಹೃದಯ ಮಿಡಿತ ಎಲ್ಲವೂ ನಿಧಾನವಾಗುತ್ತದೆ. ದೇಹದಲ್ಲಿ ಶೇಖರಿಸಿಟ್ಟುಕೊಂಡ ಕೊಬ್ಬನ್ನು ದೇಹ ಲೆಕ್ಕಾಚಾರ ಮಾಡಿ ಬಳಸಿಕೊಳ್ಳುವ ಸಮಯವಿದು. ಅಲ್ಲದೇ ಒಂದು ಚೂರೂ ಅಲುಗಾಡದೇ ಇರುವುದರಿಂದ ಅವುಗಳ ಸುತ್ತಲಿನ ದೇಹದ ಶಾಖ ಅಷ್ಟು ಪೋಲಾಗುವುದಿಲ್ಲ. ಹೀಗೆಲ್ಲ ಸರ್ಕಸ್ ಮಾಡಿ ಕರಡಿಗಳು ಚಳಿಗಾಲವನ್ನು ಕಳೆಯುತ್ತವೆ. ನಂತರದ ಬೇಸಗೆಯಲ್ಲಿ ಮತ್ತೆ ಆಹಾರಕ್ಕಾಗಿ ಹೋರಾಟ. ಬೇಸಗೆಯಲ್ಲಿ ದೇಹ ಕೃಶವಾಗಿರುತ್ತದೆ. ಈ ರೀತಿ, ಕಾಲಕ್ಕೆ ದೇಹವನ್ನು ಒಗ್ಗಿಸಿಕೊಳ್ಳುವುದು ಒಂದು ರೀತಿ.

ಇನ್ನು ಹಕ್ಕಿಗಳ ಕಥೆ. ಹಲವಾರು ಹಕ್ಕಿಗಳು ಪ್ರತಿ ವರ್ಷ ಚಳಿಗಾಲ ಶುರುವಾಗುತ್ತಿದ್ದಂತೆ ದಕ್ಷಿಣಕ್ಕೆ- ಸಮಭಾಜಕ ವೃತ್ತದ ಕಡೆಗೆ ವಲಸೆ ಹೋಗುತ್ತವೆ. ಅಲ್ಲಿ ಹೋಗಿ, ಇದ್ದು, ಪುನಃ ಚಳಿ ಕಡಿಮೆಯಾಗುತ್ತಿದ್ದಂತೆ ಉತ್ತರಕ್ಕೆ ಪ್ರಯಾಣಿಸುತ್ತವೆ. ಆದರೆ ಕೆಲವು ಚಳಿ ಪ್ರದೇಶದ ಹಕ್ಕಿಗಳು ವಲಸೆ ಹೋಗುವುದಿಲ್ಲ. ಸಾವಿರಾರು ಮೈಲಿ ಹಾರಿ ಹೋಗುವುದು ಎಲ್ಲ ಹಕ್ಕಿಗಳಿಗೆ ಶಕ್ಯವಿರುವುದಿಲ್ಲ. ಹೀಗೆ ಉಳಿದುಕೊಳ್ಳುವ ಹಕ್ಕಿಗಳು ಕೂಡ ಕರಡಿ, ಜಿಂಕೆಗಳಂತೆ ದೇಹದ ಕೊಬ್ಬನ್ನು ಹೆಚ್ಚಿಸಿಕೊಳ್ಳುತ್ತವೆ. ಅಲ್ಲದೆ ದೇಹದಲ್ಲಿ ಉತ್ಪತ್ತಿಯಾಗುವ ಎಣ್ಣೆಯನ್ನು ಸವರಿಕೊಳ್ಳುವುದರ ಮೂಲಕ ಅವು ರೆಕ್ಕೆ ಪುಕ್ಕಗಳನ್ನು ಒದ್ದೆಯಾಗದಂತೆ ನೋಡಿಕೊಳ್ಳುತ್ತವೆ. ಚಳಿಗಾಲದಲ್ಲಿ ಮೈ ಒದ್ದೆಯಾಯಿತೆಂದರೆ ದೇಹದ ಉಷ್ಣತೆಯನ್ನು ಹೆಚ್ಚಿಗೆಯಿಟ್ಟುಕೊಳ್ಳಲು ಇನ್ನಷ್ಟು ಶಕ್ತಿಯನ್ನು ವ್ಯಯಿಸಬೇಕು.

ಇನ್ನೊಂದಿಷ್ಟು ವಿಚಿತ್ರ ಪ್ರಾಣಿಗಳಿವೆ. ಉದಾಹರಣೆಗೆ 'ಆರ್ಕಟಿಕ್ ಇಣಚಿ'. ಇವು ಸಾಮಾನ್ಯವಾಗಿ ಉತ್ತರ ಅಮೆರಿಕ ಮತ್ತು ಕೆನಡಾದಲ್ಲಿ ವಾಸಿಸುತ್ತವೆ. ಇವು ಚಳಿಗಾಲ ಬಂತೆಂದರೆ, ಭೂಮಿಯಲ್ಲಿ ಆಳವಾದ ಬಿಲ ಕೊರೆದು ಅಲ್ಲಿ ಸುಮಾರು ಎಂಟು ತಿಂಗಳುಗಳ ಕಾಲ ಬದುಕುತ್ತವೆ. ಈ ಸಮಯದಲ್ಲಿ ಅವು ತಮ್ಮ ದೇಹತಾಪವನ್ನು 6 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸಿಕೊಂಡು, ಅಷ್ಟೇ ಉಷ್ಣಾಂಶವನ್ನು ಕಾಯ್ದುಕೊಳ್ಳುವುದರ ಮೂಲಕ ರಕ್ತ ಹೆಪ್ಪುಗಟ್ಟದಂತೆ ನೋಡಿಕೊಳ್ಳುತ್ತವೆ. ಈ ಸಮಯದಲ್ಲಿ ಅವುಗಳ ದೈಹಿಕ ಪ್ರಕ್ರಿಯೆ ಬಹುತೇಕ ಶೂನ್ಯ. ಮೂರು ವಾರಕ್ಕೊಮ್ಮೆ ಕೆಲ ಕ್ಷಣ ಎಚ್ಚರಗೊಳ್ಳುವ ಮೂಲಕ ತಮ್ಮ ಮಿದುಳು ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳುವುದು ಬಿಟ್ಟರೆ ಇನ್ನೇನೂ ಕ್ರಿಯೆಯೇ ಇಲ್ಲ. .

ಇನ್ನೊಂದು ವಿಚಿತ್ರ ಜೀವಿ- ಕೀಟ ಎಂದರೆ Red Flat Bark Beetle. ಈ ಕೀಟ ಚಳಿಗಾಲ ಬಂತೆಂದರೆ ದೇಹದಲ್ಲಿನ ಸುಮಾರು ಶೇ.40ರಷ್ಟು ನೀರನ್ನು ಹೊರ ಹಾಕಿ ಆ ಜಾಗದಲ್ಲಿ ಹೆಪ್ಪುಗಟ್ಟದ ಪ್ರೋಟೀನ್ ದ್ರವ್ಯವನ್ನು ತಯಾರಿಸಿ ತುಂಬಿಸಿಕೊಳ್ಳುತ್ತವೆ. ಈ ಮೂಲಕ ಅವುಗಳ ದೇಹದಲ್ಲಿನ ರಕ್ತ ಮತ್ತು ಅಂಗಾಂಗಗಳು ಘನೀಕೃತಗೊಳ್ಳುವುದಿಲ್ಲ, ಅಷ್ಟೇ ಅಲ್ಲ, ಅವುಗಳ ದೇಹದ್ರವ್ಯಗಳು ಅತಿ ಚಿಕ್ಕ ಹರಳುಗಳಂತಾಗುತ್ತವೆ. ಈ ರೀತಿ 150 ಡಿಗ್ರಿ ಸೆಲ್ಸಿಯಸ್‌ನಲ್ಲೂ ಅವು ಬದುಕಿರಬಲ್ಲವು.

ಇನ್ನು ಚಳಿ ಪ್ರದೇಶದಲ್ಲಿ ಬದುಕುವ ಮೊಸಳೆಗಳದ್ದು ಇನ್ನೊಂದು ರೀತಿ. ಮೊಸಳೆಗಳು ನೀರಿನಲ್ಲಿದ್ದರೂ ಉಸಿರಾಡಬೇಕೆಂದರೆ ಮೇಲಕ್ಕೆ ಬರಬೇಕು. ಕೆರೆ-ನದಿಗಳ ನೀರಿನ ಮೇಲಿನ ಸ್ತರ ಹೆಪ್ಪುಗಟ್ಟಿದರೂ ಕೆಳಗಿನ ನೀರು ಬೆಚ್ಚಗಿರುತ್ತವೆ. ಮೊಸಳೆಗೆ ಮೇಲೆ ಬಂದರೆ ವಿಪರೀತ ಚಳಿ. ಹಾಗಂತ ನೀರಿನೊಳಗೇ ಇದ್ದರೆ ಉಸಿರುಗಟ್ಟುತ್ತದೆ. ಈ ಕಾರಣಕ್ಕೆ ಅವು ನೀರಿನಿಂದ ಹೊರಗೆ ಮೂಗನ್ನು/ಮೂತಿಯನ್ನು ಇಟ್ಟು ದೀರ್ಘ ನಿದ್ರೆಗೆ ಜಾರಿಬಿಡುತ್ತವೆ. ಈ ಮೂಲಕ ಅವುಗಳ ದೇಹ ನೀರಿನೊಳಗೆ ಬೆಚ್ಚಗಿರುತ್ತವೆ. ಮುಖ ಮೂಗು ಹೊರಗೆ ಹೆಪ್ಪುಗಟ್ಟಿದ ಐಸ್‌ನ ನಡುವೆ ಸಿಕ್ಕಿಕೊಂಡಿರುತ್ತವೆ. ಇವುಗಳಿಗೆ ಈ ತ್ರಿಶಂಕು ಸ್ಥಿತಿಯಿಂದ ಮುಕ್ತಿ- ಹೆಪ್ಪುಗಟ್ಟಿದ ನೀರಿನ ಆಕರದ ಮೇಲ್ಪದರ ಕರಗಿದ ಮೇಲೆಯೇ!

ಅಮೆರಿಕದ ಮರ ಕಪ್ಪೆಗಳು ಚಳಿಗಾಲವನ್ನು ಸಂಭಾಳಿಸುವ ರೀತಿಯೇ ಅನನ್ಯ. ಇವು ಚಳಿಗಾಲ ಬಂತೆಂದರೆ ದೇಹದಲ್ಲಿ ಮೂತ್ರ ತಯಾರಿಸಲು ಶುರುಮಾಡುತ್ತವೆ (!). ಆದರೆ ಈ ಮೂತ್ರವನ್ನು ಅವು ಹೊರಹಾಕುವುದಿಲ್ಲ. ಬದಲಿಗೆ ತಮ್ಮ ರಕ್ತದಲ್ಲಿಯೇ ಇಟ್ಟುಕೊಳ್ಳುತ್ತವೆ. ಉಷ್ಣಾಂಶ ಕಡಿಮೆಯಾದಂತೆ ಈ ಕಪ್ಪೆಯ ರಕ್ತ ಅರೆಹೆಪ್ಪುಗಟ್ಟುತ್ತದೆ. ಅದೇ ಸಮಯದಲ್ಲಿ ಕಪ್ಪೆಯ ಲಿವರ್ ಗ್ಲುಕೋಸ್ ಅನ್ನು ತಯಾರಿಸಲು ಶುರುಮಾಡುತ್ತದೆ. ಈ ಗ್ಲುಕೋಸ್ (ಸಕ್ಕರೆ) ರಕ್ತ ಮತ್ತು ರಕ್ತದಲ್ಲೇ ಒಂದಾಗಿರುವ ಮೂತ್ರ (ಉಪ್ಪು)ದ ಜತೆ ಸೇರಿ ಹೆಪ್ಪುಗಟ್ಟದ ದ್ರವ್ಯ ಅಲ್ಲಿ ತಯಾರಾಗುತ್ತದೆ. ಈ ಹೆಪ್ಪು ತಡೆಯುವ ದ್ರವ್ಯ ಕಪ್ಪೆಯ ದೇಹದ ಜೀವಕೋಶಗಳ ಸುತ್ತ ಒಂದು ರೀತಿಯ ಕವಚವನ್ನು ನಿರ್ಮಿಸುತ್ತದೆ. ಈ ಮೂಲಕ ಅವುಗಳ ಎಲ್ಲ ಜೀವಕೋಶಗಳು ಸುರಕ್ಷಿತ. ಕಪ್ಪೆಯ ರಕ್ತ ಸಂಚಲನ 'ಸಂಪೂರ್ಣ' ನಿಂತುಬಿಡುತ್ತದೆ. ಶ್ವಾಸಕೋಶ ಮತ್ತು ಹೃದಯ ಕೂಡ ಸ್ತಬ್ಧವಾಗಿ, ಕಪ್ಪೆ ಒಂದು ಕೊರಡಂತೆ ಮರದ ಕೊಂಬೆಗೆ ಅಂಟಿಕೊಂಡಿರುತ್ತದೆ. ಈ ರೀತಿಯ ದೇಹದ ಸ್ಥಿತಿಗೆ ಯಾವುದೇ ಶಬ್ದ ಇಲ್ಲ. ಏಕೆಂದರೆ ಇದು ಜೀವಂತ ಸ್ಥಿತಿಯೂ ಅಲ್ಲ ಅಥವಾ ಮೃತ ಸ್ಥಿತಿಯೂ ಅಲ್ಲ. ಸುಮಾರು 8 ತಿಂಗಳುಗಳ ಕಾಲ ಇದೇ ಸ್ಥಿತಿಯಲ್ಲಿ ಅವು ಇರುತ್ತವೆ. ನಂತರ ವಾತಾವರಣದ ಉಷ್ಣಾಂಶ ಹೆಚ್ಚಿದಂತೆ ಅವುಗಳ ದೇಹ ಸಹಜ ಸ್ಥಿತಿಗೆ ಮರಳುತ್ತದೆ. ಅದು ಸಹಜಕ್ಕೆ, ಜೀವ ಸ್ಥಿತಿಗೆ ಬದಲಾಗುವುದು ಎಂದರೆ ಬಿಸಿ ಬಾಣಲಿಯ ಮೇಲಿನ ಐಸ್ ಕರಗಿದಂತೆ. ಕೇವಲ 30 ನಿಮಿಷದಲ್ಲಿ ಅವುಗಳ ಹೃದಯ ಬಡಿತ, ರಕ್ತಸಂಚಲನ ಎಲ್ಲ ಶುರುವಾಗುತ್ತವೆ. ಕಣ್ಣೆದುರಿಗೆ ಮರುಜೀವ ಪಡೆದು ಗಿಡಗಳ ಮಧ್ಯೆ ಮಾಯವಾಗಿಬಿಡುತ್ತವೆ.

ಈ ರೀತಿ ಫ್ರೀಜ್ ಆಗಿಬಿಡುವ ಪ್ರಾಣಿಗಳಲ್ಲಿ ಇನ್ನೊಂದು ಎಂದರೆ ಟಾರ್ಡಿಗ್ರೇಡ್ಸ್. ಇದೊಂದು ಅಸಾಮಾನ್ಯ ಪ್ರಾಣಿಯೇ ಸೈ. ಈ ಟಾರ್ಡಿಗ್ರೇಡ್‌ಗಳು ಸಮುದ್ರದ ಅತ್ಯಂತ ಆಳದಲ್ಲಿ, ಅತಿ ಕಡಿಮೆ ಉಷ್ಣಾಂಶದಲ್ಲಿ ಬದುಕಬಲ್ಲವು. ನೋಮಟೋಡ್ಸ್ ಮೊದಲಾದ ಅತಿ ಚಿಕ್ಕ ಹುಳುಗಳು ಅದೆಷ್ಟೋ ವರ್ಷಗಳ ಕಾಲ ಈ ರೀತಿ ಸತ್ತಂತೆ ಬದುಕಿರಬಲ್ಲವು. ಸೈಬೀರಿಯಾದ ಐಸ್‌ನಲ್ಲಿ ಈ ನೋಮಟೋಡ್ಸ್ ಎಂಬ ಅತಿ ಚಿಕ್ಕ ಹುಳುಗಳು ಬರೋಬ್ಬರಿ 32,000 ವರ್ಷಗಳಿಂದ ಸಿಲುಕಿಕೊಂಡಿದ್ದವಂತೆ. ಅವನ್ನು ವಿಜ್ಞಾನಿಗಳು ಲ್ಯಾಬ್‌ಗೆ ತಂದು ಬಿಸಿನೀರಲ್ಲಿ ಹಾಕಿದಾಗ ಅವು ಪುನರ್ಜೀವ ಪಡೆದುಕೊಂಡವು ಎಂಬುದು ಇತ್ತೀಚೆಗೆ ದೊಡ್ಡ ಸುದ್ದಿಯಾಗಿತ್ತು. ಸತ್ತಂತಿದ್ದವರನ್ನು ವಿಜ್ಞಾನಿಗಳು ಬಿಸಿಮಾಡಿ ಎಬ್ಬಿಸಿದ್ದರು.

ಚಳಿಯೆಂದರೆ ಜನರ ಓಡಾಟ ಕಡಿಮೆ, ಒಡನಾಟವೂ ಕಡಿಮೆ. ಸಂಜೆ ಮೂರು ಗಂಟೆ ಕಳೆಯುವುದರೊಳಗೆ ಸೂರ್ಯಾಸ್ತ. ಮರಗಿಡಗಳೆಲ್ಲ ಎಲೆ ಉದುರಿಸಿಕೊಂಡು ಬೋಳು ಬೋಳು. ಎಲ್ಲಿ ನೋಡಿದರಲ್ಲಿ ಹಿಮ, ಬಿಸಿಲು ಬಿದ್ದರೆ ಪ್ರತಿಫಲಿಸಿ ಕಣ್ಣರಳಿಸಲಿಕ್ಕಾಗದಷ್ಟು ಬೆಳಕು, ಮನೆಯಿಂದಾಚೆ ಕಾಲಿಡಬೇಕೆಂದರೆ ಹೊರೆಯಾಗುವಷ್ಟು ಬಟ್ಟೆ ಜಾಕೆಟ್. ಹೀಗೆ ಇಡೀ ಜನಸಮೂಹವೇ ವಿಚಿತ್ರ ಸಾಮೂಹಿಕ ಒತ್ತಡದೊಳಗೆ ಸಿಲುಕುತ್ತದೆ. ಬೇಸಗೆಯಷ್ಟು ಸ್ವಾತಂತ್ರ್ಯವಿಲ್ಲ. ಅಂತೆಯೇ ನರಿ, ತೋಳ, ಹದ್ದು, ಪಾರಿವಾಳ, ಗುಬ್ಬಿ, ಎರೆಹುಳು, ಇರುವೆ, ದುಂಬಿ ಇತ್ಯಾದಿ ಅಸಂಖ್ಯ ಕೀಟಗಳು, ಮೀನು, ಗಿಡ, ಬಳ್ಳಿ ಎಲ್ಲವಕ್ಕೂ ಚಳಿಗಾಲವೆಂದರೆ ಅವುಗಳದೇ ಆದ ಸವಾಲುಗಳು. ಅವಕ್ಕೂ ಮುಂದಿನ ಕಾಲಕ್ಕೆ ತಯಾರಾಗುವುದೇ ಜೀವನ. ಒಟ್ಟಾರೆ, ಅವಕ್ಕೂ ಈ ಬದುಕು ಅನಿವಾರ್ಯ, ಇಲ್ಲಿರುವ ಮನುಷ್ಯರಂತೆ!!

ಇದು ಸುಧಾರಣೆಗಳ ಪೈಕಿ ಕಿರೀಟಪ್ರಾಯವಾದುದು

'ಯಥಾಸ್ಥಿತಿಯ ಮುಂದುವರಿಕೆಯಾಗಲಿ' ಎಂದು ಬಯಸುವುದೇ ಬಹುತೇಕ ವಿಪಕ್ಷಗಳ ಪಟ್ಟಭದ್ರ ಹಿತಾಸಕ್ತಿಯಾಗಿರುವುದರಿಂದ, ಅವು ಉನ್ನತ ಸುಧಾರಣೆಗಳನ್ನು ವಿರೋಧಿಸುವುದಕ್ಕೇ ಬದ್ಧವಾಗಿವೆ. ಹೀಗಾಗಿ ರಾಜಕೀಯ ಸುಧಾರಣೆಗಳು ಅದೆಷ್ಟು ಅಗತ್ಯ ಎಂಬುದನ್ನು ಅವಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ.



ವಿಶ್ಲೇಷಣೆ

ವಿನಯ್ ಸಹಸ್ರಬುದ್ಧೆ
vveditoped@gmail.com

ಏಕಕಾಲಿಕ ಚುನಾವಣೆಗಳಿಗೆ ಸಂಬಂಧಿಸಿದ ವಿಧೇಯಕವು 'ಕಾನೂನು' ಆಗುತ್ತಿದ್ದಂತೆ, ಭಾರತದ ರಾಜಕೀಯ ಚಿತ್ರಣವು ಈಗ ನಾವು ಕಾಣುತ್ತಿರುವುದಕ್ಕಿಂತ ಭಿನ್ನವಾಗಲಿದೆ. ಈ ವಿಧೇಯಕವು ಭಾರತದಲ್ಲಿನ ಎಲ್ಲ ಪ್ರಜಾಸತ್ತಾತ್ಮಕ ರಾಜಕೀಯ ಸುಧಾರಣೆಗಳ ತಾಯಿಯಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಇಂಥ ಪ್ರಸ್ತಾವನೆಯನ್ನು ಈ ಘಟ್ಟಕ್ಕೆ ತಂದು ನಿಲ್ಲಿಸುವಲ್ಲಿ ಪ್ರಧಾನಿ ಮೋದಿಯವರು ತೋರಿದ ದೃಢಸಂಕಲ್ಪ ಮತ್ತು ಇಟ್ಟಿದ್ದ ಗಾಢನಂಬಿಕೆಗಾಗಿ ಅವರಿಗೆ ನಮಿಸಲೇಬೇಕು. ಇದರ ಸಂಪೂರ್ಣ ಯಶಸ್ಸು ಅವರಿಗೆ ಸಲ್ಲಬೇಕು.

ಆದರೆ, ಇಂಥ ಸಾಧನೆಯನ್ನು ಜೀರ್ಣಿಸಿಕೊಳ್ಳಲಾಗದ ಮೋದಿಯವರ ಟೀಕಾಕಾರರು, ಈ ಕುರಿತು ತಾರ್ಕಿಕವಾಗಿ ವಾದಿಸುವ ಬದಲು ಆಕ್ರಮಣಕಾರಿಯಾಗಿ ವರ್ತಿಸುತ್ತಿದ್ದಾರೆ. ಅದೇನೇ ಇದ್ದರೂ, ಯಥಾಸ್ಥಿತಿಯ ಮುಂದುವರಿಕೆಯ ಆಯ್ಕೆ ಇದ್ದುದರ ಹೊರತಾಗಿಯೂ ಮೋದಿ ಈ ಸವಾಲನ್ನು ಧೈರ್ಯವಾಗಿ, ನೇರವಾಗಿ ಮತ್ತು ದೃಢವಿಶ್ವಾಸದೊಂದಿಗೆ ಎದುರಿಸಲು ನಿರ್ಧರಿಸಿದ್ದಾರೆ ಎಂಬ ವಾಸ್ತವವನ್ನು ಈ ಟೀಕಾಕಾರರು ನಿರಾಕರಿಸಲಾರರು.

ಇದು ನಿಜಕ್ಕೂ ಗಮನಾರ್ಹ ಬೆಳವಣಿಗೆಯೇ. ಏಕೆಂದರೆ, 2014ಕ್ಕೂ ಮುಂಚಿನ ಕಾಲಘಟ್ಟದಲ್ಲಿ, ''ರಾಜಕಾರಣದಲ್ಲಿ ಇಂಥ ವ್ಯವಸ್ಥಿತ ಸುಧಾರಣೆ ತರಲು ಯಾವುದೇ ರಾಜಕೀಯ ಪಕ್ಷದ ಯಾವ ರಾಜಕಾರಣಿಗೂ ಇಚ್ಛಾಶಕ್ತಿಯಿಲ್ಲ'' ಎಂಬುದೇ ಅನೇಕ ಭಾರತೀಯರ ಗ್ರಹಿಕೆಯಾಗಿತ್ತು. ಈ ಕಾರಣಕ್ಕೇ ಇರಬೇಕು, ಎನ್.ಆರ್.ನಾರಾಯಣಮೂರ್ತಿ ಅವರಂಥ ಪ್ರಾಜ್ಞರು, ''ನಮ್ಮ ರಾಜಕಾರಣಿಗಳಲ್ಲಿ ಮಡುಗಟ್ಟಿರುವ ಪಟ್ಟಭದ್ರ ಹಿತಾಸಕ್ತಿಗಳು, ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವುದರ ಪರವಾಗಿ ಇರುವಂತೆ ಮಾಡಿಬಿಟ್ಟಿವೆ'' ಎಂದು ಆರೋಪಿಸುವ ಮೂಲಕ ಒಂದಿಡೀ ರಾಜಕೀಯ ವಲಯವನ್ನು ಖಂಡಿಸಿದ್ದರು ಎನಿಸುತ್ತದೆ. ಆದರೆ ಇಂಥ ಆಮಿಷವೀಗ ನಿರಾಕರಿಸಲ್ಪಟ್ಟಿದೆ ಎಂಬುದನ್ನು ಮೋದಿಯವರ ಸಮರ್ಥ ನಾಯಕತ್ವವೇ ಬಿಂಬಿಸಿದೆ.

ಒಟ್ಟಿನಲ್ಲಿ, ಏಕಕಾಲಿಕ ಚುನಾವಣೆ ಸಂಬಂಧಿತ ವಿಧೇಯಕವು ಪ್ರಸ್ತುತ ಅಂಗೀಕರಿಸಲ್ಪಟ್ಟಿರುವುದು ನಿಜಕ್ಕೂ ಹರ್ಷದಾಯಕ ಬೆಳವಣಿಗೆ. ಈ ಶಾಸನದಲ್ಲಿನ ನಿಬಂಧನೆಗಳು/ಮುನ್ನೇರ್ಪಾಡುಗಳು, ಹಲವಾರು ಅಪೇಕ್ಷಣೀಯ ಬದಲಾವಣೆಗಳಿಗೆ ಕಾರಣವಾಗುವುದಂತೂ ಹೌದು.

ಮೊದಲಿಗೆ, ಇದು ಚುನಾವಣಾ ರಾಜಕೀಯಕ್ಕೆ ಕಡಿಮೆ ಸಮಯವನ್ನೂ, ನಿಜವಾದ ಆಡಳಿತಕ್ಕೆ ಹೆಚ್ಚು ಸಮಯವನ್ನೂ ನೀಡುತ್ತದೆ. ಎರಡನೆಯದಾಗಿ, ದೇಶದ ಒಂದಲ್ಲಾ ಒಂದು ಭಾಗದಲ್ಲಿ ಏನಾದರೊಂದು ಚುನಾವಣಾ ಸೆಣಸಾಟವು ನಡೆಯುತ್ತಲೇ ಇರುವುದರ ಪರಿಣಾಮ, ಅದರಲ್ಲಿ ತೊಡಗಿಸಿಕೊಳ್ಳಲೇಬೇಕಾದ ಅನಿವಾರ್ಯತೆಯ ಹಿಡಿತದಿಂದ ರಾಜಕೀಯ ಪಕ್ಷಗಳು ಬಿಡಿಸಿಕೊಳ್ಳುವುದಕ್ಕೆ ಇದು ಮಹತ್ತರ ಅವಕಾಶವನ್ನು ಕಲ್ಪಿಸಲಿದೆ. ಮೂರನೆಯದಾಗಿ, ಏಕಕಾಲಿಕ ಚುನಾವಣೆಗಳಲ್ಲಿ ಹಲವು ಸುಧಾರಣೆಗಳು ಅಂತರ್ಗತವಾಗಿರುವುದರಿಂದ, ಅವು 'ಮಾನವ-ಆರ್ಥಿಕ-ವಸ್ತುರೂಪದ' ಸಂಪನ್ಮೂಲಗಳ ಬಳಕೆಯನ್ನು ಮಹತ್ತರವಾಗಿ ತಗ್ಗಿಸುತ್ತವೆ/ಉಳಿಸುತ್ತವೆ. ಇವೆಲ್ಲಕ್ಕಿಂತ ಪ್ರಾಯಶಃ ಹೆಚ್ಚು ಮುಖ್ಯವಾಗಿರುವ ಹಾಗೂ ಆ ಕಾರಣದಿಂದಾಗಿ ಅಪೇಕ್ಷಣೀಯವಾಗಿರುವ ಅಂಶವೆಂದರೆ, ಈ ನಿರ್ಣಾಯಕ ಸುಧಾರಣಾ ಕ್ರಮವು ಒಂದಷ್ಟು ಆರೋಗ್ಯಕರ ಚರ್ಚೆಗಳನ್ನು ಹುಟ್ಟುಹಾಕುತ್ತದೆ ಮತ್ತು ಈ ಚರ್ಚೆಗಳು ಉತ್ತಮ ಆಡಳಿತಕ್ಕೆ ಸಂಬಂಧಿಸಿ ನಮ್ಮ ರಾಷ್ಟ್ರಕ್ಕೆ ತೀರಾ ಅವಶ್ಯವಿರುವ ಇತರ ಸರಣಿ ರಾಜಕೀಯ ಸುಧಾರಣೆಗಳ ಕುರಿತಾಗಿರುತ್ತವೆ ಎಂಬುದು ಗಮನಾರ್ಹ.

ಹೀಗೆ ಅತ್ಯಂತ ಅವಶ್ಯವಿರುವ ಸುಧಾರಣೆಗಳ ಸುದೀರ್ಘ ಪಟ್ಟಿಯಲ್ಲಿ, ಬಹುತೇಕ ರಾಜಕೀಯ ಪಕ್ಷಗಳು ತಂತಮ್ಮ ಆಂತರಿಕ ವ್ಯವಹಾರ/ಚಟುವಟಿಕೆಗಳನ್ನು ನಿರ್ವಹಿಸುವ ಪರಿಯು ಮೊದಲ ಸ್ಥಾನದಲ್ಲಿರುತ್ತದೆ. ರಾಜಕೀಯ ಪಕ್ಷಗಳು ಅಕ್ಷರಶಃ ನಾಯಿಕೊಡೆಗಳಂತೆ ಹುಟ್ಟುತ್ತಿರುವುದು, ಅವುಗಳ ವರ್ತನೆ ಮತ್ತು ಧೋರಣೆಗಳು ತೀರಾ ಅವ್ಯವಸ್ಥಿತವಾಗಿರುವುದು, ಪದಾಧಿಕಾರಿಗಳ ನೇಮಕಾತಿ ಸಂಬಂಧಿತ ಕಾರ್ಯವಿಧಾನಗಳು ಪಾರದರ್ಶಕವಾಗಿಲ್ಲದಿರುವುದು, ಪಕ್ಷಕ್ಕೊಂದು ಸೈದ್ಧಾಂತಿಕ ತಳಹದಿಯಿಲ್ಲದಿರುವುದು ಹಾಗೂ ಇವೆಲ್ಲಕ್ಕಿಂತ ಮಿಗಿಲಾಗಿ ಈ ಪಕ್ಷಗಳನ್ನು ಕೆಲ ಕುಟುಂಬಗಳೇ ತಮ್ಮ ಬಿಗಿಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿರುವಂಥ ಆತಂಕಕಾರಿ ವಾತಾವರಣವಿರುವುದು ನಮ್ಮ ದೇಶದಲ್ಲಿ ಮುಖಕ್ಕೆ ರಾಚುವ ಅಪ್ರಿಯ ಸತ್ಯ. ಇದು ಅನೇಕ ರಾಜಕೀಯ ತಜ್ಞರ ಅಭಿಮತವೂ ಹೌದು.

'ಯಥಾಸ್ಥಿತಿಯ ಮುಂದುವರಿಕೆಯಾಗಲಿ' ಎಂದು ಬಯಸುವುದೇ ಬಹುತೇಕ ವಿಪಕ್ಷಗಳ ಪಟ್ಟಭದ್ರ ಹಿತಾಸಕ್ತಿಯಾಗಿರುವುದರಿಂದ, ಅವು ಉನ್ನತ ರಾಜಕೀಯ ಸುಧಾರಣೆಗಳನ್ನು ವಿರೋಧಿಸುವುದಕ್ಕೇ ಬದ್ಧವಾಗಿವೆ. ಹೀಗಾಗಿ ರಾಜಕೀಯ ಸುಧಾರಣೆಗಳು ಅದೆಷ್ಟು ಅಗತ್ಯ ಎಂಬುದನ್ನು ಅವಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ. ತುಂಬಾ ಹಿಂದಕ್ಕೆ ಹೋಗುವುದೇನೂ ಬೇಡ, ಕಳೆದ ಶತಮಾನದ ಕೊನೆಯ ದಶಕದಲ್ಲಿ, ಅಂದಿನ ಉಪರಾಷ್ಟ್ರಪತಿ ಕೃಷ್ಣಕಾಂತ್‌ರವರು ಈ ವಿಷಯದಲ್ಲಿ ಮುಕ್ತವಾಗಿ ಒಂದಷ್ಟು ಕಳವಳ ವ್ಯಕ್ತಪಡಿಸಿದ್ದರು; ಪಕ್ಷಗಳ ನಿರ್ವಾಹಕರು ಮತ್ತು ಅಧಿಕಾರ ದಲ್ಲಾಳಿಗಳಿಗೆ ಬಹುತೇಕ ರಾಜಕೀಯ ಪಕ್ಷಗಳು ಆಶ್ರಯ/ಪ್ರೋತ್ಸಾಹ ನೀಡುತ್ತಿರುವುದರ ಕುರಿತು ಅವರು ಕಳವಳಿಸುತ್ತಾ, ''1950ರ ದಶಕದಲ್ಲಿ ಒಬ್ಬ ಸಂಸದ ಅಥವಾ ಶಾಸಕನನ್ನು 'ಜನಪ್ರತಿನಿಧಿ' ಎಂದು ಪರಿಗಣಿಸಲಾಗುತ್ತಿತ್ತು; 1960ರ ದಶಕದ ಹೊತ್ತಿಗೆ ಅವರು 'ಜನಪರ ಸಮರ್ಥಕರು' ಎಂದು ಕರೆಯಲ್ಪಟ್ಟರೆ, ಈಗ 'ನಾವು ತಮ್ಮ ದಲ್ಲಾಳಿಗಳನ್ನು ಆಯ್ಕೆ ಮಾಡುತ್ತಿದ್ದೇವೆ' ಎಂದು ಜನರು ಪರಿಭಾವಿಸುವಂತಾಗಿದೆ'' ಎಂದು ನೇರವಾಗಿ ಹೇಳಿದ್ದರು.

ಇಲ್ಲಿ ಇನ್ನೊಂದು ಅಂಶ ಉಲ್ಲೇಖನೀಯ. 1985ರಲ್ಲಿ ಮುಂಬೈನಲ್ಲಿ ಕಾಂಗ್ರೆಸ್‌ನ ಶತಮಾನೋತ್ಸವ ಅಧಿವೇಶನ ನಡೆದಾಗ, ರಾಜೀವ್ ಗಾಂಧಿಯವರು ಇದೇ 'ಪರಿಭಾಷೆ' ಬಳಸಿ, 'ಅಧಿಕಾರದ ದಲ್ಲಾಳಿ'ಗಳಾಗಿ ಕಾರ್ಯನಿರ್ವಹಿಸುವ ಪಕ್ಷದ ನಿರ್ವಾಹಕರ ಪ್ರವೃತ್ತಿಯನ್ನು ಖಂಡಿಸಿದ್ದರು. ಆ ನೆಲೆಯಲ್ಲಿ ನೋಡಿದರೆ, ನಮ್ಮ ಪಕ್ಷ ರಾಜಕಾರಣಕ್ಕೆ ಅಮರಿಕೊಂಡಿರುವ ವ್ಯಾಧಿಯೇನು, ಒದಗಿರುವ ತೊಂದರೆಯೇನು ಎಂಬುದನ್ನು ಕೃಷ್ಣಕಾಂತ್ ಅವರು ಬಹಳ ಹಿಂದೆಯೇ ಸರಿಯಾಗಿ ನಿರ್ಣಯಿಸಿದ್ದರು ಎನ್ನಲಡ್ಡಿಯಿಲ್ಲ. ''ರಾಜಕೀಯ ಸಿದ್ಧಾಂತ ಅಥವಾ ರಾಷ್ಟ್ರೀಯ ಕಾರ್ಯಕ್ರಮದೆಡೆಗಿನ ಪರಿಪೂರ್ಣ ಬದ್ಧತೆಯಿಲ್ಲದ ರಾಜಕೀಯ ಪಕ್ಷಗಳು, ಇಂಥ ಹಿತಾಸಕ್ತ ಗುಂಪುಗಳ ಒಂದು ಸಡಿಲ ಒಕ್ಕೂಟವಾಗಿಬಿಟ್ಟಿವೆ'' ಎಂಬ ಕಹಿಸತ್ಯವನ್ನು ಕೃಷ್ಣಕಾಂತ್ ನೇರಾನೇರವಾಗಿ ಹೇಳಿದ್ದರು. ಬಿಜೆಪಿ ಮತ್ತು ಕಮ್ಯುನಿಸ್ಟರನ್ನು ಹೊರತುಪಡಿಸಿದ ಇತರ ರಾಜಕೀಯ ಪಕ್ಷಗಳಿಗೆ ಯಾವುದೇ ದೀರ್ಘಕಾಲೀನ ಸಿದ್ಧಾಂತವಿಲ್ಲ ಎಂಬ ಸಂಗತಿಯನ್ನು ಪರಿಗಣಿಸಿದರೆ, ಕೃಷ್ಣಕಾಂತ್‌ರ ಅಭಿಪ್ರಾಯಗಳು ಸುಳ್ಳಲ್ಲ ಎಂಬುದು ಮನವರಿಕೆಯಾಗುತ್ತದೆ.

ಏಕಕಾಲಿಕ ಚುನಾವಣೆಗಳಿಗೆ ಅನುವುಮಾಡಿಕೊಡುವ ಶಾಸನವು ಸಕಾಲದಲ್ಲಿ ಒದಗಿರುವ ಸರಿಹೆಜ್ಜೆಯಾಗಿದ್ದರೂ, ಪ್ರಜಾಪ್ರಭುತ್ವದ ಗುಣಮಟ್ಟವನ್ನು ವರ್ಧಿಸಬಲ್ಲ ಇತರ ನಿರ್ಣಾಯಕ ಚರ್ಚಾವಿಷಯಗಳ ಕಡೆಗೂ ಇಂಥದೇ ಗಮನ ಕೊಡಬೇಕಾದ ಅಗತ್ಯವಿದೆ. ಅವನ್ನು ಒಂದೊಂದಾಗಿ ಅವಲೋಕಿಸೋಣ.

- ರಾಜಕೀಯ ಪಕ್ಷಗಳ ಕಾಯಚಟುವಟಿಕೆಗಳನ್ನು ನಿಯಂತ್ರಿಸುವ ಮತ್ತು ಶಿಸ್ತುಬದ್ಧಗೊಳಿಸುವ, ಅವುಗಳ ವರ್ತನೆ/ಧೋರಣೆಯನ್ನು ಹೆಚ್ಚು ಪಾರದರ್ಶಕ, ಉತ್ತರದಾಯಿ ಮತ್ತು ಪ್ರಜಾಸತ್ತಾತ್ಮಕವಾಗಿಸುವ ಒಂದು ಸಮಗ್ರ ಕಾನೂನಿನ ಬಗ್ಗೆ ಆಲೋಚಿಸಲು ಇದು ಸೂಕ್ತ ಸಮಯವಲ್ಲವೇ? ಸರಕಾರೇತರ ಸಂಸ್ಥೆಗಳ (ಅಂದರೆ ಎನ್‌ಜಿಒಗಳ) ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುವ ವೇಳೆ, ದೇಶದ ಅನೇಕ ಸರಕಾರಿ ಏಜೆನ್ಸಿಗಳು, ''ಕುಟುಂಬ ಸದಸ್ಯರು ಅಥವಾ ರಕ್ತಸಂಬಂಧಿಗಳು ಇಂಥ ಸಂಸ್ಥೆಗಳ ವ್ಯವಸ್ಥಾಪನಾ ಘಟಕದ ಭಾಗವಾಗಿರುವಂತಿಲ್ಲ'' ಎಂಬ ಷರತ್ತನ್ನು ಹಾಕುತ್ತವೆ. ರಾಜಕೀಯ ಪಕ್ಷಗಳಿಗೂ ಇಂಥದೇ ಕಟ್ಟುಪಾಡು ಹೇರಲು ಸಾಧ್ಯವಿದೆಯಲ್ಲವೇ?
- ಬಹುತೇಕ ನಿಷ್ಕ್ರಿಯವಾಗಿರುವ ಅಥವಾ ತಾಂತ್ರಿಕವಾಗಷ್ಟೇ ಜೀವಂತವಾಗಿರುವ, 2700ಕ್ಕೂ ಹೆಚ್ಚಿನ ರಾಜಕೀಯ ಪಕ್ಷಗಳು ಭಾರತದಲ್ಲಿವೆ; ಅವು ಹೀಗೆ ನಾಯಿಕೊಡೆಗಳಂತೆ ಹುಟ್ಟುವುದನ್ನು ತಪ್ಪಿಸಲು, ಹೊಸ ರಾಜಕೀಯ ಪಕ್ಷದ ಸ್ಥಾಪನಾ ಪ್ರಕ್ರಿಯೆಯನ್ನು ಗಂಭೀರವಾಗಿಸಬೇಕಿದೆ ಮತ್ತು ವಿಸ್ತೃತವಾಗಿಸಬೇಕಿದೆ ಅಲ್ಲವೇ? ಪ್ರತಿಯೊಂದು ರಾಜಕೀಯ ಪಕ್ಷವೂ ತನ್ನ ಚಟುವಟಿಕೆಗಳ ವಾರ್ಷಿಕ ವರದಿಯನ್ನು ಕಡ್ಡಾಯವಾಗಿ ಪ್ರಕಟಿಸುವಂತೆ ನಾವು ಮಾಡಬಹುದಲ್ಲವೇ?
- ಜರ್ಮನಿಯಲ್ಲಿ ಒಂದು ವಿಶಿಷ್ಟ ಪರಿಪಾಠವಿದೆ. ಅಲ್ಲಿನ ರಾಜಕೀಯ ಪಕ್ಷಗಳು ತಮ್ಮ ಕಾರ್ಯನಿರ್ವಾಹಕರ/ಕಾರ್ಯಕರ್ತರ ಸಾಮರ್ಥ್ಯ ನಿರ್ಮಾಣಕ್ಕಾಗಿ ಮತ್ತು ಕಾರ್ಯನೀತಿಯ ಸಂಶೋಧನೆಯನ್ನು ಕೈಗೊಳ್ಳುವುದಕ್ಕಾಗಿ ಪ್ರತಿಷ್ಠಾನಗಳು ಅಥವಾ ವಿಶ್ವಸ್ಥ ಮಂಡಳಿಗಳ (ಟ್ರಸ್ಟ್‌ಗಳ) ರೂಪದಲ್ಲಿ ಗಟ್ಟಿ ತಳಹದಿಯನ್ನು ಹಾಕಿಕೊಳ್ಳುತ್ತವೆ. ಈ ಪರಿಪಾಠವನ್ನು ನಮ್ಮಲ್ಲೂ ಅನುಸರಿಸಬಹುದಲ್ಲವೇ? ಅವರು ಚುನಾಯಿತ ಪ್ರತಿನಿಧಿಗಳೇ ಇರಲಿ ಅಥವಾ ಪಕ್ಷದ ಪದಾಧಿಕಾರಿಗಳೇ ಆಗಿರಲಿ, ಮೊದಲ ಬಾರಿಗೆ ಕಾರ್ಯಕ್ಷೇತ್ರಕ್ಕೆ ಇಳಿದ ಇಂಥ ಎಲ್ಲರಿಗೂ ಕಡ್ಡಾಯವಾಗಿ ವ್ಯಾಪಕ ತರಬೇತಿ ನೀಡುವ ಸಾಧ್ಯತೆಯನ್ನೂ ನಾವು ಪರಿಶೀಲಿಸಬಹುದು.
- ಮತದಾರರ ಸಮೂಹಕ್ಕೆ ಸಲ್ಲಿಸಬೇಕಾದ ವರದಿಯೊಂದನ್ನು ಪ್ರತಿವರ್ಷವೂ ಪ್ರಕಟಿಸುವಂತಾಗಲು ಚುನಾಯಿತ ಪ್ರತಿನಿಧಿಗಳನ್ನು ಪ್ರೋತ್ಸಾಹಿಸಲು ನಾವು ಆಲೋಚಿಸಬಹುದಲ್ಲವೇ?
- ವಿವಿಧ ಸ್ತರದ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿರುವ ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಪ್ರಣಾಳಿಕೆಗಳನ್ನು ಕಡ್ಡಾಯವಾಗಿ ಪ್ರಕಟಿಸುವಂತಾಗುವ ಮತ್ತು ಅದರಲ್ಲಿನ ಭರವಸೆಗಳನ್ನು ಈಡೇರಿಸಲು ತರುವಾಯದಲ್ಲಿ ಕಡ್ಡಾಯ ಕ್ರಮ ಕೈಗೊಳ್ಳಲಾಗಿದೆಯೇ ಎಂಬುದರ ಕುರಿತೂ ನಾವು ವಿಚಾರ-ವಿಮರ್ಶೆ ಮಾಡಬಹುದಲ್ಲವೇ? ಚುನಾವಣೆಯಲ್ಲಿ ಸೋತ ಪಕ್ಷಗಳನ್ನು ಕೂಡ, ''ನೀವು ನೀಡಿದ ಭರವಸೆಗಳ ಈಡೇರಿಕೆಗೆ ಮಾಡಿದ ಯೋಜನೆಯ ಕುರಿತು ಮಾಹಿತಿ ನೀಡಿ'' ಎಂದು ಕೇಳಬಹುದಲ್ಲವೇ?
- ಎಲ್ಲ ಸ್ತರಗಳಲ್ಲಿ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯೂ 'ಮತಕ್ಷೇತ್ರದ ಪ್ರಣಾಳಿಕೆ'ಯನ್ನು ಪ್ರಕಟಿಸುವುದನ್ನು, ತರುವಾಯದಲ್ಲಿ ಅದರ ಈಡೇರಿಕೆಗೆಂದು ಕೈಗೊಳ್ಳಲಾಗುವ ಕ್ರಮಗಳ ಕುರಿತು ಪ್ರಕಟಣೆ ನೀಡುವುದನ್ನು ಕಡ್ಡಾಯ ಗೊಳಿಸುವ ಬಗ್ಗೆಯೂ ನಾವು ಚಿಂತನೆ ನಡೆಸಬಹುದಲ್ಲವೇ?

ರಾಜಕೀಯ ಸುಧಾರಣೆಗಳ ಅಗಾಧತೆಯ ಕುರಿತು ಚರ್ಚಿಸುವಾಗ, ಚುನಾಯಿತ ಪ್ರತಿನಿಧಿಗಳಿಗೆ ಮೀಸಲಾದ ನಮ್ಮ ಸದನಗಳು, ಮುಖ್ಯವಾಗಿ ನಮ್ಮ ಸಂಸತ್ತು ಕಾರ್ಯನಿರ್ವಹಿಸುವ ಪರಿಯಲ್ಲೂ ಸುಧಾರಣೆಯಾಗಬೇಕಿದೆ ಎಂಬ ಅಂಶವನ್ನೂ ನಾವು ಪರಿಗಣಿಸಬೇಕಾಗುತ್ತದೆ. ಅಟಲ್ ಬಿಹಾರಿ ವಾಜಪೇಯಿ ಅವರು 1996ರಲ್ಲಿ ವ್ಯಕ್ತಪಡಿಸಿದ್ದ ಅಭಿಪ್ರಾಯವನ್ನಿಲ್ಲಿ ನೆನೆಯಬೇಕು: ''ಸಂಸತ್ತಾಗಲೀ, ರಾಜ್ಯ ವಿಧಾನಸಭೆಗಳಾಗಲೀ ತಾವು ಪ್ರಮುಖವಾಗಿ ಮಾಡ ಬೇಕಾದ ಕಾರ್ಯವನ್ನು, ಅಂದರೆ ಶಾಸಕಾಂಗದ ಜವಾಬ್ದಾರಿ ಯನ್ನು ದಕ್ಷತೆಯಿಂದಾಗಲೀ ಬದ್ಧತೆಯಿಂದಾಗಲೀ ನಿರ್ವಹಿಸುತ್ತಿಲ್ಲ; ಕೆಲವರನ್ನು ಹೊರತುಪಡಿಸಿದರೆ, ಈ ಉನ್ನತ ಪ್ರಜಾಸತ್ತಾತ್ಮಕ ಸಂಸ್ಥೆಗಳಿಗೆ ಚುನಾಯಿಸಲ್ಪಟ್ಟವರು 'ಕಾನೂನು ರೂಪಣೆ' ವಿಷಯದಲ್ಲಿ ಔಪಚಾರಿಕ ಅಥವಾ ಅನೌಪಚಾರಿಕ ತರಬೇತಿ ಪಡೆದವರಾಗಿಲ್ಲ ಅಥವಾ ತಮ್ಮ ರಾಜಕೀಯ ವೃತ್ತಿಗೆ ಅಗತ್ಯವಿರುವ ಜ್ಞಾನ ಮತ್ತು ಸಾಮರ್ಥ್ಯವನ್ನು ಬೆಳೆಸಿಕೊಳ್ಳುವಂಥ ಒಲವೂ ಅವರಿಗೆ ಇದ್ದಂತಿಲ್ಲ''.

ರಾಜಕೀಯ ಸುಧಾರಣೆ ಸಂಬಂಧಿತ ಈ ಮಾತುಗಳ ಅನುಷ್ಠಾನ ಅಂದುಕೊಂಡಷ್ಟು ಸುಲಭವಲ್ಲವಾದರೂ, ಪ್ರಜಾಪ್ರಭುತ್ವದ ಸುಧಾರಿತ ಗುಣಮಟ್ಟವನ್ನು ಬಯಸುವ ಭಾರತೀಯರಿಗೆ ಹಾಗೆಂದು ಆಶಿಸಲು ಬಲವಾದ ಕಾರಣವಿದೆ. ಅಷ್ಟಕ್ಕೂ, ಮೋದಿಯವರಿದ್ದರೆ ಎಲ್ಲವೂ ಸಾಧ್ಯವಿದೆ ಬಿಡಿ!

(ಲೇಖಕರು ಬಿಜೆಪಿಯ ಹಿರಿಯ ನಾಯಕರು)

ಭಟ್ಟರ್ ಸ್ಕಾಚ್

- **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ರೇ, ಸನಾತನ ಧರ್ಮದ ಸೊಲ್ಲೆತ್ತಿದರೆ ಅವರು ಮನುವಾದಿಗಳು, ಸಮ್ಮೇಳನಗಳಲ್ಲಿ ಊಟ-ತಿಂಡಿಗೆ ಅಪಸ್ವರ ಎತ್ತುವವವರು?
- **ಮೆನುವಾದಿಗಳು!**

- **ಚಂಚಲ ಚಿಟಗುಪ್ಪಿ, (ಇಮೇಲ್ ಮೂಲಕ)**
ಭಟ್ರೇ, ಕನ್ನಡ ತಾಯಿಯ ಪದತಲಕ್ಕೆ 'ಕುಡಿಯೋಣು ಬಾರಾ' ಸಮರ್ಪಣೆ ಮಾಡಿದರೆ ಹೇಗೆ?
- **ಕನ್ನಡ ತಾಯಿ ಮಕ್ಕಳು ಫುಲ್ ಟೈಟ್!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಕರ್ನಾಟಕ ಬಿಜೆಪಿಯಲ್ಲಿ ಒಗ್ಗಟ್ಟು ಮೂಡಿಸಲು ಯಾರಿಂದ ಸಾಧ್ಯ?
- **ಭಿನ್ನ ಬಣದವರಿಂದ ಮಾತ್ರ!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಕಿಕ್ ಕೊಡೋ ಎಣ್ಣೆ, ಲುಕ್ ಕೊಡೋ ಹೆಣ್ಣು ಯಾವುದು ಮೇಲು?
- **ಬರೀ ಲುಕ್ ಕೊಟ್ರೆ ಏನು ಬಂತು.. ಮೊದಲನೆಯದೇ ವಾಸಿಯಲ್ಲವೇ!**

- **ಉಮೇಶ್ ಎಂ.ಶಿರಾ, ರಾಮನಗರ**
ಭಟ್ರೆ, ಸಿ.ಟಿ.ರವಿ ಅವರು ಇಷ್ಟು ದಿವಸ ಕಳೆದು ಹೋಗಿದ್ರಲ್ಲ?
- **ಅದಕ್ಕೇ ಪೊಲೀಸರು ಹುಡುಕಿ ಎತ್ತಾಕಿಕೊಂಡು ಹೋಗಿರೋದು ಅಂತೀಯಾ?!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೆ, ಅಡುಗೆ ಭಟ್ಟರಿಗೂ, ವಿ.ಭಟ್ಟರಿಗೂ ಏನು ವ್ಯತ್ಯಾಸ?
- **ಏನೂ ವ್ಯತ್ಯಾಸವಿಲ್ಲ, ಇಬ್ಬರೂ ಬಾಣಸಿಗರೇ!**

- **ಪದ್ಮನಾಭ ಆಚಾರ್ಯ, ಪೂರ್ಣಪ್ರಜ್ಞ ನಗರ**
ಭಟ್ರೆ, ವಿದ್ಯಾಭೂಷಣರು ಬಣ್ಣ ಬಳಿದುಕೊಂಡು ಗೆಜ್ಜೆ ಕಟ್ಟಿ, ದಂಡಿಗೆ ಬೆತ್ತ ಹಿಡ್ಕೊಂಡು ದಾಸರ ವೇಷದಲ್ಲಿ ಹೆಜ್ಜೆ ಹಾಕಿದರು ಸಿನಿಮಾದಲ್ಲಿ. ಮುಂದೇನು?
- **ವೈರಾಗ್ಯ ಪಥಕ್ಕೆ ಮತ್ತೆ ಹಿಂದಿರುಗುತ್ತಾರೆ ಎಂಬ ಯೋಚನೆಯಾ?!**

- **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
ಭಟ್ರೆ, ಭವಿಷ್ಯದಲ್ಲಿ ನಿರಂತರ ಉಪಯೋಗಿಸದೇ ಕಳಚಿಹೋಗುವ ಮಾನವನ ಅಂಗ ಯಾವುದು?
- **ತಲೆ!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೆ, ಎಲ್ಲರೂ ಸೂರ್ಯನಿಗೆ ಟಾರ್ಚ್ ಹಿಡಿದರೆ ಇಲ್ಲೊಬ್ಬ ಚಂದ್ರನಿಗೆ ಟಾರ್ಚ್ ಹಿಡಿತಾನಲ್ಲ?
- **ಹಿಡಿದಿದ್ದು ನಕ್ಷತ್ರಕ್ಕೆ ಅಂತ ನಂತರ ವಾದಿಸದಿದ್ದರೆ ಸಾಕು!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರಗಿ**
ಭಟ್ರೆ, ಸಿದ್ದರಾಮಯ್ಯನವರಿಗೆ ಜ್ಞಾನೋದಯವಾದರೆ ಏನು ಮಾಡೋದು?
- **ಬುದ್ಧರಾಮಯ್ಯ ಅಂತ ಕರೆಯೋಣ ಬಿಡು!**

ಉಪ್ಪಿನ ಸಾಗಣೆ ತಡೆಯಲು ತಂತ್ರ-ಕುತಂತ್ರ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ರಾಯ್ ಮೋಕ್ಸಾಮ್ (ಜನನ: 1939) ಎಂಬ ಬ್ರಿಟಿಷ್ ಲೇಖಕನ ಕುರಿತು ನಮ್ಮಲ್ಲಿ ಹೆಚ್ಚು ಪರಿಚಯವಿಲ್ಲ. ಲಂಡನ್‌ನಲ್ಲಿ ನೆಲೆಸಿರುವ ಈತ ಭಾರತದ ಇತಿಹಾಸದ ಕುರಿತು, ಅದರಲ್ಲಿ ಅಡಗಿರುವ ಹಲವು ವಿದ್ಯಮಾನಗಳ ಕುರಿತು ಪುಸ್ತಕಗಳನ್ನು ರಚಿಸಿದ್ದಾನೆ. 'ದ ಥೆಫ್ಟ್ ಆಫ್ ಇಂಡಿಯಾ', 'ದ ಈಸ್ಟ್ ಇಂಡಿಯಾ ಕಂಪನಿ ವೈಫ್ ಆ್ಯಂಡ್ ಔಟ್‌ಲಾ: ಇಂಡಿಯಾಸ್ ಬ್ಯಾಂಡಿಟ್ ಕ್ವೀನ್ ಅಂಡ್ ಮಿ' ಮೊದಲಾದವು ಭಾರತದ ಕುರಿತು ಈತ ರಚಿಸಿದ ಪುಸ್ತಕಗಳು.

2002ರಲ್ಲಿ ಇವನು 'ದ ಗ್ರೇಟ್ ಹೆಜ್ ಆಫ್ ಇಂಡಿಯಾ' ಪುಸ್ತಕವನ್ನು ರಚಿಸಿ, ಬ್ರಿಟಿಷರು ಭಾರತದ ಶ್ರೀಸಾಮಾನ್ಯರನ್ನು ಕುಟಿಲ ತಂತ್ರದಿಂದ ಸಂಕಷ್ಟಕ್ಕೆ ದೂಡಿದ್ದನ್ನು ವಿವರವಾಗಿ ಬರೆದಿದ್ದಾನೆ. ಒಂದು ಪ್ರದೇಶದಿಂದ ಇನ್ನೊಂದು ಪ್ರಾಂತ್ಯಕ್ಕೆ ಉಪ್ಪನ್ನು ಸಾಗಿಸಲು ಬ್ರಿಟಿಷರು ಸುಂಕ ಹೇರಿದ್ದರು. ತಮ್ಮ ಕಣ್‌ತಪ್ಪಿಸಿ, ಬಡಜನರು, ಕೂಲಿಕಾರರು ಉಪ್ಪನ್ನು ಸಾಗಿಸಬಾರದು ಎಂದು ಕಟ್ಟುನಿಟ್ಟಾಗಿ ಕಾನೂನು ಮಾಡಿದ್ದ ಬ್ರಿಟಿಷರು, ಆ ಉದ್ದೇಶಕ್ಕಾಗಿ ಸಾವಿರಾರು ಮೈಲುದ್ದದ ಮುಳ್ಳುಗಿಡಗಳ ಬೇಲಿಯನ್ನೇ ರಚಿಸಿದ್ದರು! ಈ ವಿಚಾರವನ್ನು ಎಲ್ಲೋ ಓದಿದ ಈ ಲೇಖಕ, ಅದರ ಕುರಿತು ಸಂಶೋಧನೆ ನಡೆಸಲು ಭಾರತಕ್ಕೆ ಬಂದಾಗ, ಅಂಥದ್ದೊಂದು ಮುಳ್ಳಿನ ಬೇಲಿ ಇತ್ತು ಮತ್ತು ಜನಸಾಮಾನ್ಯರು ಉಪ್ಪನ್ನು ಸಾಗಿಸಲು ನಿರ್ಬಂಧಿಸಲಾಗಿತ್ತು ಎಂಬ ವಿಚಾರವೇ ಬಹುಪಾಲು ಜನರಿಗೆ ಮರೆತುಹೋಗಿತ್ತು!

ಎ.ಒ.ಹ್ಯೂಮ್ ಎಂಬ ಮಹಾಶಯನ ಕುರಿತು ನೀವು ಕೇಳಿರಬಹುದು. ಬ್ರಿಟಿಷ್ ಸರಕಾರದಲ್ಲಿ ಐಸಿಎಸ್ ಸಮಾನ ಹುದ್ದೆಯ ಅಧಿಕಾರಿಯಾಗಿದ್ದ ಈತನ ಪ್ರಮುಖ ಹವ್ಯಾಸವೆಂದರೆ ಪಕ್ಷಿವೀಕ್ಷಣೆ ಮತ್ತು ಸಸ್ಯಗಳ ಅಧ್ಯಯನ. ಇಲ್ಲಿನ ಪಕ್ಷಿಗಳನ್ನು ಸಂಗ್ರಹಿಸಿ, ಪ್ರಥಮ ಬಾರಿಗೆ ಅಧ್ಯಯನಕ್ಕೆ ಒಳಪಡಿಸಿ, ನಮ್ಮ ದೇಶದಲ್ಲಿ ಪಕ್ಷಿವೀಕ್ಷಣೆಗೆ ತಳಪಾಯವನ್ನು ನಿರ್ಮಿಸಿದ. ಇದರ ಜತೆಯಲ್ಲೇ, ನಮ್ಮ ದೇಶದ ಸಸ್ಯಗಳನ್ನು ಪಟ್ಟಿಮಾಡುವಲ್ಲೂ ಈತನ ಕೊಡುಗೆ ಇದೆ. ಆದರೆ ಈತ ನಮಗೆಲ್ಲಾ ಹೆಚ್ಚು ಪರಿಚಿತನಾಗಿರುವುದು ಕಾಂಗ್ರೆಸ್ ಪಕ್ಷದ ಜನಕನಾಗಿ. ಬ್ರಿಟಿಷ್ ವೈಸ್‌ರಾಯ್ ಸಹಮತದಿಂದ, 1885ರಲ್ಲಿ ಈತ ಸ್ಥಾಪಿಸಿದ ಕಾಂಗ್ರೆಸ್ ಪಕ್ಷದಲ್ಲಿ ಮೊದಲು ಸೇರ್ಪಡೆಗೊಂಡವರು ಅಂದಿನ ವಿದ್ಯಾವಂತರು, ಬುದ್ಧಿಜೀವಿಗಳು ಮತ್ತು ಸ್ಥಿತಿವಂತರು.

ಬ್ರಿಟಿಷ್ ಸರಕಾರದ ಪ್ರಮುಖ ಅಧಿಕಾರಿಯಾಗಿ ಎ.ಒ.ಹ್ಯೂಮ್ ಮಾಡಿದ ಮತ್ತೊಂದು ಘನಕಾರ್ಯವೆಂದರೆ 'ಭಾರತದ ಮಹಾನ್ ಮುಳ್ಳು ಬೇಲಿ!' (ದ ಗ್ರೇಟ್ ಹೆಜ್ ಆಫ್ ಇಂಡಿಯಾ). 1867-70ರ ಅವಧಿಯಲ್ಲಿ ಈತ ಅಂತರ್ದೇಶೀಯ ಸುಂಕದ ಅಧೀಕ್ಷಕನಾಗಿದ್ದಾಗ, ಸುಂಕ ಸಂಗ್ರಹಿಸುವ ವ್ಯವಸ್ಥೆಯನ್ನು ಬಲಪಡಿಸಲು ಇಂಥದ್ದೊಂದು ಮಹಾನ್ ಮುಳ್ಳುಬೇಲಿಯನ್ನು ಬೆಳೆಸುವ ಯೋಜನೆಯನ್ನು ರೂಪಿಸಿ, ಯಶಸ್ವಿಯಾಗಿ ಜಾರಿಗೆ ತಂದ. ಆ ಬೇಲಿಯ ಮುಖ್ಯ ಉದ್ದೇಶವೆಂದರೆ, ಗುಜರಾತ್ ಪ್ರಾಂತ್ಯದಿಂದ ಉತ್ತರ ಭಾರತದ ಪ್ರಾಂತ್ಯಗಳಿಗೆ ಸಾಗಣೆಗೊಳ್ಳುತ್ತಿದ್ದ ಉಪ್ಪಿನ ಮೇಲೆ ಸುಂಕ ವಸೂಲು ಮಾಡುವುದು. ಗುಜರಾತಿನ ಕಚ್ ತೀರದಲ್ಲಿ ಕಡಿಮೆ ಬೆಲೆಗೆ ಉಪ್ಪು ದೊರಕುತ್ತಿತ್ತು; ಕಡುಬಡವರಿಗೂ ಅಗತ್ಯವಿರುವ ಉಪ್ಪನ್ನು ಬೇರೆ ರಾಜ್ಯಗಳಿಗೆ, ಪ್ರಾಂತ್ಯಗಳಿಗೆ ಸಾಗಿಸಲು ಬ್ರಿಟಿಷರು ನಿರ್ಬಂಧ ವಿಧಿಸಿದ್ದರು.

ಉಪ್ಪಿನ ಮೇಲಿನ ಸುಂಕವು ಬ್ರಿಟಿಷರ ಪ್ರಮುಖ ಆದಾಯಮೂಲಗಳಲ್ಲಿ ಒಂದಾಗಿತ್ತು. 1860ರ ದಶಕದ ಮಧ್ಯಭಾಗದಲ್ಲಿ ಉತ್ತರ ಭಾರತದ ಆಗ್ರಾವನ್ನು ಬಳಸಿ ಸಾಗಿದ್ದ ಸುಮಾರು 180 ಮೈಲಿ ಉದ್ದದ ಒಣ ಮುಳ್ಳುಬೇಲಿಯನ್ನು ಬ್ರಿಟಿಷರು ನಿರ್ಮಿಸಿ, ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿದ್ದರು. ಆದರೆ ಪ್ರತಿವರ್ಷ ಈ ಒಣಮುಳ್ಳುಗಳ ರಾಶಿಯಲ್ಲಿ ಶೇ.50ರಷ್ಟು ನಾಶವಾಗುತ್ತಿತ್ತು. ಇದಕ್ಕೆ ಪರಿಹಾರವಾಗಿ ಎ.ಒ.ಹ್ಯೂಮ್ ಅಳವಡಿಸಿದ್ದೇ, ಜೀವಂತ ಸಸ್ಯಗಳ ಮುಳ್ಳುಬೇಲಿ. ನಮ್ಮ ದೇಶದ ಸಸ್ಯಗಳ ಕುರಿತು ಆತ ಸಾಕಷ್ಟು ಸಂಶೋಧನೆ ನಡೆಸಿದ್ದ; ಒಣಹವೆಯಲ್ಲೂ ಚೆನ್ನಾಗಿ ಬೆಳೆಯುವ ಪ್ರಭೇದದ ಮುಳ್ಳುಗಿಡಗಳನ್ನು ಆರಿಸಿ, ನಾಲ್ಕಾರು ಅಡಿ ಅಗಲವಾಗಿ ನಾಟಿ ಮಾಡಿಸಿ, ನೀರುಣಿಸಿ, ಜೀವಂತ ಗಿಡಗಳ ಬೇಲಿ ನಿರ್ಮಿಸುವ ಯೋಜನೆಯನ್ನು ಈತ ರೂಪಿಸಿ, ಜಾರಿಗೊಳಿಸಿದ.

1870ರ ನಂತರ ಅಧಿಕಾರ ವಹಿಸಿಕೊಂಡ ಇತರ ಬ್ರಿಟಿಷ್ ಅಧಿಕಾರಿಗಳು, ಎ.ಒ.ಹ್ಯೂಮ್ ರೂಪಿಸಿದ ಈ ಜೀವಂತ ಬೇಲಿಯನ್ನು ಇನ್ನಷ್ಟು ಅಭಿವೃದ್ಧಿಪಡಿಸಿದರು. 'ಸುಂಕ ಸಂಗ್ರಹಿಸಲು ನಿರ್ಮಾಣಗೊಂಡ ಈ ಜೀವಂತ ಮುಳ್ಳುಬೇಲಿಯು ಬ್ರಿಟಿಷ್ ರಾಜ್ ಕೈಗೊಂಡ ಅತಿ ಅಸಹ್ಯಕಾರಿ ಮತ್ತು ಕ್ರೂರ ಯೋಜನೆ' ಎಂದು ಆ ದಿನಗಳಲ್ಲೇ ಕುಖ್ಯಾತವಾಗಿತ್ತು. 'ಎ ಮಾನ್‌ಸ್ಟ್ರಸ್ ಸಿಸ್ಟಂ ಟು ವಿಚ್, ಇಟ್ ವುಡ್ ಬಿ ಆಲ್‌ಮೋಸ್ಟ್ ಇಂಪಾಸಿಬಲ್ ಟು ಫೈಂಡ್ ಎ ಪ್ಯಾರಲಲ್ ಇನ್ ಎನಿ ಟಾಲರೇಬಲಿ ಸಿವಿಲೈಸ್ಡ್ ಕಂಟ್ರಿ' ಎಂದು 1893ರಲ್ಲಿ ಇದರ ಕುರಿತು ಸರ್ ಜಾನ್ ಸ್ಟ್ರಾಚೆರಿ ಎಂಬ ಬ್ರಿಟಿಷ್ ಮಂತ್ರಿ ಹೇಳಿದ್ದ. ತಮ್ಮ ಸರಕಾರವು ಭಾರತದ ವಸಾಹತಿನಲ್ಲಿ ಅಭಿವೃದ್ಧಿಪಡಿಸಿದ್ದ ಈ ಮುಳ್ಳುಬೇಲಿಯ ಕ್ರೌರ್ಯದ ಕುರಿತು ಬ್ರಿಟನ್‌ನಲ್ಲಿ ಈತ ನೀಡಿದ ಹೇಳಿಕೆ ಪ್ರಸಿದ್ಧವಾದರೂ, ಅದು ಕೇವಲ ಮೊಸಳೆ ಕಣ್ಣೀರು ಮಾತ್ರ; ಏಕೆಂದರೆ, ಸಾವಿರಾರು ಮೈಲು ಉದ್ದದ ಆ ಜೀವಂತ ಮುಳ್ಳುಬೇಲಿ ಬೆಳೆಯುತ್ತಲೇ ಹೋಯಿತು.

ಈ ಮುಳ್ಳುಬೇಲಿಯ ಸ್ವರೂಪಕ್ಕಿಂತ, ಅದನ್ನು ನಿರ್ಮಿಸಿದ ಉದ್ದೇಶವೇ ಅಸಹ್ಯಕಾರಿ, ಭೀಭತ್ಸ, ಕ್ರೂರ. ಕಡುಬಡವರಿಗೂ ಅಗತ್ಯವಿದ್ದ ಉಪ್ಪನ್ನು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಭಾರತೀಯರು ಸಾಗಿಸುವಾಗ ಬ್ರಿಟಿಷ್ ಸರಕಾರಕ್ಕೆ ನೀಡಬೇಕಾಗಿದ್ದ ಅಧಿಕ ಸುಂಕವೇ ಈ ಬೇಲಿಯನ್ನು ಅಮಾನವೀಯ ಎನಿಸುವಂತೆ ಮಾಡಿತ್ತು. ಆದರೇನು ಮಾಡುವುದು, ಬ್ರಿಟಿಷರು ಹಣ ಸಂಗ್ರಹಿಸುವಾಗ, ಹೆಚ್ಚಿನ ಸುಂಕ-ಕಡಿಮೆ ಸುಂಕ ಎಂಬ ಮಾನವೀಯ ಮುಖವನ್ನು ನೋಡುತ್ತಿರಲಿಲ್ಲ. 'ಕಲೆಕ್ಷನ್' ಅವರ ಮೂಲಧ್ಯೇಯ- ಅದಕ್ಕಾಗಿಯೇ ತಾನೆ ನಮ್ಮ ದೇಶದ ಜಿಲ್ಲೆ ಜಿಲ್ಲೆಗಳಲ್ಲೂ 'ಡಿಸ್ಟ್ರಿಕ್ಟ್ ಕಲೆಕ್ಟರ್'ಗಳನ್ನು ಅವರು ನಿಯುಕ್ತಗೊಳಿಸಿದ್ದು!

ಈ ಮುಳ್ಳುಬೇಲಿಯ ಅಂಕಿ-ಅಂಶಗಳು, ಕಾರ್ಯವಿಧಾನ, ಬೆಳೆಸಿದ ರೀತಿ, ಅದು ಸಾಧಿಸಿದ ಯಶಸ್ಸು- ಎಲ್ಲವನ್ನೂ ಭಯಾನಕ ಎಂದೇ ಹೇಳಬಹುದು. ಮುಳ್ಳುಬೇಲಿಯ ಈ ಅಸಹ್ಯಸ್ವರೂಪವನ್ನು ಗುರುತಿಸಿಯೇ, ಬ್ರಿಟಿಷ್ ಅಧಿಕಾರಶಾಹಿ ಮತ್ತು ಇತಿಹಾಸಕಾರರು ಅದರ ಅಸ್ತಿತ್ವವನ್ನೇ ನಂತರದ ದಶಕಗಳಲ್ಲಿ ಮುಚ್ಚಿಹಾಕಿದ್ದರು! 1870ರ ದಶಕದಲ್ಲಿ ಈ ಬೇಲಿಯು ಉತ್ತುಂಗದಲ್ಲಿದ್ದಾಗ, ಅದರ ಉದ್ದವು ಸುಮಾರು 2,500 ಮೈಲಿ! (4,000 ಕಿಮೀ).

ಮುಳ್ಳುಬೇಲಿಯನ್ನು ಬೆಳೆಸಲು ಅವರು ಮುಖ್ಯವಾಗಿ ಬಳಸಿದ್ದು ಜಾಲಿಮುಳ್ಳು, ಇಂಡಿಯನ್ ಪ್ಲಮ್, ಕವಳೆಕಾಯಿ (ಗರ್ಚನ ಮುಳ್ಳು), ಪಾಪಾಸುಕಳ್ಳಿ ಮೊದಲಾದ ಗಿಡಗಳನ್ನು. ಈ ಗಿಡಗಳ ಬೇಲಿಯು ಸರಾಸರಿ 10 ಅಡಿ ಎತ್ತರವಾಗಿತ್ತು, ನಾಲ್ಕಾರು ಅಡಿ ಅಗಲವಾಗಿತ್ತು. ಎ.ಒ.ಹ್ಯೂಮ್‌ನ ಅಧಿಕಾರಾವಧಿಯಲ್ಲಿ ಇದರ ಉಸ್ತುವಾರಿ ನೋಡಿಕೊಳ್ಳಲು ಸುಮಾರು 14,000 ಸಿಬ್ಬಂದಿ ಕೆಲಸ ಮಾಡುತ್ತಿದ್ದುದು ದಾಖಲಾಗಿದೆ. ಈ ಮುಳ್ಳುಬೇಲಿಗೆ ಇನ್ನೊಂದು ಅಧಿಕೃತ, ಅಧಿಕಾರಯುತ ಹೆಸರೂ ಇತ್ತು: 'ಇನ್‌ಲ್ಯಾಂಡ್ ಕಸ್ಟಂಸ್ ಲೈನ್'! ಈ ಮಹಾನ್ ಬೇಲಿಯು ಸುಸ್ಥಿತಿಯಲ್ಲಿದ್ದ ಸಮಯದಲ್ಲಿ ಎಷ್ಟು ದಟ್ಟವಾಗಿ ಬೆಳೆದಿತ್ತೆಂದರೆ ಅದರ ಮೂಲಕ ಮನುಷ್ಯರಾಗಲೀ, ಹೇರು ಪ್ರಾಣಿಗಳಾಗಲೀ ನುಗ್ಗುವುದು ಅಸಾಧ್ಯವಾಗಿತ್ತು. ಬೇಲಿಯುದ್ದಕ್ಕೂ ಸಾಗಿದ್ದ ಕಾಲ್ದಾರಿಯಲ್ಲಿ ನಡೆಯುತ್ತಾ ಹೋದರೆ, ಅಲ್ಲಲ್ಲಿ ಅದನ್ನು ದಾಟಲು ದಾರಿಯನ್ನು ಮಾಡಲಾಗಿತ್ತು. ಅದೇ ಸುಂಕ ವಸೂಲಿ ಮಾಡುವ ಸ್ಥಳ. ಮುಖ್ಯವಾಗಿ ಉಪ್ಪಿನ ಮೇಲೆ ಅಧಿಕ ಸುಂಕವನ್ನು ಆಗ ವಸೂಲು ಮಾಡುತ್ತಿದ್ದರು. ಜತೆಗೆ ಸಕ್ಕರೆ, ಅಫೀಮು ಮೊದಲಾದ ವಸ್ತುಗಳ ಮೇಲೂ ಸುಂಕ ವಸೂಲಿಯಾಗುತ್ತಿತ್ತು.

ನಾಲ್ಕಾರು ಅಡಿ ಅಗಲದ ಈ ಮುಳ್ಳುಬೇಲಿಯನ್ನು ಬೆಳೆಸಲು, ಉಸ್ತುವಾರಿ ನೋಡಿಕೊಳ್ಳಲು ಬ್ರಿಟಿಷರು ಒಂದು ಬಲಿಷ್ಠ ವ್ಯವಸ್ಥೆಯನ್ನೇ ರೂಪಿಸಿದ್ದರು. ಬೇಲಿಯುದ್ದಕ್ಕೂ ಕಚ್ಚಾ ರಸ್ತೆ ಅಥವಾ ಕಾಲ್ದಾರಿ ಇರುತ್ತಿತ್ತು. ಅದನ್ನು ಪ್ರತಿದಿನ ಕೆಲಸಗಾರರು ಮುಳ್ಳಿನ ಪೊರಕೆಯಿಂದ ಗುಡಿಸಬೇಕಿತ್ತು. ನಂತರ, ಆ ಧೂಳುದಾರಿಯಲ್ಲಿ ಯಾರೇ ಸಾಗಿದರೂ ಹೆಜ್ಜೆಗುರುತು ಮೂಡುತ್ತಿತ್ತು. ಅದನ್ನು ಕಂಡು ಸುಂಕ ವಸೂಲಿ ಸಿಬ್ಬಂದಿ ಜಾಗೃತರಾಗಿ ಅಧಿಕಾರ ಚಲಾಯಿಸುತ್ತಿದ್ದರು. ಬೇಸಗೆಯಲ್ಲಿ ಮುಳ್ಳಿನ ಗಿಡಗಳಿಗೆ ನೀರು ಹಾಕುವ ವ್ಯವಸ್ಥೆಯಿತ್ತು. ಕೆರೆಗಳು ಇಲ್ಲದ ಜಾಗದಲ್ಲಿ, ಅದಕ್ಕೆಂದೇ ಬಾವಿಯನ್ನು ತೋಡಲಾಗಿತ್ತು! ಪ್ರತಿ 10ರಿಂದ 15 ಮೈಲಿ ಅಂತರದಲ್ಲಿ, ಉಸ್ತುವಾರಿ ನೋಡಿಕೊಳ್ಳಲು ಒಬ್ಬ ಜಮೇದಾರ್ ಮತ್ತು 10 ನೌಕರರಿದ್ದರು. ಪಂಜಾಬಿನ ಸಿಂಧೂ ನದಿಯ ದಡದಿಂದ ಆರಂಭಗೊಂಡ ಈ ಮುಳ್ಳುಬೇಲಿಯು, ದೆಹಲಿ, ಆಗ್ರಾ ಮೊದಲಾದ ಸ್ಥಳಗಳನ್ನು ಸುತ್ತುವರಿದು, ಒಡಿಶಾ ಗಡಿಯ ತನಕ ಮುಂದುವರಿದಿತ್ತು. 2,500 ಮೈಲಿ ಉದ್ದದ ಈ ಬೇಲಿಯು ಬ್ರಿಟಿಷ್ ರಾಜ್‌ನ ಕುಖ್ಯಾತ ಸಾಧನೆ.

1869-70ರಲ್ಲಿ ಬ್ರಿಟಿಷ್ ಸರಕಾರವು ಸುಮಾರು 1.25 ಕೋಟಿ ರುಪಾಯಿಗಳನ್ನು ಉಪ್ಪಿನ ಮೇಲಿನ ಸುಂಕದ ರೂಪದಲ್ಲಿ ಸಂಗ್ರಹಿಸಿತ್ತು. ಈ ಮೊತ್ತವು 1877ರಲ್ಲಿ 2.91 ಕೋಟಿ ರುಪಾಯಿಗಳಿಗೆ ಏರಿತು! ಸಕ್ಕರೆಯ ಮೇಲಿನ ಸುಂಕದಿಂದ ವಾರ್ಷಿಕ ಸುಮಾರು 10 ಲಕ್ಷ ರುಪಾಯಿ ಬರುತ್ತಿತ್ತು. ಆದರೆ ಬಡವರ ಜೀವನಾವಶ್ಯಕ ವಸ್ತುವಾಗಿದ್ದ ಉಪ್ಪಿನ ಮೇಲೆ ಅಂದು ವಿಧಿಸಿದ ಅತಿಯಾದ ತೆರಿಗೆ ಅಮಾನವೀಯ. 1888ರಲ್ಲಿ ಒಂದು ಮೌಂಡ್ (ಸುಮಾರು 37 ಕೆ.ಜಿ.) ಉಪ್ಪಿಗೆ ಬ್ರಿಟಿಷರು ವಿಧಿಸಿದ ತೆರಿಗೆ ರು.2.50 (ಕೆಲವು ಪ್ರದೇಶದಲ್ಲಿ ತುಸು ಕಡಿಮೆ). ಅದು ಅಂದಿನ ಒಬ್ಬ ಕೃಷಿ ಕಾರ್ಮಿಕನ ಒಂದು ತಿಂಗಳ ವೇತನಕ್ಕಿಂತ ಜಾಸ್ತಿ!

1879ರ ಎಪ್ರಿಲ್ 1ರಿಂದ ಜೀವಂತ ಮುಳ್ಳುಬೇಲಿಯ ಯೋಜನೆಯನ್ನು ಬ್ರಿಟಿಷರು ಕೈಬಿಟ್ಟರು. ಜತೆಗೆ, ಆ ಬೇಲಿಯುದ್ದಕ್ಕೂ ಇದ್ದ ಸುಂಕ ವಸೂಲಾತಿ ಕೇಂದ್ರಗಳು ಮುಚ್ಚಲ್ಪಟ್ಟವು. ಇದು ಮಾನವೀಯತೆಯಿಂದಲ್ಲ. ಬದಲಿಗೆ, ಉಪ್ಪಿನ ತಯಾರಿಯ ಜಾಗದಲ್ಲೇ ಸುಂಕ ವಸೂಲಿ ವ್ಯವಸ್ಥೆಯನ್ನು ಬ್ರಿಟಿಷರು ಜಾರಿಗೆ ತಂದರು. ಗುಜರಾತ್‌ನ ವಿಶಾಲ ಪ್ರದೇಶದ ಉಪ್ಪಿನ ಗಣಿಗಳನ್ನು ಬ್ರಿಟಿಷರು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದರಿಂದ, ಉತ್ತರ ಭಾರತದಲ್ಲಿ ಆರಂಭಗೊಂಡು, ಮಧ್ಯಭಾರತದುದ್ದಕ್ಕೂ ಹಾದುಹೋಗಿ, ಒಡಿಶಾದಲ್ಲಿ ಕೊನೆಗೊಂಡಿದ್ದ ಆ ಬೇಲಿಯ ಅವಶ್ಯಕತೆ ಅವರಿಗೆ ಕಾಣಲಿಲ್ಲ. 1879ರಿಂದ ಅವಗಣನೆಗೆ ಗುರಿಯಾದ ಈ ಮುಳ್ಳುಬೇಲಿ ನಂತರದ ನಾಲ್ಕಾರು ದಶಕಗಳಲ್ಲಿ ಮೂಲೆಗುಂಪಾಯಿತು. ಕವಳಿಗಿಡ, ಪಾಪಸುಕಳ್ಳಿ, ಜಾಲಿ ಮೊದಲಾದ ಗಿಡಗಳು ಒಣಗಿಹೋದವು. ಬೇಲಿಯುದ್ದಕ್ಕೂ ಹಾದುಹೋಗಿದ್ದ ಕಾವಲುಗಾರರ ದಾರಿಯು, ಕ್ರಮೇಣ ರಸ್ತೆಯಾಗಿ ಪರಿವರ್ತನೆಗೊಂಡು, ಇಂದಿಗೂ ಉಪಯೋಗದಲ್ಲಿದೆ.

ಸುಮಾರು 4,000 ಕಿ.ಮೀ. ಉದ್ದ, 10 ಅಡಿ ಎತ್ತರ, ನಾಲ್ಕಾರು ಅಡಿ ಅಗಲದ ಈ ವ್ಯವಸ್ಥಿತ ಮುಳ್ಳುಬೇಲಿಯು ಬ್ರಿಟಿಷ್ ಸರಕಾರದ ಒಂದು ಸಾಧನೆಯಾಗಿ ಹೆಸರಾಗಬೇಕಿತ್ತು. ಆದರೆ, ಹಾಗಾಗಲಿಲ್ಲ! ಬದಲಿಗೆ, ಇಂಥ ಅಮಾನವೀಯ 'ಮಹಾನ್ ಮುಳ್ಳುಬೇಲಿ'ಯೊಂದು ಅಸ್ತಿತ್ವದಲ್ಲಿತ್ತು ಎಂಬ ಸತ್ಯವನ್ನೇ ವ್ಯವಸ್ಥಿತವಾಗಿ ಮುಚ್ಚಿ ಹಾಕಿ, ಇದರ ವಿವರಗಳು ಪ್ರಚಾರಕ್ಕೆ ಬರದಂತೆ ನೋಡಿಕೊಳ್ಳಲಾಗಿತ್ತು. ಬಿಸಿಲುಗಾಲದಲ್ಲಿ ಉಂಟಾಗುವ ಡಿಹೈಡ್ರೇಷನ್ ತಡೆಯಲು ಎಲ್ಲರಿಗೂ ಬೇಕಿದ್ದ ಉಪ್ಪನ್ನು, ಅತಿ ಹೆಚ್ಚಿನ ತೆರಿಗೆಗೆ ಒಳಪಡಿಸಿದ್ದಕ್ಕೆ ಬ್ರಿಟಿಷ್ ಅಧಿಕಾರಿಗಳಿಗೆ ವೈಯಕ್ತಿಕವಾಗಿ ಒಳಗೊಳಗೇ ನಾಚಿಕೆ ಇದ್ದಿರಬೇಕು; ಆದ್ದರಿಂದಲೇ ಈ ಮುಳ್ಳುಬೇಲಿಯನ್ನು ಬೆಳೆಸಿದ ಬ್ರಿಟಿಷ್ ಸರಕಾರದ ಸಾಧನೆಯನ್ನು ಅಂದಿನ ಇತಿಹಾಸಕಾರರು ವ್ಯವಸ್ಥಿತವಾಗಿ ಮುಚ್ಚಿಹಾಕಿದ್ದರು. ಎಷ್ಟರ ಮಟ್ಟಿಗೆ ಎಂದರೆ, ಇಂಥದ್ದೊಂದು ಬೇಲಿ ಇತ್ತು ಎಂಬ ವಿಚಾರವೇ ಕ್ರಮೇಣ ಮರೆತುಹೋಯಿತು!

ಈ ಅಮಾನವೀಯ ಮುಳ್ಳುಬೇಲಿಯ ಅಸ್ತಿತ್ವವು 1995ರಲ್ಲಿ ರೋಯ್ ಮೋಕ್ಸಾಮ್‌ಗೆ ಗೊತ್ತಾಗಿದ್ದು ಆಕಸ್ಮಿಕವಾಗಿ. ಬ್ರಿಟಿಷ್ ಅಧಿಕಾರಿಯೊಬ್ಬನ ಹಳೆಯ ನೆನಪುಗಳಲ್ಲಿ ಈ ಬೇಲಿಯ ಸಾಂದರ್ಭಿಕ ಪ್ರಸ್ತಾಪವನ್ನು ಕಂಡು ಆತ ಕುತೂಹಲಗೊಂಡ. ಲಂಡನ್ ವಿಶ್ವವಿದ್ಯಾಲಯದ ಲೈಬ್ರರಿಯಲ್ಲಿ ಕ್ಯುರೇಟರ್ ಆಗಿದ್ದ ರೋಯ್ ಮೋಕ್ಸಾಮ್, ಈ ಮುಳ್ಳುಬೇಲಿಯ ವಿವರ ಕಲೆಹಾಕಲು ಯತ್ನಿಸಿದ. ಮೊದಲಿಗೆ ಮಾಹಿತಿ ದೊರಕಲಿಲ್ಲ. ಇನ್ನಷ್ಟು ಹುಡುಕಾಡಿ, ಹಳೆಯ ಭೂಪಟಗಳನ್ನು ತಲಾಶೆ ಮಾಡಿದಾಗ, ಒಂದೊಂದೇ ವಿವರ ಬಯಲಿಗೆ ಬರತೊಡಗಿತು. ಈ ಬೇಲಿಯನ್ನು ಹುಡುಕಿಕೊಂಡು 3 ಬಾರಿ ಭಾರತಕ್ಕೆ ಪ್ರವಾಸ ಮಾಡಿ, ಆ ಬೇಲಿ ಹಾದುಹೋಗಿದ್ದ ಹಳ್ಳಿಗಳನ್ನು ಸಂದರ್ಶಿಸಿ, ಅಲ್ಲಿನ ಹಿರಿಯರನ್ನು ಕೇಳಿದ. ಆದರೆ ಹೆಚ್ಚಿನವರಿಗೆ ಆ ಮುಳ್ಳುಬೇಲಿಯ ಅರಿವಿರಲಿಲ್ಲ. ಕೊನೆಗೂ ಒಂದಿಬ್ಬರು ಹಿರಿಯರು 'ಪರ್ಮಿಟ್ ಲೈನ್' ಎಂಬ ಹೆಸರಿನ ಮುಳ್ಳುಬೇಲಿಯ ಕುರಿತು ತಮ್ಮ ಹಿರಿಯರು ಹೇಳುತ್ತಿದ್ದುದನ್ನು ನೆನಪಿಸಿಕೊಂಡರು. ಒಂದೆರಡು ಸ್ಥಳಗಳಲ್ಲಿ ಆ ಬೇಲಿಯ ಕುರುಹುಗಳಿದ್ದುದನ್ನು ಮೋಕ್ಸಾಮ್ ಕಂಡುಕೊಂಡ. ಸಾಕಷ್ಟು ಸಂಶೋಧನೆ ಮಾಡಿ, 2001ರಲ್ಲಿ 'ದ ಗ್ರೇಟ್ ಇಂಡಿಯನ್ ಹೆಜ್' ಎಂಬ ಪುಸ್ತಕವನ್ನು ಆತ ಹೊರತಂದಾಗ, ಜಗತ್ತಿನ ಇತಿಹಾಸಜ್ಞರು, ಇತಿಹಾಸ ಪ್ರಿಯರು, ಓದುಗರು ಅಚ್ಚರಿಪಟ್ಟರು, ಬೆಚ್ಚಿಬಿದ್ದರು. ಇಂಥ ಅಮಾನವೀಯ ಬೃಹತ್ ಬೇಲಿಯ ವಿವರಗಳು ಇತಿಹಾಸದಿಂದ ಮರೆಯಾಗಿದ್ದಾದರೂ ಹೇಗೆ ಎಂಬ ಅಚ್ಚರಿ ಎಲ್ಲರಲ್ಲೂ! ಅಂದು ಬ್ರಿಟಿಷರು ವಿಧಿಸಿದ ಉಪ್ಪಿನ ಮೇಲಿನ ಅಧಿಕ ಸುಂಕವು 1946ರ ತನಕ ಮುಂದುವರಿದಿತ್ತು ಎಂಬುದು ಮತ್ತೊಂದು ಅಚ್ಚರಿ. ಆತ ಬರೆದ ಪುಸ್ತಕದ ಸಂಕ್ಷಿಪ್ತ ರೂಪವು ಕನ್ನಡದಲ್ಲೂ ಪ್ರಕಟಗೊಂಡಿದೆ.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- **ಬಂಗಾಳ ಕೊಲ್ಲಿಯಲ್ಲಿ ಮತ್ತೆ ಚಂಡಮಾರುತ, ಮಂಡ್ಯ ಸಾಹಿತ್ಯ ಸಮ್ಮೇಳನಕ್ಕೆ ಚಳಿ-ಮಳೆಯ ಭೀತಿ: ಸುದ್ದಿ**
- ಡೋಂಟ್‌ವರಿ ಮಾಡ್ಕೋಬೇಡಿ! ವೇದಿಕೆಯಲ್ಲಿ 'ಬಿಸಿಬಿಸಿ' ಚರ್ಚೆಯಾದ್ರೆ, ಅದಕ್ಕೆ ಪ್ರೇಕ್ಷಕರಿಂದ 'ಸುಡುಸುಡು' ಪ್ರತಿಕ್ರಿಯೆ ವ್ಯಕ್ತವಾದ್ರೆ... ಸಮ್ಮೇಳನದ ಚಳಿ-ಮಳೆ ಮಟಾಷ್!

- **ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಸಿಲುಕಿರುವ ನಾಸಾದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಮಾರ್ಚ್ ಅಂತ್ಯಕ್ಕೆ ಭೂಮಿಗೆ ಮರಳಲಿದ್ದಾರೆ: ನಾಸಾ**
- ಈ ಸುದ್ದಿ ಓದಿದ ಉದಯೋನ್ಮುಖ ಚಿತ್ರ ನಿರ್ಮಾಪಕರೊಬ್ಬರು 'ತವರಿಗೆ ಬಾ ತಂಗಿ' ಚಿತ್ರದ ನಿರ್ದೇಶಕ ಸಾಯಿಪ್ರಕಾಶ್‌ರ ಸಾರಥ್ಯದಲ್ಲಿ 'ತವರಿಗೆ ಬಾ ಅಕ್ಕ' ಹೆಸರಿನ ಫಿಲಮ್ಮನ್ನು ಸೆಟ್ಟೇರಿಸಲಿದ್ದಾರಂತೆ!

- **ವಿಧಾನಸಭಾಧ್ಯಕ್ಷಗಿರಿ, ಮಂತ್ರಿಗಿರಿ ನನಗೆ ಬೇಡ. ನನ್ನ ಗುರಿ ಏನಿದ್ದರೂ ಡೈರೆಕ್ಟಾಗಿ ಮುಖ್ಯಮಂತ್ರಿ ಸ್ಥಾನದ ಕಡೆಗೆ: ಶಾಸಕ ಬಸನಗೌಡ ಪಾಟೀಲ್ ಯತ್ನಾಳ್**
- ಶೀಘ್ರಮೇವ ಇಷ್ಟಾರ್ಥ ಸಿದ್ಧಿರಸ್ತು, ಅಪೇಕ್ಷಿತ ಸ್ಥಾನ ಪ್ರಾಪ್ತಿರಸ್ತು!!

- **ಹಾಸನ ಸಹಕಾರಿ ಬ್ಯಾಂಕ್ ಒಂದು ಕುಟುಂಬದ ಕೈಯಲ್ಲಿದ್ದು, ಇದನ್ನು ಕೊನೆಗಾಣಿಸಲು ಸಹಕಾರ ಸಚಿವರು ಕ್ರಮ ವಹಿಸಬೇಕಿದೆ: ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯ ಎಸ್.ರವಿ**
- ಸರ್, ವಂಶಾಡಳಿತವಿರೋದು ಸಹಕಾರಿ ಬ್ಯಾಂಕ್‌ನಲ್ಲಿ ಮಾತ್ರವೇ ಅಲ್ಲ ಹಾಗೂ ಹಾಸನದಲ್ಲಷ್ಟೇ ಅಲ್ಲ....

- **ಉತ್ತರ ಕರ್ನಾಟಕ ಪ್ರದೇಶದ ನೀರಾವರಿ ಯೋಜನೆಗಳಿಗೆ ನ್ಯಾಯ ಒದಗಿಸಲು ಈ ಭಾಗದವರನ್ನೇ ಜಲಸಂಪನ್ಮೂಲ ಸಚಿವರನ್ನಾಗಿ ಸರಕಾರ ನೇಮಕ ಮಾಡಬೇಕು: ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆಗ್ರಹ**
- ''ನಮ್ಮ ಬಯಕೆಯನ್ನು ನೀವಾದ್ರೂ ಹೇಳಿದ್ರಲ್ಲ ಯತ್ನಾಳರೇ...'' ಅಂತ ಆ ಭಾಗದ ಕೆಲ ಶಾಸಕರು ಯತ್ನಾಳರಿಗೆ ಸದ್ದಿಲ್ಲದೆ ಥ್ಯಾಂಕ್ಸ್ ಹೇಳಿ, ಮನಸ್ಸಿನಲ್ಲೇ ಮಂಡಿಗೆ ತಿನ್ನತೊಡಗಿದರಂತೆ!

- **ಜಾತಿ-ಪಕ್ಷ ಬಿಟ್ಟು ಮಂಡ್ಯದ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ಸಿಗೆ ಕೈಜೋಡಿಸಿ: ಸಚಿವ ಎನ್.ಚಲುವರಾಯಸ್ವಾಮಿ ಕರೆ**
- ಹೌದು ಸರ್.... 'ನೂರು ಮತಗಳನು ನೂಕಾಚೆ ದೂರ' ಅಂತ ಕವಿ ಕುವೆಂಪು ಅವರು ಹೇಳಿದ್ದು ಸುಮ್ನೇನಾ?!!

- **ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ 'ಅಶ್ವಿನ್' ವಿದಾಯ: ಸುದ್ದಿ**
- ನೀವು ಹೀಗೆ ವಿದಾಯ ಹೇಳಿದ್ರೂ ಕ್ರೀಡಾಭಿಮಾನಿಗಳ ಹೃದಯದಲ್ಲಿ 'ಅಶ್ವಿನ್' ನಕ್ಷತ್ರವಾಗಿ ಚಿರಕಾಲ ಮಿನುಗ್ತಾ ಇರ್ತೀರ ಸರ್...

- **ಬ್ಯಾಂಕುಗಳಿಗೆ ಸಾವಿರಾರು ಕೋಟಿ ರುಪಾಯಿ ವಂಚಿಸಿ ಅನ್ಯದೇಶಗಳಲ್ಲಿ ತಲೆಮರೆಸಿಕೊಂಡಿರುವ ವಿಜಯ್ ಮಲ್ಯ, ನೀರವ್ ಮೋದಿ, ಮೆಹುಲ್ ಚೋಕ್ಸಿ ಮುಂತಾದ ಉದ್ಯಮಿಗಳಿಗೆ ಸೇರಿದ 22,000 ಕೋಟಿ ರು. ಮೌಲ್ಯದ ಆಸ್ತಿ ಜಪ್ತಿ: ಸುದ್ದಿ**
- ಅಬ್ಬಾ! ಊರನ್ನು ಕೊಳ್ಳೆ ಹೊಡೆದ ಮೇಲೆ ಕೊನೆಗೂ ದಿಡ್ಡಿಬಾಗಿಲು ಹಾಕಿದ್ರಪ್ಪಾ...!



ಅಳಿದ ಮುತ್ಸದ್ದಿಯ ಉಳಿದ ನೆನಪುಗಳು

ಸಂಸ್ಮರಣೆ
ನಾಡೋಜ ಡಾ.ಮಹೇಶ ಜೋಶಿ
vveditoped@gmail.com

1994ರಲ್ಲಿ ಮಂಡ್ಯದಲ್ಲಿ ಚದುರಂಗರ ಅಧ್ಯಕ್ಷತೆಯಲ್ಲಿ ನಡೆದ 63ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರೂವಾರಿ ಎನ್ನಿಸಿಕೊಂಡಿದ್ದ ಎಸ್.ಎಂ. ಕೃಷ್ಣ ಅವರ ಹೆಸರನ್ನು ಮತ್ತೆ ಮಂಡ್ಯದಲ್ಲಿಯೇ ಆಯೋಜನೆಗೊಂಡಿರುವ 87ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ವೇದಿಕೆಗೆ ಇಡಬೇಕಾಗಿ ಬಂದಿರುವುದು ನಿಜಕ್ಕೂ ನೋವಿನ ಸಂಗತಿ. ಅವರು ನನ್ನನ್ನು ಬಹು ಪ್ರೀತಿಯಿಂದ 'ಮಹೇಶ್' ಎಂದು ಕರೆಯುತ್ತಿದ್ದರು. ಸಮ್ಮೇಳನದ ಕುರಿತು ನನ್ನ ಬಳಿ ತೀರಾ ಖಾಸಗಿಯಾಗಿ ''ನನ್ನ ಆರೋಗ್ಯ ಕ್ಷೀಣಿಸುತ್ತಿದೆ, ಸಮ್ಮೇಳನದ ಸಂದರ್ಭದಲ್ಲಿ ಆರೋಗ್ಯ ಚೆನ್ನಾಗಿದ್ದರೆ ನಾನೇ ಬರುತ್ತೇನೆ. ಇಲ್ಲದಿದ್ದರೆ ನೀವು ವ್ಹೀಲ್ ಚೇರ್, ಆ್ಯಂಬುಲೆನ್ಸ್, ಜೀರೋ ಟ್ರಾಫಿಕ್‌ನ ವ್ಯವಸ್ಥೆ ಮಾಡಿದರೆ ಕೆಲವು ನಿಮಿಷಗಳ ಮಟ್ಟಿಗಾದರೂ ಬರುತ್ತೇನೆ. ನಾನು ಬರುವ ಸುದ್ದಿ ಗೋಪ್ಯವಾಗಿರಬೇಕು, ನಾನು ಬಂದ ನಂತರವೇ ಎಲ್ಲರಿಗೂ ಗೊತ್ತಾಗಬೇಕು. ಚೆನ್ನಾಗಿದ್ದರೆ ನಾನು ಮಾತಾಡುತ್ತೇನೆ, ಇಲ್ಲದಿದ್ದರೆ ನನ್ನೂರು ಮಂಡ್ಯದಲ್ಲಿ ನಡೆಯುವ ಸಮ್ಮೇಳನದಲ್ಲಿ ಮುಖ ತೋರಿಸುತ್ತೇನೆ. ಕನ್ನಡ ಹಬ್ಬದಲ್ಲಿ ಭಾಗಿಯಾದ ಧನ್ಯತೆ ದೊರಕುತ್ತದೆ. ದೇವರು ನನ್ನನ್ನು ತನ್ನ ಬಳಿಗೆ ಯಾವಾಗ ಕರೆಸಿಕೊಳ್ಳುತ್ತಾನೆಯೋ ಗೊತ್ತಿಲ್ಲ'' ಎಂದು ಹೇಳಿದ್ದರು. ಈ ಘಟನೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಅದನ್ನು ನೆನಪು ಮಾಡಿಕೊಂಡರೆ ಕಣ್ಣಿನಲ್ಲಿ ನೀರು ತುಂಬಿಕೊಳ್ಳುತ್ತದೆ. ಅವರ ಕೊನೆಯ ಆಸೆ ನೆರವೇರದೇ ಹೋಯಿತಲ್ಲ ಎನ್ನಿಸಿ, ವಿಧಿಯ ಮುಂದೆ ನಾವೆಷ್ಟು ಅಸಹಾಯಕರು ಎನ್ನುವ ಭಾವ ಕಾಡುತ್ತದೆ.

ಸುಸಂಸ್ಕೃತ ರಾಜಕಾರಣಿಯಾಗಿದ್ದ ಅವರು ಕಲೆ, ಸಾಹಿತ್ಯದ ಕುರಿತು ಅಪಾರ ಪ್ರೇಮವನ್ನು ಇಟ್ಟುಕೊಂಡಿದ್ದರು. ಹಲವು ಕ್ಷೇತ್ರಗಳಲ್ಲಿ ಆಳವಾದ ಅಧ್ಯಯನವನ್ನು ನಡೆಸಿದ್ದ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಕಳೆದ ವರ್ಷ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನದಂದು ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ ಕಾರ್ಯಕ್ರಮದ ವಿವರಗಳನ್ನು ದಿನಪತ್ರಿಕೆಯಲ್ಲಿ ನೋಡಿ ದೂರವಾಣಿ ಮೂಲಕ ವಿವರಗಳನ್ನು ತಿಳಿದುಕೊಂಡು, ಅಭ್ಯಾಗತರಾಗಿ ಬಂದು ಪ್ರೇಕ್ಷಕರಾಗಿ ಮುಂದಿನ ಸಾಲಿನಲ್ಲಿ ಕುಳಿತು, ನಂತರ ನನ್ನ ಒತ್ತಾಯದ ಮೇರೆಗೆ ವೇದಿಕೆಗೆ ಬಂದು ತರುವಾಯ ತಮ್ಮ ಮನದಾಳದ ಮಾತುಗಳನ್ನಾಡಿದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಅವರಿಗಿದ್ದ ಅಕ್ಕರೆ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕುರಿತು ಅವರಿಗಿದ್ದ ಗೌರವಕ್ಕೆ ಹಾಗೂ ನನ್ನ ಸ್ನೇಹಕ್ಕೆ ಕೊಟ್ಟ ಮನ್ನಣೆಗೆ ನಿದರ್ಶನವಾಗಿದೆ. ಮಂಡ್ಯದಲ್ಲಿ 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಘೋಷಣೆಯಾದ ದಿನದಿಂದಲೂ ಉತ್ಸಾಹ ತೋರಿದ್ದ ಅವರು ಹಲವು ಉಪಯುಕ್ತ ಸಲಹೆಗಳನ್ನು ನೀಡಿ ಎಲ್ಲಾ ರೀತಿಯ ಸಹಕಾರ ನೀಡುವ ಭರವಸೆಯನ್ನು ನೀಡಿದ್ದರು. ಈಗ ಅವರ ಅಗಲುವಿಕೆಯು ನನಗೆ ಹಾಗೂ ಮಂಡ್ಯದವರಿಗೆ ಮಾತ್ರವಲ್ಲದೆ ಕನ್ನಡಾಭಿಮಾನಿಗಳ ಪಾಲಿಗೆ ದೊಡ್ಡ ಶೂನ್ಯವನ್ನು ಸೃಷ್ಟಿಸಿದೆ ಎಂದೇ ಹೇಳಬೇಕು.

ನವೀಕರಣಗೊಂಡ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡ ಮತ್ತು ಸಭಾಂಗಣಗಳ ಬಗ್ಗೆ ಎಸ್.ಎಂ.ಕೃಷ್ಣ ಅವರು ಅಪಾರ ಮೆಚ್ಚುಗೆಯನ್ನು ಸೂಚಿಸಿದ್ದರು. ''ಅತ್ಯುತ್ತಮ ಗುಣಮಟ್ಟದ ಜತೆಗೆ ಸಾಹಿತ್ಯಕ ವಾತಾವರಣವನ್ನು ಸೃಷ್ಟಿ ಮಾಡಿದ್ದೀರಿ, ಪರಂಪರೆ ಮತ್ತು ಆಧುನಿಕತೆ ಎರಡನ್ನೂ ಹೀಗೆ ಜತೆಯಲ್ಲಿ ತೆಗೆದುಕೊಂಡು ಹೋಗುವುದು ಬಹು ಕಷ್ಟದ ಕೆಲಸ. ಈ ಕೆಲಸ ನಿಮ್ಮಿಂದಲೇ ಆಗಬೇಕು ಎಂದು ತಾಯಿ ಭುವನೇಶ್ವರಿ ನಿರ್ಧರಿಸಿದ್ದಳು. ಅದನ್ನು ನೀವು ಸಾಧಿಸಿದ್ದೀರಿ. ಆಧುನೀಕರಣದ ಮೆರುಗನ್ನು ತಂದು ಸರ್ ಎಂ. ವಿಶ್ವೇಶ್ವರಯ್ಯನವರ ಕನಸನ್ನು ನನಸು ಮಾಡಿದ್ದೀರಿ'' ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ವಿಧಾನ ಸೌಧದ ಕಟ್ಟಡವು ಆಡಳಿತಕ್ಕೆ ಚಿಕ್ಕದು ಎನ್ನಿಸಿದಾಗ 'ವಿಕಾಸ ಸೌಧ'ವನ್ನು ಕಟ್ಟಿದ್ದ ಎಸ್.ಎಂ.ಕೃಷ್ಣ ಅವರಿಂದ ದೊರೆತ ಈ ಮೆಚ್ಚುಗೆಯ ಮಾತು ನಿಜಕ್ಕೂ ಸಾರ್ಥಕತೆಯ ಭಾವವನ್ನು ನನ್ನಲ್ಲಿ ತಂದಿತ್ತು.



ಎಸ್.ಎಂ.ಕೃಷ್ಣ ಅವರ ಕೊನೆಯ ಸಂದೇಶವು, ಮಂಡ್ಯದಲ್ಲಿ ಆಯೋಜಿತವಾಗಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕುರಿತೇ ಆಗಿತ್ತು ಎನ್ನುವುದು, ಈ ಕುರಿತು ಅವರು ಎಷ್ಟು ಗಾಢವಾಗಿ ಚಿಂತಿಸುತ್ತಿದ್ದರು, ಸಮ್ಮೇಳನದಲ್ಲಿ ಭಾಗವಹಿಸಲು ಎಷ್ಟರ ಮಟ್ಟಿಗೆ ಉತ್ಸುಕರಾಗಿದ್ದರು ಎನ್ನುವುದಕ್ಕೆ ಸಾಕ್ಷಿಯಾಗಿದೆ. ಈ ವಿಚಾರಗಳನ್ನು ಅವರು ನನ್ನ ಜತೆಗೂ ಬಹಳ ಕಾಲದಿಂದ ಹಂಚಿಕೊಳ್ಳುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಸ್ವಾಯತ್ತತೆಯ ಬಗ್ಗೆ ಸ್ಪಷ್ಟ ಕಲ್ಪನೆಗಳಿದ್ದ ವಿರಳ ರಾಜಕಾರಣಿಗಳಲ್ಲಿ ಅವರೊಬ್ಬರಾಗಿದ್ದರು. ಸಾಹಿತ್ಯ ಪರಿಷತ್ತು ಸ್ಥಾಪಿತವಾದ ಹಿನ್ನೆಲೆ, ಅದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ನೀಡಿದ ಪ್ರೋತ್ಸಾಹ ಅವರಿಗೆ ಖಚಿತವಾಗಿ ಗೊತ್ತಿತ್ತು. ಸಾಹಿತ್ಯ ಸಮ್ಮೇಳನಗಳು ಕನ್ನಡ ಹಬ್ಬದ ಜತೆಗೆ ಕನ್ನಡದ ಅಸ್ಮಿತೆಯನ್ನು ಸಾರುವ ವಿಶೇಷ ಹಬ್ಬಗಳಾಗಬೇಕೆಂದು ಅವರು ಸದಾ ಹೇಳುತ್ತಿದ್ದರು. ''ಆತಿಥ್ಯಕ್ಕೆ ಹೆಸರಾದ ಮಂಡ್ಯ ಜಿಲ್ಲೆ, ಅತಿ ಹೆಚ್ಚು ಕನ್ನಡ ಭಾಷಿಕರನ್ನು ಹೊಂದಿದೆ. ಇಲ್ಲಿನ ಜನ ಕನ್ನಡ ಭಾಷೆಯನ್ನು ಗೌರವಿಸುವಲ್ಲಿ ಸದಾ ಮುಂದಿರುತ್ತಾರೆ'' ಎನ್ನುತ್ತಿದ್ದ ಕೃಷ್ಣ ಅವರು ಮಂಡ್ಯದಲ್ಲಿ ನಡೆದಿದ್ದ ಹಿಂದಿನ ಎರಡೂ ಸಮ್ಮೇಳನಗಳಲ್ಲಿ ತಾವು ಸಕ್ರಿಯವಾಗಿ ಭಾಗವಹಿಸಿದ್ದನ್ನು ನೆನಪು ಮಾಡಿಕೊಳ್ಳುತ್ತಾ, ''1994ರಲ್ಲಿ ನಾನು ರಾಜ್ಯದ ಉಪಮುಖ್ಯಮಂತ್ರಿಯಾಗಿದ್ದಾಗ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ನಡೆದಿತ್ತು. ಮಾದೇಗೌಡರ ಮುಂದಾಳತ್ವ ಮತ್ತು ಬಾಲಗಂಗಾಧರನಾಥ ಮಹಾಸ್ವಾಮಿಗಳ ಶ್ರೀರಕ್ಷೆಯಲ್ಲಿ ಇದು ನಡೆದಿತ್ತು'' ಎಂದಿದ್ದರು. ವಯೋಕಾರಣದಿಂದ ಅವರ ಅನುಭವ ಸಂಪತ್ತನ್ನು ಬಳಸಿಕೊಳ್ಳಲಾಗಲಿಲ್ಲ, ನಷ್ಟ ನಮ್ಮದು.

ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದಾಗ ಬಾಗಲಕೋಟೆ, ತುಮಕೂರು, ಬೆಳಗಾವಿ, ಮೂಡುಬಿದರೆ ಹೀಗೆ 68ರಿಂದ 71ರವರೆಗಿನ ನಾಲ್ಕು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಬಹು ಯಶಸ್ವಿಯಾಗಿ ನಡೆದಿದ್ದವು. ಅವುಗಳ ಆಯೋಜನೆಯಲ್ಲಿ ಅವರು ಅಪಾರ ಸಹಕಾರ ಮತ್ತು ಕಾಳಜಿಯನ್ನು ತೋರಿಸಿದ್ದರು. ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಅವರಿಗೆ ಅಪಾರ ಒಲವಿತ್ತು. ಗಮಕ ವಾಚನವನ್ನು ತಮ್ಮ ಮನೆಯಲ್ಲಿ ಏರ್ಪಡಿಸಿ ಕಾವ್ಯಗಳನ್ನು ಆನಂದಿಸುತ್ತಿದ್ದ ಕೃಷ್ಣ, ತಬಲಾ ವಾದನವನ್ನು ಬಲ್ಲವರಾಗಿದ್ದರು. ಸಾಹಿತ್ಯ-ಸಂಗೀತದ ಕಾರ್ಯಕ್ರಮಗಳಿಗೆ ಇಷ್ಟಪಟ್ಟು ಹೋಗುತ್ತಿದ್ದರು. ಅವರು ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದಾಗ ಭಾಗವಹಿಸಿದ್ದಷ್ಟು ಸಂಖ್ಯೆಯ ಸಂಗೀತ ಕಾರ್ಯಕ್ರಮಗಳಲ್ಲಿ ಇನ್ನಾವ ರಾಜಕಾರಣಿಗಳೂ ಭಾಗವಹಿಸಿರಲಾರರು.

ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳ ಮೇಲೆ ಅವರಿಗೆ ಒಳ್ಳೆಯ ಹಿಡಿತವಿತ್ತು. ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಜಾನ್ ಎಫ್.ಕೆನಡಿ ಸ್ಪರ್ಧಿಸಿದ್ದಾಗ ಅವರ ಪರವಾಗಿ ಕೃಷ್ಣರು ಪ್ರಚಾರ ಮಾಡಿ ಜಗತ್ತಿನ ಗಮನ ಸೆಳೆದಿದ್ದರು. ಆ ಕಾಲದಲ್ಲಿಯೇ ಅಮೆರಿಕದಲ್ಲಿ ಓದಿ ಬಂದಿದ್ದ ಅವರಿಗೆ ಮಂಡ್ಯದಲ್ಲಿ ನೂರು ಎತ್ತಿನ ಗಾಡಿಗಳಿಂದ ಸ್ವಾಗತ ಕೋರಲಾಗಿತ್ತು. ಇಂಥ ಹಿನ್ನೆಲೆ ಇದ್ದವರು ಚುನಾವಣಾ ರಾಜಕೀಯಕ್ಕೆ ಬಂದರು, ಒಳಸುಳಿಗಳನ್ನು ಎದುರಿಸಿದರು. ಸಾಮಾನ್ಯ ಜನರ ನೋವಿಗೆ ಸ್ಪಂದಿಸಿದರು. ಆದರೆ ಎಂದಿಗೂ ಎದುರಾಳಿಗಳ ಬಗ್ಗೆ ಕಹಿಯನ್ನು ನುಡಿಯಲಿಲ್ಲ, ತಮ್ಮ ಗಾಂಭೀರ್ಯವನ್ನು ಸಡಿಲಿಸಲಿಲ್ಲ. ಸಾಧ್ಯವಾದಾಗಲೆಲ್ಲ ಕಲೆ-ಸಾಹಿತ್ಯಕ್ಕೆ ಮನ್ನಣೆ ನೀಡಿದರು. ಕನ್ನಡಕ್ಕೆ ಅಧಿಕೃತವಾಗಿ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕುವಂತೆ ಮಾಡುವಲ್ಲಿ ಅವರು ಪ್ರಧಾನ ಪಾತ್ರವನ್ನು ವಹಿಸಿದ್ದರು.

ನಾನು ಒಮ್ಮೆ ದೂರದರ್ಶನದಲ್ಲಿ ಅವರ ಸಂದರ್ಶನ ಮಾಡುವಾಗ ಮಹಾಭಾರತದ ಕೃಷ್ಣನಿಗೆ ಸಮನಾದ ಚಾಣಾಕ್ಷತೆ ನಿಮ್ಮಲ್ಲಿದೆ ಎಂದು ಹೋಲಿಸಿದಾಗ, ''ಶ್ರೀಕೃಷ್ಣನ ರಾಜಕೀಯ ತಂತ್ರಗಾರಿಕೆ ಮತ್ತು ಮುತ್ಸದ್ದಿತನ ನನಗೆ ಮಾದರಿ; ಆದರೆ ನಾನೆಲ್ಲಿ ಅವನ ಸಮಕ್ಕೆ ಬರಲು ಸಾಧ್ಯ?! ನಾನು ಹೆಸರಿಗೆ ಮಾತ್ರ ಕೃಷ್ಣ'' ಎಂದಿದ್ದರು. ಅದು ಅವರ ವಿನಮ್ರತೆಯನ್ನು ಸೂಚಿಸುತ್ತದೆ. ಆದರೆ ಕೃಷ್ಣ ಅವರ ವ್ಯಕ್ತಿತ್ವದಲ್ಲಿ ಶ್ರೀಕೃಷ್ಣನಿಗೆ ಹೋಲಿಸಬಲ್ಲ ರಾಜಕೀಯ ಮುತ್ಸದ್ದಿತನವಿದ್ದುದು ನಿಜ. ಅವರು ಎಂದಿಗೂ ಎದುರಾಳಿಗಳ ಜತೆಗೆ ವಾಗ್ವಾದಕ್ಕೆ ಹೋದವರಲ್ಲ, ಅವರ ಕುರಿತು ಕೀಳಾಗಿ ಮಾತನಾಡಿದವರಲ್ಲ. ತಮ್ಮ ಅಂತರಂಗದ ಮಾತುಗಳನ್ನು ಎಂದಿಗೂ ಬಹಿರಂಗಕ್ಕೆ ತಂದವರಲ್ಲ. ಸಮಾಜವನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಮಹತ್ವಾಕಾಂಕ್ಷೆಯನ್ನು ಬಿಟ್ಟುಕೊಟ್ಟವರಲ್ಲ.

ಸಜ್ಜನ ರಾಜಕಾರಣಿಯಾಗಿದ್ದ ಎಸ್.ಎಂ. ಕೃಷ್ಣರು, ರಾಜಕೀಯದಲ್ಲಿ ಮೌಲಿಕತೆ ಹೇಗಿರಬೇಕು ಎನ್ನುವುದಕ್ಕೆ ರೂಪಕದಂತಿದ್ದರು. ಪರಂಪರೆ ಮತ್ತು ಆಧುನಿಕತೆಯ ಕೊಂಡಿಯಂತಿದ್ದ ಅವರ ಕಾಲದಲ್ಲಿ ಬೆಂಗಳೂರು ಹೊಸ ರೂಪವನ್ನು ಪಡೆಯಿತು. ಅದು ಜಾಗತಿಕ ಮನ್ನಣೆಯನ್ನು ಪಡೆದಂತೆ, ಮಂಡ್ಯದ ಮಣ್ಣಿನ ಹಿರಿಮೆಯನ್ನೂ ಹೆಚ್ಚಿಸಿದ್ದರು. ಮಂಡ್ಯದಲ್ಲಿ 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವೇದಿಕೆ ಸಜ್ಜಾಗಿದೆ; ಆದರೆ ಅದಕ್ಕಾಗಿ ಹಂಬಲಿಸಿದ್ದ ಎಸ್.ಎಂ.ಕೃಷ್ಣ ಅವರು ನಮ್ಮೊಡನಿಲ್ಲ. ಅವರ ನೆನಪುಗಳು ನಮ್ಮ ಜತೆಗಿವೆ. ಕರ್ನಾಟಕದ ರಾಜಕಾರಣದಲ್ಲಿ ಕೃಷ್ಣ ಅವರದು ನಿಸ್ಸಂಶಯವಾಗಿ ಸ್ಮರಣೀಯ ಹೆಸರಾಗಿ ಉಳಿದುಕೊಳ್ಳುತ್ತದೆ ಎನ್ನುವ ನಂಬಿಕೆ ನನ್ನದು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಎಸ್.ಎಂ.ಕೃಷ್ಣ ಅವರಿಗೆ ನನ್ನ ಅಶ್ರುತರ್ಪಣಗಳು.

(ಲೇಖಕರು ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು)

ಉದಾಹರಣೆಯಲ್ಲೇ ಉತ್ತರವಿದೆ!

ಮರುಸ್ಪಂದನ
ಸುರೇಂದ್ರ ಪೈ, ಭಟ್ಕಳ

ವಾರದಲ್ಲಿ 70 ಗಂಟೆ ಕೆಲಸ ಯಾರಿಗಾಗಿ...?' ಎಂಬ ನನ್ನ ಲೇಖನಕ್ಕೆ (ವಿಶ್ವವಾಣಿ ಡಿ.14) ಪ್ರತಿಕ್ರಿಯೆಯಾಗಿ ದಾವಣಗೆರೆ ಮುಕುಂದ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದು ಸ್ವಾಗತಾರ್ಹ.

ನನ್ನ ಲೇಖನದ ಶೀರ್ಷಿಕೆಯೇ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುತ್ತದೆ. ಇಲ್ಲಿ 70 ಗಂಟೆಯ ಕಾರ್ಯಾವಧಿಯ ಫಲ ಯಾರಿಗೆ ಎಂಬುದೇ ಮುಖ್ಯ. ಸರ್ ಎಂ.ವಿಶ್ವೇಶ್ವರಯ್ಯ, ಎ.ಪಿ.ಜೆ.ಅಬ್ದುಲ್ ಕಲಾಂರನ್ನೊಳಗೊಂಡಂತೆ ನಮ್ಮ ಹಲವು ಎಂಜಿನಿಯರುಗಳು, ವಿಜ್ಞಾನಿಗಳು, ಶಿಕ್ಷಕರು, ವೈದ್ಯರು ದೇಶದ ಹಿತಕ್ಕಾಗಿ, ಅಭಿವೃದ್ಧಿಗಾಗಿ ನಿತ್ಯವೂ 18-20 ಗಂಟೆ ಕಾಲ ಕೆಲಸ ಮಾಡಿದ ಉದಾಹರಣೆಗಳಿವೆ. ಆಂತರಿಕ ಪ್ರೇರಣೆಯಿದ್ದರೆ ಮಾತ್ರವೇ ಇದು ಸಾಧ್ಯ. ಈ ಪರಿಪಾಠ ವ್ಯಕ್ತಿಗತವಾಗಿ ಅನ್ವಯವಾಗುವಂಥದ್ದೇ ವಿನಾ, ಇದನ್ನು ಎಲ್ಲರಲ್ಲೂ ಅಪೇಕ್ಷಿಸಲಾಗದು. ಹೀಗಾಗಿ, ಸರಕಾರವು ನೀತಿ-ನಿಯಮಾವಳಿಯನ್ನು ರೂಪಿಸುವಾಗ, ಒಬ್ಬ ವ್ಯಕ್ತಿ, ಒಂದು ಸಂಸ್ಥೆ ಅಥವಾ ನಿರ್ದಿಷ್ಟ ವಿಭಾಗವನ್ನು ಮಾತ್ರ ಪರಿಗಣಿಸುವುದಿಲ್ಲ; ಅದು ಅವೈಜ್ಞಾನಿಕವಾಗುತ್ತದೆ. ಹಾಗಾಗಿ, ಸಾರ್ವತ್ರಿಕವಾಗಿ ಯಾವುದು ಮಾನ್ಯ ಎಂಬುದರ ಮೇಲೆ ಪ್ರಮಾಣೀಕೃತ ಕಾರ್ಯಾವಧಿ/ನಿಯಮಗಳನ್ನು ನಿಗದಿಪಡಿಸಲಾಗುತ್ತದೆ. ಏಕೆಂದರೆ ನಿಗದಿತ ಕಾರ್ಯದ ಹಿಂದೆ ದೈಹಿಕ-ಮಾನಸಿಕ ಶ್ರಮದ ಸಮಪಾಲು ಇರುತ್ತದೆ. ಆದ್ದರಿಂದಲೇ ರಾಜ್ಯ ಮತ್ತು ಕೇಂದ್ರ ಸರಕಾರಿ ಕಚೇರಿಗಳೆಲ್ಲವೂ ಪ್ರತಿನಿತ್ಯ 8 ಗಂಟೆ ಅವಧಿವರೆಗೆ ಕೆಲಸ ಮಾಡಬೇಕೆಂಬ ನಿಯಮವಿದೆ. ಆದರೆ ಈ ಅವಧಿಯಲ್ಲಿ ಪ್ರಾಮಾಣಿಕವಾಗಿ ಎಷ್ಟರ ಮಟ್ಟಿಗೆ ಉತ್ಪಾದಕತೆ ಹೊಮ್ಮುತ್ತಿದೆ, ಜನರ ಸಮಸ್ಯೆಗಳಿಗೆ ಸ್ಪಂದನೆ ಸಿಗುತ್ತಿದೆ? ಎಂಬುದೇ ಮುಖ್ಯ. ಒಂದೊಮ್ಮೆ, ಉದ್ಯೋಗಿಗಳು ಈ ಅವಧಿಯೊಳಗೇ ಅಂದಿನ ಕೆಲಸವನ್ನು ಅಂದೇ ಜವಾಬ್ದಾರಿಯುತವಾಗಿ ಪೂರ್ಣಗೊಳಿಸಿದರೆ, ಅಧಿಕ ಸಮಯದ ಕೆಲಸಕ್ಕೆ ಆಸ್ಪದವೇ ಇರದು. ಪರೋಕ್ಷವಾಗಿ ಅದು ದೇಶದ ಅಭಿವೃದ್ಧಿಗೆ ನೀಡಿದ ಕೊಡುಗೆಯಾಗುತ್ತದೆ.

ಇನ್ನು ರಾಜ್ಯದಲ್ಲಿನ ಕಟ್ಟಡ ಕಾಮಗಾರಿಗಳಿಗಾಗಿ ಬಿಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಒಡಿಶಾ ಜನರೇ ಬರುತ್ತಿದ್ದು, ಕಳೆದ ಕೆಲ ವರ್ಷಗಳಿಂದ ಈ ಸಂಖ್ಯೆಯಲ್ಲಿ ಏರಿಕೆಯಾಗಿದೆ, ನಿಜ. ಅದಕ್ಕಾಗಿ ಅವರು ತಮ್ಮ ಸಂಸಾರವನ್ನು ಊರಲ್ಲೇ ಬಿಟ್ಟು ನಿತ್ಯವೂ 12-13 ಗಂಟೆ ದುಡಿಯುತ್ತಾರೆ ಎಂದು ಮುಕುಂದ ಅವರು ನೀಡಿರುವ ನಿದರ್ಶನದಲ್ಲೇ ಉತ್ತರವಿದೆ. ಕೆಲಸವಷ್ಟೇ ಪ್ರಧಾನವೆಂದು ಪರಿಗಣಿಸಿದರೆ ಅವರ ಕುಟುಂಬದ ಬಗ್ಗೆ ಗಮನಿಸುವವರಾರು? ಮಕ್ಕಳಿಗೆ ಸಿಗಬೇಕಾದ ಪ್ರೀತಿ, ಮಾರ್ಗದರ್ಶನ, ಮೌಲ್ಯಗಳ ಬೋಧನೆಯ ಹೊಣೆ ಯಾರದ್ದು? ಹೆಚ್ಚು ಗಂಟೆ ಕೆಲಸ ಮಾಡಲು ಸಂಸಾರಸುಖವನ್ನು ತ್ಯಾಗಮಾಡುವುದು ಯಾವ ನ್ಯಾಯ?

ಅನ್ಯರಾಜ್ಯದಿಂದ ಕೆಲಸಕ್ಕಾಗಿ ವಲಸೆ ಬರುವವರ ಸಮಸ್ಯೆಯೆಂದರೆ ಅಲ್ಲಿರುವ ನಿರುದ್ಯೋಗ, ಬಡತನ, ಹಸಿವು. ಇದನ್ನು ನಿಭಾಯಿಸುವ ಹೊಣೆ ಯಾರದ್ದು? ವ್ಯಕ್ತಿಯೊಬ್ಬ ದಿನಗೂಲಿ ನೌಕರನಾಗಿರಲಿ, ಅಧಿಕಾರಿ ಆಗಿರಲಿ, 'ನಿತ್ಯವೂ 12-13 ಗಂಟೆ ಕೆಲಸ ಮಾಡಿ ಸಾಕಷ್ಟು ಹಣ ಸಂಪಾದಿಸಿ, ನಿವೃತ್ತಿ ಜೀವನದಲ್ಲಿ ಸುಖಪಡೋಣ' ಎಂಬ ಚಿಂತನೆಯಿದ್ದರೆ, ಕಳೆದುಹೋದ ಸಮಯ, ಜೀವನೋತ್ಸಾಹವನ್ನು ಮರಳಿ ಪಡೆಯಲು ಸಾಧ್ಯವೇ? ಆಗ ಮನಸ್ಸು ಹಾತೊರೆದರೂ ದೇಹವು ಸ್ಪಂದಿಸುವ ಸ್ಥಿತಿಯಲ್ಲಿರುವುದಿಲ್ಲ.

ಯಾವ ಕ್ಷೇತ್ರವಾದರೂ ಅನಿವಾರ್ಯತೆಯಿದ್ದಾಗ ಕೆಲವು ದಿನ/ತಿಂಗಳು ಬಹುತೇಕರು ನಿಗದಿತ ಅವಧಿಗಿಂತ ಹೆಚ್ಚು ಕೆಲಸ ಮಾಡಿಯೇ ಮಾಡುತ್ತಾರೆ. ಉದಾಹರಣೆಗೆ, ಆರ್ಥಿಕ ವರ್ಷದ ಕೊನೆಯಾದ ಮಾರ್ಚ್ ತಿಂಗಳಲ್ಲಿ ಬ್ಯಾಂಕ್ ಉದ್ಯೋಗಿಗಳು ರಾತ್ರಿಯವರೆಗೆ ಕೆಲಸ ಮಾಡುವುದುಂಟು. ನಿಗದಿತ 8 ಗಂಟೆ ಕೆಲಸದ ಬಳಿಕ ಮಿಕ್ಕುಳಿದ ಸಮಯವು ಕೇವಲ ಸಂಸಾರಕ್ಕೋ, ಆರೋಗ್ಯಕ್ಕೋ, ವೈಯಕ್ತಿಕ ನೆಮ್ಮದಿಗೋ ಮಾತ್ರವೇ ಬೇಕೆಂದಲ್ಲ; ಅವುಗಳ ಹೊರತಾಗಿಯೂ ಮರುದಿನದ ಕೆಲಸ ಪೂರ್ವತಯಾರಿಗಾಗಿ ಕೆಲ ಗಂಟೆಗಳನ್ನು ಮೀಸಲಿಡಬೇಕಾಗುತ್ತದೆ. ಹಾಗಾಗಿ ಅದನ್ನೂ ಉತ್ಪಾದಕತೆಯ ಭಾಗವೆಂದು ಪರಿಗಣಿಸಲಾಗುತ್ತದೆ.

'ಅಭಿವೃದ್ಧಿ ಹೊಂದಿದ' ದೇಶಗಳೆಲ್ಲವೂ ಒಂದು ಕಾಲಕ್ಕೆ ನಮ್ಮಂತೆಯೇ ಪರಕೀಯರಿಂದ ಸ್ವಾತಂತ್ರ್ಯ ಪಡೆದ ದೇಶಗಳೇ ಎಂಬುದನ್ನು ಮರೆಯಬಾರದು. ಆ ದೇಶಗಳವರು ಇಂದು ತಮ್ಮ ಕಾರ್ಯಾವಧಿಯನ್ನು 40-50 ಗಂಟೆಗೆ ಸೀಮಿತಗೊಳಿಸಿದ್ದರೂ, ಅಭಿವೃದ್ಧಿಯ ವಿಷಯದಲ್ಲಿ ಹೊಂದಾಣಿಕೆ ಮಾಡಿಕೊಂಡಿಲ್ಲ. ಏಕೆಂದರೆ ಅಲ್ಲಿ ಭ್ರಷ್ಟಾಚಾರ, ನಿರುದ್ಯೋಗ ಸಮಸ್ಯೆಗಳ ಪ್ರಮಾಣ ಕೆಳಮಟ್ಟದಲ್ಲಿದೆ, ಆ ದೇಶಗಳಿಗೆ ತಮ್ಮ ಪ್ರಜೆಗಳ ಹಿತಾಸಕ್ತಿ ಮುಖ್ಯ. ಹಿಂದೆಲ್ಲಾ ನಮ್ಮ ಹಿರಿಯರು ಹೊಲ-ಗದ್ದೆಗಳಲ್ಲಿ ದಿನಕ್ಕೆ 12-13 ಗಂಟೆ ದುಡಿಯುತ್ತಿದ್ದರು, ಆ ಶ್ರಮಕ್ಕೆ ಆಹಾರ ಕ್ರಮಗಳು ಪೂರಕವಾಗಿದ್ದವು. ಆದರೆ ಇಂದು ಎಲ್ಲವೂ ಕಲಬೆರಕೆ. ಹೀಗಾಗಿ ಇಂದಿನ ಮಕ್ಕಳ ಬೆಳವಣಿಗೆ ಹಿಂದಿನವರಂತಿಲ್ಲ. ಬಹುತೇಕ ಐಟಿ ಉದ್ಯೋಗಿಗಳಲ್ಲಿ (ಸ್ತ್ರೀ/ಪುರುಷ) ಬಂಜೆತನ ಕಾಣಿಸಿಕೊಳ್ಳುತ್ತಿದ್ದು, ಐವಿಎಫ್ ವೈದ್ಯಕೀಯ ಚಿಕಿತ್ಸೆಯ ಮೂಲಕ ಮಕ್ಕಳನ್ನು ಪಡೆಯುವವರ ಸಂಖ್ಯೆ ಹೆಚ್ಚಿದೆ.

ಕಾರ್ಯಾವಧಿಯ ಹೆಚ್ಚಳವು ಒಂದು ವೈಯಕ್ತಿಕ ಅಭಿಪ್ರಾಯವಷ್ಟೇ. ನಾವು ಎಷ್ಟು ಆಹಾರ ಸೇವಿಸುತ್ತೇವೆ ಎಂಬುದು ಮುಖ್ಯವಲ್ಲ, ಸೇವಿಸಿದ್ದರಲ್ಲಿ ಎಷ್ಟು ಪೌಷ್ಟಿಕಾಂಶವಿದೆ ಎಂಬುದೇ ಮುಖ್ಯ. ಅಂತೆಯೇ, ನಮ್ಮಲ್ಲಿ ಕ್ರಿಯಾಶೀಲತೆ ಹೆಚ್ಚಿದಷ್ಟೂ ಅಭಿವೃದ್ಧಿ ಏರುಮುಖವಾಗುತ್ತದೆ.

(ಲೇಖಕರು ಶಿಕ್ಷಕರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 225

8

ಅಕ್ರಮ ನುಸುಳುಕೋರರ ಗಡಿಪಾರಿಗೆ ಕ್ರಮ

ವಿಧಾನ ಪರಿಷತ್: ಬೆಂಗಳೂರು ನಗರ ಸೇರಿ ರಾಜ್ಯದ ಹಲವೆಡೆ ಅನಧಿಕೃತವಾಗಿ ವಾಸವಾಗಿದ್ದ 183 ಜನರನ್ನು ಬಂಧಿಸಲಾಗಿದ್ದು, ಇವರನ್ನು ಶೀಘ್ರವೇ ಗಡಿಪಾರು ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಡಿ. ಎಸ್.ಅರುಣ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದ ವಿವಿಧ ಕಡೆ ಅನಧಿಕೃತವಾಗಿ ವಾಸವಾಗಿದ್ದ ಬಾಂಗ್ಲದೇಶದ 159 ಮತ್ತು ಪಾಕಿಸ್ತಾನದ 24 ಜನರನ್ನು ಈಗಾಗಲೇ ಬಂಧಿಸಲಾಗಿದ್ದು, ಇದರಲ್ಲಿ ಯಾವುದೇ ನಿರ್ಲಕ್ಷ್ಯ ತೋರದೆ ಕೆಲವೊಂದಿಷ್ಟು ನಿಯಮ ಪಾಲಿಸಿ ಶೀಘ್ರವೇ ಗಡಿಪಾರು ಮಾಡುವುದಾಗಿ ಹೇಳಿದರು. ಅಕ್ರಮ ನುಸುಳುಕೋರರನ್ನು ಮಟ್ಟಹಾಕುವ ಸಂಬಂಧ ಬೆಂಗಳೂರಿನಲ್ಲಿ ವಿಶೇಷ ಘಟಕ ಸ್ಥಾಪನೆ ಮಾಡಲಾಗಿದೆ. ಅಕ್ರಮ ನುಸುಳುಕೋರರನ್ನು ತಡೆಗಟ್ಟುವ ಕೆಲಸ ಮಾಡಲಾಗುತ್ತಿದ್ದು, ಇದಕ್ಕೆಂದೇ ಬೆಂಗಳೂರಿನಲ್ಲಿ ವಿಶೇಷ ಘಟಕ ಸ್ಥಾಪನೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸದನ ಹೈಲೈಟ್ಸ್

ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರವಾಗಿಲ್ಲ

ವಿಧಾನ ಪರಿಷತ್: ಅಬಕಾರಿ ಇಲಾಖಾ ಅಧಿಕಾರಿಗಳ ವರ್ಗಾವಣೆ ಹಾಗೂ ಪರವಾನಗಿ ನೀಡಿಕೆಗೆ ಲಂಚ ಪಡೆದಿರುವ ಆರೋಪ ಸತ್ಯಕ್ಕೆ ದೂರವಾದದ್ದು, ಇದರಲ್ಲಿ ಯಾವುದೇ ಭ್ರಷ್ಟಾಚಾರವಾಗಿಲ್ಲ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಸ್ಪಷ್ಟಪಡಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಕೆ.ಎಸ್.ನವೀನ್ ಪ್ರಶ್ನೆಗೆ ಉತ್ತರಿಸಿ, ಅಧಿಕಾರಿಗಳ ವರ್ಗಾವಣೆ ಸಹಜ ಪ್ರಕ್ರಿಯೆ. ಅದು ಎಲ್ಲಾ ಕಾಲದಿಂದಲೂ ನಡೆದುಕೊಂಡು ಬಂದಿದೆ. ಅದರಂತೆ ಪ್ರಸಕ್ತ ಸಾಲಿನವರೆಗೂ ಎಲ್ಲಾ ಇಲಾಖೆಯಲ್ಲಿ ಎಲ್ಲಾ ವೃಂದದ ಸೇರಿ 336 ಅಧಿಕಾರಿಗಳ ವರ್ಗಾವಣೆ ಮಾಡಲಾಗಿದ್ದು, ಇದರಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿರುವುದಿಲ್ಲ ಎಂದರು. ಇನ್ನೂ ರಾಜ್ಯದಲ್ಲಿ ಸಿಎಲ್ -7 ಪರವಾನಗಿ ಹಿಂದಿನ ಸರಕರಕ್ಕಿಂತ ನಮ್ಮ ಅವಧಿಯಲ್ಲಿ ಕಡಿಮೆ ಮಾಡಲಾಗಿದೆ. ಇನ್ನೂ ಇವುಗಳ ಕುರಿತು ಆರೋಪ ಮಾಡಿರುವ ಕರ್ನಾಟಕ ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಸದ್ಯ ಅಸ್ತಿತ್ವದಲ್ಲಿಯೇ ಇಲ್ಲ. ಈ ಕುರಿತು ವಿಚಾರಿಸಿದಾಗ ನಾವು ಯಾವುದೇ ದೂರು ನೀಡಿಲ್ಲ. ರಾಜಕೀಯಕ್ಕೆ ನಮ್ಮನ್ನು ಬಳಸಿಕೊಳ್ಳಬೇಡಿ ಎಂದು ಅವರು ಕೂಡಾ ಹೇಳಿದ್ದಾರೆ ಎಂದು ಸಚಿವರು ವಿವರಿಸಿದರು.

ಬಾಣಂತಿಯರ ಸಾವಿನ ಚರ್ಚೆ ವೇಳೆ ಆಡಳಿತ-ಪ್ರತಿಪಕ್ಷ ಶಾಸಕರ ವಾಕ್ಸಮರ | ಸಚಿವ ದಿನೇಶ್ ಉತ್ತರಕ್ಕೆ ಆಕ್ರೋಶ; ಸಾವಿಗೆ ಸರಕಾರ ಕಾರಣ, ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಸಭಾತ್ಯಾಗ | ಕರೋನಾ ಅಕ್ರಮ ಪ್ರಸ್ತಾಪಿಸಿದ ಕಾಂಗ್ರೆಸ್ಸಿಗರು

ಬಾಣಂತಿಯರ ಸಾವು: ನ್ಯಾಯಾಂಗ ತನಿಖೆಗೆ ಸಿದ್ಧ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ, ಸುವರ್ಣಸೌಧ

ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ಬಾಣಂತಿಯರ ಸಾವಿನ ನೈತಿಕ ಹೊಣೆ ಹೊತ್ತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ರಾಜೀನಾಮೆ ನೀಡಬೇಕು ಎಂದು ಬಿಜೆಪಿಗರು ಆಗ್ರಹಿಸಿದರು. ಇನ್ನೊಂದೆಡೆ ಈ ದುರಂತಕ್ಕೆ ಮರುಕ ವ್ಯಕ್ತಪಡಿಸಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ನ್ಯಾಯಾಂಗ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಹಾಗೂ ಫಾರ್ಮಾ ಕಂಪನಿಯಿಂದಲೂ ಕುಟುಂಬಕ್ಕೆ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ಗುರುವಾರ ಬೆಳಗ್ಗೆ ಬಾಣಂತಿಯರ ಸಾವಿನ ಕುರಿತಾದ ಚರ್ಚೆಗೆ ಉತ್ತರಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು, ಬಾಣಂತಿಯರ ಸಾವಿಗೆ ನನಗೂ ಬೇಸರವಿದೆ. ಆದರೆ ಡ್ರಗ್ ಮಾಫಿಯಾ ಇಡೀ ದೇಶದಲ್ಲಿ ಬಲಿಷ್ಠವಾಗಿದೆ. ಫಾರ್ಮಾ ಕಂಪನಿಗಳನ್ನು ಬ್ಲಾಕ್‌ಲೀಸ್ಟ್‌ಗೆ ಹಾಕಿದರೂ, ನ್ಯಾಯಾಲಯದ ಮೂಲಕ ಈ ಆದೇಶ ತೆರವುಗೊಳಿಸುತ್ತಿದ್ದಾರೆ. ಈ ರೀತಿಯಾದರೆ ಏನು ಮಾಡಬೇಕು ಎಂದು ಪ್ರಶ್ನಿಸಿದರು. ಆದರೆ ಬಾಣಂತಿಯರ ಮರಣೋತ್ತರ ಪರೀಕ್ಷೆ ನಡೆಸದಿರುವುದು, ಸರಕಾರದ ಪರವಾಗಿ ಆಸ್ಪತ್ರೆಗೆ ಭೇಟಿ ನೀಡದಿರುವುದು, ಕೇವಲ ಐದು ಲಕ್ಷ ಪರಿಹಾರ ನೀಡಿರುವುದನ್ನು ಖಂಡಿಸಿ ಬಿಜೆಪಿಗರು ಸರಕಾರದ ವಿರುದ್ಧ ತಿರುಗಿಬಿದ್ದರು. ಈ ವೇಳೆ ಬಿಜೆಪಿ ಶಾಸಕರ ವಿರುದ್ಧ ಕರೋನಾ ಹಗರಣ ಪ್ರಸ್ತಾಪಿಸಿದ್ದರಿಂದ, ಬಿಜೆಪಿ ಶಾಸಕರು ಸರಕಾರದ ವಿರುದ್ಧ ವಾಗ್ದಾಳಿ ನಡೆಸಿ ಸಭಾತ್ಯಾಗ ನಡೆಸಿದರು.

ಇದಕ್ಕೂ ಮೊದಲು ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಬಳ್ಳಾರಿಯಲ್ಲಿ ಸಂಭವಿಸಿದ ಬಾಣಂತಿಯರ ಸರಣಿ ಸಾವಿನ ಪ್ರಕರಣ ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥರನ್ನು ಸುಮ್ಮನೆ ಬಿಡುವುದಿಲ್ಲ. ಬಾಣಂತಿಯರ ಸಾವಿನ ಪ್ರಕರಣವನ್ನು ನ್ಯಾಯಮೂರ್ತಿಗಳ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಲಾಗುವುದು. ಯಾರೇ ತಪ್ಪಿತಸ್ಥರಿದ್ದರು ಅವರನ್ನು ಸುಮ್ಮನೇ ಬಿಡುವುದಿಲ್ಲ. ಒಂದು ವೇಳೆ ನಾನು ತಪ್ಪಿತಸ್ಥನೆಂದು ತಿಳಿದು ಬಂದರೆ, ಮುಲಾಜಿಲ್ಲದೇ, ನನ್ನ ವಿರುದ್ಧವು ಕ್ರಮಕೈಗೊಳ್ಳಿ. ಅದಕ್ಕೆ ನಾನು ಸಿದ್ಧ ಎಂದು ಸ್ಪಷ್ಟಪಡಿಸಿದರು.

ಶಿಷ್ಟಾಚಾರ ಉಲ್ಲಂಘನೆಯಾಗಿಲ್ಲ: ಕಳೆದ ನವೆಂಬರ್ ತಿಂಗಳ 9,10 ಹಾಗೂ 11ರಂದು ಬಳ್ಳಾರಿ ಆಸ್ಪತ್ರೆಯಲ್ಲಿ 34 ಸಿಸೇರಿಯನ್ ಹೆರಿಗೆ ಮಾಡಲಾಗಿದೆ. ಈ ಪೈಕಿ 7 ಬಾಣಂತಿಯರು ಹೆರಿಗೆ ನಂತರ ಅಸ್ವಸ್ಥಗೊಂಡರು. ಇದರಲ್ಲಿ 5 ಬಾಣಂತಿಯರು ಸಾವಾಗಿದೆ. ಇಬ್ಬರು ಸಾವಿನಿಂದ ಪಾರಾಗಿದ್ದಾರೆ. ಘಟನೆ ತಿಳಿದ ತಕ್ಷಣವೇ, ಸಾವಿನ ಕಾರಣ ತಿಳಿಯಲು ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ವೈದ್ಯರ ತಂಡ ರಚಿಸಿ ಬಳ್ಳಾರಿಗೆ ಕಳುಹಿಸಲಾಗಿತು. ಈ ತಂಡ ನವೆಂಬರ್ 12 ಹಾಗೂ 13 ರಂದು ಕೂಲಂಕಷವಾಗಿ ಅಧ್ಯಯನ ನಡೆಸಿ, ನವೆಂಬರ್ 14 ರಂದು ವರದಿ ನೀಡಿದೆ. ಇದರಲ್ಲಿ ವೈದ್ಯರು ಶಸ್ತ್ರಚಿಕಿತ್ಸೆಯ ಎಲ್ಲ ಶಿಷ್ಟಾಚಾರ ನಿಯಮ ಪಾಲಿಸಿದ್ದಾರೆ. ವೈದ್ಯರಿಂದ ಲೋಪವಾಗಿಲ್ಲ, ಬದಲಾಗಿ ಸಿಸೇರಿಯನ್ ನಂತರ ಬಾಣಂತಿಯರಿಗೆ ನೀಡಿದ ರಿಂಗರ್ ಲ್ಯಾಕ್ಟೇಟ್ ಐವಿ ದ್ರಾವಣದ ಪ್ರತಿಕೂಲ ಪರಿಣಾಮದಿಂದ ಸಾವು ಸಂಭವಿಸಿರುವುದಾಗಿ ವರದಿ ನೀಡಿದರು. ಇದರ ಆಧಾರದಲ್ಲಿ ಪಶ್ಚಿಮ್ ಬಂಗಾ ಕಂಪನಿ ಪೂರೈಸಿದ ರಿಂಗರ್ ಲ್ಯಾಕ್ಟೇಟ್ ಐವಿ ದ್ರಾವಣವನ್ನು ಪರೀಕ್ಷೆಗಾಗಿ ಲ್ಯಾಬಿಗೆ ಕಳುಹಿಸಿಕೊಟ್ಟಾಗ ಕಳಪೆ ಗುಣಮಟ್ಟದ್ದು ಎಂದು ಪತ್ತೆಯಾಗಿದೆ. ಹೈದರಾಬಾದ್ ಲ್ಯಾಬ್‌ನಲ್ಲಿ ನಡೆಸಿದ ಪರೀಕ್ಷೆಯಲ್ಲಿ ರಿಂಗರ್ ಲ್ಯಾಕ್ಟೇಟ್ ಐವಿಯಲ್ಲಿ ಎಂಡೋ ಟಾಕ್ಸಿಕ್ ಅಂಶ ಇರುವುದಾಗಿ ತಿಳಿದು ಬಂದಿದೆ ಎಂದು ತಿಳಿಸಿದರು.

ಬಾಣಂತಿಯರ ಸಾವಿನ ಲೆಕ್ಕ ಪರಿಶೋಧನೆ: ಪಶ್ಚಿಮ ಬಂಗಾಳ ಕಂಪನಿ ಪೂರೈಸಿದ ರಿಂಗರ್ ಲ್ಯಾಕ್ಟೇಟ್ ಐವಿ ದ್ರಾವಣವನ್ನು ರಾಜ್ಯದ ಇತರೆ ಆಸ್ಪತ್ರೆಗಳಿಗೂ ಪೂರೈಸಲಾಗಿದೆ. ಈ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಸಂಭವಿಸಿದ ಬಾಣಂತಿಯರ ಸಾವಿನ ಲೆಕ್ಕ ಪರಿಶೋಧನೆಗೂ ಸೂಚನೆ ನೀಡಿದ್ದೇನೆ. ಮುಖ್ಯಮಂತ್ರಿಗಳು ಈಗಾಗಲೇ, ಅಭಿವೃದ್ಧಿ ಆಯುಕ್ತರನ್ನು ಪ್ರಕರಣದ ಪರಿಶೀಲನೆ ನಡೆಸಿ ವರದಿ ನೀಡಲು ನೇಮಿಸಿದ್ದಾರೆ. ತಜ್ಞ ವೈದ್ಯರಿಂದಲೂ ತನಿಖೆ ನಡೆಯುತ್ತಿದೆ. ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ ಆಡಳಿತದಲ್ಲಿ ಸುಧಾರ ಣೆಗೆ ವರದಿ ನೀಡಲು ಹಿರಿಯ ಐಎಎಸ್ ಅಧಿಕಾರಿಯನ್ನು ಸಹ ನೇಮಿಸಲಾಗಿದೆ ಎಂದು ಹೇಳಿದರು.

ಫಾರ್ಮಾ ಕಂಪನಿಗಳ ಲಾಬಿ

ಭಾರತದ ಫಾರ್ಮಾ ಕಂಪನಿಗಳು ಪ್ರಪಂಚದಲ್ಲಿಯೇ ಉತ್ತಮ ಹೆಸರು ಹೊಂದಿವೆ. ಭಾರತ ವಿಶ್ವದ ಫಾರ್ಮಾ ಹಬ್ ಎಂದೇ ಪ್ರಸಿದ್ಧಿ ಪಡೆದಿದೆ. ಆದರೆ ಈ ಫಾರ್ಮಾ ಕಂಪನಿಗಳಿಗೆ ಕರಾಳ ಮುಖ ಇದೆ. ವಿದೇಶಗಳಿಗೆ ಸರಬರಾಜು ಮಾಡುವ ಔಷಧಗಳ ತಯಾರಿಕೆಗೆ ಈ ಫಾರ್ಮಾ ಕಂಪನಿಗಳು ಪ್ರತ್ಯೇಕವಾಗಿ ಘಟಗಳನ್ನು ಸ್ಥಾಪಿಸಿವೆ. ಈ ಘಟಕಗಳು ಉತ್ತಮ ಗುಣಮಟ್ಟ ಹಾಗೂ ಎಲ್ಲ ಅಂತಾರಾಷ್ಟ್ರೀಯ ನಿಯಮಗಳನ್ನು ಪಾಲಿಸುತ್ತವೆ. ಆದರೆ ಭಾರತದಲ್ಲಿ ಪೂರೈಸುವ ಔಷಧ ಘಟಕಗಳ ಸ್ಥಿತಿ ಶೋಚನೀಯವಾಗಿದೆ. ಕೇಂದ್ರ ಹಾಗೂ ರಾಜ್ಯ ಔಷಧ ನಿಯಂತ್ರಣ ಸಂಸ್ಥೆಗಳನ್ನು ಈ ಫಾರ್ಮಾ ಕಂಪನಿಗಳು ತಮ್ಮ ಪ್ರಭಾವ ಬೀರಿ, ತಮಗೆ ಬೇಕಾದ ಹಾಗೆ ವರದಿ ಪಡೆಯುತ್ತಿವೆ. ಬಹುತೇಕ ಕಂಪನಿಗಳು ಪೂರ್ವ ಈಶಾನ್ಯ ರಾಜ್ಯಗಳಲ್ಲಿ ಸ್ಥಾಪಿತವಾಗಿದ್ದು, ಇತರೆ ರಾಜ್ಯಗಳಿಗೆ ಅವುಗಳ ಮೇಲೆ ನಿಯಂತ್ರಣವಿಲ್ಲ. ಪಶ್ಚಿಮ ಬಂಗಾ ಕಂಪನಿಯ ಔಷಧ ತಯಾರಿಕಾ ಘಟಕಕ್ಕೆ ಕೇಂದ್ರ, ರಾಜ್ಯ ಹಾಗೂ ಪಶ್ಚಿಮ ಬಂಗಾಳ ರಾಜ್ಯದ ತನಿಖಾ ತಂಡಗಳು ಭೇಟಿ ನೀಡಿದ್ದು, ಕಂಪನಿಯ ಔಷಧ ತಯಾರಿಕೆಗೆ ತಡೆ ಒಡ್ಡಿವೆ. ರಾಜ್ಯ ಸರಕಾರ ಪಶ್ಚಿಮ ಬಂಗಾ ಕಂಪನಿಯ ಮೇಲೆ ಪ್ರಕರಣ ದಾಖಲಿಸಿದ್ದು, ರಾಜ್ಯದಲ್ಲಿನ ಬಾಣಂತಿಯರ ಸಾವಿಗೆ ಅವರನ್ನು ಹೊಣೆ ಮಾಡಿ, ಬಾದಿತ ಕುಟುಂಬಗಳಿಗೆ ಸೂಕ್ತ ಪರಿಹಾರ ಕೊಡಿಸುವುದಾಗಿ ಆರೋಗ್ಯ ಸಚಿವರು ಹೇಳಿದರು.

ಆರೋಗ್ಯ ಇಲಾಖೆ ಎಲ್ಲ ವರ್ಗದ ನೌಕರರ ಸೇವಾ ಜೇಷ್ಠತಾ ಪಟ್ಟಿ ಸಿದ್ಧಪಡಿಸಲಾಗಿದೆ. ರಾಷ್ಟ್ರೀಯ ಆರೋಗ್ಯ ಮಿಷನ್ ಶೇ.84ರಷ್ಟು ಅನುದಾನ, ರಾಜ್ಯದ ಶೇ.97ರಷ್ಟು ಅನುದಾನ ಬಳಕೆ ಮಾಡಲಾಗಿದೆ. ರಾಜ್ಯದಲ್ಲಿ ಔಷಧಗಳ ಕೊರತೆಯಿಲ್ಲ. 1,126 ವಿವಿಧ ಬಗೆಯ ಔಷಧಗಳು ಆಸ್ಪತ್ರೆಗಳಲ್ಲಿ ದೊರಕುತ್ತಿವೆ. ರಾಜ್ಯದ 17 ಜಿಲ್ಲಾಸ್ಪತ್ರೆ, 164 ತಾಲೂಕು ಆಸ್ಪತ್ರೆ, 64 ಸಮುದಾಯ ಆರೋಗ್ಯ ಕೇಂದ್ರಗಳು ಎನ್ಕ್ಯೂಎಎಸ್ ಮಾನ್ಯತೆ ಪಡೆದಿವೆ

-ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ.

ಶುಲ್ಕ ಹೆಚ್ಚಳ ಮಾಡಿಲ್ಲ

ರಾಜ್ಯದ ಜಿಲ್ಲಾ, ತಾಲೂಕು, ಸಮುದಾಯ ಹಾಗೂ ಪ್ರಾಥಮಿಕ ಆಸ್ಪತ್ರೆಗಳಲ್ಲಿ ಯಾವುದೇ ಶುಲ್ಕಗಳನ್ನು ಹೆಚ್ಚಳ ಮಾಡಿಲ್ಲ ಎಂದು ಸಚಿವ ದಿನೇಶ್ ಗುಂಡುರಾವ್ ಸದನದಲ್ಲಿ ಸ್ಪಷ್ಟ ಪಡಿಸಿದರು. ರಾಜ್ಯದಲ್ಲಿ ಕಳೆದ 12 ವರ್ಷಗಳಿಂದ ಬಳಕೆದಾರರ ಶುಲ್ಕಗಳನ್ನು ಹೆಚ್ಚಿಸಿಲ್ಲ. ಈ ಹಿನ್ನಲೆಯಲ್ಲಿ ಪ್ರಾಯೋಗಿ ಕವಾಗಿ ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಮಾತ್ರ ಶುಲ್ಕ ಹೆಚ್ಚಳ ಮಾಡಲಾಗಿದೆ. ರಾಜ್ಯದ ಎಲ್ಲ 108 ಆಂಬ್ಯುಲೆನ್ಸ್ ವಾಹನಗಳಲ್ಲಿ ಜಿಪಿಎಸ್ ಅಳವಡಿಸಲಾಗಿದೆ. ದೇಶದಲ್ಲಿ ಬ್ರೆನ್ ಹೆಲ್ತ್ ಕ್ಲಿನಿಕ್‌ಗಳನ್ನು ಪ್ರಾರಂಭಿಸಿದ ಪ್ರಥಮ ರಾಜ್ಯ ಕರ್ನಾಟಕ, ಈ ಬಗ್ಗೆ ಕೇಂದ್ರ ನೀತಿ ಆಯೋಗವೂ ಮೆಚ್ಚುಗೆ ವ್ಯಕ್ತಪಡಿಸಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಜೋರ್ ಮಾತು

ಬಿಜೆಪಿಯ ಹಿಡನ್ ಅಜೆಂಡಾ ಶಾ ಹೇಳಿಕೆಯಿಂದ ಗೊತ್ತಾಗಿದೆ. ಸಂವಿಧಾನ ಇವರಿಗೆ ಅಲರ್ಜಿ. ಜವಾಬ್ದಾರಿಯುತ ಸ್ಥಾನದಲ್ಲಿರುವ ಕೇಂದ್ರ ಗೃಹ ಸಚಿವರೇ ಈ ರೀತಿ ಹೇಳಿಕೆ ನೀಡಿದರೆ ಸಂವಿಧಾನದ ರಕ್ಷಣೆ ಮಾಡುವವರು ಯಾರು? ಈ ಕೂಡಲೇ ಶಾ ದೇಶದ ಜನತೆ ಕ್ಷಮೆ ಕೇಳಬೇಕು.

-ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಅಮಿತ್ ಶಾ ಅವರು ಮಾತನಾಡಿರುವ ವಿಡಿಯೊ ತುಣುಕು ಪ್ರಸಾರ ಮಾಡಿದ್ದರೆ ಈ ವಿಷಯದಲ್ಲಿ ಇವರು ನಾಟಕ ಮಾಡುತ್ತಿರುವುದು ಹಾಸ್ಯಾಸ್ಪದ ಎಂದು ಸಾಬೀತು ಆಗಲಿದೆ. ಇವರ ನಾಟಕಕ್ಕೆ ಅಸ್ಕರ್ ಪ್ರಶಸ್ತಿ ಕೊಡಬೇಕು.

ಸಿ.ಟಿ.ರವಿ , ಬಿಜೆಪಿ ಸದಸ್ಯ



ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ : ಬಳ್ಳಾರಿ

ಸಮಸ್ಯೆಯೇನು..?

- ಬಳ್ಳಾರಿ ಜಿಲ್ಲೆಯ ಕುರುಗೋಡು ಪುರಸಭೆ ವ್ಯಾಪ್ತಿಯ ವಾರ್ಡ್. 22 ರಲ್ಲಿ ಬರುವ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಿರ್ಮಿಸಿರುವ ಇಂದಿರಾ ಕ್ಯಾಟೀನ್ ಸುತ್ತಮುತ್ತ ಅಕ್ರಮ ಚಟುವಟಿಕೆ ನಡೆಯುತ್ತಿರುವುದು.
- **ಪರಿಹಾರ:** ಬಳ್ಳಾರಿ ಜಿಲ್ಲೆಯ ಕುರುಗೋಡು ಪುರಸಭೆ ವ್ಯಾಪ್ತಿಯ ವಾರ್ಡ್.22 ರಲ್ಲಿ ಬರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಿರ್ಮಿಸಿರುವ ಇಂದಿರಾ ಕ್ಯಾಟೀನ್ ಒಳ ಹಾಗೂ ಹೊರಭಾಗ ದಲ್ಲಿ ಸ್ವಚ್ಚಗೊಳಿಸಿ , ಲೈಟ್‌ಗಳು ಅಳವಡಿಸಿಲಾಗಿದ್ದು, ಅಕ್ರಮ ಚಟುವಟಿಕೆ ತಡೆಗೆ ರಾತ್ರಿಹೊತ್ತು ಪೊಲೀಸ್ ಗಸ್ತು ಹಾಕಲು ಪತ್ರ ಬರೆಯಲಾಗಿದೆ.

ಅಮಿತ್ ಶಾ ಹೇಳಿಕೆ ವಿರೋಧಿಸಿ ಭಾವಚಿತ್ರ ಪ್ರದರ್ಶಿಸಿ, ವಾಗ್ದಾಳಿ ನಡೆಸಿದ ಕೈ ಶಾಸಕರು | ಸಚಿವರ ನೇತೃತ್ವದಲ್ಲಿಯೇ ಬಿಜೆಪಿ ವಿರುದ್ಧ ಸದನದಲ್ಲಿ ಪ್ರತಿಭಟನೆ | ಕೈ ಫೋಟೊಗೆ ತಿರುಗೇಟು ಕೊಡಲು ಬಿಜೆಪಿಯಿಂದ ಭಿತ್ತಿಪತ್ರ ಪ್ರದರ್ಶನ

ಸಭೆಯಲ್ಲಿ ರಾರಾಜಿಸಿದ ಅಂಬೇಡ್ಕರ್ ಭಾವಚಿತ್ರ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ, ಸುವರ್ಣಸೌಧ

ಬಾಬಾ ಸಾಹೇಬ್ ಅಂಬೇಡ್ಕರ್ ವಿರುದ್ಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ಆಡಳಿತರೂಢ ಕಾಂಗ್ರೆಸ್ ಶಾಸಕರು ಉಭಯ ಸದನದಲ್ಲಿ ಬಿಜೆಪಿ ಹಾಗೂ ಅಮಿತ್ ಶಾ ವಿರುದ್ಧ ಕಿಡಿ ಕಾರಿದರು. ಆಡಳಿತರೂಢ ಸದಸ್ಯರ ಮಂದೆ ಅಂಬೇಡ್ಕರ್ ಭಾವಚಿತ್ರ ಹಾಕುವ ಮೂಲಕ ಇಡೀ ಸದನ ಅಂಬೇಡ್ಕರ್ ಮಯವಾಗಿತ್ತು. ಈ ನಡುವೆ ಆಡಳಿತ-ಪ್ರತಿಪಕ್ಷ ನಾಯಕರ ನಡುವೆ ವಾಕ್ಸಮರ ತಾರಕಕ್ಕೇರಿದ್ದರಿಂದ ನಾಲ್ಕು ತಾಸಿಗೂ ಹೆಚ್ಚು ಕಾಲ ಸದನ ಮುಂದೂಡಲಾಯಿತು.

ಗುರುವಾರ ಬೆಳಗ್ಗೆ ದಿನೇಶ್ ಗುಂಡೂರಾವ್ ಬಾಣಂತಿಯರ ಸಾವಿಗೆ ಸಂಬಂಧಿಸಿದಂತೆ ಉತ್ತರಿಸುತ್ತಿದ್ದಂತೆ, ಕಾರ್ಮಿಕ ಸಚಿವ ಸಂತೋಷ್ ಲಾಡ್ ನೇತೃತ್ವದಲ್ಲಿ ಕಾಂಗ್ರೆಸ್ ಶಾಸಕರು ಅಂಬೇಡ್ಕರ್ ಫೋಟೊ ಎತ್ತಿಹಿಡಿದು ಅಮಿತ್ ಶಾ ವಿರುದ್ಧ ಘೋಷಣೆ ಕೂಗಿದರು. ಈ ವೇಳೆ ಬಿಜೆಪಿಗರು, ಅಮಿತ್ ಶಾ ಅವರ ಹೇಳಿಕೆ ಸಮರ್ಥಿಸಿಕೊಳ್ಳುವುದರೊಂದಿಗೆ ಕಾಂಗ್ರೆಸ್ ಶಾಸಕರ ವಿರುದ್ಧ ವಾಗ್ದಾಳಿ ನಡೆಸಿದರು. ಈ ವೇಳೆ ಸ್ಪೀಕರ್ ಯು.ಟಿ. ಖಾದರ್ ಸದನವನ್ನು ಐದು ನಿಮಿಷಗಳ ಕಾಲ ಮುಂದೂಡಿದರು.

ಈ ವೇಳೆ ಬಿಜೆಪಿ ಶಾಸಕರು ಭಿತ್ತಿಚಿತ್ರಗಳನ್ನು ತಗೆದುಕೊಂಡು ಬಂದು ಹಿಡಿದರು. ಈ ವೇಳೆ ಪರ-ವಿರೋಧ ಚರ್ಚೆ ನಡೆದಿದ್ದರಿಂದ ಮತ್ತೊಮ್ಮೆ ಸದನವನ್ನು ಮುಂದೂಡಲಾಯಿತು. ಕಲಾಪ ಮುಂದೂಡಿದರು ಸಹ, ಆಡಳಿತ ಪಕ್ಷದ ಸದಸ್ಯರು ಕೇಂದ್ರ, ಸರಕಾರ, ಆರ್‌ಎಸ್‌ಎಸ್ ವಿರುದ್ಧ ಘೋಷಣೆ ಕೂಗಿ, ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸಿ ಗಡಿಪಾರು ಮಾಡಿ ಎಂದು ಅಗ್ರಹಿಸಿದರು. ಬಳಿಕ ತಮ್ಮ ಆಸನಗಳ ಎದುರು ಡಾ.ಅಂಬೇಡ್ಕರ್ ಅವರ ಭಾವಚಿತ್ರವನ್ನು ಸಾಲಾಗಿ ಜೋಡಿಸಿಟ್ಟ ಪ್ರಸಂಗ ನಡೆಯಿತು.

ಸಾಮಾನ್ಯವಾಗಿ, ಕಲಾಪ ಮುಂದೂಡಿದ ಬಳಿಕ ಸದನದ ಒಳಗೆ ಯಾವುದೇ ರೀತಿಯ ಚಟುವಟಿಕೆಗಳು ಮುಂದುವರಿಯುವುದಿಲ್ಲ ಮತ್ತು ಅವು ಕಡತದಲ್ಲಿ ದಾಖಲಾಗುವುದಿಲ್ಲ. ಆದರೆ ಇಂದು ಅಂಬೇಡ್ಕರ್ ವಿಚಾರದಲ್ಲಿ ಕಲಾಪ ಮುಂದೂಡಿಕೆಯಾದ ಬಳಿಕವೂ ಪ್ರತಿಭಟನೆಗಳು ಮುಂದುವರೆದವು. ಆಡಳಿತ ಪಕ್ಷ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಧಿಕ್ಕಾರಗಳ ವಿನಿಮಯವಾಯಿತು. ಮತ್ತೆ ಸದನ ಸಮಾವೇಶಗೊಳ್ಳುವವರೆಗೂ ಈ ಪ್ರತಿಭಟನೆ ಯಾಗಿ ನಂತರ ಕಲಾಪದಲ್ಲೂ ಮುಂದುವರೆಯಿತು. ಸದನ ನಡೆಯದಿದ್ದಾಗಲೂ ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕರು ಪರಸ್ಪರ ಟೀಕೆಗಳನ್ನು ಮಾಡಿಕೊಳ್ಳುತ್ತಿದ್ದರು.

ಈ ನಡುವೆ ಕಾಂಗ್ರೆಸ್ ನವರು ಅಂಬೇಡ್ಕರ್ ಫೋಟೊವನ್ನು ತಮ್ಮ ಆಸನದ ಮುಂದೆ ಇರಿಸಿಕೊಂಡಿದ್ದರೆ, ಇದಕ್ಕೆ ಪ್ರತಿಯಾಗಿ ಬಿಜೆಪಿಗರು ಸರಕಾರದ ವಿರುದ್ಧ ಘೋಷಣೆಯ ಬಿತ್ತಿಚಿತ್ರವನ್ನ ಹಾಕಿದ್ದರು. ಸ್ಪೀಕರ್ ಯು.ಟಿ. ಖಾದರ್ ಅವರ ಕಚೇರಿಯಲ್ಲಿ ನಡೆದ ಸರಣಿ ಸಂಧಾನ ಸಭೆಯ ಬಳಿಕ ಎರಡೂ ಕಡೆಯವರು ಫೋಟೊಗಳನ್ನು ಹಿಂಪಡೆಯಲು ಒಪ್ಪಿಕೊಂಡರು.

ಬೈರತಿ ಸುರೇಶ್-ಗುರುರಾಜ್ ಗಂಟಿಹೊಳಿ ಮಧ್ಯ ವಾಕ್ಸಮರ

ವಿಧಾನಸಭೆಯ ಕಲಾಪ ಹತ್ತು ನಿಮಿಷ ಮುಂದೂಡಿದಾಗ, ಪ್ರತಿಪಕ್ಷದ ಸದಸ್ಯರು ಹೊರಗಡೆ ಹೋದರು.

ಆದರೆ, ಶಾಸಕ ಗುರುರಾಜ್ ಗಂಟಿಹೊಳಿ ತಮ್ಮ ಕೈಯಲ್ಲಿ ಅಂಬೇಡ್ಕರ್ ಭಾವಚಿತ್ರ ಪ್ರದರ್ಶನ ಮಾಡಿ ಆಡಳಿತ ಪಕ್ಷದವರಿಗೆ ಟಕ್ಕರ್ ನೀಡಿದರು. ಆಗ ಸಚಿವ ಬೈರತಿ ಸುರೇಶ್ ನೀವು ಒಬ್ಬರೇ ಅಲ್ಲಿ ಇದ್ದೀರಾ.? ಈಕಡೆ ಬನ್ನಿ ಎಂದು ಆಹ್ವಾನ ನೀಡಿದರು. ನಾನು ಬರುವುದಿಲ್ಲ ಎಂದು ಸನ್ನೆ ಮಾಡುವ ಮೂಲಕ ಗಂಟಿಹೊಳಿ ಆಡಳಿತ ಪಕ್ಷದ ವಿರುದ್ಧ ಘೋಷಣೆ ಕೂಗಲು ಆರಂಭಿಸಿದರು. ಇದಕ್ಕೆ ಸಿಟ್ಟಾದ ಸಚಿವ ಸುರೇಶ, ಬಿಜೆಪಿ ಅವರಿಗೆ ಮನ ಮರ್ಯಾದೆ ಇಲ್ವಾ? ಅಂಬೇಡ್ಕರ್ ಅವರನ್ನೇ ಬೈದು, ಅವರ ಫೋಟೊ ಹಿಡ್ಕೊಳ್ಳೋಕ್ಕೆ ನಾಚಿಕೆ ಆಗಲ್ವಾ.? ನಿಮ್ಮ ಜನ್ಮಕ್ಕೆ ಎಂದು ಜೋರು ಧ್ವನಿಯಲ್ಲಿ ಗದರಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಶಾಸಕ ಗಂಟಿಹೊಳಿ, ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಏಕೆ ಪ್ರಧಾನಿ ಮಾಡಲಿಲ್ಲ.? ನೀವು ಅಂಬೇಡ್ಕರ್ ಅವರನ್ನು ಪ್ರಧಾನಿ ಮಾಡಬೇಕಿತ್ತು. ನಿಮ್ಗೆ ನಾಚಿಕೆ ಆಗಲ್ವಾ ಎಂದು ಪ್ರತ್ಯುತ್ತರ ನೀಡಿ ಆಕ್ರೋಶ ವ್ಯಕ್ತಪಡಿಸಿ ಹೊರನಡೆದರು.

ಬಾವಿಗಿಳಿಯದೇ ಹೋರಾಡಿದ ಬಿಜೆಪಿ

ಸಾಮಾನ್ಯವಾಗಿ ಆಡಳಿತ-ಪ್ರತಿಪಕ್ಷ ನಡುವೆ ವಾಕ್ಸಮರ ಶುರುವಾಗುತ್ತಿದ್ದಂತೆ ಪ್ರತಿಪಕ್ಷ ಶಾಸಕರು ಬಾವಿಗಿಳಿದು ಪ್ರತಿಭಟನೆ ನಡೆಸುವುದು ಸಹಜ. ಆದರೆ ಈ ಬಾರಿ ಬಿಜೆಪಿಗರು ಬಾವಿಗೆ ಇಳಿಯದೇ, ಪ್ರತಿಪಕ್ಷ ಶಾಸಕ ಆರ್. ಅಶೋಕ ಸುತ್ತ ನಿಂತು ಘೋಷಣೆ ಕೂಗಿದರು. ಈ ವೇಳೆ ವಿವಿಧ ವಿಧೇಯಕ, ಪ್ರಶ್ನೋತ್ತರ ಪ್ರತಿಗಳನ್ನು ಹರಿದು ತೂರುವುದು ಸಾಮಾನ್ಯವಾಗಿದೆ. ಈ ವೇಳೆ ಕಾಂಗ್ರೆಸ್ ಶಾಸಕರು, ಬಿಜೆಪಿ, ಆರ್‌ಎಸ್‌ಎಸ್ ಹಾಗೂ ಅಮಿತ್ ಶಾ ವಿರುದ್ಧ ವಾಗ್ದಾಳಿ ನಡೆಸಿದರು.

ಇಂದಿರಾ, ನೆಹರು ವಿರುದ್ಧ ಘೋಷಣೆ

ಕಾಂಗ್ರೆಸ್ ಪ್ರತಿಭಟನೆಗೆ ಪ್ರತಿಯಾಗಿ ಬಿಜೆಪಿ ನಡೆಸಿದ ಪ್ರತಿಭಟನೆ ವೇಳೆ, ಬಿಜೆಪಿ ಶಾಸಕರು ಜವಾಹರ ಲಾಲ್ ನೆಹರು, ಇಂದಿರಾ ಗಾಂಧಿ ಅವರ ವಿರುದ್ಧ ಟೀಕಿಸಿದರು. ತುರ್ತು ಪರಿಸ್ಥಿತಿ ಜಾರಿಗೊಳಿಸಿದ್ದು ಇಂದಿರಾ ಗಾಂಧಿ, ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್ ಸೇರಿದಂತೆ ವಿವಿಧ ಘೋಷಣೆಗಳನ್ನು ಕೂಗಿದರು. ಈ ವೇಳೆ ಬಿಜೆಪಿ-ಕಾಂಗ್ರೆಸ್ ಶಾಸಕರ ನಡುವೆ ವಾಕ್ಸಮರ ನಡೆಯಿತು.

ಸಿಎಂ ಹೇಳಿಕೆಯ ಪ್ರಮುಖಾಂಶ

- ಆರ್‌ಎಸ್‌ಎಸ್‌ನ ಎರಡನೇ ಸರಸಂಘ ಚಾಲಕರಾಗಿದ್ದ ಎಂ.ಎಸ್ .ಗೋಳ್ವಾಳ್ಕರ್ ಅವರು ಬಂಚ್ ಆಫ್ ಥಾಟ್ಸ್‌ನಲ್ಲಿ ಅಂಬೇಡ್ಕರ್ ಮತ್ತು ಸಂವಿಧಾನವನ್ನು ವಿರೋಧಿಸಿದ್ದರು.
- ಬಿಜೆಪಿ, ಆರ್‌ಎಸ್‌ಎಸ್ ಈವರೆಗೆ ಸಂವಿಧಾನ ಮತ್ತು ಅಂಬೇಡ್ಕರ್ ಅವರನ್ನು ವಿರೋಧಿಸಿದ್ದ ಆರ್‌ಎಸ್‌ಎಸ್ ಸಂಪಾದಕೀಯವನ್ನಾಗಲಿ, ಗೋಳ್ವಾಳ್ಕರ್ ಮತ್ತು ಸಾವರ್ಕರ್ ಅಭಿಪ್ರಾಯವನ್ನಾಗಲಿ ತಿರಸ್ಕರಿಸಿಲ್ಲ.
- ಸಂವಿಧಾನದಡಿಯಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ಸಂಸತ್ ನಲ್ಲಿ ನಿಂತು ಅವರ ಸ್ಮರಣೆಯನ್ನು ವ್ಯಸನ ಎಂದು ತುಚ್ಛೀಕರಿಸುವ ಅವರ ಧೈರ್ಯಕ್ಕೆ ಮೆಚ್ಚಿಕೊಳ್ಳಲೇ ಬೇಕು.
- ಈ ಮಾತನ್ನು ಕೇಳಿದ ನಂತರ ರಾಜ್ಯಸಭಾಧ್ಯಕ್ಷರು ನಿಜಕ್ಕೂ ಸಂವಿಧಾನದಡಿಯಲ್ಲಿ ಕಾರ್ಯನಿರ್ವಹಿಸುವವರಾಗಿದ್ದರೆ ತಕ್ಷಣ ಅವರನ್ನು ಸದನದಿಂದ ಅಮಾನತುಗೊಳಿಸಬೇಕಾಗಿತ್ತು.

ಸಿದ್ದರಾಮಯ್ಯರಿಂದ ಖಂಡನಾ ಹೇಳಿಕೆ

ಬಿಜೆಪಿ ಶಾಸಕರ ಘೋಷಣೆಯ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ವಾಗ್ದಾಳಿ ನಡೆಸಿದರು. ಆರಂಭದಲ್ಲಿ ಶಾ ವಿರುದ್ಧ ಖಂಡನಾ ನಿರ್ಣಯ ತೆಗೆದುಕೊಳ್ಳುವ ಸಾಧ್ಯತೆಯಿದೆ ಎನ್ನಲಾಗಿತ್ತು. ಆದರೆ ಬಳಿಕ ಕೇವಲ ಹೇಳಿಕೆಗೆ ಸೀಮಿತವಾಯಿತು. ವಿಧಾನಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅಂಬೇಡ್ಕರ್ ಅವರ ಬಗ್ಗೆ ಆಡಿರುವ ತುಚ್ಛೀಕರಣದ ಮಾತುಗಳನ್ನು ಇಡೀ ದೇಶವೇ ಕೇಳಿದೆ. ಮೊದಲಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಬಿಜೆಪಿಯ ಅಂತರಂಗದ ಅಭಿಪ್ರಾಯ ಬಹಿರಂಗವಾಗಿ ಧೈರ್ಯದಿಂದ ದೇಶದ ಮುಂದೆ ತೆರೆದಿಟ್ಟದ್ದಕ್ಕಾಗಿ ಮತ್ತು ಕೊನೆಗೂ ನಿಮ್ಮ ಜೀವಮಾನದಲ್ಲಿ ಒಂದು ಸತ್ಯವನ್ನಾದರೂ ಹೇಳಿದ್ದಕ್ಕೆ ಅವರನ್ನು ನಾನು ಅಭಿನಂದಿಸುತ್ತೇನೆ ಎಂದು ವ್ಯಂಗ್ಯವಾಡಿದರು.

ಅಂಬೇಡ್ಕರ್ ಈ ಭೂಮಿಯಲ್ಲಿ ಹುಟ್ಟದಿದ್ದರೆ ನಾನು ಮುಖ್ಯಮಂತ್ರಿಯಾಗುತ್ತಿರಲಿಲ್ಲ. ಪಕ್ಷದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆಯವರು ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನ ಪಡೆಯುತ್ತಿರಲಿಲ್ಲ. ನಾನು ಮಾತ್ರ ಅಲ್ಲ, ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಅವರು ಕೊಟ್ಟಿರುವ ಸಂವಿಧಾನ ಇಲ್ಲದೆ ಇರುತ್ತಿದ್ದರೆ ಗೃಹಸಚಿವರಾಗಿ ಬದುಕು ಕೊಟ್ಟ ಮಹಾತ್ಮನನ್ನೇ ತುಚ್ಛೀಕರಿಸುವ ಅವಕಾಶ ಅವರಿಗೂ ಸಿಗುತ್ತಿರಲಿಲ್ಲ. ಅಮಿತ್ ಶಾ ಅವರು ಅವರ ಊರಲ್ಲಿ ಎಲ್ಲಾದರೂ ಗುಜರಿ ವ್ಯಾಪಾರ ಮಾಡಿಕೊಂಡು ಇರಬೇಕಾಗುತ್ತಿತ್ತು.

-ಸಿದ್ದರಾಮಯ್ಯ, ಮುಖ್ಯಮಂತ್ರಿ



ಅಂಬೇಡ್ಕರ್ ಫೋಟೊ ಹಿಡಿಯುವ ನೈತಿಕತೆ ಕಾಂಗ್ರೆಸ್‌ಗೆ ಇಲ್ಲ. ಅಂಬೇಡ್ಕರ್ ಅವರೇ ಕಾಂಗ್ರೆಸ್ ಉರಿಯುತ್ತಿರುವ ಮನೆ. ಆ ಮನೆಗೆ ಯಾರೂ ದಲಿತರು ಹೋಗಬಾರದು ಎಂದಿದ್ದರು. ಅಂಬೇಡ್ಕರ್ ಅಂತ್ಯಸಂಸ್ಕಾರಕ್ಕೆ ದೆಹಲಿಯಲ್ಲಿ ಕಾಂಗ್ರೆಸ್ ಜಾಗನೂ ಕೊಟ್ಟಿಲ್ಲ. ನೆಹರು, ಇಂದಿರಾ ಗಾಂಧಿ, ರಾಜೀವ್ ಗಾಂಧಿ ಅಂತ್ಯಸಂಸ್ಕಾರಕ್ಕೆ ಎಕರೆ ಗಟ್ಟಲೆ ಜಮೀನು ಕೊಟ್ಟಿದ್ದರು

-ಬಸನಗೌಡ ಪಾಟೀಲ್ ಯತ್ನಾಳ್, ಶಾಸಕ

ಮಹಾರಾಷ್ಟ್ರದಲ್ಲಿ ಅಂಬೇಡ್ಕರ್ ಸೋಲಿಸಿದವರು ಕಾಂಗ್ರೆಸಿಗರು. ಅವರು ಸೋತಾಗ ಸಂಭ್ರಮಿಸಿದ್ದರು. ಅಂಬೇಡ್ಕರ್ ತೀರಿಕೊಂಡಾಗ ಆರಡಿ ಮೂರಡಿ ಜಾಗ ಕೊಡದ ಪಾಪಿಗಳು ಕಾಂಗ್ರೆಸ್‌ನವರು. ಮನೆಹಾಳು ಕಾಂಗ್ರೆಸ್‌ನವರು. ನೆಹರೂಗೆ ಭಾರತ ರತ್ನ. ಅಂಬೇಡ್ಕರ್‌ಗೆ ಏಕೆ ಭಾರತ ರತ್ನ ಕೊಟ್ಟಿಲ್ಲ. ನೆಹರು, ಇಂದಿರಾಗಾಂಧಿ, ರಾಜೀವ್ ಗಾಂಧಿ ತೀರಿಕೊಂಡರೆ ಜಾಗ ಬರೆದುಕೊಡುತ್ತಾರೆ. ಕೊಲೆಗಡುಕ ಸರಕಾರ. ಸ್ಪೀಕರ್ ಈ ತರದ ನಡಾವಳಿಗಳಿಗೆ ಅವಕಾಶ ಕೊಡಬಾರದು.

- ಆರ್.ಅಶೋಕ, ಪ್ರತಿಪಕ್ಷ ನಾಯಕ

ಸದನ ಸ್ವಾರಸ್ಯ

ಬಿಬಿಎಂಪಿ ಆಸ್ತಿ ರಕ್ಷಣೆಗೆ ಪ್ರತ್ಯೇಕ ನೀತಿ

ವಿಧಾನ ಪರಿಷತ್: ಬಿಬಿಎಂಪಿಗೆ ಸಂಬಂಧಪಟ್ಟ ಆಸ್ತಿ ಒತ್ತುವರಿ ತೆರವಿಗೆ ಕ್ರಮವಹಿಸಿ ಅವುಗಳ ರಕ್ಷಣೆ ಮಾಡಲು ಪ್ರತ್ಯೇಕ ನೀತಿ ಜಾರಿಗೆ ತರಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪ್ರಶ್ನೋತ್ತರ ಅವಧಿ ವೇಳೆ ಸದಸ್ಯ ಗೋವಿಂದರಾಜು ಪ್ರಶ್ನೆಗೆ ಉತ್ತರಿಸಿ, ಬಿಬಿಎಂಪಿ ಸೇರಿದ್ದ ಆಸ್ತಿಗಳು ಹಾಗೂ ಕನ್ಸರ್ವೆನ್ಸಿ ಲೈನ್ ಜಾಗದಲ್ಲಿ ದೇವಸ್ಥಾನ ಹಾಗೂ ವಾಣಿಜ್ಯ ಕಟ್ಟಡಗಳು ನಿರ್ಮಾಣವಾಗಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಹೀಗಾಗಿ ಇದಕ್ಕೊಂದು ಪ್ರತ್ಯೇಕ ನೀತಿ ತಂದು ಸರಕಾರದ ಆಸ್ತಿ ಉಳಿಸಿ ಆದಾಯ ಹೆಚ್ಚಿಸಿಕೊಳ್ಳುವುದಾಗಿ ಸಚಿವರು ಭರವಸೆ ವ್ಯಕ್ತಪಡಿಸಿದರು.

371 (ಜೆ) ಅಡಿ 5977 ಹುದ್ದೆಗಳು ಭರ್ತಿ

ವಿಧಾನ ಪರಿಷತ್: ಕಲಂ 371(ಜೆ) ಅಡಿ ರಾಜ್ಯಾದ್ಯಂತ ಸರಕಾರಿ ನೇಮಕಾತಿಯಲ್ಲಿ ರಾಜ್ಯಮಟ್ಟದ ಸ್ಥಳೀಯ ವೃಂದದ ನೇರ ನೇಮಕಾತಿಯಲ್ಲಿ 9695 ಹುದ್ದೆಗಳ ಪೈಕಿ 5977 ಹುದ್ದೆಗಳ ಭರ್ತಿ ಮಾಡಲಾಗಿದೆ ಎಂದು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಮಾಹಿತಿ ನೀಡಿದರು.

ಪ್ರಶ್ನೋತ್ತರ ವೇಳೆ ಸದಸ್ಯ ಜಗದೇವ್ ಗುತ್ತೇದಾರ್ ಪ್ರಶ್ನೆಗೆ ಉತ್ತರಿಸಿ, 371(ಜೆ) ಅಡಿ ವಿವಿಧ ನೇಮಕಾತಿ ಸಂಸ್ಥೆಗಳಲ್ಲಿ 1658 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಇನ್ನೂ 2035 ಹುದ್ದೆಗಳ ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕಿದ್ದು, ಈ ನಿಟ್ಟಿನಲ್ಲಿ ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಂಡಂತೆ ಕ್ರಮವಹಿಸಲು ಎಲ್ಲಾ ಇಲಾಖೆಗಳಿಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸೂಚನೆ ನೀಡಲಾಗಿದೆ ಎಂದರು.

1.14 ಲಕ್ಷ ಕೋಟಿ ತೆರಿಗೆ ಸಂಗ್ರಹ

ವಿಧಾನ ಪರಿಷತ್: ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗೆ ವಿವಿಧ ಮೂಲಗಳಿಂದ 1,14,715 ಕೋಟಿ ರು. ತೆರಿಗೆ ಸಂಗ್ರಹವಾಗಿದೆ ಎಂದು ಸಚಿವ ಎನ್.ಎಸ್. ಬೋಸರಾಜು ಮಾಹಿತಿ ನೀಡಿದರು.

ಪ್ರಶ್ನೋತ್ತರ ಅವಧಿಯಲ್ಲಿ ಸಿ.ಟಿ.ರವಿ ಪ್ರಶ್ನೆಗೆ ಮುಖ್ಯಮಂತ್ರಿಗಳ ಪರವಾಗಿ ಉತ್ತರಿಸಿ, 1,89,893 ಕೋಟಿ ರು. ಗುರಿ ಹೊಂದಲಾಗಿದ್ದು, 1 , 14,715 ಕೋಟಿ ಸಂಗ್ರಹವಾಗಿದೆ. ಇನ್ನೂ ಕಳೆದ ಎರಡು ವರ್ಷದಲ್ಲಿ ಬಾಹ್ಯ ಹಾಗೂ ಆಂತರಿಕವಾಗಿ 1,23,166 ಕೋಟಿ ರು. ಪಡೆದುಕೊಂಡಿದೆ ಎಂದು ವಿವರಿಸಿದರು. ಇನ್ನೂ ಗ್ಯಾರಂಟಿ ಯೋಜನೆಗಳಿಗೆ ಈಗಾಗಲೇ ಬಜೆಟ್ ನಲ್ಲಿ ಘೋಷಿಸಿರುವ ಅನುದಾನವನ್ನು ಸರಿದೂಗಿಸಲಾಗುತ್ತಿದೆ ಮತ್ತು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಎಲ್ಲಾ ಕ್ಷೇತ್ರಗಳಿಗೂ ಅಗತ್ಯ ಅನುದಾನ ನೀಡುತ್ತಿದ್ದು, ಅನುದಾನದಲ್ಲಿ ಯಾವುದೇ ಕೊರತೆಯಾಗಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಸದನ ಕ್ಲಿಕ್

ಬೆಳಗಾವಿ ಸುವರ್ಣಸೌಧದಲ್ಲಿ ನಡೆದಿರುವ ವಿಶೇಷ ಅಧಿವೇಶನವನ್ನು ನೋಡಲು ಆಗಮಿಸಿದ್ದ ವಿವಿಧ ಶಾಲೆಗಳ ಅಪಾರ ಸಂಖ್ಯೆಯ ಮಕ್ಕಳು.

ಸಮಾಚಾರ ಸಣ್ಣದಲ್ಲ

ಪಥಸಂಚಲನಕ್ಕೆ ಮಹೇಶ್ ಗೌಡ ಆಯ್ಕೆ

ಧಾರವಾಡ: ದೆಹಲಿಯ ಗಣರಾಜ್ಯೋತ್ಸವ ಪಥಸಂಚಲನಕ್ಕೆ ಆಯ್ಕೆ 2024-25ನೇ ಸಾಲಿನ ದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪಥಸಂಚಲನಕ್ಕೆ ಧಾರವಾಡದ ಜೆ.ಎಸ್.ಎಸ್ ಮಂಜುನಾಥೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಸಂಸ್ಥೆಯ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕ ಬಿ.ಬಿ.ಎ 3ನೇ ಸೆಮಿಸ್ಟರ್ ವಿದ್ಯಾರ್ಥಿ ಮಹೇಶ್ ಗೌಡ ಆಯ್ಕೆಯಾಗಿ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ. ಇವರಿಗೆ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಅಧಿಕಾರಿ ಎಮ್.ಬಿ.ದಳಪತಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಅಜಿತ ಪ್ರಸಾದ್, ಉಪಪ್ರಾಚಾರ್ಯರಾದ ಡಾ.ಸೂರಜ್ ಜೈನ್ ಅಭಿನಂದಿಸಿದ್ದಾರೆ.

ಇಂದು ಹಲವು ಕಡೆ ವಿದ್ಯುತ್ ವ್ಯತ್ಯಯ

ಹುಬ್ಬಳ್ಳಿ: ಮೊರಬ 110 ಕೆ.ವಿ. ವಿದ್ಯುತ್ ಉಪಕೇಂದ್ರದಲ್ಲಿ 3ನೇ ತ್ರೈಮಾಸಿಕ ಕಾಮಗಾರಿ ಹಿನ್ನೆಲೆಯಲ್ಲಿ ಡಿ. 20 ರ ಬೆಳಿಗ್ಗೆ 10 ರಿಂದ ಸಂಜೆ 4ರ ವರೆಗೆ ವಿವಿದೇಡೆ ವಿದ್ಯುತ್ ಪೂರೈಕೆ ವ್ಯತ್ಯಯಗೊಳ್ಳಲಿದೆ. ತಿರ್ಲಾಪುರ, ಶಿರಕೋಳ, ಮೊರಬ ಹಾಗೂ ಗುಮ್ಮಗೋಳ 11 ಕೆ.ವಿ ವಿದ್ಯುತ್ ಮಾರ್ಗಗಳ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ ಪ್ರಕಟಣೆಯಲ್ಲಿ ಕೋರಿದೆ.

ಐಟಿಐಯವರಿಗಾಗಿ ಉದ್ಯೋಗಮೇಳ

ಧಾರವಾಡ: ಧಾರವಾಡ ಸವದತ್ತಿ ರಸ್ತೆ, ಮುರುಘಾಮಠದ ಹತ್ತಿರವಿರುವ ಜೆಎಸ್ಎಸ್ ಕೌಶಲ್ಯದ ಐಟಿಐ ಕಾಲೇಜಿನಲ್ಲಿ, ಜ. 5ರಂದು ಯಾವುದೇ ವಿಷಯದಲ್ಲಿ ಐಟಿಐ ಪಾಸಾದ ವಿದ್ಯಾರ್ಥಿಗಳಿಗೆ ಉದ್ಯೋಗಮೇಳವನ್ನು ಆಯೋಜಿಸ ಲಾಗಿದೆ. ಈ ಉದ್ಯೋಗ ಮೇಳದಲ್ಲಿ 10 ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, ಧಾರವಾಡ, ಹುಬ್ಬಳ್ಳಿ, ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧ ಕಡೆಗಳಲ್ಲಿ ಸಾಕಷ್ಟು ಉದ್ಯೋಗಾವಕಾಶಗಳಿವೆ. ಕಾರಣ, ಆಸಕ್ತ ವಿದ್ಯಾರ್ಥಿಗಳು ಉದ್ಯೋಗಮೇಳಕ್ಕೆ ಹಾಜರಾಗಲು ದೂರವಾಣಿ ಸಂಖ್ಯೆ 0836-2462202, 0836-2002209, 9738564415 ಗೆ ಕರೆ ಮಾಡಿ ಕಡ್ಡಾಯವಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. ಬರುವಾಗ ತಮ್ಮ ಬಯೋಡೇಟಾ, ಅಂಕಪಟ್ಟಿ ಮತ್ತು ಆಧಾರ ಕಾರ್ಡನ ಝೆರಾಕ್ಸ್ ಪ್ರತಿ, ಪಾಸ್‌ಪೋರ್ಟ್ ಸೈಜ್ ಫೋಟೋ ತರಬೇಕು. ಹೆಸರು ನೋಂದಣಿಗೆ ಕಡೆಯ ದಿನಾಂಕ ಜನೇವರಿ 4 ಆಗಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜಿಲ್ಲಾ ಮಟ್ಟದ ಪ್ರಶಸ್ತಿಗೆ ಅರ್ಜಿ ಆಹ್ವಾನ

ಧಾರವಾಡ: 2024-25ನೇ ಸಾಲಿಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ 5ರಿಂದ 18 ವರ್ಷದೊಳಗಿನ ಅಸಾಧಾರಣ ಸಾಧನೆ ಮಾಡಿರುವ ಮಕ್ಕಳಿಗೆ ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪ್ರಶಸ್ತಿಯು 10 ಸಾವಿರ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ನಾವೀನ್ಯತೆ ತಾರ್ಕಿಕ ಸಾಧನೆಗಳು, ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಕ್ಕಳು ಅರ್ಜಿಗಳನ್ನು ಸಲ್ಲಿಸಬಹುದು. ಆಸಕ್ತರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅರ್ಜಿ ಪಡೆದು, ಡಿ.27ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ 0836-2447850 ಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಹಕರ ಕುಂದು ಕೊರತೆ ಸಭೆ ನಾಳೆ

ಧಾರವಾಡ: ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳ ಕುರಿತು ಡಿಸೆಂಬರ್ 21 ರಂದು ಮಧ್ಯಾಹ್ನ 3 ಗಂಟೆಗೆ ವಿಜಯಾ ರಸ್ತೆ, ಶಹರ ಉಪ-ವಿಭಾಗ-2 ಹೆಸ್ಕಾಂ ಕಚೇರಿಯಲ್ಲಿ ನಗರ ಉಪವಿಭಾಗ 2ರ ಗ್ರಾಹಕರ ಕುಂದು ಕೊರತೆ ಸಭೆಯನ್ನು ಆಯೋಜಿಸಲಾಗಿದೆ. ಸಾರ್ವಜನಿಕರು ಸಭೆಯ ಸದುಪಯೋಗ ಪಡಿಸಿಕೊಂಡು, ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕೆಂದು ನಗರ ಉಪವಿಭಾಗ-2, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮರಗಳ ತೆರವಿಗೆ ಬಹಿರಂಗ ಹರಾಜು

ಧಾರವಾಡ: ಹುಬ್ಬಳ್ಳಿ ಶಹರದ ವಿವಿಧ ಬಡಾವಣೆಗಳ ರಸ್ತೆ ಬದಿ ಹಾಗೂ ವಿವಿಧ ಕಚೇರಿ ಆವರಣದಲ್ಲಿ ಅಪಾಯಕಾರಿ ಸ್ಥಿತಿಯಲ್ಲಿರುವ 26 ಮರಗಳು ಮತ್ತು 27 ಮರಗಳ ಟೊಂಗೆಗಳನ್ನು ತೆರವುಗೊಳಿಸಲು ಹುಬ್ಬಳ್ಳಿ ವಲಯ ಅರಣ್ಯ ಅಧಿಕಾರಿ ಕಛೇರಿಯಲ್ಲಿ ಡಿಸೆಂಬರ 23 ಹಾಗೂ 30 ರಂದು ಮಧ್ಯಾಹ್ನ 3 ಕ್ಕೆ ಬಹಿರಂಗ ಹರಾಜು ನಡೆಸುತ್ತಿದೆ. ಮರ ಸಂರಕ್ಷಣಾ ಕಾಯ್ದೆ 1976 ರ ಸೆಕ್ಷನ್ 8 (3) (ಗಿ2) ರ ಸೆಕ್ಷನ್‌ಗಳಲ್ಲಿ ಅಗತ್ಯ ಪಡಿಸಿರುವಂತೆ ಈ ಬಗ್ಗೆ ತಕರಾರು ಸಲ್ಲಿಸಬಯಸುವವರು ತಮ್ಮ ತಕರಾರನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಧಾರವಾಡ ಉಪ ವಿಭಾಗ, ಧಾರವಾಡ ಹಾಗೂ ಧಾರವಾಡದ ಕೆ.ಸಿ.ಪಾರ್ಕ್ ಎದುರು ಅರಣ್ಯ ಸಂಕೀರ್ಣದಲ್ಲಿರುವ ಮರ ಅಧಿಕಾರಿಯವರಿಗೆ ಲಿಖಿತ ರೂಪದಲ್ಲಿ ಡಿ. 21 ರೊಳಗಾಗಿ ಸಲ್ಲಿಸಬಹುದಾಗಿದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೋಗದಿಂದ ಮಾವು ಮರೀಚಿಕೆಯಾಗಲಿದೆಯೇ?

ಡಿಸೆಂಬರ್ ಮುಗಿಯುತ್ತ ಬಂದರೂ ಹೂವು ಕಾಣದ ಮಾವು | ಗಿಡಗಳಲ್ಲಿ ಕಪ್ಪು ಮಚ್ಚೆ ರೋಗ

ಮಾಲಿಂಗರಾಯ ಪೂಜಾರ

ಗದಗ: ಹಣ್ಣಿನ ರಾಜ ಮಾವು ಬೆಳೆಗೆ ಅಕಾಲಿಕ ಮಳೆಯಿಂದ ರೋಗ ಕಾಣಿಸಿಕೊಂಡಿದೆ. ಇದರಿಂದ ಇಳುವರಿ ಕೊರತೆಯಾಗುವ ಆತಂಕ ರೈತರಲ್ಲಿ ಮನೆ ಮಾಡಿದ್ದು, ಸಂಕಷ್ಟದಲ್ಲಿ ಮಾವು ಬೆಳೆಗಾರರ ಇದ್ದಾರೆ.

ಡಿಸೆಂಬರ್ ತಿಂಗಳು ಮುಗಿಯುತ್ತಾ ಬಂದರೂ ಇನ್ನುವರೆಗೂ ಮಾವು ಹೂವು ಬಿಟ್ಟಿಲ್ಲ ಅಲ್ಲದೆ ಮಾವು ಗಿಡದಲ್ಲಿ ರೋಗ ಕಂಡು ಬರುತ್ತಿದ್ದು, ಕಪ್ಪು ಮಚ್ಚೆ ರೋಗ ಹೆಚ್ಚಾಗಿ ಕಂಡು ಬರುತ್ತಿದ್ದು ಎಲೆ ಹಾಗೂ ಕಾಂಡದಲ್ಲಿ ಕಂಡು ಬರುತ್ತಿದ್ದು, ಇದರಿಂದ ಭಾಸ್ಪಿಬವನ ಕ್ರಿಯೆ ನಿಂತಿದ್ದು, ಇದರಿಂದ ಹೂವು ಬಿಡುವದು ತೊಂದರೆಯಾಗುತ್ತದೆ ಇದರಿಂದ ಮಾವು ಇಳುವರಿ ನಿರೀಕ್ಷೆ ರೈತರಿಗೆ ಹುಸಿ ಮಾಡಿದೆ.

ಜಿಲ್ಲಾದ್ಯಂತ 600 ರಿಂದ 700 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗಿದ್ದು, ಜಿಲ್ಲೆಯ ಇನ್ನೂ ಕೆಂಪು ಮಣ್ಣಿನ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುದರಿಂದ ಗದಗ ಮುಂಡರಗಿ, ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ತಾಲೂಕಿನಲ್ಲಿ ಹೆಚ್ಚಾಗಿ ಮಾವು ಬೆಳೆ ಬೆಳೆಯಲಾಗಿದೆ. ಆದರೆ ವರ್ಷಕ್ಕೆ ಒಂದು ಬಾರಿ ಬರುವ ಈ ಮಾವು ಹಣ್ಣಿನ ಸೀಜನ್ ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವಂತೆ ನಾವು ಬೆಳೆಯ ಇಳುವರಿ ನಿರೀಕ್ಷೆಯನ್ನು ರೈತರು ಹೂವು ಬಿಡುವ ಮೂಲಕ ಇಳುವರಿ ಲೆಕ್ಕ ಹಾಕುತ್ತಾರೆ.

ಶಿಲೀಂದ್ರ ಕಣಗಳು ಗಾಳಿಯ ಮಾವು ಬೆಳೆ ಸಹಾಯದಿಂದ ಒಂದು ಗಿಡದಿಂದ ಇನ್ನೊಂದು ಗಿಡಕ್ಕೆ ಮತ್ತು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹರಡುತ್ತವೆ ಇದರಿಂದ ಮಾವು ಎಲ್ಲಾ ಗಿಡಗಳು ಸಹ ರೋಗ ಕಾಣಿಸಿಕೊಂಡಿದೆ, ಪ್ರತಿ ವರ್ಷ ನವೆಂಬರ್ ತಿಂಗಳ ಕೊನೆಯ ವಾರ ಅಥವಾ ಡಿಸೆಂಬರ್ ಮೊದಲ ವಾರ ಅಷ್ಟರಲ್ಲಿ ಮಾವಿನ ಗಿಡಗಳು ಹೂವು ಬಿಡಲು ಪ್ರಾರಂಭತ್ತಿದ್ದವು ಆದರೆ ಪ್ರಸಕ್ತ ವರ್ಷ ಡಿಸೆಂಬರ್ ತಿಂಗಳ ಕೊನೆಗೊಳ್ಳುತ್ತಿದ್ದರು ಹೂವು ಬಿಡದೆ ಇರುವದರಿಂದ ತೋಟಗಾರಿಗೆ ತಜ್ಞರ ಪ್ರಕಾರ ಜನೆವರಿ ಎರಡನೇ ವಾರ ಹೂವು ಬಿಡುವ ನಿರೀಕ್ಷೆ ಇದೆ ಎನ್ನುತ್ತಿದ್ದಾರೆ. ಅಲ್ಲದೆ ಜನೆವರಿ ತಿಂಗಳು ಹೆಚ್ಚಾಗಿ ಇಬ್ಬನಿ ಹಾಗೂ ಮಂಜೂ ಬೀಳುವದು ಹೆಚ್ಚಾಗಿ ಕಂಡು ಬರುವದರಿಂದ ಇಳುವರಿ ಕಡಿಮೆಯಾಗುತ್ತದೆ ಮಾವಿನ ಹಣ್ಣು ಪ್ರತಿ ವರ್ಷಕ್ಕಿಂತ ಕಡಿಮೆ ಬರುತ್ತದೆ ಎನ್ನಲಾಗುತ್ತಿದೆ. ಇದರಿಂದ ಇಳುವರಿ ನಿರೀಕ್ಷೆ ಇಟ್ಟುಕೊಂಡಿರುವ ರೈತರಲ್ಲಿ ನಿರಾಸೆ ಭಾವನೆ ಮೂಡಿಸಿದೆ.



ಗದಗ ಜಿಲ್ಲೆಯಲ್ಲಿರುವ ಮಾವಿನ ಗಿಡದಲ್ಲಿ ಕಪ್ಪು ಮಚ್ಚೆ ರೋಗ ಕಾಣಿಸಿಕೊಂಡಿದ್ದು, ಇದರಿಂದ ಮಾವು ಹೂವು ಬಿಟ್ಟಿಲ್ಲ.

ಇಳುವರಿ ಕುಂಠಿತ ಆತಂಕದಲ್ಲಿ ರೈತರು: ಇಳುವರಿ ಕುಂಠಿತವಾಗುತ್ತದೆ ಎಂಬ ಆತಂಕ ರೈತರಲ್ಲಿ ಮೂಡಿದೆ. ಹಾಗಾಗಿ ರೈತರು ಈಗಿನಿಂದಲೇ ಮಾವು ಬೆಳೆಗಳನ್ನು ರಕ್ಷಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಮಾವಿಗೆ ಬೂದು ರೋಗ ಮತ್ತು ಜಿಗಿ ಹುಳುಗಳ ಬಾಧೆ ಕಂಡುಬಂದರೆ ಕಾಯಿ ಕಚ್ಚುವಿಕೆ ಕಡಿಮೆಯಾಗಿ ಮಿಡಿಗಾತ್ರದ ಕಾಯಿಗಳು ಉದುರುತ್ತಿದ್ದು, ಮುಂಜಾಗ್ರತ ಕ್ರಮವಾಗಿ ಮಾವು ಬೆಳೆಗಾರರು ಔಷಧಗಳನ್ನು ಸಿಂಪಡಣೆ ಮಾಡುತ್ತಿದ್ದಾರೆ.

> ಪ್ರಸಕ್ತ ವರ್ಷ ಅಕಾಲಿಕ ಮಳೆಯಿಂದ ಮಾವು ಗಿಡಕ್ಕೆ ತೊಂದರೆಯಾಗಿದ್ದು, ಇದರಿಂದ ಹೂವು ಬಿಡುವದು ಸ್ವಲ್ಪ ತಡವಾಗಿದೆ. ಮಾವು ರೋಗ ನಿಯಂತ್ರಣದ ಕುರಿತುಕೃಷಿ ವಿಜ್ಞಾನ ಕೇಂದ್ರದಿಂದ ಕಾರ್ಯಕ್ರಮ ಹಾಗೂ ರೈತರಿಗೆ ತರಬೇತಿ ಮಾಡಲಾಗಿದೆ. ಪ್ರತಿ ವರ್ಷ 3 ರಿಂದ 4 ತಿಂಗಳಿಗೊಮ್ಮೆ ಮಾವು ಬೆಳೆಗಾರರಿಗೆ ತರಬೇತಿ ಮಾಡಲಾಗುತ್ತದೆ.
>
> -ಶಶಿಕಾಂತ ಕೋಟಿಮನಿ ಉಪನಿರ್ದೇಶಕರು ತೋಟಗಾರಿಕೆ ಇಲಾಖೆ

> ರೈತರು ಬೆಳೆಯುವ ಪ್ರತಿ ಬೆಳೆಯು ರೋಗಗಳಿಗೆ ತುತ್ತಾಗುತ್ತಿದ್ದು, ಅದರಿಂದ ರೈತರ ಸಮುದಾಯ ಸಂಕಷ್ಟದಲ್ಲಿದ್ದಾರೆ. ಪ್ರಸಕ್ತ ವರ್ಷ ಅಕಾಲಿಕ ಮಳೆಯಿಂದ ಇನ್ನುವರೆಗೂ ಮಾವು ಹೂವು ಸಹ ಬಿಟ್ಟಿಲ್ಲ ಅಲ್ಲದೆ ಮಾವಿನ ಗಿಡದಲ್ಲಿ ಕಪ್ಪು ಮಚ್ಚೆ ರೋಗ ಕಂಡು ಬರುತ್ತಿದೆ ಸರ್ಕಾರ ರೈತರು ಬೆಳೆದ ಬೆಳೆ ನಾಶಕ್ಕೆ ಪರಿಹಾರ ನೀಡಬೇಕು ಹಾಗೂ ಬೆಳೆ ವಿಮೆ ಪರಿಹಾರ ಕೊಡಿಸಲು ಮುಂದಾಗಬೇಕು.
>
> -ನೀಲಪ್ಪ ಪೂಜಾರ, ರೈತ, ಗದಗ

ರೋಗ ನಿಯಂತ್ರಣಕ್ಕೆ ಸೂಕ್ತ ಮಾರ್ಗ

ಮಾವಿನ ಬೆಳೆಯಲ್ಲಿ ಹೊಸ ಚಿಗುರು ಮೂಡುತ್ತಿದ್ದು, ಚಿಗುರು ಎಲೆಗಳನ್ನು ಬಾಧಿಸುವ ಗೂಡುಮಾರಿ ಹುಳು (ಎಲೆಗಳನ್ನು ಹೆಣೆಯುವ ಹುಳು), ಗೊಂಡೆ ಹುಳು (ಹೂವುಗಳನ್ನು ಹೆಣೆಯುವ ಹುಳು), ಎಲೆ ತಿನ್ನುವ ಕೀಡೆಗಳು, ರೆಂಬೆ ಕುಡಿ ಕೊರಕ ಮತ್ತು ಇತರೆ ಕೀಡೆಗಳು ಕಂಡು ಬರುತ್ತಿವೆ ಅಲ್ಲದೆ ಗಿಡಗಳಿಗೆ ಕಪ್ಪು ಮಚ್ಚೆ ರೋಗಕ್ಕೆ ಬರುತ್ತಿರುವುದು ಕಂಡುಬರುತ್ತಿದ್ದು ಆದ್ದರಿಂದ ರೈತರು ಮಾವಿನ ಬೆಳೆಗೆ 2.5 ಮಿ.ಲೀ ಪ್ರೋಪೆನೋಫಾಸ್ 50 ಈ.ಸಿ ಮತ್ತು ಗ್ರಾಂ ನೀರಿನಲ್ಲಿ ಕರಗುವ ಗಂಧಕ 80 ಡಬ್ಲ್ಯೂ.ಪಿ.ಹಳ ಜೊತೆಗೆ 0.5 ಮಿ. ಅಂಟನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಸಿಂಪಡಿಸಬೇಕು ಅಥವಾ 1 ಮಿ.ಈ. ಬೇವಿನ ಮೂಲದ ಕೀಟನಾಶಕವಾದ ಅಜಾಡಿರೆಕ್ಟಿನ್ (10000 ಪಿಪಿಎಂ) ನ್ನು ಕೀಟನಾಶಕಗಳ ಜೊತೆಗೆ ಬೆರಸಿ ಸಿಂಪಡಿಸಿದರೆ ಹೆಚ್ಚು ಪರಿಣಾಮಕಾರಿಯಾಗಿ ಕೀಟಗಳ ಹತೋಟಿಯನ್ನು ಮಾಡಬಹುದು ಬೆಳೆಯ ಈ ಹಂತದಲ್ಲಿ ರೈತರು ಯಾವುದೇ ಕಾರಣಕ್ಕೂ ಬೆಳೆಗೆ ನೀರನ್ನು ಕೊಡಬಾರದು ಒಂದು ವಾರದವರೆಗೆ ದಟ್ಟವಾದ ಇಬ್ಬನಿ ಅಥವಾ ಮಂಜು ಬಿದ್ದರೆ ಮಾವಿನ ಬೆಳೆಗೆ ರೋಗಗಳು ಖಚಿತವಾಗಿ ಬರುತ್ತವೆ. ಅಂತಹ ಸಂದರ್ಭಗಳಲ್ಲಿ ರೈತರು ಕೂಡಲೇ ಸಿಂಪರಣೆಯನ್ನು ಕೈಗೊಳ್ಳಬೇಕು ಎಂದು ಕೃಷಿ ತೋಟಗಾರಿಕೆ ಚಿಕಿತ್ಸಾಲಯದ ಸಂದರ್ಶಕ ತೋಟಗಾರಿಕೆ ತಜ್ಞ ಹಾಗೂ ನಿವೃತ್ತ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಸುರೇಶ ಕುಂಬಾರ ತಿಳಿಸಿದ್ದಾರೆ.

ಕಲಾವಿದರ ಕೈ ಬಿಟ್ಟಿದ್ದು ಬೇಸರ: ಲಿಂಗರಾಜ

ಧಾರವಾಡ: ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಶಿಫಾರಸು ಮಾಡಿದ ಇಬ್ಬರು ಕಲಾವಿದರಿಗೆ 87ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವಕಾಶವನ್ನು ಕೈಬಿಡಲಾಗಿದೆ. ಇದು ಖಂಡನೀಯ ವಿಷಯ ಎಂದು ಸಾಹಿತ್ಯ ಪರಿಷತ್ ಅಧ್ಯಕ್ಷ ಲಿಂಗರಾಜ್ ಅಂಗಡಿ ಪ್ರಕಟಣೆ ಮೂಲಕ ಬೇಸರ ವ್ಯಕ್ತಪಡಿಸಿದ್ದಾರೆ.

ಹುಬ್ಬಳ್ಳಿ ಮೂಲದ ಇಬ್ಬರು ಜಾನಪದ ಕಲಾವಿದರಾದ ಇಮಾಮಸಾಬ ವಲ್ಲೆಪ್ಪನವರ್ ಶೋಭಾ ಜಾಬೀನ ಅವರಿಗೆ ಅವಕಾಶ ಕೊಡಿ ಎಂದು ರಾಜ್ಯದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಿಗೆ ಪತ್ರ ಬರೆದರೂ ಅವಕಾಶ ಕೊಟ್ಟಿಲ್ಲಾ. ಇದು ಧಾರವಾಡ ಜಿಲ್ಲೆಯ ಸಾಹಿತಿಗಳ ತವರೂರು ಎನ್ನುವ ಜನರಿಗೆ ಮಾಡಿದ ಮೋಸ ಎಂದು ಬೇಸರ ವ್ಯಕ್ತಪಡಿಸಿದರು.

ವೈದ್ಯರ ಅರ್ಜಿ ಆಹ್ವಾನ

ಗದಗ: ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿದ ಬೆಟಗೇರಿ ಹಾಗೂ ನರೇಗಲ್ ಸಂಸ್ಥೆಗಳಿಗೆ ವಿವಿಧ ತಜ್ಞ ವೈದ್ಯರ ಹುದ್ದೆಗಳ ಅವಶ್ಯಕತೆ ಹಿನ್ನೆಲೆಯಲ್ಲಿ ಜನರಲ್ ಮೆಡಿಸನ್, ಚಿಕ್ಕಮಕ್ಕಳ ತಜ್ಞರು, ಪ್ರಸೂತಿ ಹಾಗೂ ಸ್ತ್ರಿರೋಗ ತಜ್ಞರು ಅರವಳಿಕೆ ತಜ್ಞರು ಸದರಿ ಮಂಜೂರಾದ ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ಅಥವಾ ಕ್ರಮಬದ್ಧವಾಗಿ ನೇಮಕವಾಗುವವರೆಗೆ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಸಂದರ್ಶನ ಮೂಲಕ ಅರ್ಹ ಅಭ್ಯರ್ಥಿಗಳಿಗೆ ಅರ್ಜಿ ಅಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅಭ್ಯರ್ಥಿಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಕೊಠಡಿ ಸಂ-101, ಜಿಲ್ಲಾಡಳಿತ ಭವನ, ಹುಬ್ಬಳ್ಳಿ ರಸ್ತೆ, ಗದಗ ಇಲ್ಲಿಗೆ ತಮ್ಮ ಬಯೋಡೇಟಾ ಮತ್ತು ವಿದ್ಯಾರ್ಹತೆಗೆ ಸಂಬಅಧಿಸಿದ ದಾಖಲಾತಿಗಳ ದ್ವಿಪ್ರತಿಗಳೊಂದಿಗೆ ದಿನಾಂಕ:02-01-2025 ರಂದು ಸಂದರ್ಶನಕ್ಕೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾಗಿದೆ.

ದರಪಟ್ಟಿ ಆಹ್ವಾನ

ಗದಗ : 2024-25ನೇ ಸಾಲಿನ ಜಿಲ್ಲಾ ಪಂಚಾಯತ್ ಅನಿರ್ಬಂಧಿತ ಅನು ಮೋದಿತ ಕಾಮಗಾರಿಗಳಾದ ವಸತಿ ಶಾಲೆಗಳಿಗೆ ವಾಟರ್ ಹೀಟರ್ (ಬಾಯ್ಲರ್) ಮತ್ತು ಕುಡಿಯುವ ನೀರಿನ ವಾಟರ್ ಫಿಲ್ಟರ್ ಸಾಮಗ್ರಿಗಳು, ವಿದ್ಯಾರ್ಥಿಗಳಿಗೆ ಆಹಾರ ಸೇವಿಸುವ ಪಾತ್ರೆಗಳು (ಲೋಟ, ತಟ್ಟೆ, ಚಮಚ, ಬಟ್ಟಲುಗಳು ಹಾಗೂ ಇತರೆ ಪರಿಕರಗಳು) ಸಾಮಗ್ರಿಗಳು, ವಾಷಿಂಗ್ ಮಶಿನ ಸಾಮಗ್ರಿಗಳು ಹಾಗೂ ಯು.ಪಿ.ಎಸ್. ಸಾಮಗ್ರಿಗಳನ್ನು ಖರೀದಿಸಲು ದರಪಟ್ಟಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ ದೂರವಾಣಿ ಸಂಖ್ಯೆ 08372-234375 ಸಂಪರ್ಕಿಸಬಹುದಾಗಿದೆ.

ಯುವತಿ ಸಾವಿಗೆ ನ್ಯಾಯ ಒದಗಿಸಿ: ಅಸೂಟಿ

ನವಲಗುಂದ: ಹುಬ್ಬಳ್ಳಿ ನಗರದ ವಿದ್ಯಾರ್ಥಿನಿ ನೇಹಾ ನಿರಂಜನ ಹಿರೇಮಠ ಹಾಗೂ ಅಂಜಲಿ ಅಂಬಿಗೇರ ಎಂಬ ಯುವತಿಯರ ಬರ್ಬರ ಹತ್ಯೆಗಳು ನಡೆದು ವರ್ಷ ಕಳೆದಿದೆ. ಅದೇ ಸಂದರ್ಭದಲ್ಲಿ ಲೋಕಸಭೆ ಚುನಾವಣೆಯ ಭರಾಟೆ ನಡೆದಿತ್ತು.

ಚುನಾವಣೆಯ ಕಾರಣ ಆಗ ನಗರಕ್ಕೆ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಗೃಹಮಂತ್ರಿ ಅಮಿತ್ ಶಾ ಸೇರಿದಂತೆ ಘಟಾನುಘಟಿ ನಾಯಕರೆಲ್ಲ ಸಂತ್ರಸ್ತರ ಮನೆಗೆ ಧಾವಿಸಿ ಪುಂಕಾನುಪುಂಕ ಭರವಸೆಗಳ ಸುರಿಮಳೆಗರೆದು, ಸಂತ್ರಸ್ತರ ಕುಟುಂಬಗಳಿಗೆ ನ್ಯಾಯ ಕೊಡಿಸಿಯೇ ಸಿದ್ಧ ಎಂಬ ಹೇಳಿಕೆಗಳನ್ನು ನೀಡಿ ಸೈ ಎನಿಸಿಕೊಂಡರು. ಆದರೆ, ಅದಾದ ನಂತರ ಲೋಕಸಭೆಯಲ್ಲಿ ಅಧಿಕಾರದ ಗದ್ದುಗೆ ಏರಿದ ಬಿಜೆಪಿ ನಾಯಕರು ಈ ಪ್ರಕರಣಗಳನ್ನು ಸಂಪೂರ್ಣ ಮರೆತು ಹೋಗಿದ್ದಾರೆ ಎಂದು ಕಾಂಗ್ರೆಸ್ ಧುರೀಣ ವಿನೋದ ಅಸೂಟಿಯವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಯುವತಿಯರ ಹತ್ಯೆ ನಡೆದ ನಂತರ ಲೋಕಸಭೆಯ ಎರಡು ಅಧಿವೇಶನಗಳು ನಡೆದಿವೆ. ರಾಜ್ಯದಿಂದ ಸುಮಾರು ಎನ್‌ಡಿಎ ದಿಂದ 19ಜನ ಸಂಸದರಾಗಿದ್ದಾರೆ. ಅದರಲ್ಲಿ ಮೂವರು ಕೇಂದ್ರ ಮಂತ್ರಿಯೂ ಆಗಿದ್ದಾರೆ. ಆದರೆ ತಮ್ಮ ರಾಜ್ಯದಲ್ಲೇ ಘಟಿಸಿದ ಇಂತಹ ಹೇಯ ಕೃತ್ಯದಲ್ಲಿ ಪ್ರಾಣ ಕಳೆದುಕೊಂಡ ಯುವತಿಯರ ಸಾವಿನ ಕುರಿತು, ಅವರ ಕುಟುಂಬಕ್ಕೆ ನ್ಯಾಯ ಕೊಡಿಸುವ ಕುರಿತು ಎಲ್ಲಿಯೂ ಚಕಾರ ಎತ್ತುತ್ತಿಲ್ಲ.

ಮತ ಪಡೆಯುವ ವೇಳೆ ಗಲ್ಲಿ ಗಲ್ಲಿ ಸಂಚರಿಸಿ ನಂತರ ದಿಲ್ಲಿಗೆ ಹೋಗಿ ಕುಳಿತು, ಸ್ಥಳೀಯರನ್ನು ಹಾಗೂ ಕ್ಷೇತ್ರದ ಜನರ ನೋವು, ಕಷ್ಟ-ಕಾರ್ಪಣ್ಯಗಳನ್ನು ಬದಿಗೊತ್ತುವ ಇಂತಹ ವರ್ತನೆ ಇನ್ನಾದರೂ ಬಿಟ್ಟು ಹುಬ್ಬಳ್ಳಿಯ ಇಬ್ಬರು ಯುವತಿಯರ ಸಾವಿಗೆ ನ್ಯಾಯ ಒದಗಿಸಲು ಮುಂದಾಗಲಿ ಎಂದು ಒತ್ತಾಯಿಸಿದ್ದಾರೆ.

ಇದಕ್ಕೆ ಕೇಂದ್ರ ಸರಕಾರ ಕಾನೂನು ತಿದ್ದುಪಡಿ ಮಾಡಬೇಕು. ಅಲ್ಲದೇ ಈ ಕೃತ್ಯ ಮಾಡಿದವರಿಗೆ ಉಗ್ರ ಶಿಕ್ಷೆ ಕೊಡಿಸಬೇಕು. ಅಂದಾಗ ಮಾತ್ರ ದೇಶದಲ್ಲಿ ಈ ರೀತಿಯ ಘಟನೆಗಳಿಗೆ ಕಡಿವಾಣ ಹಾಕಲು ಸಾಧ್ಯ.

ಬಿಜೆಪಿ ನಾಯಕರು ಚುನಾವಣೆ ಬಂದಾಗ ಒಂದು ಬಣ್ಣ, ಅಧಿಕಾರ ಬಂದ ನಂತರ ಮತ್ತೊಂದು ಬಣ್ಣ ತೋರಿಸುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆರ್ಥಿಕ ಸಬಲೀಕರಣಕ್ಕೆ ಗ್ಯಾರಂಟಿ ಯೋಜನೆ ಸಹಕಾರಿ

ತಾಲೂಕು ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆ | ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ಅಭಿಪ್ರಾಯ

ಗದಗ: ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷಿ ಜನಪ್ರಿಯ ಯೋಜನೆಗಳಾದ ಪಂಚ ಗ್ಯಾರಂಟಿ ಯೋಜನೆಗಳು ರಾಜ್ಯದ ಬಡಕುಟುಂಬಗಳ ಆರ್ಥಿಕ ಸಬಲೀಕರಣಕ್ಕೆ ಸಹಕಾರಿಯಾಗಿವೆ. ಅರ್ಹರಿಗೆ ಯೋಜನೆಗಳ ಸೌಲಭ್ಯ ಸುಲಭವಾಗಿ ತಲುಪಲು ಅಧಿಕಾರಿ ವರ್ಗ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಬೇಕು ಎಂದು ತಾಲೂಕಾ ಗ್ಯಾರಂಟಿ ಅನುಷ್ಟಾನ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ತಿಳಿಸಿದರು.

ಜಿಲ್ಲಾಡಳಿತ ಭವನದ ವಿಡಿಯೋ ಕಾನ್ಫರನ್ಸ್ ಸಭಾಂಗಣದಲ್ಲಿ ಗುರುವಾರ ತಾಲೂಕಾ ಆಡಳಿತ, ತಾಲೂಕು ಪಂಚಾಯತ್ ಸಹಯೋಗದಲ್ಲಿ ಏರ್ಪಡಿಸಿದ ತಾಲೂಕು ಮಟ್ಟದ ಪಂಚಗ್ಯಾರಂಟಿ ಅನುಷ್ಟಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅಧಿಕಾರಿಗಳಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.

ಸೆಪ್ಟೆಂಬರ್ 19 ರಂದು ಜಿಲ್ಲಾಡಳಿತದಲ್ಲಿ ಪಂಚ ಗ್ಯಾರಂಟಿ ಅನುಷ್ಟಾನ ಸಮಿತಿ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಕೆ.ಪಾಟೀಲ ನೇತೃತ್ವದಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ ಮಾನ್ಯ ಸಚಿವರ ಸೂಚನೆ ನೀಡಿದಂತೆ ತಾಲೂಕಾ ಮಟ್ಟದಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಶೇ 100 ರಷ್ಟು ಪ್ರಗತಿ ಸಾಧಿಸಬೇಕು ಹಾಗೂ ಪಂಚ ಗ್ಯಾರಂಟಿಗಳ ಅನುಷ್ಟಾನಕ್ಕೆ ಇರುವ ತಾಂತ್ರಿಕ ತೊಡಕುಗಳ ನಿವಾರಣೆಗೆ ಸಮಿತಿ ಚಟುವಟಿಕೆಯಿಂದ ಕಾರ್ಯನಿರ್ವಹಿಸುವಂತೆ ಹೇಳಿದ್ದರು. ಅವರ ಮಾರ್ಗದರ್ಶನದಂತೆ ನಾವೆಲ್ಲರೂ ಅರ್ಹರಿಗೆ ಗ್ಯಾರಂಟಿಗಳ ಸೌಲಭ್ಯ ತಲುಪುವಂತೆ ಕಾರ್ಯನಿರ್ವಹಿಸೋಣ ಎಂದರು.

ಪಂಚ ಗ್ಯಾರಂಟಿಗಳ ಅನುಷ್ಟಾನದಲ್ಲಿ ಇರುವ ತಾಂತ್ರಿಕ ಸಮಸ್ಯೆಗಳ ನಿವಾರಣೆಗೆ ಅಧಿಕಾರಿಗಳು ಮುತುವರ್ಜಿ ವಹಿಸಿ ಸಮಿತಿ ಸದಸ್ಯರನ್ನು ಒಳಗೊಂಡಅತೆ ಪ್ರತ್ಯೇಕ ಸಭೆಗಳನ್ನು ಏರ್ಪಡಿಸಿ ತಾಂತ್ರಿಕ ಸಮಸ್ಯೆಗಳ ಇತ್ಯರ್ಥಕ್ಕೆ ಮುಂದಾಗೋಣ. ಅಧಿಕಾರಿಗಳು ಸೂಕ್ತ ಸಹಕಾರದೊಂದಿಗೆ ಕೆಲಸ ನಿರ್ವಹಿಸಬೇಕು. ಸರ್ಕಾರದ ಉದ್ದೇಶ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಬಲವರ್ಧನೆಯಾಗಿದೆ. ಸರ್ಕಾರದ ಉದ್ದೇಶ ಸಾಕಾರಕ್ಕಾಗಿ ನಾವೆಲ್ಲ ಒಮ್ಮತದಿಂದ ಶ್ರಮಿಸೋಣ ಎಂದು ಹೇಳಿದರು.

ಸಮಿತಿ ಸದಸ್ಯರಾದ ಕೃಷ್ಣಗೌಡ ಪಾಟೀಲ ಮಾತನಾಡಿ ರಾಜ್ಯದ 1.10 ಕೋಟಿ ಕುಟುಂಬಗಳ ಬಡತನ ನಿರ್ಮೂಲನೆ ಮಾಡುವಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಸಫಲವಾಗಿವೆ. ಪಂಚ ಗ್ಯಾರಂಟಿಗಳ ಸದ್ಬಳಕೆಯಿಂದ ಪ್ರತಿ ತಿಂಗಳು ಪ್ರತಿಕುಟುಂಬಕ್ಕೆ5,000 ರೂ ಸಹಾಯ ಸಿಗುತ್ತಿದೆ. ಬಡವರು ಹಸಿವಿನಿಂದ ಬಳಲಬಾರದು. ಜನಪ್ರತಿನಿಧಿಗಳಾದವರು ಸರ್ಕಾರದ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸುವವರು ಎಂದರು.

ಪಡಿತರ ಪಡೆಯಲು ಹಾಗೂ ಹೊಸ ಪಡಿತರ ಚೀಟಿ ನೋಂದಣಿ ಹಾಗೂ ಆಧಾರ್ ಲಿಂಕ್, ಥಂಬ್ ಹೊಂದಾಣಿಕೆ ಆಗದೇ ಇರುವಂತಹ ಹಲವಾರು ತಾಂತ್ರಿಕ ತೊಂದರೆಗಳನ್ನಿಟ್ಟುಕೊಂಡು ಅರ್ಹ ಫಲಾನುಭವಿಗಳು ಗ್ಯಾರಂಟಿ ಸೌಲಭ್ಯಗಳಿಂದ ವಂಚಿತರಾಗಿದ್ದು ಅವರಿಗೆ ತಾಂತ್ರಿಕ ತೊಂದರೆಗಳ ನಿವಾರಣೆಗೆ ಪ್ರತ್ಯೇಕ ಸಭೆ ನಡೆಸಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿ ಸಫಲರಾಗೋಣ ಎಂದು ಸಲಹೆ ನೀಡಿದರು.

ಗುರುವಾರ ತಾಲೂಕಾ ಆಡಳಿತ, ತಾಲೂಕು ಪಂಚಾಯತ್ ಸಹಯೋಗದಲ್ಲಿ ಏರ್ಪಡಿಸಿದ ತಾಲೂಕು ಮಟ್ಟದ ಪಂಚಗ್ಯಾರಂಟಿ ಅನುಷ್ಟಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅಧಿಕಾರಿಗಳಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.

ಗ್ಯಾರಂಟಿ ಸಮಿತಿ ಜಿಲ್ಲಾ ಅಧ್ಯಕ್ಷ ಬಿ.ಬಿ.ಅಸೂಟಿ ಮಾತನಾಡಿ ಪಡಿತರ ಪಡೆಯಲು ಪಡಿತರದಾರರು ಥಂಬ್ ನೀಡಿದರೂ ತಾಂತ್ರಿಕ ಸಮಸ್ಯೆಗಳಿಂದ ಪಡಿತರ ಪಡೆಯಲು ಸಾಧ್ಯವಾಗುತ್ತಿಲ್ಲ. ಅಲ್ಲದೇ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮೀ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿ ಹಲವಾರು ತಿಂಗಳುಗಳೇ ಗತಿಸಿದರೂ ಈವರೆಗೂ ಮಂಜೂರಾತಿ ದೊರೆತಿರುವುದಿಲ್ಲ. ಇಂತಹ ಹಲವಾರು ಸಮಸ್ಯೆಗಳಿದ್ದು ಅವುಗಳ ನಿವಾರಣೆಗೆ ವಿಶೇಷ ಶಿಬಿರ ಹಮ್ಮಿಕೊಳ್ಳುವ ಮೂಲಕ ಸ್ಥಳದಲ್ಲೇ ತಾಂತ್ರಿಕ ಸಮಸ್ಯೆಗಳ ಇತ್ಯರ್ಥಕ್ಕೆ ಮುಂದಾಗೋಣ ಎಂದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ ಮಾತನಾಡಿ ಗ್ಯಾರಂಟಿಗಳ ಅನುಷ್ಟಾನ ಪ್ರತಿಶತ ನೂರರಷ್ಟು ಸಾಧನೆಗೆ ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡೋಣ. ತಾಂತ್ರಿಕ ತೊಡಕುಗಳ ನಿವಾರಣೆಗೆ ಉನ್ನತ ಅಧಿಕಾರಿಗಳ ಗಮನಕ್ಕೆ ತಂದು ಶೀಘ್ರ ಸಮಸ್ಯೆ ಇತ್ಯರ್ಥಕ್ಕೆ ಶ್ರಮಿಸುವ ಮೂಲಕ ಸರ್ಕಾರದ ಉದ್ದೇಶ ಸಾಕಾರಕ್ಕೆ ಅಧಿಕಾರಿಗಳು ಶ್ರಮಿಸಬೇಕು ಎಂದು ಸೂಚಿಸಿದರು.

ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಯ್ಯ ಕೆ. ಮಾತನಾಡಿ ಕಳೆದ ಪ್ರಗತಿ ಪರಿಶೀಲನಾ ಸಭೆಯ ನಡುವಳಿಯನ್ನು ಹಾಗೂ ಆಗಿರುವ ಪ್ರಗತಿ ಅಂಕಿ ಅಂಶಗಳನ್ನು ಸಭೆಗೆ ಮಂಡಿಸುತ್ತಾ ಶೇ 100 ರಷ್ಟು ಪ್ರಗತಿ ನಮ್ಮ ಗುರಿಯಾಗಿರಲಿ. ರಾಜ್ಯದಲ್ಲಿಯೇ ಗದಗ ತಾಲೂಕು ಪಂಚ ಗ್ಯಾರಂಟಿ ಅನುಷ್ಟಾನದಲ್ಲಿ ಉನ್ನತ ಸ್ಥಾನದಲ್ಲಿರುವಂತೆ ನೋಡಿಕೊಳ್ಳೋಣ ಎಂದರು.

ಸಭೆಯಲ್ಲಿ ಸಮಿತಿ ಸದಸ್ಯರುಗಳಾದ ದಯಾನಂದ ಪವಾರ, ಸಂಗು ಕರಕಲಕಟ್ಟಿ, ಮೀನಾಕ್ಷಿ ಬೆನಕಣ್ಣವರ, ಶಂಭು ಕಾಳೆ, ನಿಂಗಪ್ಪ ದೇಸಾಯಿ, ಸಂಗಮೇಶ ಹಾದಿಮನಿ, ರಮೇಶ , ದೇವರೆಡ್ಡಿ ತಿರ್ಲಾಪುರ, ಮಲ್ಲಪ್ಪ ದಂಡಿನ, ಗಣೇಶ ಸಿಂಗ್ ಮಿಟಾಡಿ, ಮಲ್ಲಪ್ಪ ಬಾರಕೇರ, ಭಾಷಾ ಮಲ್ಲಸಮುದ್ರ, ಸಾವಿತ್ರಿ ಹೂಗಾರ ಪಾಲ್ಗೊಂಡು ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಪಂಚ ಗ್ಯಾರಂಟಿಗಳ ಅನುಷ್ಟಾನ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ನೋಟಿಸ್ ಜಾರಿ

ಸಭೆಗೆ ಸರಿಯಾದ ಮಾಹಿತಿ ಹಾಗೂ ಸಮರ್ಪಕ ವಿವರಣೆ ನೀಡದಿರುವ ಸಾರಿಗೆ ಸಂಸ್ಥೆಯ ಬೆಟಗೇರಿ ಹಾಗೂ ಗದಗ ವ್ಯವಸ್ಥಾಪಕರು, ಆಹಾರ ಇಲಾಖೆಯ ಮತ್ತು ಉದ್ಯೋಗ ವಿನಿಮಯ ಕೇಂದ್ರದ ಅಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸುವಂತೆ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಮಿತಿಯ ಅಧ್ಯಕ್ಷರು ಸೂಚಿಸಿದರು.

ಶಿಕ್ಷಣ ಸಂಸ್ಥೆಗೆ ಪದಾಧಿಕಾರಿಗಳ ನೇಮಕ

ಧಾರವಾಡ: ಧಾರವಾಡದಲ್ಲಿ 60 ವರ್ಷ ಐತಿಹಾಸಿಕತೆಯನ್ನು ಹೊಂದಿರುವ ಶಿಕ್ಷಣ ಸಂಸ್ಥೆಗೆ ಪದಾಧಿಕಾರಿಗಳ ನೇಮಕ ಮಾಡಲಾಯಿತು.

ಭಾರತೀಯ ವಿದ್ಯಾ ಕೇಂದ್ರ ಕಿಲ್ಲಾ ಧಾರವಾಡದ ನೂತನ ಆಡಳಿತ ಮಂಡಳಿ ಮುಂಬರುವ 3 ವರ್ಷಗಳ ಕಾಲದ ಅವಧಿಗೆ ಆಯ್ಕೆ ಪ್ರಕ್ರಿಯೆ ಧಾರವಾಡದ ಕಿಲ್ಲಾದ ಜಯದೇವಿತಾಯಿ ಬಾಲಕಿಯರ ಪ್ರೌಢಶಾಲೆಯಲ್ಲಿ ಜರುಗಿತು.

ಈ ಸಂದರ್ಭದಲ್ಲಿ ನೂತನವಾಗಿ ಸಂಸ್ಥೆಯ ಅಧ್ಯಕ್ಷರಾಗಿ ಮಾಜಿ ಮಹಾಪೌರರು ಈರೇಶ ಅಂಚಟಗೇರಿ, ಉಪಾಧ್ಯಕ್ಷರಾಗಿ ಅನ್ನದಾನಯ್ಯ ಹಿರೇಮಠ, ಕಾರ್ಯಾಧ್ಯಕ್ಷರಾಗಿ ಖ್ಯಾತ ಹೋಟೆಲ ಉದ್ಯಮಿ ಮಹೇಶ ಶೆಟ್ಟಿ, ಉಪಕಾರ್ಯಾಧ್ಯಕ್ಷರಾಗಿ ಪ್ರಭು ನಡಕಟ್ಟಿ, ಪ್ರಧಾನ ಕಾರ್ಯದರ್ಶಿಯಾಗಿ ಸಿದ್ದಯ್ಯ ಚಿಕ್ಕಮಠ, ಸಹಕಾರ್ಯದರ್ಶಿಯಾಗಿ ನಿಂಗಪ್ಪ ಕಾಶಪ್ಪನವರ ಆಯ್ಕೆಯಾದರು.

ಆಡಳಿತ ಮಂಡಳಿಯ ಸದಸ್ಯರಾಗಿ ವೀರಣ್ಣ ಆಕಳವಾಡಿ, ರೇವಣಸಿದ್ದೇಶ ಅಲದಕಟ್ಟಿ, ಶಿವಾನಂದ ಹೂಗಾರ, ಮಂಜುನಾಥ ಹಗೆದಾರ, ಶಿವಯೋಗಿ ಅಮಿನಗಢ, ರವೀಂದ್ರ ಶೆಟ್ಟಿ, ಮಂಜುನಾಥ ಬಡಿಗೇರ, ಲಿಂಗರಾಜ ಅಂಗಡಿ ಆಯ್ಕೆಯಾದರು.

ನೂತನ ಆಡಳಿತ ಮಂಡಳಿಯ ಪದಾಧಿಕಾರಿಗಳನ್ನ ಸನ್ಮಾನಿಸಿ ಅಭಿನಂದಿಸಿ ಶುಭಕೋರಲಾಯಿತು ಹಾಗು ನೂತನ ಆಡಳಿತ ಮಂಡಳಿ ಪದಾಧಿಕಾರಿಗಳು ಮುಂಬರುವ ಮೂರು ವರ್ಷಕ್ಕಾಗಿ ಅಧಿಕಾರ ವಹಿಸಿಕೊಂಡರು.

ಪತ್ರಕರ್ತರಿಗೆ ಭಾಷಾ ಪ್ರಭುತ್ವ ಅಗತ್ಯ: ಮೂಲಿಮನಿ

ಧಾರವಾಡ: ಬದಲಾಗುತ್ತಿರುವ ಪತ್ರಿಕೋದ್ಯಮಕ್ಕೆ ತಂತ್ರಜ್ಞಾನ ಸೇರಿದಂತೆ, ಭಾಷಾ ಪ್ರಭುತ್ವ, ಅನುವಾದ ಕಲೆಯ ಕೌಶಲಗಳನ್ನು ಅಳವಡಿಸಿಕೊಂಡು ಸಿದ್ಧರಾ ಗಬೇಕಾಗಿದೆ ಎಂದು ಪತ್ರಕರ್ತ ಚನ್ನು ಹೇಳಿದರು.

ಕರ್ನಾಟಕ ಕಲಾ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು ಕಾಲೇಜಿನ ವಾಣಿಜ್ಯ ಸಭಾಂಗಣದಲ್ಲಿ 2024-25ನೇ ಸಾಲಿನ ಶೈಕ್ಷಣಿಕ ಚಟುವಟಿಕೆ ಕಾರ್ಯಾರಂಭ ಮತ್ತು ಪತ್ರಿಕೋದ್ಯಮದ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು,

ಪತ್ರಿಕೋದ್ಯಮ ಕ್ಷೇತ್ರಕ್ಕೆ ಬರುವ ವಿದ್ಯಾರ್ಥಿ ಭಾಷಾ ಕೌಶಲ, ಸೃಜನಶೀಲತೆ ಬೆಳೆಸಿಕೊಳ್ಳಬೇಕು. ಬಹು ಕೌಶಲದ ಜೊತೆಗೆ ಮಾಧ್ಯಮದಲ್ಲಿ ಬಳಸುವ ತಂತ್ರಜ್ಞಾನವನ್ನು ಕಲಿಯಬೇಕು. ಹೊಸದನ್ನು ಕಲಿಯಬೇಕು ಎಂಬ ತುಡಿತ ಪತ್ರಿಕೋದ್ಯಮ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಇರಬೇಕು. ಇಂದಿನ ಪತ್ರಿಕೋದ್ಯಮಕ್ಕೆ ವೇಗ, ತಂತ್ರಜ್ಞಾನ,ಭಾಷೆಯ ಮೇಲೆ ಪ್ರಭುತ್ವವನ್ನು ಹೊಂದಿದಾಗ ಮಾತ್ರ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಲು ಸಾಧ್ಯವಿದೆ ಎಂದರು.

ಕರ್ನಾಟಕ ಕಲಾ ಕಾಲೇಜಿನ ಜಿಮಖಾನದ ಉಪಾಧ್ಯಕ್ಷ ಡಾ.ಆಯ್.ಸಿ.ಮುಳಗುಂದ ಪ್ರಾಚಾರ್ಯರಾದ ಡಾ. ಡಿ.ಬಿ.ಕರಡೋಣಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಡೈರಿ ಮತ್ತು ಪೆನ್ನು ನೀಡುವುದರ ಮೂಲಕ ಹಿರಿಯ ವಿದ್ಯಾರ್ಥಿಗಳು ಸ್ವಾಗತಿಸಿದರು. ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕ ಡಾ.ಪ್ರಭಾಕರ ಕಾಂಬಳೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶೈಕ್ಷಣಿಕ ಡೀನ್ ಡಾ. ಮುಕುಂದ ಲಮಾಣಿ, ಡಾ.ರವೀಂದ್ರ ಜಲರಡ್ಡಿ, ವಿದ್ಯಾರ್ಥಿಗಳಾದ ಅಕ್ಷತಾ, ರಮ್ಯಾ, ಪೂಜಾ, ಆರ್ಯನ್, ನಹೀಮ, ಭೂಮಿಕಾ, ಕಿರಣ್ ಸೇರಿದಂತೆ ವಿವಿಧ ವಿಭಾಗದ ವಿದ್ಯಾರ್ಥಿಗಳು ಹಾಜರಿದ್ದರು.

ಆರಾಮ

ಅನುದಿನವೂ **ವಿರಾಮ**ಕ್ಕೆ ಒಂದು ನೆಪ

ಚಿತ್ತ ವಿಹಾರ

ಕೈ ಕಾಲುಗಳ ಬೆಲೆ!

ಒಂದೂರಿನಲ್ಲಿ ಒಬ್ಬ ಬಡವ ಇದ್ದ. ಒಂದು ಸಾರಿ ಆ ಊರಿಗೆ ಒಬ್ಬರು ಮಹಾನುಭಾವರು ಬಂದರು. ಈ ಬಡವ ಅವರ ಕಾಲಿಗೆ ಬಿದ್ದು ತನ್ನ ಬಡತನ ಅದರಿಂದ ಅವನು ಅನುಭವಿಸುತ್ತಿರುವ ಕಷ್ಟಗಳನ್ನು ತೋಡಿಕೊಂಡ. ಮಹಾತ್ಮರು 'ಇದೇನೂ ದೊಡ್ಡ ಮಾತಲ್ಲ. ಪಕ್ಕದ ಊರಿನಲ್ಲಿ ಒಬ್ಬ ಸಾಹುಕಾರ ಇದ್ದಾನೆ. ನೀನು ಅವನಲ್ಲಿ ಸಹಾಯ ಕೇಳಿದರೆ ನಿನ್ನ ಕಷ್ಟ ದೂರವಾಗುವುದು' ಎಂದರು. ಬಡವ ಪಕ್ಕದ ಊರಿಗೆ ಹೋದ. ಸಾಹುಕಾರನನ್ನು ಕಂಡು ತನ್ನ ಕಷ್ಟ ಹೇಳಿಕೊಂಡಾಗ ಸಾಹುಕಾರ ಏನು ಕೆಲಸ ಮಾಡುತ್ತಿದ್ದೀಯ ಅಂತ ಕೇಳಿದ್ದಕ್ಕೆ ಬಡವ ಏನೂ ಇಲ್ಲ ಅಂದ. ಬಡವನನ್ನು ನೋಡಿ ಇವನು ಕಷ್ಟಪಟ್ಟು ದುಡಿದು ತಿಂದ ಆಸಾಮಿ ಅಲ್ಲ ಅನಿಸಿ ನೀನು ನನಗೆ ನಿನ್ನ ಎರಡೂ ಕೈಗಳನ್ನು ಕೊಡುವುದಾದರೆ ನಾನು ನಿನಗೆ ಎರಡು ಲಕ್ಷ ರೂಪಾಯಿ ಕೊಡುತ್ತೇನೆ ಎಂದ. ಆಗ ಬಡವ ಅದು ಸಾಧ್ಯವಿಲ್ಲ ಅಂದ. ಸಾಹುಕಾರ 'ಹೋಗಲಿ ನಿನ್ನ ಎರಡೂ ಕಾಲುಗಳನ್ನು ಕೊಡು ನಾಲ್ಕು ಲಕ್ಷ ಕೊಡುತ್ತೇನೆ' ಅಂದ. ಅದಕ್ಕೆ ಬಡವ 'ಕಾಲಿಲ್ಲದಿದ್ದರೆ ನಾನು ಜೀವನ ಮಾಡುವುದು ಹೇಗೆ? ಅದು ಆಗದ ಮಾತು' ಅಂದ. 'ಹೋಗಲಿ ನನಗೆ ನಿನ್ನ ಎರಡೂ ಕಣ್ಣುಗಳನ್ನು ಕೊಟ್ಟುಬಿಡು. ಎಂಟು ಲಕ್ಷ ರೂಪಾಯಿ ಕೊಡುತ್ತೇನೆ' ಎಂದ ಸಾಹುಕಾರ. ಅದಾಗದು ಎಂದ ಬಡವ. ಆಗ ಸಾಹುಕಾರ ನಗುತ್ತಾ 'ಅಲ್ಲಯ್ಯಾ ಎರಡು ಲಕ್ಷ ರೂಪಾಯಿಗಿಂತ ಹೆಚ್ಚು ಬೆಲೆ ಬಾಳುವ ಕೈಗಳನ್ನೂ, ನಾಲ್ಕು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಬೆಲೆ ಬಾಳುವ ಕಾಲುಗಳನ್ನೂ, ಎಂಟು ಲಕ್ಷ ರೂಪಾಯಿಗೂ ಹೆಚ್ಚು ಬೆಲೆ ಬಾಳುವ ಕಣ್ಣುಗಳನ್ನು ಇಟ್ಟುಕೊಂಡೂ ನೀನು ಬಡವ ಅಂದುಕೊಂಡು ನನ್ನ ಹತ್ರ ಬಂದಿದ್ದೀಯಲ್ಲ ನಿನಗೆ ಏನು ಹೇಳಬೇಕು. ಹೋಗಿ ಕಷ್ಟಪಟ್ಟು ಕೆಲಸ ಮಾಡು. ನಿನ್ನ ಬಡತನ ಮತ್ತು ಕಷ್ಟ ಬೇಗನೇ ಓಡಿಹೋಗುತ್ತವೆ' ಅಂದ. ಆಗ ಬಡವನಿಗೆ ತನ್ನ ಅಂಗಾಂಗಗಳ ಬಗೆಗಿನ ಮೌಲ್ಯ ಚನ್ನಾಗಿ ತಿಳಿದು ಅಂದಿನಿಂದ ಕಷ್ಟಪಟ್ಟು ದುಡಿಯಲು ಆರಂಭಿಸಿದ.

• ಬೇಲೂರು ರಾಮಮೂರ್ತಿ

ಸ್ವಸಾಮರ್ಥ್ಯ ಬೆಳೆಯಲಿ

ಮಕ್ಕಳು ಅದು ಬೇಕು, ಇದು ಬೇಕು ಎಂದು ಹಠ ಹಿಡಿದಾಗ ಬೇಡಿದ್ದೆಲ್ಲವನ್ನು ಕ್ಷಣಾರ್ಧದಲ್ಲಿ ಕೊಟ್ಟು ಕೈತೊಳೆದುಕೊಳ್ಳುವ ಪಾಲಕರೇ ಹೆಚ್ಚು. ಮಕ್ಕಳಿಗೆ ಅತಿಯಾಗಿ ಓದು ಓದೆಂದು ಒತ್ತಡ ಹಾಕುವುದು, ತಮ್ಮ ನಿರೀಕ್ಷೆ ಹುಸಿಯಾದಾಗ ಕೋಪಿತರಾಗುತ್ತೇವೆ. ಕೆಲವರು ಮಕ್ಕಳನ್ನು ಅತಿಯಾಗಿ ಮುದ್ದಿಸಿ, ಬೇಡಿದ್ದೆಲ್ಲವನ್ನು ನೀಡಿ ಸಾಧನೆಗೆ ಏಣಿಯಾಗಿದ್ದರೂ ಮಕ್ಕಳು ಏನನ್ನೂ ಸಾಧಿಸದೆ ಜೀವನದಲ್ಲಿ ವಿಫಲರಾಗುತ್ತಾರೆ. ಮಕ್ಕಳನ್ನು ಹೇಗೆ ಬೆಳೆಸಬೇಕೆಂಬ? ಜಿಜ್ಞಾಸೆ ಮೂಡುವುದು ಸಹಜವಲ್ಲವೇ? ಇಬ್ಬರು ತಮ್ಮ ಮನೆಯ ಮುಂಭಾಗದ ಖಾಲಿ ಜಾಗದಲ್ಲಿ ಒಂದೇ ಸಮಯದಲ್ಲಿ ಸಸಿ ನೆಟ್ಟು, ಪಾಲನೆ ಪೋಷಣೆ ಮಾಡುತ್ತಿದ್ದರು. ಒಬ್ಬರು ಅವಶ್ಯಕತೆಗಿಂತ ಹೆಚ್ಚು ನೀರು ಗೊಬ್ಬರವನ್ನು ನೀಡಿದರೆ, ಇನ್ನೊಬ್ಬರು ಎಷ್ಟು ಬೇಕವೋ ಅಷ್ಟನ್ನೇ ನೀಡುತ್ತಾನೆ. ಇಬ್ಬರ ಸಸ್ಯಗಳು ಸೊಂಪಾಗಿ ಬೆಳೆಯುತ್ತವೆ. ಒಮ್ಮೆ ಬಿರುಗಾಳಿ ಬೀಸಿದ ಹೊಡೆತಕ್ಕೆ ಸೊಂಪಾಗಿ ಬೆಳದ ಗಿಡಗಳು ಬುಡ ಸಮೇತ ಕಿತ್ತು ಬಿದ್ದವು. ಆದರೆ ಕಡಿಮೆ ನೀರಿನೊಂದಿಗೆ ಬೆಳೆದ ಗಿಡಗಳು ಗಟ್ಟಿಯಾಗಿ ನಿಂತಿದ್ದವು. ಇದನ್ನು ನೋಡಿ, ಮೊದಲನೆಯವರು ಎರಡನೆಯವರನ್ನು ಪ್ರಶ್ನಿಸಿದಾಗ, 'ನಿನ್ನ ಸಸಿಗಳಿಗೆ ನೀನು ಅಗತ್ಯಕ್ಕಿಂತ ಹೆಚ್ಚು ನೀರು ಗೊಬ್ಬರ ಹಾಕಿದೆ, ಇದರಿಂದ ಆ ಬೇರುಗಳು ನೀರಿನ ಹುಡುಕಾಟದಲ್ಲಿ ಹೆಚ್ಚಿನ ಆಳಕ್ಕೆ ಮತ್ತು ಅಗಲವಾಗಿ ಹರಡಿ ದೃಢವಾಗಿ ನಿಲ್ಲಲು ಸಾಧ್ಯವಾಗಲಿಲ್ಲ' ಎಂದು ಉತ್ತರ ದೊರಕಿತು. ಇಲ್ಲಿ ಒಂದು ಪಾಠವಿದೆ. ಮಕ್ಕಳಿಗೆ ಎಲ್ಲವನ್ನೂ ಸುಲಭವಾಗಿ ನೀಡಿದರೆ ಅವರಿಗೆ ಪರಿಶ್ರಮದ ಬೆಲೆ ಗೊತ್ತಾಗದು; ಪ್ರತಿ ಮಗು ತನ್ನ ಸಾಧನೆಗಾಗಿ ವಿಶೇಷ ಸಾಮರ್ಥ್ಯ ಹಾಗೂ ಪ್ರತಿಭೆ ಹೊಂದಿದ್ದು ಅದನ್ನು ಗುರುತಿಸಿ ಬೆಂಬಲಿಸಿದರೆ ಸಾಕು, ಅವರ ಭವಿಷ್ಯ ತಾನೇ ತಾನಾಗಿ ಉಜ್ವಲವಾಗುತ್ತದೆ. ಮಕ್ಕಳಿಗೆ ಸ್ವಸಾಮರ್ಥ್ಯದ ಮೇಲೆ ಸಹಜ ಕಲಿಕೆಗೆ ಅವಕಾಶ ಸಿಗಬೇಕು.

• ರವಿ ಕಂಗಳ, ಕೊಂಕಣಕೊಪ್ಪ

ಉತ್ತರ ಕರ್ನಾಟಕದ ರಂಗನತಿಟ್ಟು

• ಡಾ.ಕರವೀರಪ್ರಭು ಕ್ಯಾಲಕೊಂಡ

ಉತ್ತರ ಕರ್ನಾಟಕದ ರಂಗನತಿಟ್ಟು ಎಂದೇ ಕರೆಯುವ ಮಾಗಡಿ ಪಕ್ಷಿಧಾಮ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಮಾಗಡಿ ಗ್ರಾಮದಲ್ಲಿದೆ. ಸುಮಾರು 70 ಹೆಕ್ಟೆರ್ ವಿಸ್ತೀರ್ಣದ ಮಳೆಯಾಧಾರಿತ ಕೆರೆಯೇ ಪಕ್ಷಿಧಾಮವಾಗಿ ರೂಪಿತಗೊಂಡಿದೆ. ಇದು 900 ಹೆಕ್ಟೇರ್ ಜಲಾನಯನ ಪ್ರದೇಶವನ್ನು ಹೊಂದಿದೆ. ಈ ಪಕ್ಷಿಧಾಮವು ಶಿರಹಟ್ಟಿಯಿಂದ 8 ಕಿ.ಮೀ., ಗದಗದಿಂದ 27 ಕಿ .ಮೀ .ದೂರದಲ್ಲಿದೆ. ಇಲ್ಲಿಗೆ ಅಕ್ಟೋಬರ್ ಅಂತ್ಯಕ್ಕೆ ದೇಶ ವಿದೇಶಗಳಿಂದ ವಿವಿಧ ಪಕ್ಷಗಳು ಆಗಮಿಸಲಾರಂಭಿಸುವವು.

ಇಲ್ಲಿ ಸುಮಾರು 166 ವಿವಿಧ ಜಾತಿಯ ಹಕ್ಕಿಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಸುಮಾರು 44 ಜಾತಿಯವು ವಿದೇಶಗಳಿಂದ ವಲಸೆ ಬಂದಂತಹವು. ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುವ ಹಕ್ಕಿಗಳೆಂದರೆ ಬಾರ್ ಹೆಡೆಡ್ ಗೀಸ್. ಇದಲ್ಲದೇ ತಟ್ಟೆ ತಲೆಯ ಹೆಬ್ಬಾತು, ಬೂದು ಹೆಬ್ಬಾತು (ಗ್ರೇಲಾಗ್ ಗೂಸ್), ಕಂದು ಬಾತು (ಬ್ರಾಹ್ಮಿಣಿ ಶೆಲ್ಡಕ್), ಸೂಜಿಬಾಲದ ಬಾತು (ನಾರ್ದರ್ನ್ ಪಿನ್ವೇಲ್) ಮುಂತಾದ ಬಾತುಕೋಳಿಗಳು ಇಲ್ಲಿಗೆ ವಲಸೆ ಬರುತ್ತವೆ. ವಿವಿಧ ನೀರಕ್ಕಿ, ನೀರ್ನಡಿಗೆ , ನೆಲವಾಸಿ, ಮರವಾಸಿ ಹಕ್ಕಿಗಳನ್ನು ಹತ್ತಿರದಿಂದ ನೋಡಬಹುದಾಗೀದೆ. ಮಾಗಡಿ ಕೆರೆಗೆ 10 ಸಾವಿರಕ್ಕೂ ಹೆಚ್ಚು ಪಕ್ಷಿಗಳು ಪ್ರತಿ ವರ್ಷ ವಲಸೆ ಬರುತ್ತವೆ. ಪ್ರತಿ ವರ್ಷ ಜಮ್ಮು ಕಾಶ್ಮೀರದ ಲಡಾಕ, ಲೇಹ್, ರಶಿಯಾ, ಮಲೇಶಿಯಾ, ಆಸ್ಟ್ರೇಲಿಯಾ, ಟಿಬೆಟ್, ಭೂತಾನ್, ಮ್ಯಾನ್ಮಾರ್, ನ್ಯೂಜೀಲ್ಯಾಂಡ್, ಸೈಬೇರಿಯಾಗಳಿಂದ ವಲಸೆ ಬರುತ್ತವೆ. ಈ ಅಪರೂಪದ ವಿದೇಶಿ ಅತಿಥಿಗಳು ಈ ಕೆರೆಗೆ ನವೆಂಬರ್ ತಿಂಗಳಲ್ಲಿ ಬಂದಿಳಿದು ಫೆಬ್ರವರಿ ಅಂತ್ಯಕ್ಕೆ ತಮ್ಮ ದೇಶಗಳಿಗೆ ಮರಳುತ್ತವೆ . ಪಕ್ಷಿಗಳ ಸ್ವರ್ಗವೆಂದೇ ಮಾಗಡಿ ಕೆರೆಯನ್ನು ಕರೆಯಲಾಗುತ್ತದೆ. ಇಲ್ಲಿಗೆ ಹಾರಿ ಬರುವ ಬಗೆ ಬಗೆಯ ಪಕ್ಷಿಗಳ ಕಲರವ, ಈಜುವ ಮರಿಗಳನ್ನು ನೋಡಲು ದೂರದ ಊರುಗಳಿಂದ ಪಕ್ಷಿ ವೀಕ್ಷಕರು, ಛಾಯಾಚಿತ್ರಗ್ರಾಹಕರು, ಶಾಲಾ ಮಕ್ಕಳುಬರುತ್ತಾರೆ.

ಪಕ್ಷಿಗಳ ರಂಗೋಲಿ

ಕೇರಿಯಲ್ಲಿ ಗುಂಪು ಗುಂಪಾಗಿ ತೇಲುತ್ತಾ, ವಿಹರಿಸುವ ಬಣ್ಣ ಬಣ್ಣದ ಈ ಹಕ್ಕಿಗಳು ನೀರಿನಲ್ಲಿ ರಂಗೋಲಿ ಹಾಕಿದಂತೆ ಭಾಸವಾಗುತ್ತದೆ. ಆಹಾರ ಅರಸಿಕೊಂಡು ಗುಂಪು ಗುಂಪಾಗಿ ಹಾರುವ ಹಕ್ಕಿಗಳನ್ನು ನೋಡುವುದು ಕಣ್ಣಿಗೆ ಹಬ್ಬ. ಇಲ್ಲಿನ ಹಕ್ಕಿಗಳನ್ನು ಮುಂಜಾನೆ ಸುಮಾರು 8.30 ರ ಸಮಯ ಸೂಕ್ತ. ಬೆಳಕು ಸಹ ಚೆನ್ನಾಗಿರುತ್ತದೆ. ಸಂಜೆ 5 ರ ಸುಮಾರು ಇಲ್ಲಿಂದ ಆಹಾರ ಹುಡುಕಲು ಶುರುಮಾಡುತ್ತವೆ. ಅರಣ್ಯ ಇಲಾಖೆಯ ವೀಕ್ಷಣಾ ಗೋಪುರ ಉತ್ತಮ ನೋಟವನ್ನು ಒದಗಿಸುತ್ತದೆ.



ಇಲ್ಲಿದ್ದಾನೆ ಬ್ರಹ್ಮ!

ರಾಜಸ್ಥಾನದ ಪುಷ್ಕರ್‌ನಲ್ಲಿ ನಡೆಯುವ ಮೇಳ ಬಹು ಪ್ರಸಿದ್ಧ; ಲಕ್ಷಾಂತರ ಜನ ಸೇರುವ ಜಾತ್ರೆ. ಅಲ್ಲಿರುವ ಒಂದು ಗುಡಿಯಲ್ಲಿ ಬ್ರಹ್ಮ ಮತ್ತು ಗಾಯತ್ರಿಯರು ಇರುವುದು ವಿಶೇಷ.

• ಡಿ.ಎಸ್.ಲಿಂಗರಾಜು

ಜೈಪುರ ತಲುಪುವಾಗ ಬೆಳಗಿನ ಹನ್ನೊಂದು ಗಂಟೆ. ರಾಜಾಸ್ಥಾನದಲ್ಲಿ ಒಂದು ಕಡೆ ಮರಳು, ಮತ್ತೊಂದು ಕಡೆ ಭಾರಿ ಕೋಟೆ-ಕೊತ್ತಲಗಳು ತುಂಬಿವೆ. ಇವೆಲ್ಲದರೊಂದಿಗೆ ನಮ್ಮ ನಾಡಿಗೆ ಬಂದು ತಮ್ಮದೇ ಊರಿನಲ್ಲಿದ್ದಂತೆ ಕಾಸು-ಕರೆಮಣಿ ವ್ಯಾಪಾರವನ್ನೆಲ್ಲಾ ತಮ್ಮ ಕೈಗೆ ತೆಗೆದುಕೊಂಡ ಮಾರವಾಡಿಗಳು ಗಮನ ಸೆಳೆಯುತ್ತಾರೆ. ಇವೆಲ್ಲವನ್ನೂ ಚಿಂತಿಸುತ್ತಾ ನನ್ನ ಬಹಳ ದಿನಗಳ ಕನಸಿನ ಸ್ಥಳವಾದ ಅಜ್ಮೇರದ ದರ್ಗಾ ನೋಡಲು 136 ಕಿ.ಮಿ. ದೂರದ ಪ್ರಯಾಣಕ್ಕೆ ಕಾರು ಹತ್ತಿದ್ದೆ.

ಮೊದಲು ಅಜ್ಮೇರದ ಖ್ವಾಜಾ ಮೊಯಿನುದ್ದೀನ್ ಹಸನ್ ಚಿಸ್ತಿ ದರ್ಗಾ ತಲುಪಿದೆವು. ಗುಲಾಬಿ ಪಕಳೆಗಳನ್ನು ಹಿಡಿದು ಆರಂಭದ ಎಂಟು ದ್ವಾರಗಳನ್ನು ಮತ್ತು ಬೆಳ್ಳಿಯ ದ್ವಾರವನ್ನು ದಾಟಿ ಚಿಸ್ತಿ ಮುಖ್ಯ ಗುಮ್ಮಟದೊಳಗೆ ಪ್ರವೇಶಿಸಿದ್ದೆ. 'ಕಾಫಿ ಲೋಗ್ ಆ ರಹಾಹೈ' ಎಂಬ ಧ್ವನಿಯೊಂದು ದರ್ಗಾದ ಮೂಲೆಯಿಂದ ಕೇಳಿತ್ತು. ಕೈಯ್ಯಲ್ಲಿ ಹಿಡಿದಿದ್ದ ಗುಲಾಬಿ ಪಕಳೆಗಳನ್ನು ಸಮಾಧಿಗೆ ಅರ್ಪಿಸಲೂ ಆಗದಂತೆ ತೇಲಿ ಬಂದ ಜನರ ನೂಕಾಟದಲ್ಲಿ ನಾನು ಹೊರಕ್ಕೆ ತಳ್ಳಲ್ಪಟ್ಟಿದ್ದೆ. ಸಮಾಧಿಗೆ ದೇಶ ವಿದೇಶಗಳ ಖ್ಯಾತನಾಮರೆಲ್ಲಾ ಚಾದರ್ ಮತ್ತು ಗುಲಾಬಿ ಪಕಳೆಗಳನ್ನು ಹೊದಿಸಿ ಪುನೀತರಾಗಿ ತೆರಳಿದ್ದರು.

ಹೊರಕ್ಕೆ ಬಂದು ನಿಂತು ನೋಡುವಾಗ ಬದಿಯಲ್ಲೇ ಇದ್ದ ಭಾರೀ ಗಾತ್ರದ ಡೇಗ್ (ಕಡಾಯಿ) ಕಂಡಿತ್ತು. ಇದು ಸುಮಾರು 37 ಅಡಿ ಅಗಲದ, 15 ಅಡಿ ಆಳದ 4800 ಕಿಲೋ ಅನ್ನ ಬೇಯಿಸಬಲ್ಲ ಭಾರೀ ಗಾತ್ರದ ಕಡಾಯಿ. ಇದರಲ್ಲಿ ಸಿಹಿ ಪ್ರಸಾದವನ್ನು (ದೇಘ್ ಕಾ ಖಾನ) ತಯಾರಿಸಿ ಬಂದವರಿಗೆ ಹಂಚಲಾಗುತ್ತದೆ. ಕಡಾಯಿಯನ್ನು ದೊರೆ ಅಕ್ಬರ್ ದರ್ಗಾಕ್ಕೆ ದಾನ ಮಾಡಿದ್ದ ಎಂಬ ಹೇಳಿಕೆಗಳಿವೆ. ದರ್ಗಾದಿಂದ ಹೊರಬಂದು ಬಾಜ್ರಾ ರೊಟ್ಟಿ, ಕಚೋರಿ ಕಡಿ ಮತ್ತು ಗಟ್ಟೆಕಿ ಪುಲಾವ್ ತಿಂದು ಮುಂದಿನ ಪ್ರಯಾಣಕ್ಕೆ ತಯಾರಾದೆವು.

ಗಾಯತ್ರಿ ಮತ್ತು ಬ್ರಹ್ಮ

ಅಜ್ಮೇರದಿಂದ ಹೊರಟ ಕಾರ್ ನಮ್ಮನ್ನು 15 ಕಿಮಿ ದೂರ ಕೊಂಡೊಯ್ದು ಪುಷ್ಕರ ತಲುಪಿಸಿತ್ತು. ಪುಷ್ಕರದಲ್ಲಿ ಬ್ರಹ್ಮ ದೇವನ ಗುಡಿಯೊಂದಿದೆ. ಮೆಟ್ಟಿಲುಗಳನ್ನು ಹತ್ತಿ ಸಣ್ಣ ಗುಡ್ಡದ ಮೇಲಿನ ದೇಗುಲಕ್ಕೆ ತಲುಪಿದೆ. ಆದಿ ಶಂಕರರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದರು. ಇಲ್ಲಿ ಪತ್ನಿ ಗಾಯತ್ರಿಯೊಂದಿಗೆ ಬ್ರಹ್ಮ ವಿರಾಜಮಾನನಾಗಿದ್ದಾನೆ. ಬೆಟ್ಟದಿಂದ ಇಳಿದು ಪುಷ್ಕರ್ ಸ್ನಾನ ಘಟ್ಟಕ್ಕೆ ಬಂದಿದ್ದೆ. ವಿಶಾಲವಾದ ಕೊಳವನ್ನು ಸ್ವಚ್ಚವಾಗಿ ಇರಿಸಲಾಗಿತ್ತು. ಆಸುಪಾಸಿನಲ್ಲೇ ಸುಮಾರು 500 ಕ್ಕೂ ಹೆಚ್ಚು ಗುಡಿಗಳಿವೆಯಂತೆ. ಅದರಲ್ಲಿ ನನ್ನ ಆಸಕ್ತಿ ಇದ್ದದ್ದು ಪುಷ್ಕರದ ಗಾಯತ್ರಿದೇವಿ ಮಹಾಶಕ್ತಿ ಪೀಠವನ್ನು ನೋಡುವ ಬಯಕೆ. ನಡೆದು ಅಲ್ಲಿಗೆ ತಲುಪುವಾಗ ಅದರ ಮಹತ್ವದ ಬಗ್ಗೆ ಸ್ಥಳೀಯರಿಗೇನೂ ಮಾಹಿತಿಯೂ ಇರಲಿಲ್ಲ ಆಸಕ್ತಿಯೂ ಇರಲಿಲ್ಲ. ದೇವಾಲಯದ ಒಳಾಂಗಣದಲ್ಲಿ ಫೋಟೊ ತೆಗೆಯಬಾರದು ಎಂಬ ನಿಯಮಕ್ಕೆ ಬದ್ಧನಾಗಿ ಅಲ್ಲಿಂದ ಹೊರಟು ಪುಷ್ಕರ್ ಒಂಟೆಗಳ ಮೇಳ (ಕಾರ್ತಿಕ ಮೇಳ) ನಡೆಯುವ ಖಾಲಿ ಮೈದಾನ ತಲುಪಿದೆ.

ನವೆಂಬರ್‌ನಲ್ಲಿ ನಡೆಯುವ ಮೇಳಕ್ಕೆ ದೇಶ-ವಿದೇಶಗಳಿಂದ ಸುಮಾರು ಐದರಿಂದ ಆರು ಲಕ್ಷ ಜನ ಸೇರುತ್ತಾರಂತೆ. ಮೇಳದಲ್ಲಿ ಅಲಂಕೃತ ಒಂಟೆಗಳು, ಕುದುರೆಗಳು ಮತ್ತು ಇತರೆ ರಾಸುಗಳು ಭಾರಿ ಸಂಖ್ಯೆಯಲ್ಲಿ ಸೇರುತ್ತವಂತೆ. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು, ಒಂಟೆಗಳ ಓಟ, ಮಟ್ಕಾ ಫೋಡ್ ಎಂಬ ಮಡಕೆ ಒಡೆಯುವ ಸ್ಪರ್ಧೆ, ಉದ್ದ ಮೀಸೆಯನ್ನು ಪ್ರದರ್ಶಿಸುವ ಸ್ಪರ್ಧೆಗಳು ನಡೆಯುತ್ತವೆ. ಪುಶ್ಕರ್ ಮೈದಾನದಿಂದ ಹೊರಟು ಸ್ಥಳೀಯ ಠಾಕೂರ್ ದೊರೆಗಳ ಪದಾಂಪುರ ಪುರಾತನ ಕೋಟೆಯನ್ನು ನೋಡುವ ವೇಳೆಗೆ ಸಂಜೆಯಾಗುತ್ತಾ ಬಂದು ಆವತ್ತಿನ ಪ್ರವಾಸವನ್ನು ಮುಗಿಸುವ ಸಮಯವಾಗಿತ್ತು.

ಕೋಟೆ ನಾಡಿನಲ್ಲಿ ಮೃಗಾಲಯ

• ಸುರೇಂದ್ರ ಪೈ, ಭಟ್ಕಳ

ಚಿತ್ರದುರ್ಗದಿಂದ 9.5 ಕಿಲೋಮೀಟರ್ ದೂರದಲ್ಲಿರುವ ಜೋಗಿಮಟ್ಟಿಯ ನಿಸರ್ಗಧಾಮದಿಂದ 500 ಮೀಟರ್ ದೂರದಲ್ಲಿ ಆಡುಮಲ್ಲೇಶ್ವರ ಮೃಗಾಲಯವಿದೆ. ಕಳೆದೊಂದು ವರ್ಷದಿಂದ ಮೃಗಾಲಯಕ್ಕೆ ಆಧುನಿಕ ಸ್ಪರ್ಶವನ್ನು ನೀಡಿ, ದುರಸ್ತಿ ಕಾರ್ಯಮಾಡಿ ಮೈಸೂರು ಮೃಗಾಲಯದಿಂದ ಹಲವು ಪ್ರಾಣಿಗಳನ್ನು ಅದರಲ್ಲೂ ವಿಶೇಷವಾಗಿ ಹುಲಿ ಯನ್ನು ತರಲಾಗಿದೆ. ಇನ್ನುಳಿದಂತೆ ಈ ಮೃಗಾಲಯದಲ್ಲಿ ಹುಲಿ, ಚಿರತೆ, ಎಮು, ಕೃಷ್ಣಮೃಗ, ಚುಕ್ಕಿ ಜಿಂಕೆ, ಮುಳ್ಳಂದಿ, ಗಿಳಿಗಳು, ಮೊಸಳೆ, ನವಿಲು, ಕರಡಿ, ಹೆಬ್ಬಾವು, ಗುಳ್ಳೆ ನರಿ, ಸಿಲ್ವರ್ ಫೆಸೆಂಟ್, ಬಡ್ಜರಿಗರ್, ಗೋಲ್ಡನ್ ಫೆಸೆಂಟ್ ನಂತಹ ಪಕ್ಷಿ ಹಾಗೂ ಪ್ರಾಣಿಗಳಿವೆ. ಮೃಗಾಲಯದ ಮಧ್ಯದಲ್ಲಿ ಸುಂದರವಾದ ಉದ್ಯಾನವನವಿದ್ದು ಪ್ರಕೃತಿಯ ಮಡಿಲಿನಲ್ಲಿ ಪ್ರಶಾಂತವಾದ ವಾತಾವರಣದಲ್ಲಿ ಕುಟುಂಬದೊಂದಿಗೆ ಭೇಟಿ ಕೊಡಬಹುದು. ಮೃಗಾಲಯ ಚಿಕ್ಕದಾಗಿದೆ ಎಂಬ ಬೇಸರ ಬೇಡವೇ ಬೇಡ - ಏಕೆಂದರೆ ಮೃಗಾಲಯದ ಒಳಭಾಗದಲ್ಲಿ ಮಕ್ಕಳಿಗಾಗಿ ಆಟವಾಡಲು ವಿಶಾಲವಾದ ಆಟದ ಸಲಕರಣೆಗಳುಳ್ಳ ಆಟದ ಪಾರ್ಕ್ ಇದೆ. ಕುಡಿಯಲು ನೀರಿನ ವ್ಯವಸ್ಥೆ, ಶೌಚಾಲಯ ಹಾಗೂ ಪುಟ್ಟ ಕ್ಯಾಂಟೀನ್ ಸೌಲಭ್ಯವಿದೆ. ಈ ಮೃಗಾಲಯಕ್ಕೆ ಪ್ರತಿ ಮಂಗಳವಾರ ರಜೆ.ಇರುತ್ತದೆ. ಮಕ್ಕಳಿಗೆ ರೂ.20 ಹಾಗೂ ವಯಸ್ಕರಿಗೆ ರೂ.40 ಪ್ರವೇಶ ದರವನ್ನು ನಿಗದಿ ಪಡಿಸಲಾಗಿದೆ. ಆದರೆ ಚಿತ್ರದುರ್ಗದಿಂದ ಮೃಗಾಲಯಕ್ಕೆ ಹೋಗಲು ತಮ್ಮದೇ ಆದ ಖಾಸಗಿ ವಾಹನದಲ್ಲಿ ತೆರಳಬೇಕು. ಇಲ್ಲಿ ಯಾವುದೇ ಸರಕಾರಿ ವಾಹನವಾಗಲಿ, ಇತರೆ ಖಾಸಗಿ ಸಾರಿಗೆಯ ವ್ಯವಸ್ಥೆ ಇಲ್ಲ.

ಪದಬಂಧ



• ಸಿ. ರವಿಶಂಕರ ಶಾಸ್ತ್ರಿ, ದಂಬೆ

ಎಡದಿಂದಬಲಕ್ಕೆ

1. ಕೈಗೆ ಬಣ್ಣ ಹಚ್ಚಲು ಬಳಸುವ ಮದರಂಗಿ (3)
3. ಮನಸ್ಸಿಗೇನೋ ನಿರುತ್ಸಾಹ (3)
5. ಅತಿಯಾದ ಆತುರ (3)
7. ಮನೆಯ ಮುಖ್ಯಸ್ಥ (4)
9. ಪಾಳೆಯ ಅಥವಾ ಬಿಡು (4)
11. ಗ್ರೀಸ್ ದೇಶದವನು (3)
13. ಮಹಿಳೆಗೆ ಮತ್ತೊಂದು ಹೆಸರು (3)
14. ಹೂವಿನ ಧೂಳಿ (3)
16. ಅಂಜದಿರುವಂತೆ ಕಂಡ ಬೊಗಸೆ (3)
18. ಸಸ್ಯಗಳಿಂದ ಸಿದ್ಧಪಡಿಸಿದ ಎಣ್ಣೆ (4)
20. ಕೇಳಿದ್ದನ್ನು ಕೊಡುವುದೆಂದು ನಂಬಲಾಗಿರುವ ವೃಕ್ಷ (4)
22. ಕೊಳೆಯಾದ ಅಥವಾ ಮಂಕಾದ ಎಂದರ್ಥ (3)
24. ಅದುವೇ ಪರಿಣಯ (3)
25. ಕೊನೆ ಅಥವಾ ಸಾವು (3)

ಮೇಲಿನಿಂದಕೆಳಕ್ಕೆ

1. ಹಸುವಿನ ಸಗಣಿ (3)
2. ವೇಗ ಅಥವಾ ಯಮ (2)
4. ಸಮುದಾಯ ಅಥವಾ ಗುಂಪು (3)
5. ನಯವಾಗಿರುವ ಮಗ (3)
6. ವನದಲ್ಲಿರುವ ಪದ್ಯ (3)
8. ನಮ್ಮನ್ನು ಹೆತ್ತ ತಾಯಿಗೆ ಮತ್ತೊಂದು ಹೆಸರು (3)
10. ಅಶ್ವ ಅಥವಾ ಕುದುರೆ (3)
12. ವನದಲ್ಲಿ ಕಂಡ ಕಮಲ (3)
13. ವಸಂತ ಕಾಲದಂತೆ ಕಾಣುವ ವಿಷ್ಣು (3)
15. ವಾದ ವಿವಾದಗಳಿಂದ ಉಂಟಾದ ಗದ್ದಲ (3)
16. ಆರಂಭದ್ದಲ್ಲ, ಕೊನೆಯ ಎಂದರ್ಥ (3)
17. ಅಸಲಿಯಲ್ಲದ್ದು ತಿರುಗಿ ಬಂದಿದೆ (3)
19. ಕೈಯಲ್ಲಿರುವ ಹಣ (3)
21. ರೋಗದೊಂದಿಗೆ ಬಂದಿರುವ ಜೋಡಿಪದ (3)
23. ಬರಹದ ಚಿನ್ಹೆ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 5. ಚಿತ್ರಭಾನು 6. ಮಧುಲೋಕ 7. ಮಕರ 9. ತಗಡು 11. ಮಶಕ 13. ಬವಣೆ 14. ಪಾಕ್ಷಿಕ 15. ಅಧಿಪ 17. ವಾಸುಕಿ 19. ವಾಸಸ್ಥಾನ 20. ವಿಕಸನ

ಮೇಲಿನಿಂದ ಕೆಳಕ್ಕೆ: 1. ನಚಿಕೇತ 2. ಹನುಮ 3. ಅಮರ 4. ಆಕರ್ಷಕ 8. ಕನವರಿಸು 10. ಗವಾಕ್ಷಿ 12. ಶರಧಿ 14. ಪಾರಿವಾಳ 16. ಪವನಜ 17. ವಾನರ 18. ಕಿವಿರು

ನಳ ಮತ್ತು ದಮಯಂತಿಯನ್ನು ಒಂದು ಮಾಡಿದ ಅಕ್ಷ ಹೃದಯ ವಿದ್ಯೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ನಳ ಮಹಾರಾಜನ ಹೆಸರನ್ನು ಸಾಮಾನ್ಯವಾಗಿ ನೀವೆಲ್ಲರೂ ಕೇಳಿರುತ್ತೀರಿ. ಈತನು ದ್ವಾಪರ ಯುಗದಲ್ಲಿ ನಿಷಾದ ಸಾಮ್ರಾಜ್ಯದ ರಾಜನಾಗಿದ್ದವನು. ಸನಾತನ ಗ್ರಂಥಗಳಲ್ಲಿ ಅಕ್ಷಹೃದಯ ಮಂತ್ರದ ಮೂಲಕ ರಾಜ ನಳ ತನ್ನ ಕಳೆದುಕೊಂಡ ರಾಜ್ಯವನ್ನು ಮರಳಿ ಪಡೆದನೆಂದು ಉಲ್ಲೇಖಿಸಲಾಗಿದೆ. ಈ ಅಕ್ಷ ಹೃದಯ ವಿದ್ಯೆಯನ್ನು ಪಡೆಯುವ ಮೂಲಕ ರಾಜ ನಳನು ಮರಳಿ ತನ್ನ ಶಕ್ತಿಯನ್ನು ಪಡೆದುಕೊಂಡಿದ್ದನು. ರಾಜ ನಳನು ಬಹಳ ಕರುಣಾಮಯಿಯಾಗಿದ್ದನು. ರಾಜ ನಳ ಅಕ್ಷ ಹೃದಯ ವಿದ್ಯೆಯನ್ನು ಕಲಿಯಲು ಕಾರಣವೇನು? ಈ ಕುರಿತು ಮಾಹಿತಿಯಿದು.

ರಾಜ ನಳ ಬಾಲ್ಯದಿಂದಲೂ ಸದ್ಗುಣಶೀಲ, ಧಾರ್ಮಿಕ, ಕಠಿಣ ಪರಿಶ್ರಮ ಮತ್ತು ಶಸ್ತ್ರಾಸ್ತ್ರಗಳನ್ನು ಬಳಸುವಲ್ಲಿ ಬಹಳ ಪ್ರವೀಣನಾಗಿದ್ದನು. ರಾಜಕುಮಾರನು ಬೆಳೆದನು. ಈ ಸಮಯದಲ್ಲಿ ನಳನು ದಮಯಂತಿಯನ್ನು ಭೇಟಿಯಾದನು. ರಾಜಕುಮಾರ ನಳ ಮತ್ತು ದಮಯಂತಿ ಪರಸ್ಪರ ಪ್ರೀತಿಸಲಾರಂಭಿಸಿದರು. ಇತ್ತ ದಮಯಂತಿಯ ತಂದೆ ರಾಜ ಭೀಮನು ತನ್ನ ಮಗಳ ವಿವಾಹಕ್ಕಾಗಿ ಸ್ವಯಂವರವನ್ನು ಏರ್ಪಡಿಸಿದನು. ಈ ಸ್ವಯಂವರದಲ್ಲಿ ರಾಜರು ಸೇರಿದಂತೆ ಅನೇಕ ದೇವರುಗಳು ಭಾಗವಹಿಸಿದ್ದರು. ಆದರೆ, ಎಲ್ಲ ರಾಜಕುಮಾರರು ನಳನ ರೂಪದಲ್ಲಿದ್ದರು. ಆದರೂ ದಮಯಂತಿ ತಾನು ಪ್ರೀತಿಸುತ್ತಿದ್ದ ನಳನನ್ನೇ ಪತಿಯಾಗಿ ಆಯ್ದುಕೊಂಡಳು. ರಾಜಕುಮಾರ ನಳನಿಗೂ ರಾಜಕುಮಾರಿ ದಮಯಂತಿಗೂ ವಿವಾಹ ನಡೆಯಿತು. ವಿವಾಹದ ನಂತರ ರಾಜ ನಳ ಮತ್ತು ದಮಯಂತಿಯ ವೈವಾಹಿಕ ಜೀವನ ಬಹಳ ಸಂತೋಷದಿಂದ ಕೂಡಿತ್ತು. ಇಂತಹ ಸಮಯದಲ್ಲಿ ನಳ ಮತ್ತು ದಮಯಂತಿಯನ್ನು ಪರೀಕ್ಷಿಸಲು ಕಾಳಿ ಒಂದು ಕಠಿಣ ಪರೀಕ್ಷೆಯನ್ನು ತಂದೊಡ್ಡಿದಳು. ರಾಜ ನಳನು ಜೂಜಾಟವನ್ನು ಇಷ್ಟಪಡುತ್ತಿದ್ದನು. ಒಂದು ದಿನ ರಾಜ ನಳನು ತನ್ನ ಸಹೋದರ ಪುಷ್ಕರನನ್ನು ಜೂಜಾಡಲು ಆಹ್ವಾನಿಸಿದನು. ಪುಷ್ಕರನು ತನ್ನ ಸಹೋದರನ ಆಹ್ವಾನವನ್ನು ಸ್ವೀಕರಿಸಿದನು. ಆ ಸಮಯದಲ್ಲಿ, ಕಾಳಿಯ ಚಮತ್ಕಾರದಿಂದ, ರಾಜ ನಳ ತನ್ನ ರಾಜ್ಯವನ್ನು ಕಳೆದುಕೊಂಡನು. ಇದಾದ ಬಳಿಕ ರಾಜ ನಳನನ್ನು ಗಡಿಪಾರು ಮಾಡಲಾಯಿತು. ಇದರಿಂದಾಗಿ ರಾಜ ನಳ ಮತ್ತು ಆತನ ಪತ್ನಿ ದಮಯಂತಿ ಕಾಡು ಪಾಲಾದರು.

ಕಾಡಿನಲ್ಲಿ ವಾಸಿಸುವ ಸಮಯದಲ್ಲಿ ರಾಜ ನಳನು ಅನೇಕ ರೀತಿಯಾದ ಸಮಸ್ಯೆಗಳನ್ನು ಎದುರಿಸಿದನು. ತನ್ನ ಅದೃಷ್ಟವನ್ನು ಮರಳಿ ಪಡೆಯುವುದಕ್ಕಾಗಿ ರಾಜ ನಳನು ಒಂದು ದಿನ ರಾತ್ರಿ, ತನ್ನ ಪತ್ನಿ ದಮಯಂತಿಯನ್ನು ಕಾಡಿನಲ್ಲೇ ಬಿಟ್ಟು ಬೇರೆ ದಿಕ್ಕಿನತ್ತ ನಡೆದುಕೊಂಡು ಹೊರಟೆ ಹೋದನು. ದಮಯಂತಿ ಒಬ್ಬಳೇ ಕಾಡಿನಲ್ಲಿ ಬಹಳ ಕಷ್ಟಪಟ್ಟಳು. ಬಳಿಕ ದಮಯಂತಿ ಕಾಡಿಗೆ ಹತ್ತಿರದಲ್ಲಿರುವ ಒಂದು ರಾಜಮನೆತನದಲ್ಲಿ ಆಶ್ರಯವನ್ನು ಪಡೆದುಕೊಂಡಳು. ಅಷ್ಟರಲ್ಲಿ ನಳ ರಾಜನಿಗೆ ಕಾರ್ಕೋಟಕ ಸರ್ಪ ಕಚ್ಚುತ್ತದೆ. ಇದರಿಂದ ರಾಜ ನಳ ಕುರೂಪಿಯಾಗುತ್ತಾನೆ. ಇದರ ನಂತರ ರಾಜ ನಳ ಹತ್ತಿರದ ರಾಜನಲ್ಲಿ ಬಾಹುಕನ ಕೆಲಸವನ್ನು ಪಡೆಯುತ್ತಾನೆ.

ಈ ಸಮಯದಲ್ಲಿ, ದಮಯಂತಿಯ ಸ್ವಯಂವರವನ್ನು ಅವಳ ಹೆತ್ತವರು ಮತ್ತೆ ಆಯೋಜಿಸುತ್ತಾರೆ. ರಾಜ ಋತುಪರ್ಣನಿಗೂ ಈ ಮಾಹಿತಿ ಸಿಗುತ್ತದೆ. ಆ ಸಮಯದಲ್ಲಿ ಋತುಪರ್ಣ ನಳನೊಂದಿಗೆ ಸ್ವಯಂವರಕ್ಕೆ ಹೋಗುತ್ತಾನೆ. ದಾರಿಯಲ್ಲಿ ಋತುಪರ್ಣನು ರಾಜ ನಳನಿಗೆ ಅಕ್ಷ ಹೃದಯ ಮಂತ್ರವನ್ನು ಕಲಿಸಿದನು. ರಾಜ ನಳ ಈ ಮಂತ್ರದ ಮೂಲಕ ಪುಷ್ಕರನನ್ನು ಸೋಲಿಸಿದನು. ಇದರೊಂದಿಗೆ ರಾಜ ನಳ ತನ್ನ ಕಳೆದುಹೋದ ರಾಜ್ಯವನ್ನು ಮರಳಿ ಪಡೆದುಕೊಂಡನು. ಅಕ್ಷ ಹೃದಯ ವಿದ್ಯೆ ಅಥವಾ ಮಂತ್ರವೆಂದರೆ ಬಯಸಿದ್ದನ್ನೆಲ್ಲ ನೀಡುವ ಮಂತ್ರ. ಹೀಗೆ ಜೂಜಾಟದ ಮೋಹದಿಂದ ತನ್ನೆಲ್ಲ ಐಶ್ವರ್ಯವನ್ನು ಕಳೆದುಕೊಂಡ ನಳ ಮಹಾರಾಜ ಪಡಬಾರದ ಕಷ್ಟಪಟ್ಟು ಕೊನೆಗೂ ತನ್ನ ರಾಜ ವೈಭೋಗಕ್ಕೆ ಮರಳಿದನು. ಆದರೆ ಸಾಮಾನ್ಯರಾದ ನಮ್ಮ ಗತಿ ಏನು? ಜೂಜಾಟದ ಆಮಿಷಕ್ಕೆ ಬಿದ್ದ ಯುವಕರು ಜೀವನವನ್ನೇ ಹಾಳು ಮಾಡಿಕೊಳ್ಳುತ್ತಾರೆ. ಇನ್ನು ಸುಲಭ ದನದ ಆಸೆಗೆ ಅನೇಕರು ತಾವು ದುಡಿದ ಹಣವನ್ನ ಜೂಜಿನಲ್ಲಿ ಕಳೆದು ಮನೆಯವರನ್ನೂ ಕಷ್ಟಕ್ಕೆ ದೂಡುತ್ತಾರೆ.

ಜೀವನದಲ್ಲಿ ಸುಖವಾಗಿ ಬದುಕಲು ಯಾವುದೇ ವಾಮ ಮಾರ್ಗಗಳಿಲ್ಲ. ಅಲ್ಲಿ ಪರಿಶ್ರಮ ಪಟ್ಟಾಗ ಮಾತ್ರ ಪ್ರತಿಫಲ ದೊರೆಯುತ್ತದೆ.

ಸ್ವಧರ್ಮದೊಂದಿಗೆ ಸಾಮರಸ್ಯ

ನಿತ್ಯಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಸ್ವಧರ್ಮವನ್ನು ವಿವರಿಸಿದ ನಂತರ ಕೃಷ್ಣ ಅರ್ಜುನನಿಗೆ ಹೇಳುತ್ತಾನೆ (2.31, 2.37) ಅಂತಹ ಬಯಸದೇ ಬಂದ ಕುರುಕ್ಷೇತ್ರ ಯುದ್ಧ ಸ್ವರ್ಗದ ಬಾಗಿಲನ್ನು ತೆರೆಯುತ್ತದೆ ಮತ್ತು ಅದರಿಂದ ತಪ್ಪಿಸಿಕೊಳ್ಳುವುದು ಸ್ವಧರ್ಮ, ಪ್ರಸಿದ್ಧಿ ಇವನ್ನು ಕಳೆದುಕೊಂಡು ಪಾಪದ ಪ್ರಾಪ್ತಿ ಮಾಡಿಕೊಂಡಂತೆ(2.33). ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಅರ್ಜುನನಿಗೆ ನೀಡಿದ ಈ ಉಪದೇಶವನ್ನು ಸರಿಯಾದ ಸಂದರ್ಭದಲ್ಲಿ ಸರಿಯಾಗಿ ಪರಿಶೀಲಿಸುವ ಅಗತ್ಯ ಇದೆ. ಇಲ್ಲಿ ನಿಜವಾಗಿ ಕೃಷ್ಣ ಒಬ್ಬನ ಸ್ವಧರ್ಮದೊಂದಿಗೆ ಐಕ್ಯತೆ ಹಾಗೂ ಸಹಯೋಗದ ಬಗ್ಗೆ ಮಾತನಾಡುತ್ತಾನೆಯೇ ಹೊರತು ಯುದ್ಧದ ಬಗ್ಗೆ ಅಲ್ಲ. ಅರ್ಜುನನ ಸ್ಥಿತಿ ಅವನ ವಿಚಾರಗಳು ಹೇಳಿಕೆಗಳು ಮತ್ತು ಕಾರ್ಯಗಳ ನಡುವೆ ಸಾಮರಸ್ಯ ಇಲ್ಲದಿರುವುದು ಕೃಷ್ಣನಿಗೆ ತಿಳಿದಿದೆ. ಅವುಗಳಲ್ಲಿ ಸಾಮರಸ್ಯವನ್ನುಂಟುಮಾಡುವಲ್ಲಿ ಅವನು ಅರ್ಜುನನಿಗೆ ಮಾರ್ಗದರ್ಶನ ಮಾಡುತ್ತಾನೆ. ಅರ್ಜುನನ ವಿಷಯದಲ್ಲಿ ಹೇಳುವುದಾದರೆ ತನ್ನ ಸ್ವಧರ್ಮದಂತೆ ಯುದ್ಧ ಮಾಡುವುದರಲ್ಲಿ ಸಾಮರಸ್ಯವಿದೆ ಹಾಗೂ ಯುದ್ಧದಿಂದ ತಪ್ಪಿಸಿಕೊಂಡರೆ ಅಸಾಮರಸ್ಯವಾಗುತ್ತದೆ. ನಿಜವಾಗಿ ಅತಿ ಚಿಕ್ಕ ಎಲೆಕ್ಟ್ರಾನ್, ಪ್ರೋಟಾನ್ ಮತ್ತು ನ್ಯೂಟ್ರಾನ್ ಗಳಿಂದ ಹಿಡಿದು ಅತಿ ದೊಡ್ಡ ತಾರಾಗಣ, ಗ್ರಹಗಳು ಇವುಗಳಲ್ಲಿ ಸಾಮರಸ್ಯವಿರುವ ಈ ಸೃಷ್ಟಿಯನ್ನು ಆ ಐಕ್ಯತೆಯೇ ಆಳುತ್ತದೆ. ರೇಡಿಯೋ ಹಾಗೂ ರೇಡಿಯೋ ಸ್ಟೇಷನ್‌ಗಳಲ್ಲಿ ಸಾಮರಸ್ಯ ಇದ್ದರೆ ಮಾತ್ರ, ನಾವು ಮಧುರ ಸಂಗೀತವನ್ನು ಕೇಳಬಹುದು. ಅನೇಕ ಅವಯವ ಹಾಗೂ ರಾಸಾಯನಿಕಗಳಿಂದಾದ ನಮ್ಮ ದೇಹಕ್ಕಿಂತ ಹೆಚ್ಚಿನ ಬೇರೆ ಉದಾಹರಣೆ ಇಲ್ಲ. ಅವುಗಳ ಸಂಯುಕ್ತ ಕಾರ್ಯ ಚಟುವಟಿಕೆಯಿಂದಾಗಿ ನಾವು ಹೀಗೆ ಇದ್ದೇವೆ. ಸಾಮರಸ್ಯ ವಸ್ತುಗಳು ಹಾಗೂ ಸಂದರ್ಭಗಳು ಇದ್ದ ಹಾಗೆ ಇರುವುದನ್ನು ಸೂಚಿಸುತ್ತವೆ. ನಮ್ಮ ಮೌಲ್ಯ ಪದ್ಧತಿ ಹಾಗೂ ಉಲ್ಲೇಖಗಳ ನಮ್ಮ ಚೌಕಟ್ಟಿನಲ್ಲಿ ಅವು ಇರಬೇಕೆಂದು ನಾವು ಬಯಸಿದ ರೀತಿಯಲ್ಲಿ ಅಲ್ಲ.

ನಮ್ಮ ಬಾಲ್ಯದಿಂದಲೂ ನಮ್ಮ ಮರಣದ ನಂತರ ಸತ್ಕಾರ್ಯಗಳು ನಮ್ಮನ್ನು ಸ್ವರ್ಗಕ್ಕೆ ಒಯ್ಯುತ್ತವೆ ಹಾಗೂ ದುಷ್ಕೃತ್ಯಗಳು ನರಕಕ್ಕೆ ಒಯ್ಯುತ್ತವೆ ಎಂದು ನಮಗೆ ಹೇಳಲಾಗಿದೆ ಆದರೆ ಕೃಷ್ಣ ಹೇಳುತ್ತಾನೆ ಸ್ವರ್ಗ ಮತ್ತು ನರಕಗಳು ಜೀವನದ ನಂತರದ ಸ್ಥಳಗಳಲ್ಲ. ಆದರೆ ಅವು ಈಗಲೇ ಇಲ್ಲೇ ಇವೆ ಆದರೆ ಅವು ಒಬ್ಬನ ಸಾಮರ್ಥ್ಯ, ಸದಾವಕಾಶಗಳ ಒಂದು ಗೂಡುವಿಕೆಯ ಮೇಲೆ ಅವಲಂಬಿಸಿವೆ. ನಾವು ಇತರರ ಸ್ವಧರ್ಮವನ್ನು ಅರಿತಾಗ ಕುಟುಂಬದಲ್ಲಿ ನಮ್ಮ ಕಾರ್ಯಕ್ಷೇತ್ರಗಳಲ್ಲಿ, ಸಂಬಂಧಗಳಲ್ಲಿ ಸಾಮರಸ್ಯ ಉಂಟಾಗುತ್ತದೆ. ಅದು ಸ್ವರ್ಗ. ಇವುಗಳು ಇಲ್ಲದಿದ್ದಾಗ ನರಕ. ನಮ್ಮ ಆಸೆಗಳು ನೆರವೇರಿದೆಯೇ ಇಲ್ಲವೇ ಎಂಬುದರ ಮೇಲೆ ನಮ್ಮ ನೋವು ನಲಿವಿನ ಅನುಭವ ನಿಂತಿದೆ. ಸ್ವಧರ್ಮದೊಂದಿಗೆ ಆಂತರಿಕ ಸಾಮರಸ್ಯ ಉಂಟಾದಾಗ ಹೊರಗಿನ ಜಗತ್ತು ಹೇಗೆ ಇರಲಿ ಅದು ಸ್ವರ್ಗ.

ಸಮಾಚಾರ ಸಣ್ಣದಲ್ಲ

ಪೂರ್ವಭಾವಿ ಸಭೆ ಡಿ. 21ಕ್ಕೆ

ಕೊಪ್ಪಳ: ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಡಿ.21ರ ಬೆಳಗ್ಗೆ 11ಕ್ಕೆ ಜಿಲ್ಲಾ ಕೇಂದ್ರದಲ್ಲಿ ಡಿ. 29ರಂದು ವಿಶ್ವಮಾನವ ದಿನ ಆಚರಣೆ ಹಾಗೂ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಮಾಡುವ ಕುರಿತು ಪೂರ್ವಭಾವಿ ಸಭೆ ನಡೆಯಲಿದೆ. ಎಡಿಸಿ ಸಿದ್ರಾಮೇಶ್ವರ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಬೇಕು ಹಾಗೂ ಸಾಹಿತಿಗಳು, ಸಭೆಯಲ್ಲಿ ಭಾಗವಹಿಸಿ ಅಗತ್ಯ ಸಲಹೆ ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹನುಮೇಶ ತಾತನವರ ಪುಣ್ಯಾರಾಧನೆ

ಮುದಗಲ್: ಪಟ್ಟಣ ಸಮೀಪದ ಶರಣ ಶ್ರೀ ಹನುಮೇಶ ತಾತನವರ 16 ನೇ ಪುಣ್ಯರಾಧನಾ ಕಾರ್ಯಕ್ರಮ ಅದ್ದೂರಿ ಯಾಗಿ ಜರಗಿತು. ಮಠದ ಶ್ರೀಗಳಾದ ಜಯಂದ್ರ ತಾತನವರು ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಕಾರ್ಯಕ್ರಮದ ಕುರಿತು ಮುದಗಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರ ಗೌಡ ಗೌಡರ ಮಾತನಾಡಿದರು. ಈ ಸಂರ್ಭದಲ್ಲಿ ಇಂಗಳಗೇರಿ ಮಠದ ಮಾತೋ ಶ್ರೀ ಅಕ್ಕಮಹಾದೇವಿ ಅಮ್ಮನವರು, ಹಡಗಲಿ ಶ್ರೀಗಳಾದ ಮರಳು ಸಿದ್ದಯ್ಯನವರು ಸದಾಶಿವಯ್ಯ ಹಿರೇಮಠ ಕನ್ನಾಳ, ರವೀಂದ್ರ ಪತ್ತಾರ ಬಿಜಾಪುರ, ಶಿವನಗೌಡ ಹಡಗಲಿ, ಮಹದೇವಪ್ಪ ಚಿಲ್ಲಾಪುರ, ಮೌನೇಶ,ಹುಲಗಪ್ಪ ಜೂಲಗುಡ್ಡ,ಬಅಮರೇಶ ಮೆರೆಕಾರ ಸೇರಿದಂತೆ ನಂದಿಹಾಳ ಮಠದ ಭಕ್ತರು ಭಾಗವಹಿಸಿದ್ದರು.

ಪ್ರವಾಸೋದ್ಯಮ: ತರಬೇತಿಗೆ ಅರ್ಜಿ

ಹೊಸಪೇಟೆ: ಪ್ರವಾಸೋದ್ಯಮ ಇಲಾಖೆಯಿಂದ 2024–25 ನೇ ಸಾಲಿನ ಎಸ್.ಸಿ.ಎಸ್.ಪಿ, ಹಾಗೂ ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಹಾಗೂ ಅತಿಥ್ಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿ ತರಬೇತಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ಎಸ್.ತಳಕೇರಿ ತಿಳಿಸಿದ್ದಾರೆ. ಆಸಕ್ತ ಅಭ್ಯರ್ಥಿಗಳು ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರ ಲೋಟಸ್ ಮಹಲ್ ಬಳಿಯ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿ ಡಿ.28 ರೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು. ಮಾಹಿತಿಗಾಗಿ : ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರದ ಲೋಟಸ್ ಮಹಲ್ ಬಳಿಯ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ದೂ.08394–295640 ಸಂಪರ್ಕಿಸ ಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಸ್ಕಾಂ ಗ್ರಾಹಕರ ಸಂವಾದ ಸಭೆ ನಾಳೆ

ಹೊಸಪೇಟೆ: ಹೊಸಪೇಟೆ ಗ್ರಾಮೀಣ ಉಪವಿಭಾಗದ ಕಚೇರಿಯಲ್ಲಿ ಜೆಸ್ಕಾಂ ಗ್ರಾಹಕರ ಸಂವಾದ ಸಭೆಯನ್ನು ಡಿ.21 ರಂದು ಏರ್ಪಡಿಸಲಾಗಿದೆ ಎಂದು ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ. ಹೊಸಪೇಟೆ ತಾಲೂಕಿನ ವಿದ್ಯುತ್ ಗ್ರಾಹಕರು (ಹೊಸಪೇಟೆ ನಗರ ಹೊರತುಪಡಿಸಿ) ಸಭೆಯಲ್ಲಿ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟೊಮೇಟೊ ಬೆಲೆ ಕುಸಿತ: ರೈತ ಕಂಗಾಲು

ಹೊಸಪೇಟೆ: ಟೊಮೆಟೊ ಬೆಳೆದು ಕೈತುಂಬ ಹಣ ಸಂಪಾದಿಸುವ ಆಸೆಯಿಂದ ಟೊಮೆಟೊ ಬೆಳೆದಿದ್ದ ರೈತರು ಬೆಲೆ ದಿಢೀರ್ ಕುಸಿದಿದ್ದರಿಂದ ಕಂಗಾಲಾಗಿದ್ದಾರೆ. ಜಿಲ್ಲೆಯ ನಿಂಬಳಗೆರೆಯ ರೈತರೊಬ್ಬರು ಬೆಳೆದ ಟೊಮೆಟೊವನ್ನು ರಸ್ತೆ ಬದಿ ಎಸೆದಿದ್ದಾರೆ. ಕಾಡಪ್ಪ ಎಂಬುವರು ತಮ್ಮ 3 ಎಕರೆ ಜಮೀನಿನಲ್ಲಿ ಟೊಮೇಟೊ ಬೆಳೆದಿದ್ದಾರೆ. ಕಳೆದ ಕೆಲ ದಿನಗಳಿಂದ 15 ವಿವಿಧ ಮಾರುಕಟ್ಟೆಗಳಲ್ಲಿ ಪ್ರತಿ ಬಾಕ್ಸ್‌ಗೆ 200 ರಿಂದ 300 ರು. ಮಾರಿದ್ದಾರೆ. ಆದರೆ ಹರಪನಹಳ್ಳಿ ಮಾರುಕಟ್ಟೆಗೆ ಕೊಂಡೊಯ್ದಾಗ ಬಾಕ್ಸ್ ಬೆಲೆ 30 ರಿಂದ 50 ರು. ಬಂದಿದೆ. ಇದರಿಂದ ಬೇಸತ್ತ ರೈತ ಕಾಡಪ್ಪ ಟೊಮೆಟೊ ತಂದು ಜಾನುವಾರುಗಳಿಗೆ ಆಹಾರಕ್ಕಾಗಿ ಜಮೀನಿನ ಬಳಿ ರಸ್ತೆ ಬದಿ ಎಸೆದಿದ್ದಾನೆ. ಟೊಮೇಟೊ ಬಿಡಿಸಲು ಮಹಿಳೆಯರಿಗೆ 200 ರು. ಮತ್ತು ಪುರುಷರಿಗೆ 500 ರುಪಾಯಿ ನೀಡಬೇಕು. ಇದಲ್ಲದೆ, ವಾಹನದ ಬಾಡಿಗೆ ನೀಡಬೇಕು. ಟೊಮೆಟೊ ಬೆಳೆದ ರೈತರು ಲಾಭವೇ ಇಲ್ಲದ ಮೇಲೆ ಏನು ಮಾಡುವುದು ಎನ್ನುವ ಆತಂಕ ವ್ಯಕ್ತಪಡಿಸಿದ್ದಾರೆ.

{ ಈಶ್ವರಪ್ಪ } ಮಾಜಿ ಡಿಸಿಎಂ

ಬಿಜೆಪಿಯಲ್ಲಿ ಗುಂಪುಗಾರಿಕೆ ನಡೆಯುವುದಿಲ್ಲ. ಅಲ್ಲಿ ಗುಂಪುಗಾರಿಕೆಯನ್ನು ವರಿಷ್ಠರು ಸರಿಯಾಗಿ ಚಿವುಟಿ ಹಾಕುತ್ತಾರೆ. ಬಿಜೆಪಿಯಲ್ಲಿನ ಗುಂಪುಗಾರಿಕೆ ಮುಂದಿನ ದಿನಗಳಲ್ಲಿ ಸರಿಹೋಗುತ್ತದೆ. ತಪಸ್ಸು ಮಾಡಿ ಬಿಜೆಪಿಯನ್ನು ಕಟ್ಟಿದವರಿಗೆ ಬೆಲೆ ಇದೆ.

ಗೃಹರಕ್ಷಕ ದಳದ ಸೇವೆ ಶ್ಲಾಘನೆ

ಗೃಹರಕ್ಷಕರ ಈಶಾನ್ಯ ವಲಯ ಮಟ್ಟದ ಕ್ರೀಡಾಕೂಟದ ಸಮಾರೋಪ ಸಮಾರಂಭ

ಬಳ್ಳಾರಿ: ಗೃಹ ರಕ್ಷಕದಳ ಸಂಸ್ಥೆಯು ಪೊಲೀಸ್ ಇಲಾಖೆಯ ಜತೆಗೂಡಿ ಸರಿ ಸಮಾನ ಕೆಲಸ ಮಾಡುತ್ತಿರುವ ಸಮವಸ್ತ್ರಧಾರಿ ಸಂಸ್ಥೆಯಾಗಿದೆ ಎಂದು ಬಳ್ಳಾರಿ ವಲಯ ಪೊಲೀಸ್ ಮಹಾ ನಿರೀಕ್ಷಕ ಬಿ.ಎಸ್.ಲೋಕೇಶ್ ಕುಮಾರ್ ಹೇಳಿದರು.

ಜಿಲ್ಲಾ ಗೃಹರಕ್ಷಕದಳ ವತಿಯಿಂದ ನಗರದ ಡಿಎಆರ್ ಕವಾಯತು ಮೈದಾನದಲ್ಲಿ ನಡೆದ ಗೃಹರಕ್ಷಕರ ಈಶಾನ್ಯ ವಲಯ ಮಟ್ಟದ ವೃತ್ತಿಪರ ಹಾಗೂ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಗೃಹರಕ್ಷಕರು ತಮ್ಮ ಕೆಲಸದ ಒತ್ತಡದಿಂದ ಮುಂದೆ ಬಂದು ಕ್ರೀಡೆಗಳಲ್ಲಿ ಭಾಗವಹಿ ಸಬೇಕು. ಈಶಾನ್ಯ ವಲಯದ ಏಳು ಜಿಲ್ಲೆಗ ಳಿಂದ ಗೃಹರಕ್ಷಕರು ಆಗಮಿಸಿ ಕ್ರೀಡೆಗಳಲ್ಲಿ ಭಾಗವಹಿಸಿದ್ದು ಸಂತೋಷದ ವಿಷಯವಾ ಗಿದೆ ಎಂದರು.

ಇದೇ ಸಂದರ್ಭದಲ್ಲಿ ಗೃಹರಕ್ಷಕ ಇಲಾಖೆಯ ವಾದ್ಯವೃಂದ ತಂಡಕ್ಕೆ ಪ್ರಶಂಸನೆ ವ್ಯಕ್ತಪಡಿಸಿದರು.

ಎಎಸ್ಪಿ ಹಾಗೂ ಗೃಹ ರಕ್ಷಕದಳದ ಜಿಲ್ಲಾ ಸಮಾದೇಷ್ಟರೂ ಆದ ಕೆ.ಪಿ.ರವಿ ಕುಮಾರ್ ಅವರು ಅಧ್ಯಕ್ಷತೆ ವಹಿಸಿ, ಗೃಹ ರಕ್ಷಕದಳ ಇಲಾಖೆಯ ಸಾಧನೆಗಳು ಮತ್ತು ಅವರ ಕರ್ತವ್ಯಗಳ ನಿಷ್ಠೆಯ ಬಗ್ಗೆ ವಿವರವಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿ.ಸಿದ್ದರಾಜು, ವಿಜಯನಗರ ಜಿಲ್ಲೆಯ ಗೃಹ ರಕ್ಷಕದಳದ ಜಿಲ್ಲಾ ಸಮಾದೇಷ್ಟರಾದ ಬಸವರಾಜ ಅಗಸರ, ಡಿಎಆರ್‌ನ ಡಿಎಸ್‌ಪಿ ತಿಪ್ಪೇಸ್ವಾಮಿ, ಬೋಧಕ ರಾದ ಬಸವರಾಜ್ ಹಗಳಗಾರ, ಪ್ರಶಾಂತ್ ಪಾಟೀಲ್, ನಿವೃತ್ತ ಉಪ ಸಮಾದೇಷ್ಟರಾದ ಅಲ್ಲಾಬಕ್ಷಿ, ಚಂದ್ರಶೇಖರ್ ಭಡಗಲ್, ಮಲ್ಲಪ್ಪ, ಕಂಪನಿ ಕಮಾಂಡರ್ ಜೆ.ಸುರೇಶ್, ಘಟಕಾಧಿಕಾರಿ ಬಿ.ಕೆ.ಬಸವಲಿಂಗ ಸೇರಿದಂತೆ. ಕಚೇರಿ ಸಿಬ್ಬಂದಿಯವರು, ಬಳ್ಳಾರಿ, ವಿಜಯ ನಗರ, ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರಗಿ ಮತ್ತು ಬೀದರ್ ಜಿಲ್ಲೆಯ ಅಧಿಕಾರಿಗಳು ಉಪಸ್ಥಿತರಿದ್ದರು. ಕ್ರೀಡಾಕೂ ಟದಲ್ಲಿ 350 ಪುರುಷ ಮತ್ತು ಮಹಿಳಾ ಗೃಹ ರಕ್ಷಕರು ಭಾಗವಹಿಸಿದ್ದರು.

> **ಗೃಹರಕ್ಷಕರು ತಮ್ಮ ಕರ್ತವ್ಯ ನಿಷ್ಠೆ ಮತ್ತು ಸಮಯ ಪಾಲನೆ ಯಿಂದ ಪೊಲೀಸ್ ಇಲಾಖೆಯ ಸಿಬ್ಬಂದಿಯೊಂದಿಗೆ ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಗೃಹರಕ್ಷಕರು ತಮ್ಮ ಕರ್ತವ್ಯ ವೇಳೆಯಲ್ಲೂ ಸಹ ಭಾಗವಹಿಸಿರುವುದು ಹೆಮ್ಮೆಯಾಗಿದೆ.**
> – ಡಾ.ಶೋಭಾರಾಣಿ ವಿ.ಜೆ
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಗೃಹರಕ್ಷಕರ ಈಶಾನ್ಯ ವಲಯ ಮಟ್ಟದ ವೃತ್ತಿಪರ ಹಾಗೂ ಕ್ರೀಡಾಕೂಟದ ಸಮಾರೋಪ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು.

ಸಚಿವ ಅಮಿತ್ ಶಾ ವಿರುದ್ಧ ಸಂಘಟನೆಗಳ ಪ್ರತಿಭಟನೆ

ಅಮಿತ್ ಶಾ ಅವರು ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿ ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ .

ಹೊಸಪೇಟೆ: ಸಂಸತ್‌ನಲ್ಲಿ ಗೃಹ ಸಚಿವ ಅಮಿತ್ ಶಾ ಅವರು ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿ ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಅಮಿತ್ ಶಾ ವಿರುದ್ಧ ಧಿಕ್ಕಾರ ಕೂಗಿದ ಪ್ರತಿಭಟನಕಾರರು, ಅಮಿತ್ ಶಾ ಭಾವಚಿತ್ರಗಳಿಗೆ ಚಪ್ಪಲಿ ಏಟು ನೀಡಿದರು ಹಾಗೂ ಕೊನೆಯಲ್ಲಿ ಭಾವಚಿತ್ರಗಳನ್ನು ಸುಟ್ಟು ಹಾಕಿದರು.

ಬಿಜೆಪಿ ಮನುವಾದಿ ಪಕ್ಷ, ಆ ಪಕ್ಷದ ನಿಜವಾದ ಬಣ್ಣ ಈಗ ಮತ್ತೊಮ್ಮೆ ಬಯಲಾಗಿದೆ. ಅಮಿತ್ ಶಾ ಅವರನ್ನು ಸಂಪುಟದಿಂದ ಕಿತ್ತೊಗೆಯಬೇಕು, ಮುಂಬರುವ ಚುನಾವಣೆ ವೇಳೆ ಅಂಬೇಡ್ಕರ್ ಪರ ನಿಲುವ ಇರುವ ಎಲ್ಲರೂ ಬಿಜೆಪಿಯಿಂದ ಹೊರಬರಬೇಕು, ಚುನಾವಣೆಯಲ್ಲಿ ಪಕ್ಷಕ್ಕೆ ತಕ್ಕ ಪಾಠ ಕಲಿಸಬೇಕು ಎಂದು ಪ್ರತಿಭಟನೆ ವೇಳೆ ಮಾತನಾಡಿದ ಹಲವು ನಾಯಕರು ಒತ್ತಾಯಿಸಿದರು.

ಮುಖಂಡರಾದ ಸೋಮಶೇಖರ್, ಸಣ್ಣ ಮಾರೆಪ್ಪ, ದೇಶಿ ಈರಣ್ಣ, ರಾಮಚಂದ್ರ, ರಾಮಕೃಷ್ಣ, ಪ್ರಕಾಶ್, ಶಿವಕುಮಾರ್ ಜೆ., ಸ್ಲಂ ವೆಂಕಟೇಶ್, ಪೂಜಾರಿ ದುರುಗಪ್ಪ, ವಾಸುದೇವ್, ಎರ್ರಿಸ್ವಾಮಿ, ಗಿರೀಶ್, ರಮೇಶ್, ಸಣ್ಣ ಈರಪ್ಪ ಇತರರಿದ್ದರು.

> **ಅಂಬೇಡ್ಕರ್ ವಿರುದ್ಧ ಹೇಳಿಕೆ ಖಂಡನೆ**
> ಅಂಬೇಡ್ಕರ್ ವಿರುದ್ಧ ಗೃಹ ಸಚಿವ ನೀಡಿರುವ ಅಗೌರವದ ಹೇಳಿಕೆ ಖಂಡನೀಯ, ಸಂವಿಧಾನ ಮತ್ತು ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ಕೆಲಸ ತುರ್ತಾಗಿ ಆಗಬೇಕಿದೆ ಎಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಸಂಘಟನೆ ಆಗ್ರಹಿಸಿದೆ.

ಅಯ್ಯಪ್ಪ ಸ್ವಾಮಿ ಪೂಜೆ 23ರಂದು

ಲಿಂಗಸುಗೂರು: ನಗರದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ ಚಾರಿಟೇಬಲ್ ಟ್ರಸ್ಟ ಹಾಗೂ ಶ್ರೀ ಅಯ್ಯಪ್ಪ ಸ್ವಾಮಿ ಭಕ್ತ ಮಂಡಳಿ ವತಿಯಿಂದ ಪಟ್ಟಣದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಮಹಾಗಣಪತಿ ಹೋಮ ಮಂಡಲ ಪೂಜೆ, ಉತ್ಸವ ಮೂರ್ತಿ ಮೆರವಣಿಗೆ ಸೇರಿ ವಿವಿಧ ಧಾರ್ಮಿಕ ಸೇವೆಗಳು ಡಿ 23 ರಂದು ನಡೆಯಲಿದ್ದು, ಭಕ್ತಾಧಿಗಳು ಸಾರ್ವಜನಿಕರು ದೇವಸ್ಥಾನಕ್ಕೆ ಬಂದು ಅಯ್ಯಪ್ಪ ಸ್ವಾಮಿ ಕೃಪೆಗೆ ಪಾತ್ರರಾಗಬೇಕು ಎಂದು ಟ್ರಸ್ಟ್ ಅಧ್ಯಕ್ಷ ಮನೋಹರ ರೆಡ್ಡಿ ಮುನ್ನೂರು ಹೇಳಿದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ಉದ್ದೇಶಿಸಿ ಮಾತನಾಡಿದ ಅವರು, 23 ರಂದು ಕೇರಳದ ಶ್ರೀ ತಂತ್ರಿ ರತ್ನ ವೇದ ಭೂಷಣ ಪ್ರಶಾಂತ ನಂಬೊದರಿ ಶಬರಿಮಲೈ ಅವರಿಂದ ದೇವಸ್ಥಾನದಲ್ಲಿ ಎಲ್ಲಾ ದೇವರುಗಳಿಗೆ ವಿಶೇಷ ಹೋಮ ಪೂಜೆ ಕಾರ್ಯಕ್ರಮ ಪ್ರತಿ ವರ್ಷದಂತೆ ನಡೆಯಲಿವೆ. ಈ ವರ್ಷವೂ ಕೂಡ ಮಂಡಲ ಪೂಜೆ, ಬೆಳಗ್ಗೆ 6.00 ಗಂಟೆಯಿಂದ 1.00 ಗಂಟೆಯವರೆಗೆ, ಹೊಮ ಹವನ, ನಂತರ ಈಶ್ವರ ದೇವಸ್ಥಾನದಿಂದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾದವರೆಗೆ ಉತ್ಸವ ಮೂರ್ತಿ ಹಾಗೂ ಅಯ್ಯಪ್ಪ ಸ್ವಾಮಿ ಭಾವಚಿತ್ರದ ಮೇರವಣಿಗೆ ಇರುತ್ತದೆ. ಮಧ್ಯಾಹ್ನ 1.30 ರಿಂದ 3 ಗಂಟೆವರೆಗೆ ಅನ್ನಸಂತರ್ಪಣೆ, ಸಾಯಕಾಂಲ 6.00 ಗಂಟೆಯಿಂದ ದೀಪಾರಾದನೆ ದಿಪೋತ್ಸವ ಶ್ರೀ ಅಯ್ಯಪ್ಪ ಸ್ವಾಮಿ ಮಾಲೆ ಧಾರಿಗಳಿಂದ 18 ಮೇಟ್ಟಿಲು ಪಡಿ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದರು.

ಜ. 1 ರಂದು ಗುರು ಸ್ವಾಮಿಗಳಿಂದ ಅಯ್ಯಪ್ಪ ಸ್ವಾಮಿ ಮಾಲೆಧಾರಿಗಳಿಗೆ ತುಪ್ಪದಕಾಯಿ ಇರುಮುಡಿ ಕಟ್ಟುತ್ತಾರೆ. ಅದೆ ದಿನ ಸಾಯಂಕಾಲ ಶಬರಿ ಮಲೇ ಶ್ರೀಅಯ್ಯಪ್ಪ ಸ್ವಾಮಿಗೆ ತೆರಳುತ್ತಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನದ ವ್ಯವಸ್ಥಾಪಕ ರಾಜೇಶ್ ಮಾಣಿಕ್, ಈಬಾಲನ್, ಸಿದ್ರಾಮಪ್ಪ ನಗರಗುಂಡ ಗುರುಸ್ವಾಮಿ ಸುದ್ದಿಗೋಷ್ಟಿಯಲ್ಲಿದ್ದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ಯಲ್ಲಿ ಮನೋಹರ ರೆಡ್ಡಿ ಮುನ್ನೂರು ಮಾತನಾಡಿದರು.

ವೃತ್ತ ನಾಮಕರಣಕ್ಕೆ ಮನವಿ



ಪಟ್ಟಣದ ಹೊರವಲಯದಲ್ಲಿ ಮುಖ್ಯ ರಸ್ತೆಗೆ ಶ್ರೀ ನಿರುಪಾಧೀಶ್ವರ ವೃತ್ತವೆಂದು ನಾಮಕರಣ ಮಾಡಿ ಅನುಮೋದಿಸಬೇಕು ಎಂದು ಸಾರ್ವಜನಿಕರು ಪುರಸಭೆ ವ್ಯವಸ್ಥಾಪಕ ಸುರೇಶ ಹೊನ್ನಳ್ಳಿ ರವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.

ಮುದಗಲ್: ಪಟ್ಟಣದ ಹೊರವಲ ಯದಲ್ಲಿ ಮುಖ್ಯ ರಸ್ತೆಗೆ ಶ್ರೀ ನಿರುಪಾ ಧೀಶ್ವರ ವೃತ್ತವೆಂದು ನಾಮಕರಣ ಮಾಡಿ ಅನುಮೋದಿಸಬೇಕು ಎಂದು ಸಾರ್ವಜನಿಕರು ಪುರಸಭೆ ವ್ಯವಸ್ಥಾಪಕ ಸುರೇಶ ಹೊನ್ನಳ್ಳಿ ರವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.

ಸುಕ್ಷೇತ್ರ ಅಂಕಲಿಮಠವು ಜ್ಞಾನ ದಾಸೋಹ ಮತ್ತು ಅನ್ನ ದಾಸೋಹ ಕ್ಕಾಗಿ ಪ್ರಸಿದ್ದಿ ಹೊಂದಿ ಭಾವೈಕ್ಯತೆಯ ತಾಣವಾಗಿದೆ. ವಿಶ್ವ ಕುಟುಂಬವಾಗಿ ಸರ್ವ ಸಮಾಜದ ಏಳಿಗೆಗಾಗಿ ಅಂಕಲಿ ಮಠ ಶ್ರಮಿಸುತ್ತಿದೆ. ಶ್ರೀ ನಿರುಪಾ ಧೀಶ್ವರ ಹೆಸರನ್ನು ಅಂಕಲಿಮಠಕ್ಕೆ ಹೋಗುವ ವೃತ್ತಕ್ಕೆ ಶ್ರೀನಿರುಪಾಧೀಶ್ವರ ವೃತ್ತವೆಂದು ನಾಮಕರಣ ಮಾಡಿ ಅನುಮೋದಿಸಬೇಕೆಂದು ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷ ಅಜ್ಮೀರ್ ಬೆಳ್ಳಿಕಟ್, ಪಿಎಲ್ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ನಾಗನಗೌಡ ಪಾಟೀಲ್ ತುರಡಗಿ, ಸದಸ್ಯ ಮೈಬುಬಸಾಬ ಕಡ್ಡಿಪುಡಿ, ಕೆಪಿಸಿಸಿ ಹಿಂದೂಳಿದ ವರ್ಗಗಳ ರಾಜ್ಯ ಕಾರ್ಯದರ್ಶಿ ತಮ್ಮಣ್ಣ ಗುತ್ತೇದಾರ, ಕೃಷ್ಣ ಚಲುವಾದಿ, ಸತೀಶ ಬೋವಿ, ರಿಯಾಜ್ ಜಂಬಾಳಿ, ಬಸವರಾಜ ಕರಡಿ, ರಾಘವೇಂದ್ರ ಕುದರಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

'ಝೇಂಕಾರ' ಬ್ರ್ಯಾಂಡ್ ನ ಜೇನುತುಪ್ಪ ಮಾರುಕಟ್ಟೆಗೆ ಲಭ್ಯ: ತೋಟಗಾರಿಕೆ ಇಲಾಖೆ

ಕೊಪ್ಪಳ: ತೋಟಗಾರಿಕೆ ಇಲಾಖೆ ಮಾಲೀಕತ್ವದ 'ಝೇಂಕಾರ' ಬ್ರ್ಯಾಂಡ್ ನಲ್ಲಿ ಜೇನುತುಪ್ಪ ಹಾಗೂ ವಿವಿಧ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಸದುಪಯೋಗ ಪಡೆದುಕೊಳ್ಳಬೇಕು ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಉಕ್ಕುಂದ ತಿಳಿಸಿದ್ದಾರೆ.

ರಾಜ್ಯದಲ್ಲಿ ಉತ್ಪಾದನೆ ಆಗುವ ಜೇನು ತುಪ್ಪಕ್ಕೆ ಝೇಂಕಾರ ಎಂದು ಬ್ರ್ಯಾಂಡ್ ಮಾಡಲಾಗಿದೆ. ಟ್ಯಾಗ್‌ಲೈನ್ ಮತ್ತು ಲೋಗೊಗಳು ಟ್ರೇಡ್ ಮಾರ್ಕ್ ರೆಜಿಸ್ಟರ್‌ನಲ್ಲಿ ಕಾನೂನಾತ್ಮಕವಾಗಿ ನೋಂದಣಿ ಆಗಿವೆ. ತೋಟಗಾರಿಕೆ ಇಲಾಖೆಯಿಂದ ನೋಂದಣಿ ಪ್ರಮಾಣ ಪತ್ರ ಪಡೆಯಲಾಗಿರುತ್ತದೆ. ಕೊಪ್ಪಳ ಜಿಲ್ಲೆಯ ವ್ಯಾಪ್ತಿಯ ಎಲ್ಲ ಜೇನುತುಪ್ಪ ಉತ್ಪಾದಕರು ಮತ್ತು ಸಂಗ್ರಾಹಕರು ತೋಟಗಾರಿಕೆ ಇಲಾಖೆಯ ಮಾರ್ಗ ಸೂಚಿಯಂತೆ ಝೇಂಕಾರ ಬ್ರ್ಯಾಂಡ್ ಹೆಸರು ಉಪಯೋಗಿಸಿಕೊಂಡು ಜೇನು ತುಪ್ಪ ಹಾಗೂ ಉತ್ಪನ್ನ ಮಾರಾಟ ಮಾಡಲು ಅವಕಾಶವಿದ್ದು, ಜೇನು ಕೃಷಿಕರು ಇದರ ಸದ್ಬಳಕೆ ಮಾಡಿಕೊಳ್ಳಬಹುದು.

ಕುಡಿವ ನೀರಿಗಾಗಿ ಗ್ರಾಮೀಣರ ಅಲೆದಾಟ

ಬಸವರಾಜ ನಾಗಡದಿನ್ನಿ, ರಾಯಚೂರು

ರಾಯಚೂರು ಜಿಲ್ಲೆಯಲ್ಲಿ ಜಲ ಸಂಪನ್ಮೂಲ ಹೇರಳವಾಗಿದ್ದರೂ, ಕುಡಿಯುವ ನೀರಿಗಾಗಿ ಅಲೆದಾಟ ನಿಲ್ಲುತ್ತಿಲ್ಲ. ಎಡ ಬಲಕ್ಕೆ ಕೃಷ್ಣಾ ಮತ್ತು ತುಂಗಭದ್ರಾ ನದಿಗಳಿದ್ದರೂ, ಕುಡಿಯುವ ನೀರಿಗಾಗಿ ಹಾಹಾಕಾರ ತಪ್ಪುತ್ತಿಲ್ಲ. ಸರಕಾರ ಶುದ್ದ ನೀರು ಪೂರೈಕೆಗಾಗಿ ಕೋಟ್ಯಾಂತರ ರೂಪಾಯನ್ನೇನು ಖರ್ಚು ಮಾಡಿ ಶುದ್ದ ನೀರಿನ ಘಟಕಗಳನ್ನ ಸ್ಥಾಪಿಸಿದೆ. ಆದರೆ ಆ ಘಟಕಗಳ್ಯಾವು ಕೆಲಸ ಮಾಡುತ್ತಿಲ್ಲ. ಶೇ.50 ರಷ್ಟು ಘಟಕಗಳು ನಿರ್ವಹಣೆ ಕೊರತೆಯಿಂದ ಸ್ಥಗೀತಗೊಂಡಿದ್ದರೂ, ಅಧಿಕಾರಿಗಳು ಮಾತ್ರ ಯಾವುದೇ ಕ್ರಮಕ್ಕೆ ಮುಂದಾಗದೆ ನಿರ್ಲಕ್ಷ್ಯ ಮಾಡಿದ್ದಾರೆ.

ಗಾಳಿ, ನೀರು ಮತ್ತು ಬೆಳಕನ್ನ ಪ್ರಕೃತಿ ನಮಗೆ ಉಚಿತವಾಗಿ ನೀಡಿದ್ದರೂ, ಹಣ ಕೊಟ್ಟು ನೀರು ಕುಡಿಯುವಂತ ಸ್ಥಿತಿಗೆ ನಿರ್ಮಾಣವಾಗಿದೆ. ಜೀವ ಜಲಕ್ಕಾಗಿ ನಗರವಾಸಿಗಳಿರಲಿ, ಹಳ್ಳಿಗರಿರಲಿ ಅನಿವಾರ್ಯವಾಗಿ ಖಾಸಗಿಯವರ ಶುದ್ದ ನೀರಿನ ಕ್ಯಾನ್ ಖರೀದಿಸುವಂತಾಗಿದೆ. ಜಿಲ್ಲೆಯಲ್ಲೀಗ ನೀರಿನ ಮಾರಾಟ ಜೋರಾಗಿದ್ದು, ಒಂದು ಕೊಳವೆ ಬಾವಿ ಕೊರೆಯಿಸಿ ನೀರು ಶುದ್ದೀಕರಿಸುವ ಘಟಕ ಹಾಕಿದರೆ ಆಯಿತು ಕಳಿತಲ್ಲೇ ಹಣ ಕಮಾಯಿಸುತ್ತಿದ್ದಾರೆ. ಆದರೆ ಸ್ಥಳೀಯ ಸಂಸ್ಥೆಗಳು ಶುದ್ದ ಕುಡಿಯುವ ನೀರು ಪೂರೈಸುವುದು ತಮ್ಮ ಕರ್ತವ್ಯ ಎಂಬುವುದನ್ನೇ ಮರೆತಂತೆ ಕಾಣಿಸುತ್ತಿದೆ.

ಜಿಲ್ಲಾ ಪಂಚಾಯಿತಿಯು ರಾಯಚೂರು ನಗರದ ಸೇರಿದಂತೆ ಜಿಲ್ಲೆಯಾಧ್ಯಂತ ಒಟ್ಟು 715 ಶುದ್ದ ಕುಡಿಯುವ ನೀರಿನ ಘಟಗಳನ್ನು ಸ್ಥಾಪಿಸಿದೆ. ಇವುಗಳಲ್ಲಿ ಗುತ್ತಿಗೆದಾರರಿಗೆ 506 ಪ್ಲಾಂಟ್‌ಗಳು, ಕೆಆರ್‌ಐಡಿಎಲ್‌ನಿಂದ 81, ಸಂಘ ಸಂಸ್ಥೆಗಳಿಂದ 30, ಕೆಕೆಆರ್‌ಡಿಬಿಯಿಂದ 91 ಹಾಗೂ ಎಸ್‌ಡಿಪಿ ಅನುದಾನದಿಂದ 7 ಘಟಕಗಳನ್ನು ಸರಕಾರರ ಮಂಜೂರು ಮಾಡಿದೆ. ಆದರೆ ಇದರಲ್ಲಿ 539 ಪ್ರಾರಂಭ ಮಾಡಿದ್ದು, 165 ಪ್ಲಾಂಟ್‌ಗಳನ್ನು ನಿರ್ವಹಣೆ ಕೊರತೆಯಿಂದ ಶುದ್ದೀಕರಣ ನಿಲ್ಲಿಸಿವೆ. ಆದರೆ ಗ್ರಾಮೀಣ ಜನರ ಕಷ್ಟ ಕೇಳುವಂತಿಲ್ಲ. ಕಾಲುವೆ ಮೂಲಕ ಕೆರೆ ತುಂಬಿಸಿದ ಇಲ್ಲವೆ ಕೊಳವೆ ಬಾವಿಗಳನ್ನೇ ಕುಡಿಯುವ ನೀರಿಗಾಗಿ ನೆಚ್ಚಿಕೊಂಡಿದ್ದಾರೆ. ಕೆರೆಯ ನೀರು ಬಹಳ ದಿನದಿಂದ ಶೇಖರಣೆಗೊಂಡಿರುವುದರಿಂದ ಆ ನೀರನ್ನ ಕುಡಿಯುವುದರಿಂದ ರೋಗ ರುಜಿನಗಳಿಗೆ ತುತ್ತಾಗುವ ಸಾಧ್ಯತೆ ಇದೆ. ಇನ್ನೂ ಕೊಳವೆ ಬಾವಿ ನೀರು ಗಡಸಾಗಿರುವುದರಿಂದ ಕುಡಿಯುವದಕ್ಕೆ ಆಗುತ್ತಿಲ್ಲ ಎಂಬ ಮಾತುಗಳು ಹಳ್ಳಿಗರದ್ದಾಗಿದೆ. ಹಳ್ಳಿಗಳಲ್ಲಿ ಅಳವಡಿಸಿದ್ದ ಶೇ.50 ರಷ್ಟು ಶುದ್ಧ ನೀರಿನ ಘಟಕಗಳು ಸ್ಥಗಿತಗೊಂಡಿವೆ.

ಗ್ರಾಮಗಳಲ್ಲಿ ಶುದ್ದ ಕುಡಿಯುವ ನೀರಿನ ಘಟಕ ಪ್ರಾರಂಭ ಹಾಗೂ ಸ್ವಚ್ಚತೆ ಮಾಡದಿರುವುದರಿಂದ ನಗರದಲ್ಲಿ ಖಾಸಗಿ ಶುದ್ದ ಕುಡಿವ ನೀರಿನ ಘಟಕಗಳು ತಲೆ ಎತ್ತಿದ್ದು, ನಗರ ಸೇರಿದಂತೆ ಜಿಲ್ಲೆಯಲ್ಲಿ ಸುಮಾರು 150 ಕ್ಕೂ ಅಧಿಕ ನೀರಿನ ಘಟಕಗಳು ಪ್ರಾರಂಭಗೊಂಡಿರುವುದು ಶುದ್ದ ನೀರಿನ ಅವಶ್ಯಕತೆಯನ್ನ ತೋರಿಸುತ್ತಿದೆ. ಇನ್ನಾದರೂ ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಶುದ್ದ ಕುಡಿಯುವ ನೀರಿನ ಘಟಕಗಳನ್ನ ನಿರ್ವಹಣೆ ಮಾಡುವುದರ ಮೂಲಕ ನೀರಿನ ಬವಣೆ ನೀಗಿಸಬೇಕಿದೆ.

> **ನೀರು ಪೂರೈಕೆಗೆ ತಾತ್ಸಾರ**
> ದಿನ ಬಳಕೆ ವಸ್ತುಗಳಿಗೆ ಖರ್ಚು ಮಾಡುವಂತೆ ನೀರಿಗಾಗಿಯೂ ಹಣ ಉಳಿಸಬೇಕಿದೆ. ಜಿಲ್ಲೆಯ ಪ್ರತಿಯೊಬ್ಬರಿಗೂ ಶುದ್ದ ಕುಡಿಯುವ ನೀರನ್ನು ಪೂರೈಸಬೇಕೆಂಬ ಉದ್ದೇಶದಿಂದ ಸರಕಾರ ನಗರ ಸೇರಿದಂತೆ ಜಿಲ್ಲಾದ್ಯಂತ ಎಲ್ಲ ಗ್ರಾಮಗಳಲ್ಲೂ ಶುದ್ದ ಕುಡಿಯುವ ನೀರಿನ ಘಟಕಗಳನ್ನು ತೆರದಿದೆ. ಆದರೆ ಅವುಗಳು ನಿರ್ವಹಣೆ ಕೊರತೆಯಿಂದ ಬಳಲುತ್ತಿವೆ. ಶುದ್ದ ಕುಡಿಯುವ ನೀರು ಪೂರೈಕೆಗೆ ಆಡಳಿತ ತೋರುತ್ತಿರುವ ತಾತ್ಸಾರ ಜನರ ಹಣ ಹಾಗೂ ಜೀವಕ್ಕೂ ಕುತ್ತು ಬರುವ ಆತಂಕ ಉಂಟಾಗಿದೆ.

ಹುಸೇನಿ ಆಲಂ ಸರ್ಕಲ್ ನಾಮಕರಣಕ್ಕೆ ಮನವಿ

ಮುದಗಲ್: ಪಟ್ಟಣದ ವಾಡ್ ನಂ. 23ರ ಪೆಟ್ರೋಲ್ ಬಂಕ್ ಹತ್ತಿರವಿರುವ ಸರ್ಕಲ್‌ಗೆ ಹಜರತ್ ಇಮಾಮೆ ಹುಸೇನಿ ಆಲಂ ಹೆಸರು ನಾಮಕರಣ ಮಾಡಬೇಕೆಂದು ಪುರಸಭೆ ಉಪಾಧ್ಯಕ್ಷರು ಅಜ್ಮೀರ್ ಬೆಳ್ಳಿಕಟ್ ಹಾಗೂ ಮುಖಂಡ ತಮ್ಮಣ್ಣ ಗುತ್ತೇದ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಹಜರತ್ ಹುಸೇನಿ ಆಲಂ ದರ್ಗಾದ ಕಾಲೋನಿ ಬಳಿ ಸರ್ಕಲ್ ಇರುತ್ತದೆ. ಈ ಹಿಂದೆ ಕೂಡ ಸರ್ಕಲ್ ನಾಮಕರಣಕ್ಕೆ ಮನವಿ ಸಲ್ಲಿಸಲಾಗಿತ್ತು. ಹಜರತ್ ಇಮಾಮೆ ಹುಸೇನಿ ಆಲಂಗೆ ಮೋಹರಂ ಹಬ್ಬದಲ್ಲಿ ಸರ್ವ ಜನಾಂದವರು ನಡೆದು ಕೊಳ್ಳುತ್ತಿದ್ದು, ಈ ಸರ್ಕಲ್ ಸರ್ವ ಧರ್ಮಕ್ಕೆ ಮೀಸಲಾಗಿ ಹಜರತ್ ಇಮಾಮೆ ಹುಸೇನಿ ಆಲಂ ಸರ್ಕಲ್ ಎಂದು ನಾಮಕರಣ ಮಾಡಬೇಕೆಂದು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ರಫೀ ಖಾಜಿ, ಪಾಷಾ ಕಡ್ಡಿಪುಡಿ, ಸಾಧಿಕ್, ಸಲೀಂ, ಮನ್ಸೂರ್, ರಹೀಮ್ ಷಾ, ರಜ್ಜಬಲಿ ಬೆಳ್ಳಿಕಟ್, ಕಾಸೀಂ ಡೋಯಿ, ಮಾಸೂಮ್ ಷರೀಫ್, ಹಸನ್ ಕವ್ವ್, ಶಬೀರ್, ಮೀರು ಷಾ, ನಾಸೀರ, ಮಹ್ಮದ್ ಅಲಿ ಕೋರಿ ಸೇರಿದಂತೆ ಮುಂತಾದವರಿದ್ದರು.

ಇಮಾಮೆ ಹುಸೇನಿ ಆಲಂ ಹೆಸರು ನಾಮಕರಣ ಮಾಡಬೇಕೆಂದು ಪುರಸಭೆ ಉಪಾಧ್ಯಕ್ಷರು ಅಜ್ಮೀರ್ ಬೆಳ್ಳಿಕಟ್ ಹಾಗೂ ಮುಖಂಡ ತಮ್ಮಣ್ಣ ಗುತ್ತೇದ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಬಳ್ಳಾರಿ ಸಂಸದ ಈ ತುಕಾರಾಂ ಮತ್ತು ಬಳ್ಳಾರಿ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಯಶವಂತರಾಜ್ ಇತರರು ನವ ದೆಹಲಿಯಲ್ಲಿ ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಬಳ್ಳಾರಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕುಡುತಿನಿ, ವೇಣಿವೀರಾಪುರ, ಕೊಳಗಲ್ಲು ಮತ್ತು ಹರಗಿನಡೋಣಿ ಗ್ರಾಮಗಳ 11 ಸಾವಿರ ಎಕರೆ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಂಡಿರುವ ಆರ್ಸೆಲರ್ ಮಿತ್ತಲ್, ಬ್ರಾಹ್ಮಿಣಿ ಸ್ಟೀಲ್ಸ್,(ಉತ್ತಮಗಾಲ್ವ) ಹಾಗೂ ಎನ್‌ಎಂಡಿಸಿ ಕೈಗಾರಿಕಾ ಕಂಪನಿಗಳು ತ್ವರಿತವಾಗಿ ಕಾರ್ಖಾನೆಗಳನ್ನು ಸ್ಥಾಪಿಸುವ ಮೂಲಕ ಸ್ಥಳೀಯರಿಗೆ ಉದ್ಯೋಗ ಅವಕಾಶ ಕಲ್ಪಿಸುವುದು ಮತ್ತು ರೈತರ ಭೂಮಿ ಸ್ವಾಧೀನದಲ್ಲಿ ನಡೆದ ಅನ್ಯಾಯವನ್ನು ಸರಿಪಡಿಸಲು ಮನವಿ ಸಲ್ಲಿಸಿದ್ದಾರೆ.

ಭಕ್ತಿಯಿಂದ ಜರುಗಿದ ಅಯ್ಯಪ್ಪ ಸ್ವಾಮಿ ಪೂಜೆ

ಮುದಗಲ್: ಸ್ಥಳೀಯ ಶೀಲವಂತಮ್ಮ ದೇವಸ್ಥಾನದ ಆವರಣದಲ್ಲಿ ಅಯ್ಯಪ್ಪ ಸ್ವಾಮಿಯ ಮೆಟ್ಟಲು ಪೂಜೆ ಯನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಯಿತು. ಅಮರೇಶ್ ಹೊನ್ನಳ್ಳಿ ಗುರುಸ್ವಾಮಿಗಳ ಸಾನಿಧ್ಯದಲ್ಲಿ ನಿರಂತರ 3 ಘಂಟೆಗಳ ಕಾಲ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾದರು. ಪೂಜೆ ನಿಮಿತ್ಯ ಅಯ್ಯಪ್ಪ ಸ್ವಾಮಿಯ ಮೂರ್ತಿಗೆ ಹೂಗಳಿಂದ ಅಲಂಕಾರ ಮಾಡಿ ಸಿಂಗರಿಸಲಾಗಿತ್ತು. ಕಾಂತಕುಮಾರ್ ಪತ್ತಾರ ಅವರು 18 ವರ್ಷಗಳಿಂದ ಅಯ್ಯಪ್ಪ ಸ್ವಾಮಿಯ ಪಡಿ ಪೂಜಾ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬಂದಿದ್ದಾರೆ. ಸಮಾಜದ ಕೆಲ ಗುರು ಹಿರಿಯರಿಗೆ ಗೌರವಿಸ ಲಾಯಿತು. ಪೂಜೆ ಕಾರ್ಯಕ್ರಮದಲ್ಲಿ ಅಯ್ಯಪ್ಪ ಸ್ವಾಮಿ ಭಜನಾ ಸೇವೆ, ನೃತ್ಯ ಸೇವೆ ಗೈಯುತ್ತಾ ಅಯ್ಯಪ್ಪ ಸ್ವಾಮಿ ಮಲಾಧಾರಿಗಳು ಭಕ್ತಿಯ ಪರಾಕಾಷ್ಠೆ ಮೆರೆದರು. ಮುದಗಲ್, ಆಮದಿಹಾಳ, ನಾಗರಹಾಳ, ನಾಗಲಾಪೂರ, ಲಿಂಗಸಗೂರು, ಹೊನ್ನಳ್ಳಿ, ಕಸಬಾ ಲಿಂಗಸಗೂರು, ಆನೆಹೊಸುರು, ತಾವರಗೇರಿ, ಮಸ್ಕಿಯ ಅಯ್ಯಪ್ಪ ಸ್ವಾಮಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಕಾಂತ ಕುಮಾರ್ ಗುರುಸ್ವಾಮಿ, ಬಸವರಾಜ ಗುರುಸ್ವಾಮಿ, ವಿಠೋಬ ಗುರುಸ್ವಾಮಿ ಸ್ಥೆರಿದಂತೆ ನೂರಾರು ಅಯ್ಯಪ್ಪ ಮಾಲಾಧಾರಿಗಳು ಪೂಜೆಯಲ್ಲಿ ಭಾಗಿಯಾಗಿದ್ದರು.

ಪುಸ್ತಕ ಓದುವ ಹವ್ಯಾಸದಿಂದ ಉತ್ತಮ ವ್ಯಕ್ತಿತ್ವ

ಮಸ್ಕಿ: ಪುಸ್ತಕ ಓದುವ ಹವ್ಯಾಸದಿಂದ ಜ್ಞಾನ ವೃದ್ಧಿಯಾಗುವುದಲ್ಲದೇ, ವ್ಯಕ್ತಿತ್ವ ವಿಕಸನಕ್ಕೆ ನೆರವಾಗಲಿದೆ ಎಂದು ಸಂತೆಕಲ್ಲೂರಿನ ಘನಮಠೇಶ್ವರ ಮಠದ ಪೀಠಾಧಿಪತಿ ಗುರುಬಸವ ಮಹಾಸ್ವಾಮಿಗಳು ಹೇಳಿದರು.

ಸಂತೆಕಲ್ಲೂರಿನ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಬುಧವಾರ ಪುಸ್ತಕ ಗೂಡು ಉದ್ಘಾಟಿಸಿ ಅವರು ಮಾತನಾಡಿದರು. ಮೊಬೈಲ್, ಸಾಮಾಜಿಕ ಜಾಲತಾಣಗಳ ಹಾವಳಿಯಿಂದ ಪುಸ್ತಕ ಓದುವ ಹವ್ಯಾಸ ಕಣ್ಮರೆಯಾಗುತ್ತಿದೆ. ಮಕ್ಕಳ ಮುಂದೆ ಪಾಲಕರು ಮೊಬೈಲ್ ಬಳಸುವುದು, ಟಿವಿ ನೋಡುವುದು ಮಾಡಿದರೆ, ಮಕ್ಕಳು ಸಹ ಅದೇ ಹವ್ಯಾಸ ರೂಢಿಸಿಕೊಳ್ಳುತ್ತಾರೆ. ವ್ಯಕ್ತಿ ನಿರ್ಮಾಣದಿಂದ ದೇಶ ನಿರ್ಮಾಣ ಎಂಬುದನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಂಡು ಕೇವಲ ತರಗತಿಯ ಪಠ್ಯ ಪುಸ್ತಕಕ್ಕೆ ಸೀಮಿತವಾಗದೇ ಜೀವನ ರೂಪಿಸುವ ಪುಸ್ತಕ ಓದಬೇಕು ಎಂದರು.

ಸಂತೆಕಲ್ಲೂರು ಮಹಾಂತಿನ ಮಠದ ಶ್ರೀ ಮಹಾಂತ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಗ್ರಾಪಂ ಅಧ್ಯಕ್ಷರಾದ ಅಂಬಮ್ಮ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಸದಸ್ಯರಾದ ವೀರಭದ್ರಪ್ಪ ಗೋನ್ವಾರ್, ವಾಜೀರ್ ಹುಸೇನ್‌ಸಾಬ್, ಮಲ್ಲಯ್ಯ ನಾಯಕ, ಮುಖಂಡರಾದ ಅಮರಪ್ಪ ಪ್ಯಾಟಿಹಾಳ, ಸೂಗನಗೌಡ, ಬಸವರಾಜ್, ಗ್ರಾಪಂ ಅಭಿವೃದ್ಧಿ ಅಧಿಕಾರಿ ನಾಗರಾಜ್, ಸಿಬ್ಬಂದಿ ಅಯ್ಯನಗೌಡ, ರಾಜೀವ್ ಗಾಂಧೀ ಫೆಲೋ ವಿನೋದ್, ಎಬಿಪಿ ಫೆಲೋ ಅಶೋಕ್, ಗ್ರಾಪಂ ಗ್ರಂಥಾಲಯದ ಗ್ರಂಥಪಾಲಕ ನಾಗರಾಜ್ ಕೊಳೊರು, ಶಾಲಾ ಶಿಕ್ಷಕರಾದ ಬಸವರಾಜ್ ಹಿರೇಮಠ ಶಾಲಾ ವಿದ್ಯಾರ್ಥಿಗಳು ಇದ್ದರು.

ಸಂತೆಕಲ್ಲೂರಿನ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪುಸ್ತಕ ಗೂಡು ಉದ್ಘಾಟಿಸಲಾಯಿತು.

> **ಮಕ್ಕಳಲ್ಲಿ ಪುಸ್ತಕ ಓದುವ ಅಭ್ಯಾಸ ರೂಢಿಸಬೇಕು ಎಂಬ ಉದ್ದೇಶದಿಂದ ಪುಸ್ತಕ ಗೂಡು ಆರಂಭಿಸಲಾಗಿದೆ. ಪಾಲಕರು ಮಕ್ಕಳ ಚಟುವಟಿಕೆ ಮೇಲೆ ನಿಗಾ ವಹಿಸಿ, ಅವರ ಭವಿಷ್ಯ ರೂಪಿಸಲು ಕೈಜೋಡಿಸಬೇಕು.**
> -ಅಮರೇಶ್,
> ತಾಪಂ ಕಾರ್ಯನಿರ್ವಾಹಕ ಅಧಿಕಾರಿ

ಅತ್ಯಾಚಾರ: ಆರೋಪಿಗೆ 20 ವರ್ಷ ಜೈಲು ಶಿಕ್ಷೆ

ಕೊಪ್ಪಳ: ಬಾಲಕಿ ಅಪಹರಿಸಿ ಅತ್ಯಾಚಾರ ಎಸಗಿದ ಆರೋಪಿಗೆ ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯ (ಪೋಕ್ಸೊ) ನ್ಯಾಯಾಲಯದ ನ್ಯಾಯಾಧೀಶ ಕುಮಾರ್ ಡಿ.ಕೆ ಆದೇಶಿಸಿದ್ದಾರೆ. ಆರೋಪಿಗೆ 20 ವರ್ಷ ಜೈಲು ಶಿಕ್ಷೆ ಹಾಗೂ 30 ಸಾವಿರ ರು. ದಂಡ ಭರಿಸುವಂತೆ ಕೋರ್ಟ್ ತೀರ್ಪಿನಲ್ಲಿ ತಿಳಿಸಿದೆ.

ಕುಷ್ಟಗಿಯ ಶೌಕತ್‌ಅಲಿ ಗುಡ್ಡದಬಾವಿ ಶಿಕ್ಷೆಗೆ ಒಳಗಾದ ಆರೋಪಿ ಕುಷ್ಟಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಪ್ರಾಪ್ತೆ ಬಾಲಕಿ ಪರಿಚಯ ಮಾಡಿಕೊಂಡು ಪ್ರೀತಿಸಿ, ಮದುವೆ ಆಗುವುದಾಗಿ ನಂಬಿಸಿದ್ದ. ಕಳೆದ 2023ರ ಏ. 3 ರಂದು ಬಾಧಿತ ಬಾಲಕಿ ಟ್ಯೂಶನ್ ಮುಗಿಸಿಕೊಂಡು ಮನೆಗೆ ಬರುತ್ತಿದ್ದಾಗ, ಅಪಹರಿಸಿ, ಅತ್ಯಾಚಾರ ಮಾಡಿದ್ದಾಗಿ ಆರೋಪ ಪಟ್ಟಿ ಸಲ್ಲಿಸಿದ್ದರು.

ಸರಕಾರದ ಪರವಾಗಿ ವಿಶೇಷ ಸರಕಾರಿ ಅಭಿಯೋಜಕಿ ಗೌರಮ್ಮ ದೇಸಾಯಿ ವಾದ ಮಂಡಿಸಿದ್ದರು. ಪೊಲೀಸ್ ಸಿಬ್ಬಂದಿ ಹನುಮೇಶ್ ಜಗ್ಗಲ್ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಸರಕಾಲಕ್ಕೆ ಹಾಜರಪಡಿಸುವಲ್ಲಿ ಸಾಕಷ್ಟು ಸಹಕರಿಸಿರುತ್ತಾರೆ ಎಂದು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಎಐ ಯುಗದಲ್ಲಿ ಉಪ್ಪಿಯ ಯುಐ

ಚಿತ್ರದ ಪ್ರತಿ ಪಾತ್ರಗಳು ಸನ್ನಿವೇಶಗಳು ಒಂದೊಂದು ಸಂದೇಶ ನೀಡುತ್ತವೆ. ಟ್ರೇಲರ್ ನೋಡಿದಷ್ಟೇ ಸಿನಿಮಾವಲ್ಲ, ಅದಕ್ಕೂ ಮಿಗಿಲಾದ ಸರ್‌ಪ್ರೈಸ್ ಚಿತ್ರದಲ್ಲಿದೆ.

ಉಪ್ಪಿಯ ಯುಐ ಯಾವಾಗ ಸೆಟ್ಟೇರಿತೋ ಅಂದಿನಿಂದಲೂ ಕುತೂಹಲ ಇಮ್ಮಡಿಗೊಂಡಿದೆ. ಉಪೇಂದ್ರ ನಟಿಸಿ, ನಿರ್ದೇಶಿಸಿರುವ ಚಿತ್ರ ಇದು ಎಂಬುದೇ ಅದಕ್ಕೆ ಪ್ರಮುಖ ಕಾರಣವಾಗಿದೆ. ವಿಭಿನ್ನ ಟೀಸರ್, ಟ್ರೇಲರ್ ಮೂಲಕವೂ ಉಪ್ಪಿ ಪ್ರೇಕ್ಷಕರ ತಲೆಗೆ ಹುಳಬಿಟ್ಟರು, ಆ ಹುಳು ಸಿನಿಮಾ ನೋಡುವವರೆಗೂ ಕೊರೆಯುತ್ತಲೇ ಇರುತ್ತದೆ. ಇನ್ನು ಯುಐ ನೋಡಿದ ಮೇಲೆಯೂ ಹಲವು ವಿಚಾರಗಳು ಮನಸನ್ನು ಕಾಡುವುದು ಖಚಿತ. ಉಪ್ಪಿಯ ಸಿನಿಮಾಗಳು ಎಂದರೆ ಅಲ್ಲಿ ಬುದ್ಧಿವಂತರಿಗೆ ಮಾತ್ರ ಎಂಬ ಬರಹವಿರುತ್ತಿತ್ತು. ಹಾಗಾದರೆ ಯುಐ ಅತಿ ಬುದ್ಧಿವಂತರ ಸಿನಿಮಾವೆ ಎಂಬ ಕಾತರತೆಯೂ ಇದೆ, ಯುಐ ಕುರಿತಂತೆ ಉಪ್ಪಿ ಮಾತನಾಡಿದ್ದಾರೆ.

ನೈಜತೆಯ ಪ್ರತಿಬಿಂಬ

ಇದೊಂದು ಹೊಸ ಪ್ರಯತ್ನ, ಪ್ರಯೋಗ. ಇಲ್ಲಿ ಒಂದು ವಿಷಯವೂ ಇರಬಹುದು, ಹಲವು ವಿಷಯಗಳೂ ಇರಬಹುದು. ಇದು ಪರ್ಸನಲ್ ಆಗಿ ನೋಡಿದರೆ ಪರ್ಸನಲ್ ಆಗಿಯೇ ಕಾಡುತ್ತದೆ. ಕಮರ್ಷಿಯಲ್ ಆಗಿ ನೋಡಿದರೆ ಕಮರ್ಷಿಯಲ್ ಅನ್ನಿಸುತ್ತದೆ. ಅಂತೆಯೇ ದೇಶಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತ ಸಿನಿಮಾ ಎಂದರೆ ಹಾಗೂ ಅನ್ನಿಸುತ್ತದೆ. ಟೀಸರ್, ಟ್ರೇಲರ್ ನೋಡಿದಾಕ್ಷಣ ಒಂದಷ್ಟು ಪ್ರಶ್ನೆಗಳು ಕಾಡಬಹುದು. ಅದಕ್ಕೆ ಸಿನಿಮಾ ನೋಡಿದ ಮೇಲೆ ಉತ್ತರ ಸಿಗುತ್ತದೆ. ಸಮಾಜದ ನೈಜತೆಗೆ ಕನ್ನಡಿ ಹಿಡಿಯುವ ಪ್ರಯತ್ನ ಇಲ್ಲಿದೆ.

ಚಿತ್ರದಲ್ಲಿದೆ ಶೀರ್ಷಿಕೆ

ಸಿನಿಮಾದ ಟೈಟಲ್ ರಿಲೀಸ್ ಆದಾಕ್ಷಣ ಡಿಕೋಡ್ ಆಗಲು ಶುರುವಾಯಿತು. ಯುಐ ಎಂದರು, ಯು ಅಂಡ್ ಐ ಅಂದುಕೊಂಡರು. ನಿಜವಾದ ಟೈಟಲ್ ಏನು ಅದನ್ನು ಯಾಕೆ ಇಡಲಾಗಿದೆ ಎಂಬುದು ಸಿನಿಮಾ ನೋಡಿದರೆ ತಿಳಿಯುತ್ತದೆ. ಹೊಸ ಹೊಸ ಎಕ್ಸ್‌ಪೆರಿಮೆಂಟ್ ಇಲ್ಲಿದೆ, ನನ್ನ ಈ ಹಿಂದಿನ ಸಿನಿಮಾಗಳಿಗಿಂತಲೂ ಇಲ್ಲಿ ಹೊಸತನವಿದೆ. ಎಳೆಯಲ್ಲಿ ಒಂದು ಎಳೆ ಇದೆ. ಅದರ ಹಿಂದೆ ಮತ್ತೊಂದು ಲೇಯರ್ ಹೀಗೆ ಸಿನಿಮಾ ಸಾಗುತ್ತದೆ. ಈ ಚಿತ್ರ ಎರಡು ಗಂಟೆ ಮಾತ್ರವಲ್ಲ ಇಪ್ಪತ್ತು ವರ್ಷಗಳ ಕಾಲವೂ ಕಾಡುತ್ತದೆ.

ಎಲ್ಲರ ಶ್ರಮವಿದೆ

ನಮ್ಮ ಚಿತ್ರ ಇಷ್ಟೊಂದು ಅದ್ಭುತವಾಗಿ ಮೂಡಿಬಂದಿದೆ. ಎಲ್ಲರೂ ಮೆಚ್ಚಿಕೊಂಡಿದ್ದಾರೆ ಎಂದರೆ ಅದಕ್ಕೆ ನಮ್ಮ ಚಿತ್ರತಂಡದ ಶ್ರಮವೇ ಕಾರಣ. ಸಿನಿಮಾ ತಾಂತ್ರಿಕವಾಗಿ ಶ್ರೀಮಂತಿಕೆ ಯಿಂದ ಕೂಡಿದೆ. ಜತೆಗೆ ಕಲಾ ನಿರ್ದೇಶಕ ಶಿವಕುಮಾರ್ ನಿರ್ಮಿಸಿದ ಕಲಾತ್ಮಕ ಸೆಟ್‌ಗಳು ಚಿತ್ರದ ಅಂದ ಹೆಚ್ಚಿಸಿದೆ. ಸಂಗೀತ, ಹಿನ್ನೆಲೆ ಸಂಗೀತ ಪ್ರೇಕ್ಷಕರನ್ನು ಮೋಡಿ ಮಾಡುತ್ತದೆ. ಎರಡು ವರ್ಷಗಳ ಶ್ರಮ ತೆರೆಯಲ್ಲಿ ಗೊತ್ತಾಗಲಿದೆ ಎನ್ನುತ್ತಾರೆ ಉಪೇಂದ್ರ.

ನನ್ನನೇ ನಾನು ನಂಬಲಾಗಲಿಲ್ಲ ಖ್ಯಾತ ನಟ ಅಮೀರ್ ಖಾನ್ ವಾರ್ನರ್ ವಿಡಿಯೊ ನೋಡಿ ಕೊಂಡಾಡಿದರು. ಅವರು ಮೆಚ್ಚಿದನ್ನು ಕೇಳಿ ನನಗೆ ಶಾಕ್ ಆಯಿತು. ಯಾಕೆದಂರೆ ಭಾರತ ಚಿತ್ರರಂಗದ ಪ್ರಸಿದ್ಧ ನಿರ್ದೇಶಕರಲ್ಲಿ ಒಬ್ಬರು. ಅವರು ಟ್ರೇಲರ್ ನೋಡಿ ಮೆಚ್ಚಿದ್ದು ಖುಷಿಕೊಟ್ಟಿದೆ. ಇನ್ನು ರಜನಿ ಕಾಂತ್ ಅವರು ಕೂಡ ಟೀಸರ್ ನೋಡಿ ಮೆಚ್ಚಿದರು. ಹೀಗೆ ಚಿತ್ರರಂಗದ ದಿಗ್ಗಜರು ನಮ್ಮ ಸಿನಿಮಾದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು ತುಂಬಾ ಖುಷಿ ಕೊಟ್ಟಿದೆ ಎಂದು ಉಪ್ಪಿ ಸಂತಸ ದಿಂದ ನುಡಿಯು ತ್ತಾರೆ.

ಮ್ಯಾಕ್ಸ್‌ನಲ್ಲಿ ಹೊಸತನವಿದೆ

ಕಿಚ್ಚ ಸುದೀಪ್

• ಪ್ರಶಾಂತ್ ಟಿ.ಆರ್

ಕಿಚ್ಚ ಸುದೀಪ್ ಎರಡೂವರೆ ವರ್ಷಗಳ ಬಳಿಕ ಬೆಳ್ಳಿತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಮಾಸ್ ಆಗಿ ಬಂದಿರುವ ಮ್ಯಾಕ್ಸ್‌ನಲ್ಲಿ ಕಿಚ್ಚ ಆ್ಯಕ್ಷನ್‌ನಲ್ಲಿ ಅಬ್ಬರಿಸಿದ್ದಾರೆ. ಮ್ಯಾಕ್ಸ್ ಈ ವರ್ಷದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾಗಿದೆ. ತಮ್ಮ ಮ್ಯಾಕ್ಸ್ ಚಿತ್ರದ ಕುರಿತಂತೆ ಕಿಚ್ಚ ಸುದೀಪ್ ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ಮ್ಯಾಕ್ಸ್ ಇಲ್ಲಿನ ನೇಟಿವಿಟಿಯ ಚಿತ್ರವೆ ?

ಸುದೀಪ್ : ಇಲ್ಲಿ ನೇಟಿವಿಟಿ ಅನ್ನುವುದಕ್ಕಿಂತ ಹೊಸತನ ತುಂಬಿದೆ ಅನ್ನಬಹುದು. ನಾನು ಈ ಹಿಂದೆ ಎಂದು ಮಾಡಿರದ ಪಾತ್ರ ಮತ್ತು ಸಿನಿಮಾವಿದು. ಇಲ್ಲಿ ಪ್ರೇಕ್ಷಕರು ಏನು ಬಯಸುತ್ತಾರೆ, ಅದೆಲ್ಲ ಅಂಶಗಳನ್ನು ಬೆರೆಸಲಾಗಿದೆ. ಅದನ್ನು ಬಲು ಅಚ್ಚುಕಟ್ಟಾಗಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ. ಬೆಂಗಳೂರಿನ ಹೊರ ವಲಯದಲ್ಲಿ ನಡೆಯುವ ಕಥೆ ಇದಾಗಿದ್ದು, ಆ್ಯಕ್ಷನ್, ಥ್ರಿಲ್ಲಿಂಗ್ ಅಂಶಗಳನ್ನು ಬೆರೆಸಿ ರೋಚಕವಾಗಿ ಕಟ್ಟಿಕೊಡಲಾಗಿದೆ. ಒಂದೇ ರಾತ್ರಿಯಲ್ಲಿ ನಡೆಯುವ ಸ್ಟೋರಿ ಇದಾಗಿದೆ.

ವಿ.ಸಿ: ಈ ಕಥೆಯನ್ನು ಒಪ್ಪಿಕೊಳ್ಳಲು ಕಾರಣ ?

ಸುದೀಪ್ : ನಿರ್ದೇಶಕ ವಿಜಯ್ ಕಾರ್ತಿಕೇಯ ಸ್ಟೋರಿ ರೆಡಿಮಾಡಿಕೊಂಡು ಬಂದು ತುಂಬಾ ಕಾನ್ಫಡೆನ್ಸ್ ಆಗಿ ಕಥೆ ಹೇಳಿದರು. ನಿರ್ದೇಶಕರಲ್ಲಿ ಕಥೆಯ ಬಗ್ಗೆ ಕ್ಲಾರಿಟಿ ಇತ್ತು. ಅವರ ಕಥೆ ನನಗೆ ಬಲು ಹಿಡಿಸಿತು. ಪ್ರತಿ ಸನ್ನಿವೇಶಗಳನ್ನೂ ತುಂಬಾ ಚೆನ್ನಾಗಿ ವಿವರಿಸಿ ಹೇಳಿದರು. ಅದನ್ನು ಕೇಳಿದ ಬಳಿಕ, ಚಿತ್ರಕಥೆ ಬರೆಯಲು ಹೇಳಿದೆ. ಈಗ ಅಂದುಕೊಂಡಂತೆ ಸಿನಿಮಾವಾವು ಸಿದ್ಧವಾಗಿದೆ.

ವಿ.ಸಿ: ಮ್ಯಾಕ್ಸ್ ಎಷ್ಟು ಚಾಲೆಂಜಿಂಗ್ ಅನ್ನಿಸಿತು?

ಸುದೀಪ್ : ಒಂದೇ ದಿನದಲ್ಲಿ ನಡೆಯುವ ಕಥೆ ಎಂದಾಗ, ಚಾಲೆಂಜಿಂಗ್ ಇದ್ದೇ ಇರುತ್ತದೆ. ಹಿಂದಿನ ದಿನ ಚಿತ್ರೀಕರಿಸಿಕೊಂಡ ಸನ್ನಿವೇಶಗಳನ್ನು ಮತ್ತೆ ನೋಡಿ ಸಿದ್ಧವಾಗಬೇಕಿತ್ತು. ಎಲ್ಲಿಯೂ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕಿತ್ತು. ಸಂಪೂರ್ಣ ಚಿತ್ರೀಕರಣ ಮುಗಿಯುವವರೆಗೂ ದಪ್ಪ ಸಣ್ಣ ಆಗುವಂತೆಯೇ ಇಲ್ಲ. ಅದಕ್ಕಾಗಿ ಸಾಕಷ್ಟು ದಿನಗಳು ಶ್ರಮ ಪಡಲೇಬೇಕಾಯಿತು. ನಮ್ಮ ಎಫರ್ಟ್‌ಗೆ ತಕ್ಕಂತೆ ಚಿತ್ರ ಮೂಡಿಬಂದಿದೆ ಎಂಬ ಖುಷಿ ಇದೆ.

ವಿ.ಸಿ : ಮಹಾಬಲಿಪುರಂನಲ್ಲಿ ಚಿತ್ರೀಕರಣ ನಡೆಸಲು ಕಾರಣ ?

ಸುದೀಪ್ : ಮ್ಯಾಕ್ಸ್ ಮಾಸ್ ಸಿನಿಮಾ ಚೇಸಿಂಗ್, ಬ್ಲಾಸ್ಟಿಂಗ್ ಹೀಗೆ ಹಲವು ಆ್ಯಕ್ಷನ್ ದೃಶ್ಯಗಳಿವೆ. ಅದೆಲ್ಲವನ್ನು ಚಿತ್ರೀಕರಿಸಿಕೊಳ್ಳಲು ಪೆಪ್ಸಿ ಲ್ಯಾಂಡ್‌ನಲ್ಲಿ ಸಾಧ್ಯವಾಯಿತು. ಅದರಲ್ಲಿಯೂ ನಿರ್ಮಾಪಕರು ತಮಿಳುನಾಡಿನವರೇ ಆದ್ದರಿಂದ ಮಹಾಬಲಿಪುರಂ ನಲ್ಲಿ ಸೆಟ್ ಹಾಕಿ ಚಿತ್ರೀಕರಿಸಿಕೊಂಡೆವು.

ಕೆ.ಜಿ.ರಸ್ತೆ : 4.ಆಟ
ಸಂತೋಷ್

ಲಾಲ್‌ಬಾಗ್ ರಸ್ತೆ:4.ಆಟ ಊರ್ವಶಿ
ಮಾಗಡಿ ರಸ್ತೆ:4.ಆಟ VEERESH CINEMAS
ಎಂ.ಜಿ.ರಸ್ತೆ : 4.ಆಟ Swagath SHANKARNAG MG ROAD
ಕಾಮಾಕ್ಷಿಪಾಳ್ಯ:4.ಆಟ VICTORY CINEMA
ಸೇವಾನಗರ:4.ಆಟ ಮುಕುಂದ
ರಾಜಾಜಿನಗರ:4.ಆಟ ನವರಂಗ್
ಜೆ.ಪಿ.ನಗರ :4.ಆಟ ಸಿದ್ಧೇಶ್ವರ, ರೇಣುಕಾಪ್ರಸನ್ನ
ಪೀಣ್ಯ : 4.ಆಟ ಭಾರತಿ
ಕಮಲಾನಗರ:4.ಆಟ ವೀರಭದ್ರೇಶ್ವರ
ಮಾರತಹಳ್ಳಿ:4.ಆಟ ವಿನಾಯಕ
ಗರುಡಾಚಾರ್‌ಪಾಳ್ಯ:4.ಆಟ ವಿಜಯಲಕ್ಷ್ಮೀ
ಆವಲಹಳ್ಳಿ : 4.ಆಟ ವೆಂಕಟೇಶ್ವರ
ತಾವರೆಕೆರೆ: 4.ಆಟ ಬಾಲಾಜಿ
ಸಂಜಯನಗರ:4.ಆಟ ವೈಭವ್
ಬನಶಂಕರಿ: 4.ಆಟ ಕಾಮಾಕ್ಯ
ಚಿಕ್ಕಲಸಂದ್ರ: 4.ಆಟ ಬಾಲಾಜಿ
ಕೆಂಗೇರಿ : 4.ಆಟ ರಾಬಿನ್, ವೆಂಕಟೇಶ್ವರ
ಗೌಡನಪಾಳ್ಯ:4.ಆಟ ಶ್ರೀನಿವಾಸ
ಗೊಟ್ಟಿಗೆರೆ : 4.ಆಟ ಲಕ್ಷ್ಮೀ
ದೊಮ್ಮಸಂದ್ರ:4.ಆಟ ಬಾಲಾಜಿ
ಸುಂಕದಕಟ್ಟೆ:4.ಆಟ ಮೋಹನ್
ಉಲ್ಲಾಳ್ : 4.ಆಟ ವಜ್ರೇಶ್ವರಿ
ಹೊಂಗಸಂದ್ರ:4.ಆಟ ಬೃಂದಾ
ಕೋಣನಕುಂಟೆ:4.ಆಟ ಮಾನಸ
ಕೆ.ಆರ್.ಪುರಂ:4.ಆಟ ವೆಂಕಟೇಶ್ವರ
ಆರ್.ಟಿ.ನಗರ:4.ಆಟ ರಾಧಾಕೃಷ್ಣ
ಬೊಮ್ಮನಹಳ್ಳಿ:4.ಆಟ ಕೃಷ್ಣ
ಲಗ್ಗೆರೆ : 4.ಆಟ ಆಕಾಶ್
ಆಗರ : 4.ಆಟ ತಿರುಮಲ
ಕಾಡುಗೋಡಿ:4.ಆಟ ಶ್ರೀನಿವಾಸ
ಕೊನಪ್ಪನಅಗ್ರಹಾರ:4.ಆಟ ವೆಂಕಟೇಶ್ವರ
ಟಿ.ಸಿ.ಪಾಳ್ಯ: 4.ಆಟ V CINEMAS

ವರ್ತೂರು : 4.ಆಟ ವಿನಾಯಕ
ಕದಿರೇನಹಳ್ಳಿ:4.ಆಟ ಮಹದೇಶ್ವರ
ಉತ್ತರಹಳ್ಳಿ : 4.ಆಟ ವೈಷ್ಣವಿವೈಭವಿ
ಸರ್ಜಾಪುರ :4.ಆಟ ರವಿ
ಸಿಂಗಾಪುರ :4.ಆಟ ವೈನಿಧಿ
ಯಲಹಂಕ :4.ಆಟ ಪ್ರಕಾಶ್
ಗೊಲ್ಲರಹಟ್ಟಿ:4.ಆಟ ವೆಂಕಟೇಶ್ವರ
ಚಿಕ್ಕಬಾಣಾವರ:4.ಆಟ ಅಶೋಕ
ಹರಿನಗರ : 4.ಆಟ ವಿನಾಯಕ
PVR INOX MALL OF ASIA | NEXUS | ORION | VAISHNAVI | REGALIA | MARKET CITY | SPIRIT | UPTOWN | BHARATIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
cinépolis ETA | MEENAKSHI | ORION EAST | LULU | SHANTINIKETAN | SJR
GOPALAN CINEMAS ARCH | INNOVATION | GRAND | SIGNATURE | LEGACY
ROCKLINE mall & cinemas
MIRAJ SUNKADAKATTE
KINO CINEMAS SEEGEHALLI
ತುಮಕೂರು: 4.ಆಟ ಮಾರುತಿ, PVR INOX
ತಿಪಟೂರು: 4.ಆಟ ಲಕ್ಷ್ಮೀ
ದೊಡ್ಡಬಳ್ಳಾಪುರ:4.ಆಟ ವೈಭವ್
ಕನಕಪುರ :4.ಆಟ ಅರ್ಕಾವತಿ
ನೆಲಮಂಗಲ:4.ಆಟ ರೂಪ
ಚನ್ನಪಟ್ಟಣ : 4.ಆಟ ಲಕ್ಷ್ಮೀ
ಮಧುಗಿರಿ : 4.ಆಟ ಶಾಂತಲಾ
ವಿಜಿಪುರ : 4.ಆಟ ಸಂಗಮೇಶ್ವರ
ರಾಮನಗರ :4.ಆಟ ಶ್ರೀರಾಮ
ಮಾಲೂರು :4.ಆಟ ಬಾಲಾಜಿ
ಸಿರಾ : 4.ಆಟ ಭಾಗ್ಯಲಕ್ಷ್ಮೀ
ಮಾಗಡಿ : 4.ಆಟ ಬಾಲಾಜಿ
ಕುಣಿಗಲ್ : 4.ಆಟ ಪದ್ಮ
ಕೋಲಾರ: 4.ಆಟ ನಾರಾಯಣಿ
ಚಿಕ್ಕಬಳ್ಳಾಪುರ:4.ಆಟ ಬಾಲಾಜಿ
ಆನೇಕಲ್ : 4.ಆಟ ಲಕ್ಷ್ಮೀನರಸಿಂಹ

ಪಾವಗಡ : 4.ಆಟ ಶ್ರೀನಿವಾಸಪ್ರಸನ್ನ
ಬಂಗಾರಪೇಟೆ:4.ಆಟ ವಿಜಯ
ಮುಳುಬಾಗಿಲು:4.ಆಟ ನಟರಾಜ
ಕೊರಟಗೆರೆ:4.ಆಟ ಶಿವಗಂಗಾ
ಹಾರೋಹಳ್ಳಿ :4.ಆಟ ವಿನಾಯಕ
ತುರುವೇಕೆರೆ :4.ಆಟ ಪೂರ್ಣಿಮಾ
ಮೈಸೂರು : 4.ಆಟ ವುಡ್‌ಲ್ಯಾಂಡ್ಸ್, ಗಾಯತ್ರಿ, DRC CINEMAS, PVR INOX GARUDA|FORUM|SATYAM, VISION CINEMAS
ಮಂಡ್ಯ : 4.ಆಟ ಮಹಾವೀರ್
ಹಾಸನ : 4.ಆಟ ಎಸ್.ಬಿ.ಜಿ
ಚಾಮರಾಜನಗರ:4.ಆಟ ಬಸವೇಶ್ವರ
ಚನ್ನರಾಯಪಟ್ಟಣ:4.ಆಟ ಗಾಯತ್ರಿ
ಹೊಳೆನರಸೀಪುರ:4.ಆಟ ಚನ್ನಾಂಬಿಕ
ಮದ್ದೂರು : 4.ಆಟ ಸಂಜಯ
ಕೊಳ್ಳೆಗಾಲ: 4.ಆಟ ಶ್ರೀನಿವಾಸ
ಸಾಲಿಗ್ರಾಮ: 4.ಆಟ ಪದ್ಮಾ
ಹುಲ್ಲಹಳ್ಳಿ : 4.ಆಟ ವಿನಾಯಕ
ಕೆ.ಎಂ.ದೊಡ್ಡಿ:4.ಆಟ ಸುಮಾ
ನಂಜನಗೂಡು:4.ಆಟ ಭಾರ್ಗವಿ
ಕೆ.ಆರ್.ನಗರ:4.ಆಟ ವೆಂಕಟೇಶ್ವರ
ಗುಂಡ್ಲುಪೇಟೆ:4.ಆಟ ವೆಂಕಟೇಶ್ವರ
ಅರಸೀಕೆರೆ: 4.ಆಟ ಸಾಧನ
ಕೆ.ಆರ್.ಪೇಟೆ:4.ಆಟ ಕೆಜಿಬಿ
ಪಾಂಡವಪುರ:4.ಆಟ ಲಾಲ್‌ಬಹದ್ದೂರ್
ಮಳವಳ್ಳಿ :4.ಆಟ ಮಹಾಲಕ್ಷ್ಮೀ
ಟಿ.ನರಸೀಪುರ:4.ಆಟ ಮುರುಗನ್
ನಾಗಮಂಗಲ:4.ಆಟ ವೆಂಕಟೇಶ್ವರ
ಶ್ರೀರಂಗಪಟ್ಟಣ:4.ಆಟ ಶ್ರೀದೇವಿ
ಯಳಂದೂರು:4.ಆಟ ಮಹದೇಶ್ವರ
ಹುಣಸೂರು: 4.ಆಟ ಲೀಲಾ
ಕುಶಾಲನಗರ:4.ಆಟ ಕೂರ್ಗ್‌ಸಿನಿಮಾಸ್
ಸಿದ್ದಾಪುರ : 4.ಆಟ ವುಡ್‌ಲ್ಯಾಂಡ್ಸ್
ಶನಿವಾರಸಂತೆ:4.ಆಟ ಯಶಸ್ವಿನಿ

ಬೀರೂರು:4.ಆಟ ಲಕ್ಷ್ಮೀ
ಪಿರಿಯಾಪಟ್ಟಣ:4.ಆಟ ಶಾರದ
ಬೆಟ್ಟದಪುರ:4.ಆಟ ಮಾರುತಿ
ಬನ್ನೂರು : 4.ಆಟ ರತ್ನಮಹಲ್
ಸಕಲೇಶಪುರ:4.ಆಟ ತೇಜಸ್ವಿನಿ
ಸಾತನೂರು:4.ಆಟ ವೆಂಕಟೇಶ್ವರ
ದಾವಣಗೆರೆ : 4.ಆಟ ಗೀತಾಂಜಲಿ, ತ್ರಿಶೂಲ್
ಚಿತ್ರದುರ್ಗ : 4.ಆಟ ವೆಂಕಟೇಶ್ವರ
ಬಳ್ಳಾರಿ : 4.ಆಟ ನಟರಾಜ
ಹೊಸಪೇಟೆ : 4.ಆಟ ಮೀರ್‌ಆಲಂ
ಶಿರುಗುಪ್ಪ : 4.ಆಟ ರಾಮಕೃಷ್ಣ
ಹಗರಿಬೊಮ್ಮನಹಳ್ಳಿ:4.ಆಟ ಕೃಷ್ಣ
ಹಿರಿಯೂರು:4.ಆಟ ಪುಷ್ಪಾಂಜಲಿ
ಹರಿಹರ : 4.ಆಟ ಜಯಶ್ರೀ
ಸಂಡೂರು : 4.ಆಟ ಶ್ರೀನಿವಾಸ
ಚಳ್ಳಕೆರೆ : 4.ಆಟ ಬಾಲಾಜಿ
ಜಗಳೂರು :4.ಆಟ ನಟರಾಜ
ಮೊಳಕಾಲ್ಮೂರು:4.ಆಟ ಭಾಗ್ಯಲಕ್ಷ್ಮೀ
ಹರಿಯಬ್ಬೆ : 4.ಆಟ ವಿವೇಕ್
ಹುಬ್ಬಳ್ಳಿ : 4.ಆಟ ಅಪ್ಸರಾ, LAXMI CITY PRIDE, cinépolis
ಧಾರವಾಡ :4.ಆಟ ವಿಜಯ್, PVR INOX
ಗದಗ : 4.ಆಟ ಕೃಷ್ಣ
ಬಿಜಾಪುರ : 4.ಆಟ ಲಕ್ಷ್ಮೀ
ಬೆಳಗಾವಿ : 4.ಆಟ ಚಿತ್ರಾ, PVR INOX, KAPEEL CINEMA, Bharath Cinemas
ರಾಣೇಬೆನ್ನೂರು:4.ಆಟ ಶಿವಶಕ್ತಿ
ಶಿರಸಿ : 4.ಆಟ ನಟರಾಜ
ಅಂಕೋಲ :4.ಆಟ ಮಯೂರ
ಹಾವೇರಿ : 4.ಆಟ ಸರಸ್ವತಿ
ಮುಧೋಳ :4.ಆಟ ಸೂರ್ಯವಂಶಿ

ಗೋಕಾಕ್: 4.ಆಟ ಲಕ್ಷ್ಮೀ
ರಬಕವಿ : 4.ಆಟ ಶ್ರೀನಿವಾಸ
ಜಮಖಂಡಿ : 4.ಆಟ ಸುವರ್ಣ
ಮಹಾಲಿಂಗಪುರ:4.ಆಟ ಮಾರುತಿ
ಅಥಣಿ : 4.ಆಟ ದುರ್ಗಾಲಕ್ಷ್ಮೀ
ಹಾರೂಗೇರಿ:4.ಆಟ ಚಂದ್ರಮ
ಬಾಗಲಕೋಟೆ :4.ಆಟ ವಾಸವಿ
ಹೊನ್ನಾವರ:4.ಆಟ ಪದ್ಮಾಂಜಲಿ
ರಾಮದುರ್ಗ:4.ಆಟ ವೆಂಕಟೇಶ್ವರ
ಬಾದಾಮಿ : 4.ಆಟ ಮಹಾಕೂಟೇಶ್ವರ
ಮುದ್ದೇಬಿಹಾಳ:4.ಆಟ ಗಿರಿಜಾಶಂಕರ್
ಬಸವನಬಾಗೇವಾಡಿ:4.ಆಟ ಸತ್ಯನಾರಾಯಣ
ರೋಣ : 4.ಆಟ ಮಲ್ಲಿಕಾರ್ಜುನ
ಇಂಡಿ : 4.ಆಟ ಶ್ರೀನಿವಾಸ
ಯಾದವಾಡ :4.ಆಟ ಬಸವೇಶ್ವರ
ತಾಳಿಕೋಟೆ:4.ಆಟ ಅಮೀರ್
ನಿಡಗುಂದಿ : 4.ಆಟ ಯಲಗೂರೇಶ್ವರ
ಬೈಲಹೊಂಗಲ:4.ಆಟ ಸಂಗಮ್
ಹಳಿಯಾಳ : 4.ಆಟ ಬಸವರಾಜ್
ಗಜೇಂದ್ರಗಢ:4.ಆಟ ಅಲಂಕಾರ್
ರಾಯಭಾಗ :4.ಆಟ ದತ್ತ
ಸಂಕೇಶ್ವರ :4.ಆಟ ಸಾಯಿನಾಥ್
ಸಿಂಧಗಿ : 4.ಆಟ ಪ್ರಶಾಂತ್
ಇಳಕಲ್ : 4.ಆಟ ನಾರಾಯಣ
ಶಿಗ್ಗಾಂವ್ : 4.ಆಟ ರಾಜಶ್ರೀ
ಹೊಸರಿತ್ತಿ : 4.ಆಟ ಕೃಷ್ಣ
ಚಿಕ್ಕೇರೂರು:4.ಆಟ ಪವನ್
ಅಮೀನ್‌ಗಡ:4.ಆಟ ಲಕ್ಷ್ಮೀ
ಗಂಗಾವತಿ: 4.ಆಟ MOHIUDDIN TALKIES
ಕಲಬುರ್ಗಿ : 4.ಆಟ ತ್ರಿವೇಣಿ, PVR INOX, MIRAJ
ಕೊಪ್ಪಳ : 4.ಆಟ ಶಾರದ
ರಾಯಚೂರು:4.ಆಟ MIRAJ
ಮಾನ್ವಿ : 4.ಆಟ ಅಪರ್ಣ

ಸಿಂಧನೂರು:4.ಆಟ ಕೂಡಲಸಂಗಮ
ಲಿಂಗಸಗೂರು:4.ಆಟ ಎಂಪೈರ್
ಶಹಪುರ : 4.ಆಟ ಜಯಶ್ರೀ
ಕನಕಗಿರಿ : 4.ಆಟ ರಾಧಿಕ
ಮಸ್ಕಿ : 4.ಆಟ ಶರಣಬಸವೇಶ್ವರ
ಕುಷ್ಟಗಿ : 4.ಆಟ ಬಸವರಾಜು
ಜಾಲಹಳ್ಳಿ : 4.ಆಟ ರಾಮೇಶ್ವರ
ಕುದುರೆಮುಖ:4.ಆಟ ಮಂಜುನಾಥ
ಶಿವಮೊಗ್ಗ : 4.ಆಟ ಮಲ್ಲಿಕಾರ್ಜುನ, Bharath Cinemas
ಚಿಕ್ಕಮಗಳೂರು:4.ಆಟ ನಾಗಲಕ್ಷ್ಮೀ
ಭದ್ರಾವತಿ : 4.ಆಟ ವೆಂಕಟೇಶ್ವರ
ಸಾಗರ : 4.ಆಟ ಶ್ರೀ
ಶಿಕಾರಿಪುರ:4.ಆಟ ಕಿರಣ್
ಚನ್ನಗಿರಿ : 4.ಆಟ ಲಕ್ಷ್ಮೀ
ಕಡೂರು : 4.ಆಟ ಅನ್ನಪೂರ್ಣ
ಆನವೇರಿ : 4.ಆಟ ಶ್ರೀದೇವಿ
ತೀರ್ಥಹಳ್ಳಿ :4.ಆಟ ವಿನಾಯಕ
ಬಾಳೆಹೊನ್ನೂರು:4.ಆಟ ಸುದರ್ಶಿನಿ
ಕೊಪ್ಪ : 4.ಆಟ ಜೆಎಂಜೆ
ಶಿರಾಳಿ :4.ಆಟ ವೆಂಕಟೇಶ್ವರ
ಆನವಟ್ಟಿ : 4.ಆಟ ರೇಣುಕಾ
ಕುಂದಾಪುರ : Bharath Cinemas
ಪಡುಬಿದ್ರೆ : Bharath Cinemas
ಮಂಗಳೂರು:4.ಆಟ SP CINEMAS, PVR INOX, cinépolis, Bharath Cinemas BHARATH MALL, Cine GALAXY SURATHKAL
ಉಡುಪಿ : 4.ಆಟ ಕಲ್ಪನಾ
ಕಾರ್ಕಳ : 4.ಆಟ ಪ್ಲಾನೆಟ್
ಸೂರತ್ಕಲ್: 4.ಆಟ ನಟರಾಜ
ಬೈಂದೂರು: 4.ಆಟ ಶಂಕರ್
ಮಣಿಪಾಲ : PVR INOX, cinépolis
ಹಾಗೂ ರಾಜ್ಯಾದ್ಯಂತ

ಸಮಾಚಾರ ಸಣ್ಣದಲ್ಲ

ಡಿ. 23ರಂದು ಪ್ರತಿಭಾ ಕಾರಂಜಿ

ತುಮಕೂರು: ಜಿಲ್ಲಾಡಳಿತ, ಜಿಪಂ, ಶಾಲಾ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಡಿ.23ರ ಬೆಳಿಗ್ಗೆ 10 ಗಂಟೆಗೆ ನಗರದ ಬಿ.ಎಚ್.ರಸ್ತೆಯ ಶ್ರೀ ಸಿದ್ಧಗಂಗಾ ಪ್ರೌಢ ಶಾಲೆಯಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಡಿಡಿಪಿಐ ಎಚ್.ಕೆ. ಮನಮೋಹನ ತಿಳಿಸಿದ್ದಾರೆ. ಇಲ್ಲಿ 5 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ವೈಯಕ್ತಿಕ ಮತ್ತು ಸಾಮೂಹಿಕ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿದ್ದು, ಜಿಲ್ಲೆಯ ವಿವಿಧ ಜನಪ್ರತಿನಿಧಿಗಳು, ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಪಾಲಿಕೆಯಿಂದ ಜನಸ್ಪಂದನ ಇಂದು

ತುಮಕೂರು: ಮಹಾನಗರಪಾಲಿಕೆ ವ್ಯಾಪ್ತಿಯ ವಾರ್ಡ್ ಸಂಖ್ಯೆ 31, 32 ಹಾಗೂ 35ಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಕುಂದು ಕೊರತೆಗಳನ್ನು ಆಲಿಸಲು ಡಿ.20ರಂದು ಸಂಜೆ 4 ಗಂಟೆಗೆ ಸಿದ್ಧರಾಮೇಶ್ವರ ಬಡಾವಣೆಯ ಶಿವ ಸುಬ್ರಮಣ್ಯ ಪಾರ್ಕನಲ್ಲಿ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಪಾಲ್ಗೊಂಡು ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಪಾಲಿಕೆ ಆಯುಕ್ತ ಬಿ.ವಿ. ಅಶ್ವಿಜ ಮನವಿ ಮಾಡಿದ್ದಾರೆ.

ಕರ್ತವ್ಯನಿರತ ವೈದ್ಯರ ಮೇಲೆ ಹಲ್ಲೆ

ಮೈಸೂರು: ಮೈಸೂರಿನ ಅಲ್ ಅನ್ಸಾರ್ ಆಸ್ಪತ್ರೆಯಲ್ಲಿ ಕರ್ತವ್ಯನಿರತ ವೈದ್ಯರ ಮೇಲೆ ಇಬ್ಬರು ದುಷ್ಕರ್ಮಿಗಳು ಹಲ್ಲೆ ಮಾಡಿದ್ದಾರೆ. ಡಾ.ರೆಹಾನ್ ಅಹಮದ್ ಹಲ್ಲೆಗೆ ಒಳಗಾದ ವೈದ್ಯ. ನಿನ್ನೆ ಮಧ್ಯರಾತ್ರಿ12 ಗಂಟೆ ವೇಳೆಗೆ ಘಟನೆ ನಡೆದಿದೆ. 7 ವರ್ಷದ ಬಾಲಕಿ ಕೈ ಬೆರಳಿಗೆ ಪೆಟ್ಟು ಮಾಡಿಕೊಂಡಿದ್ದಳು. ಇಬ್ಬರು ಪುರುಷರು ಮತ್ತು ನಾಲ್ವರು ಮಹಿಳೆಯರು ಅಲ್ ಅನ್ಸಾರ್ ಆಸ್ಪತ್ರೆಗೆ ಬಾಲಕಿಯನ್ನು ಕರೆತಂದಿದ್ದರು. ಕರ್ತವ್ಯದಲ್ಲಿದ್ದ ಡಾ. ರೇಹಾನ್ ಅಹಮದ್ ಕೂಡಲೇ ಬಾಲಕಿಗೆ ಪ್ರಥಮ ಚಿಕಿತ್ಸೆ ನೀಡಿದ್ದರು. ಎಕ್ಸ್ ರೇ ವರದಿಯಲ್ಲಿ ಮೂಳೆ ಮುರಿತದ ಗಂಭೀರ ಗಾಯ ಇರಲಿಲ್ಲ ಎಂದು ಬೆರಳಿನ ಗಾಯಕ್ಕೆ ಚಿಕಿತ್ಸೆ ನೀಡುತ್ತಿದ್ದರು. ಏಕಾಏಕಿ ಇಬ್ಬರು ಪುರುಷರು ಎಮರ್ಜೆನ್ಸಿ ವಾರ್ಡಿಗೆ ನುಗ್ಗಿ ವೈದ್ಯರ ಮೇಲೆ ಹಲ್ಲೆ ನಡೆಸಿದ್ದಾರೆ.

ಷಾ ಲೇವಡಿ; ದಲಿತ ಮುಖಂಡರ ಕಿಡಿ

ಅಂಬೇಡ್ಕರ್ ಬಗ್ಗೆ ಅವಮಾನ | ಗೃಹ ಸಚಿವರು ದೇಶದ ಕ್ಷಮೆಯಾಚಿಸಬೇಕು| ದಲಿತ ಸಂಘಟನೆ ಆಗ್ರಹ

ಚಿಕ್ಕಬಳ್ಳಾಪುರ : ಲೋಕಸಭೆಯಲ್ಲಿ ಗೃಹಸಚಿವ ಅಮಿತ್ ಷಾ ಅಂಬೇಡ್ಕರ್ ಬಗ್ಗೆ ಲೇವಡಿ ಮಾಡಿರುವ ಉದ್ದಟತನವನ್ನು ಖಂಡಿಸಿ ಚಿಕ್ಕಬಳ್ಳಾಪುರ ನಗರದಲ್ಲಿ ಗುರುವಾರ ದಲಿತ ಮುಖಂಡರು ಖಂಡನೆ ವ್ಯಕ್ತಪಡಿಸಿದ್ದಾರೆ.

ವಿರೋಧ ಪಕ್ಷದವರು ಪದೇ ಪದೇ ಅಂಬೇಡ್ಕರ್ ಅಂಬೇಡ್ಕರ್ ಎಂದು ಹೇಳುವ ಬದಲಿಗೆ ದೇವರ ಹೆಸರೇಳಿದ್ದರೆ ಸ್ವರ್ಗನಾದರೂ ದೊರೆಯುತ್ತಿತ್ತು ಎಂದು ಹೇಳುವ ಮೂಲಕ ಅಮಿತ್ ಷಾ ಬಾಬಾ ಸಾಹೇಬರಿಗೆ ಅಪಮಾನ ಮಾಡಿದ್ದಾರೆ. ಪ್ರಧಾನಿ ಮೋದಿ ಕೂಡಲೇ ಅವರನ್ನು ಸಂಪುಟದಿಂದ ವಜಾಗೊಳಿಸಿ ದೇಶದ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಚಿಕ್ಕಬಳ್ಳಾಪುರದಲ್ಲಿ ದಲಿತ ಮುಖಂಡರು ಗೃಹಸಚಿವ ಅಮಿತ್ ಷಾ ಅಂಬೇಡ್ಕರ್‌ರ ಬಗೆಗಿನ ಹೇಳಿಕೆ ಖಂಡಿಸಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸುಧಾ ವೆಂಕಟೇಶ್, ಬಿಜೆಪಿ ಸರಕಾರ ಮನುವಾದಿ ಸರಕಾರ ಎಂಬುದನ್ನು ಪದೇ ಪದೇ ಸಾಬೀತು ಮಾಡುತ್ತಿದ್ದಾರೆ. ಸಂವಿಧಾನವನ್ನು ಬದಲಾವಣೆ ಮಾಡುವುದಕ್ಕಾಗಿಯೇ ನಾವು ಅಧಿಕಾರಕ್ಕೆ ಬಂದಿದ್ದೇವೆ ಎಂದು ಅಂದಿನ ಸಂಸದ ಅನಂತಕುಮಾರ್ ಹೆಗ್ಗಡೆ ಹೇಳಿದ್ದರು. ಈಗ ಶಾಸನ ಮಾಡುವ ಲೋಕಸಭೆಯಲ್ಲಿಯೇ ಪದೇ ಪದೇ ಅಂಬೇಡ್ಕರ್ ಹೆಸರೇಳುವುದು ತಪ್ಪು. ಬದಲಿಗೆ ದೇವರ ಹೆಸರು ಹೇಳಿ ಎಂದು ಪರೋಕ್ಷವಾಗಿ ಗೃಹಸಚಿವರೇ ಹೇಳುತ್ತಿದ್ದಾರೆ.ಕೇಂದ್ರದ ಮೋದಿ ಸರಕಾರ ದಲಿತ ವಿರೋಧಿ,ಅಂಬೇಡ್ಕರ್ ವಿರೋಧಿ, ಸಂವಿಧಾನ ವಿರೋಧಿ ಸರಕಾರವಾಗಿದೆ. ಇಲ್ಲಿರುವ ಮನುವಾದಿಗಳಿಂದ ಇದನ್ನಲ್ಲದೆ ಬೇರೇನು ನಿರೀಕ್ಷೆ ಮಾಡಲು ಸಾಧ್ಯ ಎಂದು ಹರಿಹಾಯ್ದರು.

ಮಾಜಿ ನಗರಸಭೆ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ಅಮಿತ್ ಶಾ ಅವರಿಗೆ ಅಂಬೇಡ್ಕರ್ ಬಗ್ಗೆ ಮಾತನಾಡುವ ನೈತಿಕತೆಯಿಲ್ಲ.ಅವರ ಪಾದದೂಳಿಗೂ ಸಮನಿಲ್ಲದ ಈ ವ್ಯಕ್ತಿ ಅವರ ಹೆಸರು ಹೇಳುವುದನ್ನು ಸಹಿಸಲ್ಲ ಎಂದರೆ ಎಂತಹ ಕೆಟ್ಟ ಮನುಷ್ಯ ಎನ್ನುವುದು ದೇಶದ ಜನತೆಗೆ ತಿಳಿಯಲಿದೆ.ಈತನ ಮಾತನ್ನು ನಾವು ಯಾರು ಒಪ್ಪುವುದಿಲ್ಲ.ನೀವು ಕೂಡಲೇ ರಾಜೀನಾಮೆ ಕೊಡಲಿಲ್ಲ ಎಂದರೆ ದೇಶಧ್ಯಂತ ಉಗ್ರವಾಗಿ ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು. ದಸಂಸ ಮುಖಂಡ ಬಿ.ವಿ.ಆನಂದ್ ಮಾತಾಡಿ, ದಲಿತರು ಅಂಬೇಡ್ಕರ್ ಅವರ ಧ್ಯಾನ ಮಾಡದೆ ಇನ್ನಾರನ್ನು ಧ್ಯಾನ ಮಾಡಲು ಸಾಧ್ಯ.ಪ್ರಧಾನಿ ವಿದೇಶಕ್ಕೆ ಹೋದಾಗ ನಾವು ಬುದ್ದನ ನಾಡಿನಿಂದ ಬಂದಿದ್ದೇವೆ ಎಂದು ಹೇಳುವ ಇವರು ದೇಶದಲ್ಲಿ ಅಂಬೇಡ್ಕರ್ ವಿರುದ್ದ ನಡೆದುಕೊಳ್ಳುತ್ತಿರುವುದು ಖಂಡನೀಯ.ಇವರು ಗುಜರಾತ್ ಸರಕಾರದಲ್ಲಿ ಗೃಹಮಂತ್ರಿ ಆಗಿದ್ದಾಗ ಗಡಿಪಾರು ಆಗಿ ಜೈಲುವಾಸ ಅನುಭವಿಸಿ ವಾಮಮಾರ್ಗದಲ್ಲಿ ಅಧಿಕಾರಕ್ಕೆ ಬಂದು ಕೇಂದ್ರದಲ್ಲಿ ಗೃಹಮಂತ್ರಿ ಆಗಿದ್ದಾರೆ.ಇವರು ತಮ್ಮ ತಪ್ಪನ್ನು ಒಪ್ಪಿಕೊಂಡು ಕ್ಷಮೆ ಕೇಳಬೇಕು.ಅಲ್ಲಿಯವರೆಗೆ ದಸಂಸ ವಿರಮಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಮುಖಂಡರಾದ ಎನ್.ಶ್ರೀನಿವಾಸ್ , ಬಿ.ವಿ.ಆನಂದ್, ಕಂಗಾನಹಳ್ಳಿ ನಾರಾಯಣಸ್ವಾಮಿ, ವೆಂಕಟೇಶ್,ರಮಣಪ್ಪ, ಸಾಗರ್ ಮತ್ತಿತರರು ಇದ್ದರು.

ಬಿಸಿಯೂಟ ನೌಕರರಿಗೆ ವೇತನ ಹೆಚ್ಚಳ ಮಾಡಿ

ಚಿಕ್ಕಬಳ್ಳಾಪುರ: ಈವರೆಗೆ ಕೇಂದ್ರ ಸರಕಾರ ಬಿಸಿಯೂಟ ನೌಕರರ ಗೌರವಧನ ಹೆಚ್ಚಳ ಮಾಡಿಲ್ಲ. 7 ರಿಂದ 12ಸಾವಿರ ವೇತನ ಕೊಡಬೇಕು ಎಂದು ಆಗ್ರಹಿಸಿ ಜಿಲ್ಲಾಡಳಿತ ಭವನದ ಎದುರು ಬೃಹತ್ ಪ್ರತಿಭಟನೆ ನಡೆಸಿ ಸರಕಾರಕ್ಕೆ ಮನವಿ ಸಲ್ಲಿಸಿದರು. ನಗರ ಹೊರವಲಯ ಜಿಲ್ಲಾಡಳಿತ ಭವನದ ಎದುರು ರಾಜ್ಯ ಅಕ್ಷರ ದಾಸೋಹ ನೌಕರರ ಜಿಲ್ಲಾ ಸಂಘ ಸಿಐಟಿಯು ನೇತೃತ್ವದಲ್ಲಿ ನಡೆಸಿದ ಬೃಹತ್ ಪ್ರತಿಭಟನೆ ನಡೆಸಿದರು. ನೌಕರರನ್ನು ಉದ್ದೇಶಿಸಿ ಪ್ರಧಾನ ಕಾರ್ಯದರ್ಶಿ ಕೆ.ಆರ್.ಮಂಜುಳ ಮಾತನಾಡಿ, ಬಿಸಿಯೂಟ ಯೋಜನೆ ಪ್ರಾರಂಭವಾಗಿ 24 ವರ್ಷಗಳು ಕಳೆಯುತ್ತಿದೆ. ಲಕ್ಷಾಂತರ ಮಕ್ಕಳಿಗೆ ಹಾಲುನೀಡಿ, ಶಾಲಾ ಸ್ವಚ್ಛತೆ ಮಾಡಿ. ಬಿಸಿ ಬಿಸಿ ಆಹಾರ ನೀಡಿ, ಶಾಲೆಯಲ್ಲಿ ನೀಡುವ ದಿನನಿತ್ಯದ ಎಲ್ಲಾ ಕೆಲಸ ಮಾಡಿ, ಶೈಕ್ಷಣಿಕ ಆಸಕ್ತಿ ಮೂಡಿಸುವಲ್ಲಿ ತಾಯ್ತ ತನದ ಪ್ರೀತಿ ನೀಡುವ ಪರಿಶ್ರಮ ಕೆಲಸವಾಗಿದೆ.ಇಂತಹ ಕೆಲಸ ಮಾಡುತ್ತಿ ರುವ ನೌಕರರ ಶೋಷಣೆ ಮಾಡುತ್ತಿರುವುದು ಸರಿಯಲ್ಲ ಎಂದರು.

ಬೇಡಿಕೆಗಳು: ಹಾಜರಾತಿ ಆಧಾರದಲ್ಲಿ ಕೆಲಸದಿಂದ ತೆಗೆಯುವುದನ್ನು ನಿಲ್ಲಿಸಬೇಕು.ಬಿಸಿಯೂಟ ಯೋಜನೆಯನ್ನು ಖಾಯಂ ಮಾಡಬೇಕು ಖಾಯಂ ಮಾಡುವ ತನಕ ಇವರನ್ನು ಕಾರ್ಮಿಕರೆಂದು ಗುರುತಿಸಬೇಕು ಎಂದು ಒತ್ತಾಯಿಸಿದರು.

ಅಮಿತ್ ಶಾ ರಾಜೀನಾಮೆಗೆ ದಸಂಸ ಪ್ರತಿಭಟನೆ

ಚಾಮರಾಜನಗರ: ರಾಜ್ಯಸಭೆಯಲ್ಲಿ ಡಾ. ಬಿಆರ್ ಅಂಬೇಡ್ಕರ್ ಅವರನ್ನು ಅವಮಾನಿಸುವ ಹೇಳಿಕೆ ನೀಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ದಲಿತ ಸಂಘರ್ಷ ಸಮಿತಿ ಸಂಯೋಜಕ ಸಿ.ರಾಜಣ್ಣ ಯರಿಯೂರು, ದಲಿತ ಸಂಘರ್ಷ ಸಮಿತಿ ಡಿ.ಜಿ.ಸಾಗರ್ ಬಣದ ಸಂಯೋಜಕ ಸಿ.ಎಂ.ಶಿವಣ್ಣ ಅವರ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾನಿರತರು ಬಿಜೆಪಿ ಸರ್ಕಾರ, ಅಮಿಶಾ ವಿರುದ್ದ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ದಲಿತ ಸಂಘರ್ಷ ಸಮಿತಿ ಸಂಯೋಜಕ ಸಿ.ರಾಜಣ್ಣ ಯರಿಯೂರು, ಸಿ.ಎಂ.ಶಿವಣ್ಣ ಮಾತನಾಡಿ, ಅಮಿತ್ ಶಾ ರಾಜೀನಾಮೆ ನೀಡಬೇಕು ಮತ್ತು ರಾಷ್ಟ್ರದ ಜನತೆಯಲ್ಲಿ ಕ್ಷಮೆಯಾಚಿಸಬೇಕು ಇಲ್ಲದಿದ್ದರೆ ರಾಜ್ಯ ಬಂದ್ ಕರೆ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಸಾಹಿತಿ ಸೋಮಶೇಖರ್ ಬಿಸಲ್ವಾಡಿ, ರಾಮಸಮುದ್ರ ಸುರೇಶ್ , ಗೂಳೀಪುರ ಅನಿಲ್, ಹೊನ್ನೂರು ಕೃಷ್ಣಮೂರ್ತಿ, ಮಂಜೇಶ್ ಗೀಜರ್, ಆಟೋ ಉಮೇಶ್, ಕಂದಹಳ್ಳಿ ನಾರಾಯಣ, ಆಲೂರು ನಾಗೇಂದ್ರ, ಇದ್ದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

• ಮಾನ್ಯ ಕೇಂದ್ರ ಸರಕಾರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರ ಸಂದೇಶ •

ಜಗತ್ತಿನೆಲ್ಲೆಡೆ ನೆಲೆಸಿರುವ ಸಮಸ್ತ ಕನ್ನಡ ಬಂಧುಗಳಿಗೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ. ಹಾಗೂ, ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಹಿರಿಯರು, ಗುರು ಸಮಾನರು ಆಗಿರುವ ಗೊ.ರು.ಚನ್ನಬಸಪ್ಪನವರಿಗೆ ಅಭಿನಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ನನ್ನ ಮನೆಯಲ್ಲಿಯೇ ಕನ್ನಡ ಹಬ್ಬ ನಡೆಯುತ್ತಿದೆ ಎನ್ನುವಷ್ಟು ಸಂತೋಷ ನನಗಾಗಿದೆ. ವಿಶೇಷವಾಗಿ ಕನ್ನಡ ನೆಲದ ಸೊಗಡಿನ ತವರು ಮನೆ, ಪ್ರತಿಶತ ನೂರಕ್ಕೆ ನೂರರಷ್ಟು ಕನ್ನಡವನ್ನೇ ಮಾತನಾಡುವ ಜನರಿರುವ, ಜಾನಪದ ಸಮೃದ್ಧತೆಯ ನೆಲೆವೀಡು, ಮಾನವೀಯತೆ, ಮಾತೃತ್ವ ಸೆಲೆಯ ಮೇರುಸೃಷ್ಟಿ ಪುಣ್ಯಕೋಟಿ ಪದ್ಯದ ಪುಣ್ಯನೆಲ, ಸಕ್ಕರೆನಾಡು, ನಾನು ಪ್ರತಿನಿಧಿಸುವ ಮಂಡ್ಯ ಲೋಕಸಭೆ ಕ್ಷೇತ್ರದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಸಂಭ್ರಮದ ಸಂಗತಿಯೇ ಹೌದು.

ಮಂಡ್ಯ ಜಿಲ್ಲೆಯ ನನ್ನ ಜನರಷ್ಟೇ ಅಲ್ಲ, ಎಲ್ಲೆಗಳನ್ನು ಮೀರಿ ಜಗತ್ತಿನ ಉದ್ದಗಲಕ್ಕೂ ನೆಲೆಸಿ ಕನ್ನಡದ ಕಂಪು ಹರಡುತ್ತಿರುವ ಎಲ್ಲ ಕನ್ನಡಿಗರು ಈ ಕನ್ನಡ ಹಬ್ಬದಲ್ಲಿ ಪಾಲ್ಗೊಳ್ಳಬೇಕು ಎನ್ನುವುದು ನನ್ನ ಕಳಕಳಿಯ ಮನವಿ.

ಬನ್ನಿ ಬೃಹತ್ ಸಂಖ್ಯೆಯಲ್ಲಿ ಭಾಗಿಯೋಗೋಣ. ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಗೊಳಿಸೋಣ.



ಜೈ ಕರ್ನಾಟಕ ಮಾತೆ..

ಧನ್ಯವಾದಗಳು
ಹೆಚ್.ಡಿ.ಕುಮಾರಸ್ವಾಮಿ

ಅಮಿತ್ ಶಾ ಹೇಳಿಕೆ ಖಂಡನೆ

ಚಿಂತಾಮಣಿ: ಸಂಸತ್ ಅಧಿವೇಶನದಲ್ಲಿ ಕೇಂದ್ರದ ಗೃಹ ಮಂತ್ರಿ ಅಮಿತ ಷಾ ಮಾತನಾಡಿ ಭಾರತ್ ರತ್ನ ಸಂವಿಧಾನ ಶಿಲ್ಪ ಡಾ.ಬಿ.ಆರ್ ಅಂಬೇಡ್ಕರ್ ಅವರ ಬಗ್ಗೆ ಅಂಬೇಡ್ಕರ್ ಅಂಬೇಡ್ಕರ್ ಎನ್ನುವುದು ಪ್ಯಾಷನ್ ಆಗಿದೆ. ಇದರ ಬದಲಾಗಿ ದೇವರ ಹೆಸರು ನೆನೆದರೆ ಸ್ವರ್ಗ ಆದರೂ ಸಿಗುತಿತ್ತು ಎಂದು ಉದ್ಧಾಟತನ ಮಾತನ್ನು ಆಡುವ ಮೂಲಕ ಅಂಬೇಡ್ಕರ್ ಅವರಿಗೆ ಉದ್ದೇಶಪೂರ್ವಕವಾಗಿ ಅಪಮಾನ ಮಾಡಿದ್ದಾರೆ. ಸಂಸತ್‌ನಲ್ಲಿ ಇವರ ಈ ವರ್ತನೆಯೇ ಸಾಕು ಬಿಜೆಪಿ ಸಂಸದರು ಮಂತ್ರಿಗಳಿಗೆ ಸಂವಿಧಾನದ ಮೇಲೆ ವಿಶ್ವಾಸವಿಲ್ಲ, ಏನೂ ಮಾಡಲಾಗದ ಕಾರಣ ಒಪ್ಪಿನಡೆಯುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಕೂಡಲೇ ಪ್ರಧಾನಿ ಅಮಿತ್ ಶಾ ದೇಶದ ಜನರ ಕ್ಷಮೆ ಕೋರಬೇಕು ಮತ್ತು ಅವರನ್ನು ಈ ಕೂಡಲೇ ಸಂಪುಟದಿಂದ ಕೈ ಬಿಡಬೇಕು ಎಂದು ಕಾಂಗ್ರೆಸ್ ಎಸ್‌ಸಿ ಘಟಕದ ಜಿಲ್ಲಾಧ್ಯಕ್ಷ ನಾರಾಯಣಸ್ವಾಮಿ ಅಗ್ರಹಿಸಿದರು. ಬಿಜೆಪಿ ಮನುವಾದಿ ಪಕ್ಷ ಎಂದು ಕಾಂಗ್ರೆಸ್ ಹಿಂದಿನಿಂದಲೂ ಹೇಳುತ್ತಲೇ ಬಂದಿದೆ. ಅಮಿತ್ ಶಾ ಮೂಲಕ ಪಕ್ಷದ ನಿಜವಾದ ಬಣ್ಣ ಈಗ ಮತ್ತೊಮ್ಮೆ ಬಯಲಾಗಿದೆ. ಅಮಿತ್ ಶಾ ಅವರನ್ನು ಸಂಪುಟದಿಂದ ಕಿತ್ತೊಗೆಯಬೇಕು. ಮುಂಬರುವ ಚುನಾವಣೆ ವೇಳೆ ಅಂಬೇಡ್ಕರ್ ಪರ ನಿಲುವ ಇರುವ ಎಲ್ಲರೂ ಬಿಜೆಪಿಯಿಂದ ಹೊರಬರಬೇಕು. ಚುನಾವಣೆಯಲ್ಲಿ ಪಕ್ಷಕ್ಕೆ ತಕ್ಕ ಪಾಠ ಕಲಿಸಬೇಕುಎಂದು ಕರೆ ನೀಡಿದರು.

ಸ್ವ ಹಿತಾಸಕ್ತಿಗೆ ಇಲ್ಲ ಸಲ್ಲದ ಹೇಳಿಕೆ: ಖಂಡನೆ

ಅರಸೀಕೆರೆ: ತಾಲೂಕಿನ ಜೆಡಿಎಸ್ ಮುಖಂಡರು ಹಾಗೂ ಪ್ರದೇಶ ಕುರುಬ ಸಂಘದ ಉಪಾಧ್ಯಕ್ಷರಾಗಿರುವ ಕೆಂಕೆರೆ ಕೇಶವ ಮೂರ್ತಿಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಕೆಲವರು ತಮ್ಮ ಸ್ವ ಹಿತಾಶಕ್ತಿ ಹೆಚ್ಚಿಸಿಕೊಳ್ಳಲು ಇಲ್ಲ ಸಲ್ಲದ ಹೇಳಿಕೆಗಳನ್ನು ನೀಡಿರುವುದು ಸತ್ಯಕ್ಕೆ ದೂರವಾದ ವಿಚಾರವಾಗಿದೆ ಎಂದು ತಾಲೂಕು ಜೆಡಿಎಸ್ ಅಧ್ಯಕ್ಷ ಕೆ.ಎಸ್. ಚಂದ್ರಶೇಖರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಸೇರಿದಂತೆ ಸ್ಥಳೀಯ ಚುನಾವಣೆಗಳಲ್ಲಿ ಕ್ಷೇತ್ರದ ಗ್ರಾಮಗಳಲ್ಲಿ ತೆರಳಿ ಪಕ್ಷ ಚಟುವಟಿಕೆಗೆ ಎಲ್ಲಾ ರೀತಿಯಲ್ಲೂ ಶ್ರಮಿಸಿದ್ದಾರೆ. ಜೆಡಿಎಸ್ ಮುಖಂಡ ಕೆಂಕೆರೆ ಕೇಶವಮೂರ್ತಿ ಮಾತನಾಡಿ, ಜೆಡಿ ಎಸ್ ವರಿಷ್ಠರಿಗೆ ಹತ್ತಿರವಾಗಿರುವ ನಾವು ಅವರ ಹುಟ್ಟುಹಬ್ಬ, ಪಕ್ಷದ ಸಂಘಟನೆಗೆ ಹಿರಿಯರ ಮಾರ್ಗದರ್ಶನದಲ್ಲಿ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದೇವೆ.

ಪ್ರಿಯಕರನೊಂದಿಗೆ ಸೇರಿ ಪತಿ ಕೊಲೆ

ತುಮಕೂರು: ಪ್ರಿಯಕರನೊಂದಿಗೆ ಸೇರಿ ಪತಿಗೆ ಬೆಂಕಿ ಹಚ್ಚಿ ಭೀಕರವಾಗಿ ಹತ್ಯೆ ಮಾಡಿದ್ದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿ ಮಹಿಳೆ ಮತ್ತು ಆಕೆಯ ಪ್ರಿಯಕರನಿಗೆ ತುಮಕೂರು ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಅನ್ನಪೂರ್ಣ ಮತ್ತು ರಾಮಕೃಷ್ಣ ಇಬ್ಬರು ಅಪರಾಧಿಗಳೆಂದು ಸಾಬೀತಾದ ಹಿನ್ನೆಲೆಯಲ್ಲಿ ಇಬ್ಬರಿಗೂ ಜೀವಾವಧಿ ಶಿಕ್ಷೆ ಹಾಗೂ ತಲಾ 30 ಸಾವಿರ ರು. ದಂಡ ವಿಧಿಸಿ ತೀರ್ಪು ನೀಡಿದೆ. ಈ ಸಂಬಂಧ ಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವಿಚಾರಣೆ ನಡೆಸಿದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಲಯದ ನ್ಯಾಯಾಧೀಶ ಎಚ್.ಅನಂತ್ ಅವರು ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಇಬ್ಬರಿಗೂ ಜೀವಾವಧಿ ಶಿಕ್ಷೆ ಹಾಗೂ ತಲಾ 30 ಸಾವಿರ ರು. ದಂಡ ವಿಧಿಸಿ ಆದೇಶಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಾರಿಗೆ ನೌಕರರಿಗೆ ಸಮಾನ ವೇತನ ಕೊಡಿ

ಮಂಡ್ಯ: ಸರಕಾರ ರಾಜ್ಯ ರಸ್ತೆ ಸಾರಿಗೆ ನೌಕರರಿಗೆ ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ ಭರವಸೆ ಪ್ರಕಾರ ಸರಕಾರಿ ನೌಕರರಂತೆಯೇ ಸರಿಸಮಾನ ವೇತನ ಮತ್ತು ಸವಲತ್ತುಗಳನ್ನು ಜಾರಿ ಮಾಡಬೇಕೆಂದು ರಸ್ತೆ ಸಾರಿಗೆ ನೌಕರರ ಒಕ್ಕೂಟದ ಉಪಾಧ್ಯಕ್ಷ ಸಿ.ಆರ್. ಶಿವರಾಮೇಗೌಡ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ರಸ್ತೆ ಸಾರಿಗೆ ನೌಕರರಿಗೆ ಅವೈಜ್ಞಾನಿಕ ದಲ್ಲಾಳಿ ಒಪ್ಪಂದದ ಪದ್ಧತಿಯಲ್ಲಿ ವೇತನ ನೀಡುತ್ತಿರುವುದನ್ನು ಕೈಬಿಟ್ಟು ಚುನಾವಣಾ ಪ್ರಚಾರದ ವೇಳೆ ಸಾರಿಗೆ ನೌಕರರ ಸಮಸ್ಯೆಗಳಿಗೆ ಸ್ಪಂದಿಸುವ ಬಗ್ಗೆ ಗಮನ ಹರಿಸಿ ಎಂದರು. ಒಕ್ಕೂಟದ ಗೌರವ ಅಧ್ಯಕ್ಷ ತಾಳಶಾಸನ ಮೋಹನ್ ಮಾತನಾಡಿ, ಒಪ್ಪಿಗೆ ಪದ್ಧತಿಯಲ್ಲಿ ವೇತನ ನೀಡುವುದು ಅವೈಜ್ಞಾನಿಕವಾಗಿದೆ. ಕೂಡಲೇ ಈ ಪದ್ಧತಿಯನ್ನು ಕೈಬಿಡಬೇಕು, 7ನೇ ವೇತನ ಆಯೋಗದ ಮಾದರಿ ಸರಿಸಮಾನ ವೇತನ ಮತ್ತು ಸವಲತ್ತು ಜಾರಿ, ಸಾರಿಗೆ ನೌಕರರ ಸಂಘಟನೆಗಳ ಚುನಾವಣೆ ನಡೆಸಬೇಕು, ಹಲವು ತಿಂಗಳುಗಳ ಹಿಂಬಾಕಿ ವೇತನ ಪಾವತಿ ಮಾಡಬೇಕು, ಸಾರಿಗೆ ನೌಕರರ ಮೇಲಿನ ಹಲ್ಲೆ ವಿರುದ್ಧ ಕಠಿಣ ಕಾನೂನು ಕ್ರಮಗಳ ಜಾರಿ ಹಾಗೂ ಶಕ್ತಿ ಯೋಜನೆ ಟಿಕೆಟ್ ರಹಿತ ಪ್ರಯಾಣಿಕರ ಪ್ರಕರಣ ದಾಖಲು ಕೈ ಬಿಡಬೇಕು ಎಂದು ಆಗ್ರಹಿಸಿದರು. ತಮ್ಮೆಲ್ಲಾ ಬೇಡಿಕೆಗಳನ್ನು ಸರ್ಕಾರ ಡಿ.31ರೊಳಗೆ ಈಡೇರಿಸಬೇಕು. ಇಲ್ಲದೇ ಹೋದಲ್ಲಿ ರಾಜ್ಯದ ಎಲ್ಲಾ ಸಾರಿಗೆ ನಿಗಮಗಳ ಒಟ್ಟು 1.17 ಲಕ್ಷ ನೌಕರರಿಂದ ಹೋರಾಟದ ಮಾರ್ಗ ನೋಡಲಾಗುವುದು ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಒಕ್ಕೂಟದ ಪ್ರಚಾರ ಕಾರ್ಯದರ್ಶಿ ಶ್ರೀಧರ್. ಎಂ, ಬಾಲರಾಜು, ಶಂಕರೇಗೌಡ ಇದ್ದರು.

ಡಿ.23ರಂದು ರೈತ ದಿನಾಚರಣೆ

ಮಂಡ್ಯ: ರಾಜ್ಯ ರೈತಪರ ಹೋರಾಟಗಾರರ ಸಂಘದ ವತಿಯಿಂದ ಅಂತರಾಷ್ಟ್ರೀಯ ರೈತ ದಿನಾಚರಣೆಯನ್ನು ಡಿ.23ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕಾಳಿಕಾಂಬಾ ದೇವಾಲಯದಿಂದ ಮಂಗಳವಾದ್ಯ ಸಮೇತ ಸಿಲ್ವರ್ ಜ್ಯೂಬಿಲಿ ಪಾಕ್‌ರ್ನವರೆಗೆ ಮೆರವಣಿಗೆ ನಡೆಸಿ, ಸಮಾವೇಶ ನಡೆಸಲಾಗುವುದು ಎಂದರು. ರೈತರು ಎದುರಿಸುತ್ತಿರುವ ಸಮಸ್ಯೆಗಳು, ದೊರೆಯಬೇಕಾದ ಸವಲತ್ತುಗಳ ಸಂಬಂಧ ಚರ್ಚೆ ನಡೆಸಲಾಗುವುದು. ಇದೇ ವೇಳೆ ಹಳ್ಳಿಕಾರ್ ಉತ್ತಮ ರಾಸುಗಳ ಪ್ರದರ್ಶನೆ ನಡೆಸಲಾಗುತ್ತಿದ್ದು, ಮೊದಲ ಬಹುಮಾನ 5000, ದ್ವಿತೀಯ ಬಹುಮಾನ 3000, ತೃತೀಯ ಬಹುಮಾನ 2000 ಮತ್ತು ಪ್ರಶಂಸನಾ ಪತ್ರ ನೀಡಲಾಗುವುದು ಎಂದು ಹೇಳಿದರು.

ಆಧುನಿಕ ಕನ್ನಡ ನಾಡಿನ ಶಿಲ್ಪಿ ನಾಲ್ವಡಿ ಒಡೆಯರ್

ಕನ್ನಡ ಸಾಹಿತ್ಯ ಪರಿಷತ್ ನಿಂದ ನಾಲ್ವಡಿ ಒಡೆಯರ್ ಕುರಿತ ಉಪನ್ಯಾಸ

ಚಾಮರಾಜನಗರ: ಕನ್ನಡ ನಾಡಿನ ಶ್ರೇಷ್ಠ ರಾಜಮನೆತನಗಳಲ್ಲಿ ಒಂದಾದ ಮೈಸೂರು ಸಾಮ್ರಾಜ್ಯದ 24ನೇ ರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಆಧುನಿಕ ಕನ್ನಡ ನಾಡಿನ ನಿರ್ಮಾತೃ ಎಂದು ಮಾಜಿ ಶಾಸಕ ಜಿ.ಎನ್ .ನಂಜುಂಡಸ್ವಾಮಿ ಬಣ್ಣಿಸಿದರು.

ನಗರದ ರೋಟರಿ ಭವನದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ, ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ರೋಟರಿ ಸಂಸ್ಥೆ ಆಶ್ರಯದಲ್ಲಿ 50 ದಿನಗಳ ಕಾರ್ಯಕ್ರಮದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತ ಉಪನ್ಯಾಸ ಉದ್ಘಾಟಿಸಿ ಮಾತನಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಕಿದ ಅಡಿಪಾಯದಿಂದ ಕರ್ನಾಟಕದ ರಾಜ್ಯಧಾನಿ ಬೆಂಗಳೂರನ್ನು ದೇಶದಲ್ಲೇ ಸಿಲಿಕಾನ್ ಸಿಟಿಯಾಗಿ ಇಷ್ಟರ ಮಟ್ಟಿಗೆ ಬೆಳೆದು ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿದೆ. ಒಡೆಯರ್ ಅವರ ಸಾಧನೆ, ಕೊಡುಗೆ ಪರಿಗಣಿಸಿ ರಾಜ್ಯ ಸರ್ಕಾರ ಮೈಸೂರಿನ ವಿಮಾನ ನಿಲ್ದಾಣಕ್ಕೆ ಅವರ ಹೆಸರು ನಾಮಕರಣ ಮಾಡಲು ನಿರ್ಧರಿಸಿದೆ. ಕನ್ನಡ ನಾಡಿನಲ್ಲಿ ಅವರನ್ನು ನವಕರ್ನಾಟಕದ ಪಿತಾಮಹ ಎಂದೆ ಕರೆಯುತ್ತಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ನಾಲ್ವಡಿ ಅವರ ಬಳಿ 400 ಮಿಲಿಯನ್ ಯುಎಸ್ ಡಾಲರ್ ವೈಯುಕ್ತಿಕ ಸಂಪತ್ತು ಇತ್ತು. ವಿಶ್ವದ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಅವರ ಆಳ್ವಿಕೆಯಲ್ಲಿ ಅತ್ಯುತ್ತಮ ಆಡಳಿತದ ರಾಜ್ಯವೆಂದು ಹೆಸರುವಾಸಿಯಾಗಿತ್ತು. ಅವರ ಆಡಳಿತದಲ್ಲಿ ಕರ್ನಾಟಕದಲ್ಲಿ ಹಲವಾರು ಪ್ರಮುಖ ಶೈಕ್ಷಣಿಕ, ಕೈಗಾರಿಕಾ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ನಂಬಾಡಿ ಅಣೆಕಟ್ಟೆ ನಿರ್ಮಿಸುವ ಮೂಲಕ ನೀರಾವರಿಗೆ ಹೆಚ್ಚಿನ ಒತ್ತು ನೀಡಿದ್ದರು ಎಂದರು.

ಶ್ರೀ ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕನ್ನಡ ನಾಡಿಗಾಗಿ ಹೋರಾಟ ಮಾಡಿದ ಮಹನೀಯರನ್ನು ಸ್ಮರಿಸಿಕೊಳ್ಳುತ್ತಿರುವುದು ಬಹಳ ಅರ್ಥಪೂರ್ಣವಾದದ್ದು. ನಮ್ಮ ಮಾತೃಭಾಷೆಯಾದ ಕನ್ನಡಭಾಷೆಗೆ ಹೆಚ್ಚಿನ ಮಹತ್ವ ಕೊಡಬೇಕು. ಕನ್ನಡದ ಕಟ್ಟಾಳ ವಾಟಾಳ್‌ನಾಗರಾಜು ಅವರು ಕನ್ನಡಕ್ಕಾಗಿ ಮಂತ್ರಿಗಿರಿ ತ್ಯಾಗ ಮಾಡಿದ್ದರು ಎಂದರು.

ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ, ಕಸಾಪ ಜಿಲ್ಲಾಧ್ಯಕ್ಷ ಶೈಲಕುಮಾರ್, ಬಿ.ಕೆ.ದಾನೇಶ್ವರೀಜಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆ ಅಧ್ಯಕ್ಷ ಎಲ್.ನಾಗರಾಜು, ಲಯನ್ಸ್ ಸಂಸ್ಥೆ ಅಧ್ಯಕ್ಷ ಡಾ. ಎಂ.ಬಸವರಾಜೇಂದ್ರ, ಆರ್. ಸುಭಾಷ್, ಚಾ.ವೆಂ.ರಾಜ್ ಗೋಪಾಲ್, ಪಣ್ಯದಹುಂಡಿ ರಾಜು, ಇತರರು ಹಾಜರಿದ್ದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ರೋಟರಿ ಸಂಸ್ಥೆಯಿಂದ ನಡೆದ 50ನೇ ದಿನದ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಶ್ರೀಗಳು ಚಾಲನೆ ನೀಡಿದರು.

ದೀಪಾಲಂಕಾರಕ್ಕೆ ಸಚಿವರಿಂದ ಚಾಲನೆ

ಮಂಡ್ಯ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಮಂಡ್ಯ ನಗರದಲ್ಲಿನ ವಿದ್ಯುತ್ ದೀಪಾಲಂಕಾರಕ್ಕೆ ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಚಲುವರಾಯಸ್ವಾಮಿ ಅವರು ನಗರದ ಸಂಜಯ ವೃತ್ತದಲ್ಲಿ ಚಾಲನೆ ನೀಡಿದರು.

ಶಾಸಕರುಗಳಾದ ನರೇಂದ್ರಸ್ವಾಮಿ, ರಮೇಶ್ ಬಾಬು ಬಂಡಿಸಿದ್ದೇಗೌಡ, ರವಿಕುಮಾರ್ ಗಣಿಗ, ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ಮೂಢಾ ಅಧ್ಯಕ್ಷ ನಹೀಮ್, ಜಿಲ್ಲಾಧ್ಯಕ್ಷ ಚಿದಂಬರಂ, ಮೈಶುಗರ್ ಕಂಪನಿ ಅಧ್ಯಕ್ಷ ಸಿ.ಡಿ.ಗಂಗಾಧರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ದಸರಾದ ವಿಶೇಷ ದೀಪಾಲಂಕಾರದ ಮಾದರಿಯಲ್ಲಿ ಚೆಸ್ಕಾಂ ವತಿಯಿಂದ ನಗರದ ರಸ್ತೆಗಳಿಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು ಸಮ್ಮೇಳನ ನಡೆಯುವ ಮೂರು ದಿನವೂ ದೀಪಾಲಂಕಾರ ಇರಲಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ.ವಿಶ್ವೇಶ್ವರಯ್ಯ ಕಲಾಕೃತಿ, ಜ್ಞಾನಪೀಠ ಪುರಸ್ಕೃತರ ಭಾವಚಿತ್ರಗಳು ದೀಪಾಲಂಕಾರದ ಪ್ರಮುಖ ಆಕರ್ಷಣೆಯಾಗಿವೆ.

ಧರ್ಮಸ್ಥಳ ಸಂಘದಿಂದ ಅಧ್ಯಯನ ಪ್ರವಾಸ

ತಿ.ನರಸೀಪುರ: ಮಹಿಳೆಯರ ಆರ್ಥಿಕ ಸಬಲೀಕರಣ ಮೂಲ ಧ್ಯೇಯದೊಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವು ಮೂಗೂರು ಮತ್ತು ತಲಕಾಡು ವಲಯಗಳ ಆಸಕ್ತ ಮಹಿಳೆಯರನ್ನು ಮಂಡ್ಯದ ಕೃಷಿ ವಿದ್ಯಾನಿಲಯಕ್ಕೆ ತರಬೇತಿ ಪಡೆಯುವ ಉದ್ದೇಶಕ್ಕಾಗಿ ಅಧ್ಯಯನ ಪ್ರವಾಸಕ್ಕೆ ಕರೆದೊಯ್ಯಲಾಯಿತು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ತಾಲೂಕು ಯೋಜನಾಧಿಕಾರಿ ಹನುಮಂತಪ್ಪ ಅಂಗಡಿ ಅವರು ಚಾಲನೆ ನೀಡಿ ಮಾತನಾಡಿದರು. ನಮ್ಮ ಸಂಘವು ಗ್ರಾಮೀಣ ಜನರ ಆರ್ಥಿಕಾಭಿವೃದ್ಧಿಗೆ ಕೃಷಿ ತರಬೇತಿ, ಕೃಷಿ ಯಂತ್ರಧಾರೆ, ಹೈನುಗಾರಿಕೆ, ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು. ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್ ಮಾತನಾಡಿ, ಧರ್ಮಸ್ಥಳ ಸಂಘ ತನ್ನ ಕಾರ್ಯ ದೇಶದಾದ್ಯಂತ ವಿಸ್ತರಿಸಲಿ ಎಂದರು. ರೈತ ಮುಖಂಡ ಕಿರಗಸೂರು ಪ್ರಸಾದ್ ನಾಯಕ್, ಬೆನಕನಹಳ್ಳಿ ಪರಶಿವಮೂರ್ತಿ, ಮಹಾದೇವಸ್ವಾಮಿ, ಕೈಯಂಬಳ್ಳಿ ಶೇಖರ್, ಕೃಷಿ ಮೇಲ್ವಿಚಾರಕ ಟಿ.ಆರ್. ಕುಮಾರ್ , ಸೇವಾ ಪ್ರತಿನಿಧಿ ಚಿತ್ರ ಇದ್ದರು.

ಗೋ ಹತ್ಯೆ: ಹೋರಾಟಕ್ಕೆ ಸಜ್ಜು

ಮಡಿಕೇರಿ ಕೊಡಗು ಜಿಲ್ಲೆಯಲ್ಲಿ ಗೋಕಳ್ಳತನ, ಗೋವುಗಳ ಅಕ್ರಮ ಸಾಗಣೆ ಮತ್ತು ಗೋಹತ್ಯೆ ಪ್ರಕರಣ ಮಿತಿ ಮೀರಿದ್ದು, ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಮಾಜಿ ಶಾಸಕ ಕೆ.ಜಿ.ಬೋಪಯ್ಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಗೋವುಗಳ ಕಳ್ಳತನ ನಿರಂತರವಾಗಿದ್ದು, ಪೊಲೀಸ್ ಇಲಾಖೆ

ಯಾವುದೇ ಕಠಿಣ ಕ್ರಮ ಕೈಗೊಳ್ಳುತ್ತಿಲ್ಲ. ಎಂದರು. ಬಿಜೆಪಿ ಮುಖಂಡ ಎಂ.ಬಿ.ದೇವಯ್ಯ ಅವರ ಮನೆಯ ಕೊಟ್ಟಿಗೆಗೆ ನುಗ್ಗಿ ಒಂದು ಹಸುವನ್ನು ಕದ್ದೊಯ್ದಿದ್ದಾರೆ. ಸಿಸಿ ಕ್ಯಾಮರಾ ಸೆರೆ ಹಿಡಿದಿರುವ ದೃಶ್ಯಾವಳಿಯಿಂದ ಗೋವು ಕಳ್ಳರನ್ನು ಬಂಧಿಸುವ ಪ್ರಯತ್ನ ಮಾಡಿಲ್ಲ ಎಂದು ಟೀಕಿಸಿದರು.

ವಲಸಿಗರ ಬಗ್ಗೆ ಎಚ್ಚರ : ಅಸ್ಸಾಂ ಕಾರ್ಮಿಕರ ಸೋಗಿನಲ್ಲಿ ಬಾಂಗ್ಲಾ ವಲಸಿಗರು ಕಾರ್ಮಿಕರಾಗಿ ತೋಟಗಳಲ್ಲಿ ಸೇರಿಕೊಳ್ಳುತ್ತಿದ್ದಾರೆ. ಈಗಲೇ ಎಚ್ಚೆತ್ತುಕೊಳ್ಳದಿದ್ದಲ್ಲಿ ಕೊಡಗು ಜಿಲ್ಲೆಗೆ ಭವಿಷ್ಯ ಇಲ್ಲದಂತಾಗಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಬಿಜೆಪಿ ಮುಖಂಡ ಎಂ.ಬಿ.ದೇವಯ್ಯ ಮಾತನಾಡಿ, ಕಳವು ನಡೆದ ಘಟನೆ ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಕ್ತಾರ ಬಿ.ಕೆ.ಅರುಣ್ ಕುಮಾರ್, ಮಾಚಿಮಾಡ ರವೀಂದ್ರ ಉಪಸ್ಥಿತರಿದ್ದರು.

ಕೆ.ಆರ್.ಪೇಟೆ ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಆಯ್ಕೆ

ಕೆ.ಆರ್.ಪೇಟೆ: ಕುತೂಹಲ ಕೆರಳಿಸಿದ್ದ ಪಿ ಎಲ್ ಡಿ ಬ್ಯಾಂಕ್ ಉಪಾಧ್ಯಕ್ಷ ಚುನಾವಣೆಯಲ್ಲಿ ಅಣ್ಣೆಚಾಕನಹಳ್ಳಿ ನಾಗರಾಜೇಗೌಡ ಅವರಿಗೆ ಲಾಟರಿ ಮೂಲಕ ಅದೃಷ್ಟ ಒಲಿದು ಬಂದಿದೆ.

ಹಿಂದಿನ ಉಪಾಧ್ಯಕ್ಷ ಏಜಾಸ್ ಪಾಷಾ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶಂಭುಲಿಂಗೇಗೌಡ ಹಾಗೂ ನಾಗರಾಜೇಗೌಡ ಅರ್ಜಿ ಸಲ್ಲಿಸಿದ್ದರು. ನಾಗರಾಜೇಗೌಡ 7ಮತಗಳು ಹಾಗೂ ಶಂಭುಲಿಂಗೇಗೌಡ 7ಮತಗಳನ್ನು ಪಡೆದು ಸಮಬಲ ಸಾಧಿಸಿದರು. ಚುನಾವಣಾ ಅಧಿಕಾರಿ ಭರತ್ ಲಾಟರಿ ಮೊರೆ ಹೋದರು. ಲಾಟರಿಯಲ್ಲಿ ಅಣ್ಣೆಚಾಕನಹಳ್ಳಿ ನಾಗರಾಜೇಗೌಡ ಅವರು ವಿಜೇತರಾಗಿದ್ದಾರೆ ಎಂದು ಘೋಷಿಸಿದರು.

ನಾಗರಾಜೇಗೌಡ ಅವರನ್ನು ಬ್ಯಾಂಕ್ ಅಧ್ಯಕ್ಷ ಬಂಡಿಹೊಳೆ ಶಿವಕುಮಾರ್ ಹಾಗೂ ನಿರ್ದೇಶಕರು,ಬೆಂಬಲಿಗರು ಪಟಾಕಿ ಸಿಡಿಸಿ,ಶಾಲು ಹೊದಿಸಿ, ಬೃಹತ್ ಹಾರ ಹಾಕಿ ಅಭಿನಂದಿಸಿದರು.

ಬಳಿಕ ಮಾತನಾಡಿದ ಮಾಜಿ ಅಧ್ಯಕ್ಷ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ, ಬ್ಯಾಂಕ್‌ನ ಅಭಿವೃದ್ಧಿಯಲ್ಲಿ ಅಧ್ಯಕ್ಷರಷ್ಟೆ ಉಪಾಧ್ಯಕ್ಷರಿಗೆ ಜವಾಬ್ದಾರಿ ಇರುತ್ತದೆ.ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಪಿಎಲ್‌ಡಿ ನೂತನ ಕಟ್ಟಡವನ್ನು ಪೂರ್ಣಗೊಳಿಸಬೇಕಾಗುತ್ತದೆ ಎಂದರು.

ನಾಗರಾಜೇಗೌಡ ಮಾತನಾಡಿ, ನನಗೆ ಸಿಕ್ಕಿರುವ ಅವಧಿಯಲ್ಲಿ ನಿರ್ದೇಶಕರ ವಿಶ್ವಾಸಕ್ಕೆ ತೆಗೆದುಕೊಂಡು ಬ್ಯಾಂಕ್ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎಂದು ತಿಳಿಸಿದರು.

ಬ್ಯಾಂಕ್ ಅಧ್ಯಕ್ಷ ಬಂಡಿಹೊಳೆ ಶಿವಕುಮಾರ್, ಮಾಜಿ ಅಧ್ಯಕ್ಷೆ ರಾಧಾ ಈಶ್ವರಪ್ರಸಾದ್, ಜಯಶೀಲ, ಮಾಜಿ ಉಪಾಧ್ಯಕ್ಷ ಬಣ್ಣೇನಹಳ್ಳಿ ಧನಂಜಯ, ಚಂದ್ರೇಗೌಡ,ಅಂಜನಿಗೌಡ, ಕಾಂತರಾಜೇಗೌಡ,ಗೋವಿಂದರಾಜು,ಕಮಲಮ್ಮ,ರಾಜಾನಾಯ್ಕ್,ನಾಮಿನಿ ಸದಸ್ಯ ಲಕ್ಷ್ಮೀಪುರ ಚಂದ್ರೇಗೌಡ,ಬ್ಯಾಂಕ್ ಮ್ಯಾನೇಜರ್ ರವಿಕುಮಾರ್ ಇದ್ದರು.



ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಜಿಲ್ಲಾ ಪಂಚಾಯತ್ ಮಂಡ್ಯ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ವರಿಗೂ ಸುಸ್ವಾಗತ

ಅಮೃತ ಸರೋವರ

ದೇಶದ 75 ಸ್ವಾತಂತ್ರ್ಯ ಉತ್ಸವದ ಅಂಗವಾಗಿ ಕೇಂದ್ರ ಸರ್ಕಾರವು ಪ್ರತಿ ಜಿಲ್ಲೆಯಲ್ಲಿ 75 ಹೊಸ 'ಅಮೃತ ಸರೋವರ'ಗಳನ್ನು ನಿರ್ಮಿಸಲು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಸುತ್ತೋಲೆ ಅನುಸಾರ ಆಜಾದಿ ಕಾ ಅಮೃತ್ ಮಹೋತ್ಸವದ ನಿಮಿತ್ತ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಿಷನ್ ಅಮೃತ ಸರೋವರ ಅಭಿಯಾನದಡಿ ಗ್ರಾಮೀಣ ಪ್ರದೇಶದ ಜಲ ಮೂಲಗಳನ್ನು ಪುನಶ್ಚೇತನಗೊಳಿಸಿ ಅಮೃತ ಸರೋವರಗಳಾಗಿ ನಿರ್ಮಿಸಲಾಗಿದೆ. ಕಳೆದ ವರ್ಷ ಜಿಲ್ಲೆಯಲ್ಲಿ 157 ಕೆರೆ, ಕಟ್ಟೆ, ಕಲ್ಯಾಣಿ ಹಾಗೂ ಜಲಮೂಲಗಳನ್ನು ಅಮೃತ ಸರೋವರದಡಿ ಅಭಿವೃದ್ಧಿ ಮಾಡಲಾಗಿದೆ.

ಭವಿಷ್ಯದ ಪೀಳಿಗೆಗಾಗಿ ನೀರನ್ನು ಸಂರಕ್ಷಿಸುವ ಉದ್ದೇಶದಿಂದ ಅಮೃತ ಸರೋವರ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ಇದರಿಂದ ಗ್ರಾಮಗಳ ಜಲಮೂಲಗಳನ್ನು ಸಮರ್ಪಕವಾಗಿ ಅಭಿವೃದ್ಧಿ ಮತ್ತು ನಿರ್ವಹಣೆ ಮಾಡಲು ಸಹಕಾರಿಯಾಗಿದೆ. ಈ ಅಮೃತ ಸರೋವರ ಯೋಜನೆಯಡಿ ಜಲ ಸಂರಕ್ಷಣೆಗೆ ಮರುಜೀವ ನೀಡಲಾಗಿದೆ.

ಅಮೃತ ಸರೋವರ ಕಾಮಗಾರಿಗಳ ಏರಿ ಭದ್ರಪಡಿಸುವಿಕೆ, ಪೂರಕ ಕಾಲುವೆಗಳ ದುರಸ್ಥಿ, ಸೋಪಾನ ಕಟ್ಟೆ ನಿರ್ಮಾಣ, ಅರಣ್ಯೀಕರಣ, ನೆಡುತೋಪುಗಳ ನಿರ್ಮಾಣಕ್ಕೆ ಒತ್ತು ಮತ್ತು ಸಾರ್ವಜನಿಕರು ವಿಶ್ರಾಂತಿಯನ್ನು ಪಡೆಯಲು ಬೆಂಚ್ಗಳನ್ನು ಹಾಕಲಾಗಿದೆ.

ಈ ಸರೋವರಗಳ ಸುತ್ತ ಉದ್ಯಾನ, ವಾಕಿಂಗ್ ಪಾಥ್ ನಿರ್ಮಿಸಿ, ಬೇವು, ಆಲ, ಮಹಾಗನಿ, ಸಾಗುವಾನಿಮತ್ತು ಅರಳಿ ಗಿಡಗಳನ್ನು ನೆಟ್ಟು ಅರಣ್ಯೀಕರಣಕ್ಕೆ ಆದ್ಯತೆ ನೀಡಲಾಗಿದೆ. ಮಳೆಗಾಲದಲ್ಲಿ ಬೀಳುವ ನೀರು ವ್ಯರ್ಥವಾಗಿ ಹರಿಯದೇ ಕೆರೆ, ಗೋಕಟ್ಟೆಗಳು ತುಂಬುವುದರಿಂದ ಅಂತರ್ಜಲ ಮಟ್ಟ ಹೆಚ್ಚುವುದರ ಜೊತೆಗೆ ಜಾನುವಾರುಗಳ, ಪ್ರಾಣಿ ಮತ್ತು ಪಕ್ಷಿಗಳ ಕುಡಿಯುವ ನೀರಿನ ದಾಹ ನೀಗಿಸಲು ನೆರವಾಗಲಿವೆ.

ಅಮೃತ ಸರೋವರದ ಅಭಿವೃದ್ದಿಗೂ ಮೊದಲು ನೀರಿಗೆ ತೊಂದರೆಯಾಗಿತ್ತು. ಇದರಿಂದ ನೀರಿನ ಸಾಮರ್ಥ್ಯವು ಕೂಡ ಕಡಿಮೆಯಾಗಿತ್ತು. ಬೇಸಿಗೆಗಾಲ ಬಂದರೆ ಜಾನುವಾರುಗಳಿಗೆ ಕುಡಿಯಲು ಸಾಕಷ್ಟು ನೀರು ಲಭ್ಯವಾಗಿರಲಿಲ್ಲ, ಸುತ್ತಲಿದ್ದ ಕೃಷಿ ಜಮೀನುಗಳಿಗೂ ನೀರು ಸಿಗುತ್ತಿರಲಿಲ್ಲ. ಇದೀಗ ನರೇಗಾ ಯೋಜನೆಯ ಕೂಲಿಕಾರರ ನೆರವಿನಿಂದ ಸರೋವರಕ್ಕೆ ಮರುಜೀವ ನೀಡಲಾಗಿದೆ.

ಸರೋವರದ ಸುತ್ತಲಿನ ಬೇಲಿ ಹಾಗೂ ಮುಳ್ಳಿನ ಗಿಡಗಳನ್ನು ತೆರವುಗೊಳಿಸಿ ನಂತರ ನೀರಿನ ಶೇಖರಣಾ ಮಟ್ಟ ಹೆಚ್ಚಿಸಲು ಸರೋವರದ ಹೂಳನ್ನು ತೆಗೆದು, ಜಾನುವಾರುಗಳಿಗೆ ನೀರು ಕುಡಿಯಲು ಸಹಾಯವಾಗಲಿ ಎಂದು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಅಲ್ಲದೆ, ಸರೋವರದ ಸುತ್ತಲೂ ಕಲ್ಲು ಪಿಚ್ಚಿಂಗ್ ಮಾಡಲಾಗಿದೆ.

ಸರೋವರ ಅಭಿವೃದ್ಧಿಯಾದ ನಂತರ ನೋಡಲು ತುಂಬಾ ಸುಂದರವಾಗಿ ಕಾಣುತ್ತಿದೆ. ಸರೋವರ ನವೀಕರಣದ ನಂತರ ಸರೋವರದ ನೀರಿನ ಸಂಗ್ರಹಣಾ ಸಾಮರ್ಥ್ಯವೂ ಹೆಚ್ಚಾಗಿದೆ. ಇದರಿಂದ ರೈತಾಪಿ ವರ್ಗದಲ್ಲಿ ಸಂತೋಷ ಮನೆಮಾಡಿದ್ದು ಸರೋವರದ ನೀರು ಕೃಷಿ ಚಟುವಟಿಕೆಗಳಿಗೆ ಉಪಯುಕ್ತವಾಗುತ್ತಿದೆ. ಜಾನುವಾರುಗಳಿಗೆ ಕುಡಿಯಲು ನೀರು ಸಿಗುತ್ತಿದೆ. ಮಳೆಗಾಲದಲ್ಲಿ ಸರೋವರದ ತುಂಬಾ ನೀರು ತುಂಬುವುದರಿಂದ ಬೇಸಿಗೆಗಾಲದಲ್ಲಿ ಜಾನುವಾರುಗಳಿಗೆ ನೀರಿನ ಹಾಹಾಕಾರಪಡುವಂತಿಲ್ಲ. ಹಾಗೇಯೇ ರೈತರ ಜಮೀನಿನ ಬೋರ್ ವೆಲ್ ಗಳ ಅಂತರ್ಜಲ ಮಟ್ಟ ಹೆಚ್ಚಾಗಿದೆ. ಸರೋವರದ ಜೀರ್ಣೋದ್ಧಾರದ ಬಗ್ಗೆ ಗ್ರಾಮದ ಎಲ್ಲಾ ಜನರು ತುಂಬಾ ಸಂತೋಷಪಟ್ಟಿದ್ದಾರೆ. ಇಡೀ ಜಿಲ್ಲೆಯಲ್ಲಿ 157 ಹೊಸ 'ಅಮೃತ ಸರೋವರ'ಗಳು ನಿರ್ಮಾಣಗೊಂಡಿದ್ದು, ಈ ವರ್ಷ ಉತ್ತಮ ಮಳೆಯಾಗಿರುವುದರಿಂದ ಬಹುತೇಕ ಸರೋವರಗಳು ತುಂಬಿ ತುಳುಕುತ್ತಿವೆ.

ಕ್ಯಾತಮ್ಮನಕಟ್ಟೆಗೆ ನರೇಗಾ ನೆರವು

ಕಾಮಗಾರಿಯ ಪರಿಚಯ

ಅಮೃತ ಸರೋವರದ ಅಭಿಯಾನದ ಮೂಲಕ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ತಳಗವಾದಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಟಿ.ಕಾಗೇಪುರ ಗ್ರಾಮದಲ್ಲಿ ನರೇಗಾ ಯೋಜನೆಯಲ್ಲಿ ನಿರ್ಮಾಣವಾಗಿರುವ ಕ್ಯಾತಮ್ಮನಕಟ್ಟೆಯು ಮರು ನಿರ್ಮಾಣವಾಗಿದೆ.

ಕಾಮಗಾರಿಯ ಹಿನ್ನೆಲೆ

ಕಾಗೇಪುರ ಗ್ರಾಮದ ಕ್ಯಾತಮ್ಮ ಮತ್ತು ಶ್ರೀ ಬಸವೇಶ್ವರ ದೇವಸ್ಥಾನ ಧಾರ್ಮಿಕ ಮತ್ತು ಅಧ್ಯಾತ್ಮಿಕ ಚಟುವಟಿಕೆಗಳಿಗೆ ಮೀಸಲಾಗಿರುವ ಸ್ಥಳ. ಭಕ್ತರ ನಂಬಿಕೆ ಕೇಂದ್ರ ಬಿಂದುವಾಗಿ ಕಾಗೇಪುರದ ದೇವಸ್ಥಾನವು ಒಂದು ಸುಂದರವಾಗಿ ಕಂಡುಬರುವ ಸ್ಮಾರಕವಾಗಿದೆ. ಮೂಲತಃ ಇಲ್ಲಿ ದೇವಸ್ಥಾದ ದೈವ ಸನ್ನಿಧಿಗೆ ಆಭರಣ ಭೂಷಣದಿಂದ ಪ್ರತಿ ವರ್ಷವೂ ಸಹ ತೇರು ಎಳೆಯುವುದನ್ನು ನೋಡಬಹುದು ಮತ್ತು ಇಲ್ಲಿನ ಅಕ್ಕಪಕ್ಕದ ಗ್ರಾಮಸ್ಥರ ನಂಬಿಕೆಯ ಕೇಂದ್ರವಾಗಿದೆ.

ಹಲವಾರು ವರ್ಷಗಳ ಹಿಂದೆ ಕಾಗೇಪುರ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಅರಿತು ಇದನ್ನ ಗ್ರಾಮದ ಹಿರಿಯರು ಒಟ್ಟಿಗೆ ಸೇರಿಸಿ ಮಾತನಾಡಿ ನೀರಿನ ಬವಣೆ ನಿವಾರಿಸಲು ಎಲ್ಲಾ ಗ್ರಾಮಸ್ಥರು ಸೇರಿ ಗ್ರಾಮದ ಜನರಿಗೆ ಮತ್ತು ಜಾನುವಾರು ಕುಡಿಯಲು ಯೋಗ್ಯವಾದ ಒಂದು ಕಟ್ಟೆ ನಿರ್ಮಾಣ ಮಾಡಲು ಮುಂದಾದಾಗ ನಿರ್ಮಾಣವಾದ ಕಟ್ಟೆಯೇ ಈ ಕ್ಯಾತಮ್ಮನ ಕಟ್ಟೆಯಾಗಿದೆ.

ಕಾಮಗಾರಿಯ ಪರಿಣಾಮ

ಈ ಕ್ಯಾತಮ್ಮನಕಟ್ಟೆಯು ಕಾಗೇಪುರ ಗ್ರಾಮದ ಮತ್ತು ತಳಗವಾದಿ ಗ್ರಾಮ ಪಂಚಾಯತಿ ಮಾರ್ಗ ಮಧ್ಯದಲ್ಲಿ ಸಿಗುವ ಕ್ಯಾತಮ್ಮ ಮತ್ತು ಶ್ರೀ ಬಸವೇಶ್ವರ ದೇವಾಲಯ ಕಾಗೇಪುರದ ದೇವಸ್ಥಾನದ ಆವರಣದ ಪಕ್ಕದಲ್ಲಿ ನಿರ್ಮಾಣ ಮಾಡಲಾಗಿದೆ. ತಳಗವಾದಿ ಗ್ರಾಮ ಪಂಚಾಯತಿಯಿಂದ ಸುಮಾರು 1 ಕಿ.ಮೀ ದೂರದಲ್ಲಿ ಕಾಗೇಪುರ ಗ್ರಾಮವಿದೆ ಹಾಗೂ ಮಳವಳ್ಳಿ ಮಾರ್ಗವಾಗಿ ಇಲ್ಲಿಗೆ 6 ಕಿ.ಮೀ ದೂರದಲ್ಲಿದೆ.

ಇದೀಗ ನರೇಗಾ ಯೋಜನೆಯ ಮೂಲಕ ಯಶಸ್ವಿಯಾಗಿ ನೀರನ್ನು ತುಂಬಿಸುವ ಮೂಲಕ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಮತ್ತು ಜಾನುವಾರುಗಳಿಗೆ ಹಾಗೂ ರೈತರಿಗೆ ನೆರವು ಮಾಡಿಕೊಡಲಾಗಿದೆ. ಕೃಷಿ ನೀರಾವರಿಗೆ ಒತ್ತು ನೀಡಿ, ಮಳೆ ನೀರನ್ನು ಶೇಖರಣೆ ಮಾಡುವ ಮೂಲಕ ಅಂರ್ಜಲ ಮಟ್ಟ ಹೆಚ್ಚಿಸುತ್ತಿದೆ. ಕೃಷಿಗೆ ಬಳಸಿಕೊಳ್ಳುವ ಹಾಗೇ ಮಾಡುವಲ್ಲಿ ಹಾಗೂ ಗ್ರಾಮೀಣ ಜನರ ಬದುಕು ಹಸನಾಗಲು ಹಾಗೂ ಗ್ರಾಮಸ್ಥರ ನಿತ್ಯ ವ್ಯಾಯಾಮದ ಕೇಂದ್ರವಾಗಿದೆ ನರೇಗಾ ಸಹಕಾರಿಯಾಗಿದೆ.

ಅಭಿವೃದ್ಧಿಪಡಿಸಿರುವ ಅಮೃತ ಸರೋವರ ವಿವರ

ಕ್ರ.ಸಂ	ತಾಲ್ಲೂಕು	ಅಮೃತ ಸರೋವರ
1	ಕೆ.ಆರ್.ಪೇಟೆ	21
2	ಮದ್ದೂರು	29
3	ಮಳವಳ್ಳಿ	23
4	ಮಂಡ್ಯ	24
5	ನಾಗಮಂಗಲ	26
6	ಪಾಂಡವಪುರ	20
7	ಶ್ರೀರಂಗಪಟ್ಟಣ	14

ನೈಸರ್ಗಿಕ ಸಂಪನ್ಮೂಲ ಅಭಿವೃದ್ಧಿ ಕಾಮಗಾರಿಗಳ ಯಶೋಗಾಥೆ

ಕಾಮಗಾರಿ ಪರಿಚಯ

ಮಂಡ್ಯ ತಾಲ್ಲೂಕು ಗೋಪಾಲಪುರ ಗ್ರಾಮ ಪಂಚಾಯಿತಿಗೆ ಸೇರಿದ ಹೆಚ್.ಕೋಡಿಹಳ್ಳಿ ಗ್ರಾಮವು 630 ಜನಸಂಖ್ಯೆ ಇರುವ ಪುಟ್ಟ ಗ್ರಾಮ. ಈ ಗ್ರಾಮದಲ್ಲಿರುವ ಕೆರೆಯು 70 ಎಕರೆ ವಿಸ್ತೀರ್ಣ ಹೊಂದಿದೆ. ಈ ಕೆರೆಯು ಪುರಾತನ ಕಾಲದಿಂದಲೂ ಇದೆ.

ಕಾಮಗಾರಿ ಅನುಷ್ಟಾನ ಪ್ರಕ್ರಿಯೆ

ಗ್ರಾಮ ಪಂಚಾಯಿತಿಯವರು ಗ್ರಾಮದಲ್ಲಿ ಸಮುದಾಯ ಆಸ್ತಿಯನ್ನು ಉಳಿಸುವ ದೃಷ್ಟಿಯಿಂದ ಕಾಮಗಾರಿಯನ್ನು ಗುರುತಿಸಿ ಅನುಷ್ಟಾನಕ್ಕೆ ತಂದಿದ್ದು, ಸದರಿ ಗ್ರಾಮದಲ್ಲಿ ಕೆರೆ ಅಭಿವೃದ್ಧಿ ಸಮಿತಿ ರಚಿಸಿಕೊಂಡು ಗ್ರಾಮಸ್ಥರ ಸಹಯೋಗದೊಂದಿಗೆ.2020–21 ಹಾಗೂ 2021–22ನೇ ಸಾಲಿನಲ್ಲಿ ಸಣ್ಣ ನಿರಾವರಿ(ಎಂಐ) ಇಲಾಖೆ ಹಾಗೂ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಒಗ್ಗೂಡಿಸುವಿಕೆಯಡಿ ಸುಮಾರು ರೂ. 5 ಲಕ್ಷ ಅಂದಾಜು ವೆಚ್ಚದಲ್ಲಿ ಕೆರೆಯನ್ನು ಅಭಿವೃದ್ಧಿ ಪಡಿಸಲಾಗಿದೆ.

ಕಾಮಗಾರಿಯ ಪರಿಣಾಮ

ಹೆಚ್.ಕೋಡಿಹಳ್ಳಿ ಕೆರೆಯನ್ನು ಪ್ರಸ್ತುತ 2022–23ನೇ ಸಾಲಿನಲ್ಲಿ ಅಜಾದಿ ಕಾ ಅಮೃತ ಸರೋವರ' ಯೋಜನೆಯಡಿ ಕೈಗೆತ್ತಿಕೊಂಡು ಕೆರೆ ಹೂಳು ತೆಗೆಯುವುದು, ರಿವಿಟ್ಮೆಂಟ್, ಜಂಗಲ್ ಕಟ್ಟಿಂಗ್, ಕೆರೆ ಸುತ್ತಾ, ಅರಣ್ಯೀಕರಣ, ಏರಿ ದುರಸ್ತಿ ಪಡಿಸುವುದು, ಕೆರೆ ಸುತ್ತ ರಸ್ತೆ ನಿರ್ಮಾಣ, ಕೋಡಿ ರಿಪೇರಿ, ಚೈನ್ ಫೆನ್ಸಿಂಗ್, ಪಾದಚಾರಿ ರಸ್ತೆ , ಸಾರ್ವಜನಿಕರು ಕುಳಿತು ವಿರಮಿಸಲು ಕಲ್ಲು ಬೆಂಚ್, ಸೋಪಾನಕಟ್ಟೆಯಂತ ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ. ನರೇಗಾ ಯೋಜನೆಯಡಿ ಅಭಿವೃದ್ಧಿ ಕೆಲಸಗಳನ್ನು ಮಾಡಲು 60 ಮಾನವ ದಿನಗಳು ಸೃಜನೆಯಾಗಿದ್ದು, 7 ಜನ ಪುರುಷರು ಹಾಗೂ 4 ಜನ ಮಹಿಳಾ ಕೂಲಿಕಾರರು ಕೆಲಸವನ್ನು ನಿರ್ವಹಿಸಿದ್ದಾರೆ.

ಸದರಿ ಕೆರೆಯನ್ನು ಊರಿನ ಗ್ರಾಮಸ್ಥರ ಆಶಯದಂತೆ ಪ್ರವಾಸೋದ್ಯಮ ತಾಣವಾಗಿ ನಿರ್ಮಾಣ ಮಾಡಲು ಆಲೋಚಿಸಿದ್ದು, ದೋಣಿವಿಹಾರ ಸೇರಿದಂತೆ ಮನರಂಜನಾ ಚಟುವಟಿಕೆಗಳಿಗೆ ಅನುಕೂಲ ವಾತಾವರಣ ಕಲ್ಪಿಸಲು ಪ್ರವಾಸೋದ್ಯಮ ಇಲಾಖೆಗೆ ರೂ. 50 ಲಕ್ಷದ ಪ್ರಸ್ತಾವನೆಯನ್ನು ಕೂಡ ಸಲ್ಲಿಸಲಾಗಿದೆ.

ಕಾಮಗಾರಿ ಅನುಷ್ಟಾನದ ಪ್ರಯೋಜನಗಳು

ಹೆಚ್. ಕೋಡಿಹಳ್ಳಿ ಗ್ರಾಮದ ಕೆರೆಗೆ ಮುಖ್ಯವಾಗಿ ವಿ.ಸಿ ನಾಲೆ ನೀರು ಹಾಗೂ ಮಳೆ ನೀರಿನ ಮೂಲವಾಗಿವೆ. ಹೆಚ್. ಮಲ್ಲಿಗೆರೆ ಕೆರೆಗೆ ವಿ.ಸಿ ನಾಲೆಯಿಂದ ತುಂಬಿದ ನಂತರ ಹೆಚ್. ಕೋಡಿಹಳ್ಳಿ ಕೆರೆಗೆ ನೀರು ತುಂಬುತ್ತದೆ. ನಂತರ ಈ ಕೆರೆಯಿಂದ ಗೋಪಾಲಪುರ ಕೆರೆಗೆ ನೀರು ಹರಿದು ಬರುತ್ತದೆ. ಸುತ್ತಮುತ್ತಲಿನ ಸುಮಾರು 50 ಎಕರೆ ಜಮೀನಿಗೆ ಕೆರೆಯ ನೀರು ಹರಿದು, ವ್ಯವಸಾಯ ಮಾಡಲು ಅನುಕೂಲವಾಗಿದೆ.

ಜಾನುವಾರು, ಪಕ್ಷಿಗಳಿಗೆ ಕುಡಿಯುವ ನೀರಿಗೆ ಅನುಕೂಲವಾಗಿದೆ. ಜನರ ವಾಯುವಿಹಾರ ಕೇಂದ್ರಕ್ಕೂ ಸಹ ಅನುಕೂಲವಾಗಿದೆ. ಈ ಒಂದು ಕಾಮಗಾರಿಯನ್ನು ಅಭಿವೃದ್ಧಿ ಪಡಿಸಿವುದರಿಂದ ಕೆರೆಯ ಸುತ್ತಮುತ್ತಲಿರುವ ರೈತರು ಜಮೀನಿಗೆ ನೀರಿನ ಸದ್ಬಳಕೆ ಮಾಡಿಕೊಳ್ಳುತ್ತಿದ್ದು, ಅಂತರ್ಜಲ ಮಟ್ಟ ಕೂಡ ವೃದ್ಧಿಯಾಗಿ ಕೊಳವೆ ಬಾವಿಗಳನ್ನು ಅವಲಂಬಿಸಿ ವ್ಯವಸಾಯ ಮಾಡುವ ರೈತರಿಗೂ ಸಹಕಾರಿಯಾಗಿದೆ.

ಈ ಕೆರೆಯು ಗ್ರಾಮಕ್ಕೆ ಆದಾಯದ ಮೂಲವಾಗಿದ್ದು, ಪ್ರತಿ ವರ್ಷ ರೂ.4 ರಿಂದ 5 ಲಕ್ಷದ ವರೆಗೆ ಮೀನುಗಾರಿಕೆಯಿಂದ ಆದಾಯ ಬರುತ್ತದೆ. ಗ್ರಾಮಸ್ಥರೆಲ್ಲ ಸೇರಿ ನಿರ್ಧರಿಸಿ ಬಂದ ಹಣದಿಂದ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಈ ಹಣವನ್ನು ಕ್ರೂಢೀಕರಿಸಲು ನಿರ್ಧರಿಸಿದ್ದಾರೆ.